ಸಂಪುಟ ೬
ಸಂಚಿಕೆ ೩

ಕರ್ನಾಟಕ ಭಾರತಿ

ಸಂಕ್ರಮಣ ಸಂಚಿಕೆ
೧೯೭೪

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – 580003** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ವ್ಯಾಸಂಗವಿಸ್ತರಣ ಹಾಗು ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580003** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೬ ಸಂಚಿಕೆ : ೩

ಪ್ರಧಾನ ಸಂಪಾದಕರು
ಡಾ. ಆರ್. ಸಿ. ಹಿರೇಮಠ

ಸಹಾಯಕ ಸಂಪಾದಕರು
ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೬, ಸಂಚಿಕೆ : ೩

ಜನವರಿ ೧೯೭೪

ಸಂಕ್ರಮಣ ಸಂಚಿಕೆ

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.

ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩

ಮುದ್ರಕರು :

ಶ್ರೀ ಎಂ. ಎಚ್. ಬೆಳಗಾಂವಕರ

ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪಿಕರ್ ರೋಡ್, ಹುಬ್ಬಳ್ಳಿ – ೨೦

ಪ ರಿ ವಿ ಡಿ



ಮಾನ್ಯ ವಿದ್ಯಾಸಚಿವರಾದ ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿಗಳಿಂದ ಕನ್ನಡ ಅಧ್ಯಯನಪೀಠ ಹಾಗು ಪ್ರಕಟಣ ವಿಭಾಗದ ನೂತನ ಗ್ರಂಥಗಳ ಪ್ರಕಾಶನ. ಅಧ್ಯಕ್ಷರು: ಮಾನ್ಯ ಕುಲಪತಿಗಳಾದ ಶ್ರೀಮತಿ ಎಂ. ಜಯಲಕ್ಷಮ್ಮಣ್ಣಿ ಅವರು. ಸ್ವಾಗತಾಧ್ಯಕ್ಷರು : ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಡಾ. ಆರ್. ಸಿ. ಹಿರೇಮಠ ಅವರು.

ನಾವು ನಿಮ್ಮವರು

ಚೆನ್ನಣ್ಣ ವಾಲೀಕಾರ


ನಾವು ನಿಮ್ಮವರು
ಕರ್ಣ ಕುಲದವರು
ಸೂತಪುತ್ರನನು ಅವರು ಹಿಡಿದರೆ
ಹೊರಗಿನವರನ್ನು ನೀವು ಹಿಡಿದರೆ
ಎಲ್ಲೋ ಬಿದ್ದವಗೆ ಮೇಲೆ ತಂದರೆ
ನಿಮ್ಮ ರೀತಿಯಲಿ ನಮಗೆ ಕಂಡರೆ

(ಆದುದೇನು ಗೊತ್ತಾ
ಯಾಕೆ ಹೀಗೆ ತಿಳಿಯಿತ್ತs)
ತಾಯಿ ತಮ್ಮರ ಸುದ್ದಿ ತಿಳಿದುದಕೆ
ನಮ್ಮನೆಲ ಇದಲ್ಲವೆಂದುದಕೆ
(ಭಾವ ಬೇರೆ ತಾನೆ
ಕರುಳು ಕೇಳದೇನೆ)
ಯುದ್ಧವೇಳೆಯಲಿ ಕುಂತ ಬಿಟ್ಟ
ಕರ್ಣ
ವಂಶವೆಂದಾಗ ಅದೇ ನಮ್ಮ
ಬಾಣ
ಅದಕೆ ಅನ್ನುವರು
ಬುದ್ಧಿವಂತರು :
ತಾಯಿ ಪ್ರೀತಿ ಹೆಚ್ಚು
ಯಾರೇನೆಂದರೂ ರಕ್ತಗುಣಗಳು
ನೀರು ನೆಲ ಆಕಾಶ ಗಾಳಿಯು
ಜನ್ಮಭೂಮಿಯು

ಹಬ್ಬ ಹುಣ್ಣಿಮೆ ರೀತಿ ನೀತಿ
ನಡಾವಳಿಗಳೆ
ಅಳಿಯದಯ್ಯ ಅಚ್ಚು

ನಾವು ನಿಮ್ಮವರು
ಕರ್ಣಕುಲದವರು
ಬೇರೆ ಇದ್ದುದಕೆ
ಕ್ಷಮೆಯ ಕೇಳುವರು
ಕ್ಷಮೆಯು ನಿಮ್ಮ ಗುಣವು
ಅದಕಿಲ್ಲ ನಮಗೆ ರಣವು.

●



ಶರಣರ ವಿಗ್ರಹಗಳಿರುವ ಶಿವೋತ್ಸವ ಮಂಟಪ

ಮಧುಕೇಶ್ವರ ದೇವಾಲಯದ ಶರಣರ ವಿಗ್ರಹಗಳು

ವಿ. ಶಿವಾನಂದ

ಹದಿನೈದು ವರುಷಗಳ ಹಿಂದೆ ದಿವಂಗತ ಡಾ. ಬಿ. ಎಸ್. ಗದ್ದಿಗಿಮಠರು 'ಶಾಸನೋಕ್ತ ವೀರಶೈವರು' ಎಂಬ ತಮ್ಮದೊಂದು ಲೇಖನದಲ್ಲಿ ಬನವಾಸಿ ಮಧುಕೇಶ್ವರ ದೇವಾಲಯದಲ್ಲಿ ಕೆಲವು ಶರಣರ ವಿಗ್ರಹಗಳಿರುವುದಾಗಿ ಬರೆದಿದ್ದರು. ಆದರೆ ಈ ವರೆಗೆ ಅವುಗಳನ್ನು ಪ್ರತ್ಯಕ್ಷವಾಗಿ ನಿರೀಕ್ಷಿಸಿ ಬೆಳಕಿಗೆ ತರುವ ಪ್ರಯತ್ನ ಮಾತ್ರ ನಡೆಯಲಿಲ್ಲ. ಶರಣರ ಬಗೆಗೆ ದೊರಕುವ ಸಾಹಿತ್ಯರಾಶಿಯೇನೋ ಹೇರಳ, ಶಾಸನ ಸಂಪತ್ತು ವಿರಳ, ಶಿಲ್ಪವಂತೂ ಅಪರೂಪ. ಈ ದೃಷ್ಟಿಯಿಂದ ಮಧುಕೇಶ್ವರ ದೇವಾಲಯದ ಶರಣರ ವಿಗ್ರಹಗಳನ್ನು ನೋಡುವುದು ನನಗೆ ಮಹತ್ವಪೂರ್ಣವೆನಿಸಿತು.

ಬನವಾಸಿ ಪುರಾತನ ಪ್ರಸಿದ್ಧ ಐತಿಹಾಸಿಕ ಪಟ್ಟಣ. 'ವೈಜಯಂತಿಪುರ' ಅದರ ಪ್ರಾಚೀನ ಹೆಸರು. 'ಬನವಾಸಿ ಪನ್ನಿಚ್ಛಾಸಿರ ನಾಡು' ಎಂಬುದಾಗಿ ಕರ್ನಾಟಕದ ಇತಿಹಾಸದಲ್ಲಿ ಆ ಪ್ರದೇಶ ನಾಮಾಂಕಿತವಾಗಿದೆ. ಕನ್ನಡದ ಆದಿಕವಿ ಪಂಪನಂತೂ 'ಅರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂದು ಬಣ್ಣಿಸುತ್ತಾನೆ. ಬನವಾಸಿಯಲ್ಲಿನ ಮಧುಕೇಶ್ವರನು ಕದಂಬಕುಲದೈವವಾಗಿ ಮೆರೆದಿದ್ದಾನೆ. ಮಧುಕೇಶ್ವರನ ದೇವಾಲಯದ ಐತಿಹಾಸಿಕ ಮಹತ್ವ ಕ್ರಿ. ಶ. ೧೧ನೆಯ ಶತಮಾನದಿಂದೀಚೆಗೆ ಹೆಚ್ಚುತ್ತ ಬಂದಿದೆ. ಕದಂಬ, ಗಂಗ, ಚಾಳುಕ್ಯ, ರಾಷ್ಟ್ರಕೂಟ, ಯಾದವ, ಹೊಯ್ಸಳ, ವಿಜಯನಗರ ಹಾಗೂ ತರುವಾಯದ ಸೋದೆ (ಸ್ವಾದಿ) ಅರಸರು ವಂಶ ಪಾರಂಪರ್ಯವಾಗಿ ಈ ದೇವಾಲಯಕ್ಕೆ ದಾನಧರ್ಮಗಳನ್ನು ಸಲ್ಲಿಸಿದ್ದಾರೆ. ಕೆಲವು ದೊರೆಗಳು ಇದರ ಕಲಾತ್ಮಕ ಸೌಂದರ್ಯದ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಮುಖ್ಯವಾಗಿ ಕಲೆಯ ದೃಷ್ಟಿಯಿಂದ ಗಮನಾರ್ಹವಾದ ಅಲ್ಲಿನ ಕಲ್ಲುಮಂಚ 'ಶ್ರೀ ಲಕ್ಷ್ಮೀನರಸಿಂಹ ಗಣಪತಿ', 'ಮಧುಕೇಶ್ವರ ಮಹಾರಥ' ಹಾಗೂ 'ತ್ರೈಲೋಕ್ಯ ಮಂಟಪ'ಗಳು ಇತ್ತೀಚಿನ ಸೋದೆ ಅರಸರ ಕಾಣಿಕೆಗಳಾಗಿವೆ. ಇವುಗಳಲ್ಲಿ ಕೊನೆಯದಾದ 'ತ್ರೈಲೋಕ್ಯ ಮಂಟಪ' ದಲ್ಲಿಯೇ ಶರಣರ ಅಪೂರ್ವ ವಿಗ್ರಹಗಳಿರುವುದನ್ನು ಕಾಣುತ್ತೇವೆ.

'ತ್ರೈಲೋಕ್ಯ ಮಂಟಪ'ಕ್ಕೆ 'ಶಿವೋತ್ಸವ ಮಂಟಪ' ಅಥವಾ 'ಉಮಾಮಹೇಶ್ವರರ ಮಂಟಪ'ವೆಂದೂ ಕರೆಯುತ್ತಾರೆ. ಈ ಮಂಟಪದ ಕೆಳಗಡೆ ಅಷ್ಟದಿಗ್ಗಜ ಹಾಗೂ ಆದಿಶೇಷಗಳು ಹೊತ್ತು ನಿಂತಿರುವದರಿಂದ ಅದು ಪಾತಾಳಲೋಕ:

ಮಧ್ಯದಲ್ಲಿರುವದು ಭೂಲೋಕ; ಮೇಲುಗಡೆ ಅಷ್ಟದಿಕ್ಪಾಲಕರು ಮತ್ತು ಗೋಪುರ ವಿರುವವರಿಂದ ಅದು ದೇವಲೋಕ–ಹೀಗೆ ಮೂರುಲೋಕಗಳ ಕಲ್ಪನೆ ಈ ಮಂಟಪ ರಚನೆಯಲ್ಲಿರುವದರಿಂದ ಇದಕ್ಕೆ 'ತ್ರೈಲೋಕ್ಯ ಮಂಟಪ' ವೆಂಬ ಹೆಸರು ಯಥೋ–ಚಿತವಾಗಿದೆ. ದೇವಾಲಯದ 'ಘಂಟಾ ಮಂಟಪ'ದಲ್ಲಿ ಮಧುಕೇಶ್ವರನಿಗೆದುರಾಗಿ ಸ್ವಂತರೆ ಎಡಗಡೆಗೆ ಕಾಣುವ ಉನ್ನತ ಶಿಲಾಮಂಟಪವೇ ಇದಾಗಿದೆ. ೧೧೭ ಇಂಚು ಎತ್ತರ ೬೯ ಇಂಚು ಅಗಲವಿರುವ ಈ ಭವ್ಯ ಸುಂದರ ಶಿಲಾಮಂಟಪವನ್ನು ನೋಡೆಯು ಒಂದನೆಯ ಸದಾಶಿವರಾಯನು (ಕ್ರಿ.ಶ. ೧೬೭೪-೧೯೯೭) ತನಗೆ ಧರ್ಮವಾಗಲೆಂದು ದೇವಾಲಯದ ಅಧಿದೈವವಾದ ಮಧುಕನಾಥನಿಗೆ ಅರ್ಪಿಸಿದ್ದಾನೆ. ಈ ಮಂಟಪವು ತಲ ವಿನ್ಯಾಸದಿಂದ ೩ ಅಡಿ ಎತ್ತರದ ಜಗುಲಿಯ ಮೇಲೆ ಕಲಾಕುಸುರಿನ ಚತುಷ್ಕಂಭಗಳ ಮೇಲೆ ನಿಂತಿದೆ. ಮಂಟಪ ಮಧ್ಯದಲ್ಲಿ ದೊರೆ ಸದಾಶಿವರಾಯನು ಉಮಾ-ಮಹೇ–ಶ್ವರರ ಮನೋಹರ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾನೆ. ಈ ವಿಗ್ರಹದ ಕೆಳಗಡೆಯ ಗಗ್ಗರಿಕಲ್ಲಿನಲ್ಲೇ ಶಿವಶರಣರ ವಿಗ್ರಹಗಳನ್ನು ಸಾಲಾಗಿ ಕೆತ್ತಿಸಿ ತನ್ನ ಶಿವಭಕ್ತಿಯನ್ನು ಪ್ರಕಟಪಡಿಸಿದ್ದಾನೆ.

ಶರಣರ ವಿಗ್ರಹಗಳಿರುವ ಸ್ಥಳವನ್ನು ಗುರುತಿಸುವದು ಕಷ್ಟಸಾಧ್ಯ. ಈಗ ಅಲ್ಲಿ ಕತ್ತಲು ಆವರಿಸಿದೆ. ಸಮೀಪದ ವಿದ್ಯುದ್ದೀಪದ ಬೆಳಕಿನಲ್ಲಿ ದಿಟ್ಟಿಸಿ ನೋಡಿದಾಗ ಎಡದಿಂದ ಬಲಕ್ಕೆ ಗಗ್ಗರಿಕಲ್ಲಿನ ಜಾಲರಿಯ ಕೆಳಗೆ ಸಾಲಾಗಿ ನಿಂತಿರುವ ೧೧ ಚಿಕ್ಕ ಚಿಕ್ಕ ವಿಗ್ರಹಗಳನ್ನು ನಾವು ಕಾಣುತ್ತೇವೆ. ಇವುಗಳ ಎತ್ತರ ಕೇವಲ ೪ ಇಂಚು, ಅಗಲ ೨ ಇಂಚು. ಹಳೆಯ ಶೈಲಿಯಲ್ಲಿ ತೀರ ಜಿನುಗಾದ ಅಕ್ಷರಗಳಲ್ಲಿ ಆಯಾ ಶರಣರ ವಿಗ್ರಹಗಳ ಮೇಲೆ ಅವರವರ ಹೆಸರುಗಳನ್ನು ಬರೆದಿರುವದು ಅತ್ಯಂತ ಪ್ರಯೋಜನಕಾರಿಯಾಗಿದೆ. ಹೆಸರುಗಳ ಆಕಾರದ ಮೇಲೆ ಈ ವಿಗ್ರಹಗಳನ್ನು ಗುರುತಿಸುವದು ಈಗ ಸಾಧ್ಯವಾಗಿದೆ. ನಡುವಿನದು ಈಶ್ವರ ವಿಗ್ರಹವಾಗಿದೆ. ಎಡಬಲಕ್ಕೆ ಇದ್ದುವು ಶರಣರ ವಿಗ್ರಹಗಳು. ೧. ದಾಸಿಮಣ್ಣ (ದೇವರ ದಾಸಿಮಯ್ಯ) ೨. ಮೋಳಿಗೆ ಅಯ್ಯ (ಮೋಳಿಗೆ ಮಾರಯ್ಯ) ೩. ನುಲಿಯ ಚಂದಯ್ಯ ೪. ಅಯ್ದಕ್ಕಿಮಾರಯ್ಯ ೫. ಹೆಸರು ಸ್ಪಷ್ಟವಾಗಿ ಕಾಣುವು ದಿಲ್ಲ ೬. ಶಿವನ ವಿಗ್ರಹ ೭. ಹಡಪದ ಅಪ್ಪಣ್ಣ ೮. ಹೋಳಿನ ಹಂಪಣ್ಣ ೯. ಅಗ್ಗಣಿ ಹೊನ್ನಯ್ಯ ೧೦. ಮತ್ತು ೧೧. ಗುಂಡಬ್ರಹ್ಮಯ್ಯ (ಗುಂಡಯ್ಯ–ಬ್ರಹ್ಮಯ್ಯ).

ಈ ವಿಗ್ರಹಗಳನ್ನು ಕೆತ್ತಿದ ಶಿಲ್ಪಿಗೆ ಆಯಾ ಶರಣರ ಕಾಲ. ಜೀವನತತ್ತ್ವ. ಹಾಗೂ ಕಾಯಕ ವಿಚಾರಗಳು ಸ್ಪಷ್ಟವಾಗಿ ತಿಳಿದಿವೆ. ಬಸವಣ್ಣನವರಿಗಿಂತ ಪೂರ್ವದಲ್ಲಿದ್ದ ದೇವರ ದಾಸಿಮಯ್ಯನ (ಕ್ರಿ.ಶ. ೧೦೪೦) ಮೂರ್ತಿ ಇಲ್ಲಿ ಮೊದಲನೆಯದಾಗಿರುವದು. ಬಸ–ವಣ್ಣನವರ ತರುವಾಯದಲ್ಲಿ ಒರಂಗಲ್ಲಿನ ಕಾಕತೀಯ ಗಣಪತಿದೇವನ (ಕ್ರಿ. ಶ. ೧೧೯೯–೧೨೬೦) ಕಾಲದಲ್ಲಿದ್ದ ಗುಂಡಬ್ರಹ್ಮಯ್ಯನ ಮೂರ್ತಿ ಇಲ್ಲಿ ಕೊನೆಯ ದಾಗಿರುವದು ಈ ಶರಣರಿದ್ದ ಕಾಲಕ್ರಮವನ್ನು ವಿಚಿತಪಡಿಸುತ್ತದೆ. ಇನ್ನೊಂದು ಸಂಗತಿಯೆಂದರೆ. ಈ ವಿಗ್ರಹಗಳ ಮೇಲೆ ಆ ಶರಣರ ಹೆಸರುಗಳಿರುವ ಕಾರಣದಿಂದಾ



ಗಲಿ ಅಥವಾ ಇವರು ವೀರಶೈವ ಸಾಹಿತ್ಯದಲ್ಲಿ ನಾಮಾಂಕಿತ ಶರಣರೆಂಬ ಭಾವನೆಯಿಂದಾಗಲಿ ಮಾತ್ರ ಇವಕ್ಕೆ ಪ್ರಾಶಸ್ತ್ಯವಿಲ್ಲ. ಇದರ ಜೊತೆಗೆ ಇವನ್ನು ರೂಪಿಸುವಲ್ಲಿ ಶಿಲ್ಪಿ ಅನುಸರಿಸಿದ ತತ್ವಗಳನ್ನು ನಾವು ಅವಲೋಕಿಸಿದರೆ ನಿಜಕ್ಕೂ ಇಲ್ಲಿನ ಆದರ್ಶವೇನೆಂಬುದು ಗೊತ್ತಾಗುತ್ತದೆ. ಕಾಲಾಂತರದಲ್ಲಿ ಮೇಲಿನ ಹೆಸರುಗಳು ಅಳಿದರೂ 'ಇದು ಈ ಶರಣನದು' ಎಂಬುವನ್ನು ತಿಳಿಯುವಂತೆ ಕೆತ್ತಿರುವದು ಶಿಲ್ಪಿಯ ಚಾತುರ್ಯವನ್ನು ಕಲಾಭಿಜ್ಞತೆಯನ್ನು ಸೂಚಿಸುತ್ತದೆ. ಈ ವಿಗ್ರಹಗಳನ್ನು ಪ್ರತಿಮಿಸುವಾಗ ಕೆಲವು ಶರಣರ ಜೀವನದ ಮಹತ್ವದ ಘಟನೆಗಳನ್ನು ಒಂದಿಲ್ಲೊಂದು ಸಂಕೇತದಿಂದ ತೋರಿಸಿರುವದು, ಇನ್ನು ಕೆಲವನ್ನು ಕೆತ್ತುವಾಗ ಆ ಶರಣರು ಅವಲಂಬಿಸಿದ ಕಾಯಕದ ಉಪಕರಣಗಳಿಂದ ಅವರನ್ನು ರೂಪಿಸಿರುವದು ವೈಶಿಷ್ಟ್ಯಪೂರ್ಣವಾಗಿದೆ.

ದಾಸಿಮಯ್ಯನು ತನ್ನ ವಸ್ತ್ರವನ್ನಿತ್ತು ಪರಮಾತ್ಮನಿಂದ ತವನಿಧಿ ಪ್ರಸಾದ ಪಡೆದನೆಂಬುದು ಕಥೆ. ಆ ಶರಣನ ವಿಗ್ರಹವನ್ನು ನೋಡಿದರೆ ದಾಸಿಮಯ್ಯನಿಗೆ ಜನ್ನ ಮೇಲೆ ವಸ್ತ್ರ ಹೊದ್ದಿಸಿರುವದು ಇದೇ ಸಂಕೇತದಿಂದ ಎನ್ನಿಸುತ್ತದೆ. ಮೋಳಿಗೆ ಮಾರಯ್ಯನು ಕಲ್ಯಾಣದಲ್ಲಿ ಕಟ್ಟಿಗೆ ಕಡಿದು ಅವನ್ನು ಹೊತ್ತುಕೊಂಡುಹೋಗಿ ಮಾರಿ, ಬಂದ ಹಣದಲ್ಲಿ ಗುರು—ಲಿಂಗ—ಜಂಗಮ ದಾಸೋಹ ನಡೆಸಿದ ಶರಣ. ಅದಕ್ಕೆ ಆ ವಿಗ್ರಹದ ಕೈಯಲ್ಲಿ 'ಕೊಡಲಿ' ಇರುವದನ್ನು ನಾವು ಕಾಣುತ್ತೇವೆ. ಸುಲಿಯ ಚಂದಯ್ಯ, ಹುಲ್ಲನ್ನು ಕೊಯ್ದು ಸುಲಿಹೊಸೆವ ಕಾಯಕ ಕೈಕೊಂಡಿದ್ದ ಶರಣ. ಇಲ್ಲಿ ಅವನ ಎಡಗೈಗೆ ಸುಲಿ ಸುತ್ತಿರುವದು ಆಕರ್ಷಣೀಯವಾಗಿದೆ. ಹಡಪದ ಅಪ್ಪಣ್ಣನ ಹೆಗಲ ಮೇಲೆ ಹಡಪವಿರುವದು ಸುಂದರವಾಗಿದೆ. ಆ ಕಾಲದ 'ಹಡಪದ' ಮಾದರಿ ಅಲ್ಲಿ ನೈಜವಾಗಿ ಮಡಿಮೂಡಿದೆ. ಆಯ್ದಕ್ಕಿ ಮಾರಯ್ಯನ ವಿಗ್ರಹವು ಉಳಿದ ಶರಣರ ವಿಗ್ರಹಗಳಂತೆ ಎರಡೂ ಕೈಗಳನ್ನು ಮುಗಿದುಕೊಂಡು ನಿಂತಿದ್ದರೂ ಒಂದು ಕೈ ಮುಷ್ಟಿಕೆಯಾಗಿರುವದರಿಂದ ಅದರಲ್ಲಿ ತಾನು ಆಯ್ದುಕೊಂಡ ಅಕ್ಕೀಕಾಳು ಹಿಡಿದುಕೊಂಡಿರುವನೆಂಬ ಭಾವ ಬರುವಂತೆ ಸೂಚಿಸಲಾಗಿದೆ. ಕೊನೆಯಲ್ಲಿರುವ ೧೧ ನೆಯ ವಿಗ್ರಹ ಗುಂಡಬ್ರಹ್ಮಯ್ಯನದು. 'ಮೊರೆ ಹೊಕ್ಕವರನ್ನು ಕೊಡೆ' ನೆಂಬ ಬಿರುದಿನ ಪಾದಪೆಂಡೆಯನ್ನು ಧರಿಸಿದ ಧೀರ ಶರಣ. ಒಮ್ಮೆ ಅವನನ್ನು ಪರೀಕ್ಷಿಸಲೆಂದು ಸಾಕ್ಷಾತ್ ಪರಶಿವನೇ ಕಳ್ಳನಾಗಿ ಬಂದು ಕಾಕತೀಯ ಗಣಪತಿರಾಯನ ಅರಮನೆಯನ್ನು ಕನ್ನಹಾಕಿ ಗುಂಡಬ್ರಹ್ಮಯನಲ್ಲಿ ಹೋಗಿ ಮೊರೆಕೇಳುತ್ತಾನೆ. ಗಣಪತಿರಾಯ ಈ ನಿಮಿತ್ತದಿಂದ ಗುಂಡಬ್ರಹ್ಮಯ್ಯನಿಗೆ ಶೂಲದ ಶಿಕ್ಷೆ ವಿಧಿಸುತ್ತಾನೆ. ಬ್ರಹ್ಮಯ್ಯ ಶೂಲಸಹಿತ ಕೈಲಾಸಕ್ಕೇರಿ ಗಣಪದವಿ ಪಡೆಯುತ್ತಾನೆ. ಇಲ್ಲಿ ಗುಂಡಬ್ರಹ್ಮಯ್ಯನ ವಿಗ್ರಹ ಶೂಲಸ್ತಂಭದೊಡನೆ ಚಿತ್ರಿತವಾಗಿದೆ. ಇವಿಷ್ಟು ವೈಶಿಷ್ಟ್ಯಗಳನ್ನಲ್ಲದೆ ಈ ವಿಗ್ರಹಗಳನ್ನು ಬೇರೆ ಬೇರೆ ಭಾವಭಂಗಿ-ವೇಷ ಭೂಷಣಗಳಿಂದ ಅಲಂಕರಿಸಲಾಗಿದೆ. ಎರಡೂ ಕೈಗಳನ್ನು ಮುಗಿದಿರುವದು ಹಣೆಯಲ್ಲಿ ಭಸಿತ, ಕೊರಳಲ್ಲಿ ರುದ್ರಾಕ್ಷಿ ಮಾಲೆಗಳಿಂದ ಸುಶೋಭಿತವಾಗಿರುವ ಈ ಶರಣರ

ವಿಗ್ರಹಗಳು ನೋಡುವವರಲ್ಲಿ ಭಕ್ತಿಭಾವನೆ ತುಂಬಿತುಳುಕುವಂತೆ ಮಾಡುತ್ತವೆ. ಒಟ್ಟಿನಲ್ಲಿ ಇವು ನೂತನ ಶರಣರ ಚರಿತ್ರೆಗೆ ವಿನೂತನ ಕಾಣಿಕೆಯಾಗಿವೆ. ಅಲ್ಲದೆ ಇಂದಿನ ವರಿಗೆ ಅಂದಿನ ಶರಣರ ಚಿತ್ರಗಳನ್ನು ಹೇಗೆ ಬರೆಯಬೇಕೆಂಬುದಕ್ಕೆ ಮಾದರಿಯಾಗಿವೆ.

ಶಿವಶರಣರ ಗವಿಗಳು. ಗದ್ದುಗೆಗಳು. ದೇವಾಲಯಗಳು, ಮಠಮಾನ್ಯಗಳು, ತೀರ್ಥಕ್ಷೇತ್ರಗಳು ಅನೇಕ ಕಡೆ ದೊರಕುತ್ತವೆ. ಆದರೆ ಸಾಕ್ಷಾತ್ ಅವರ ಪ್ರತೀಕವಾಗಿರುವ ಪ್ರಾಚೀನ ವಿಗ್ರಹಗಳು ದೊರಕುವದು ತೀರ ಅಪರೂಪ. ಕ್ರಿ.ಶ. ೧೭೯೪ ರಲ್ಲಿ ಕರ್ನಲ್ ಮೆಕಂಜಿ ಅವರು ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಮಹಾದ್ವಾರದ ಮೇಲೆ ದಿಗಂಬರೆಯಾಗಿ ನಿಂತ ಅಕ್ಕಮಹಾದೇವಿಯ ವಿಗ್ರಹವಿರುವದನ್ನು ಕಂಡು ಹಿಡಿದರು.* ಅದನ್ನು ಬಿಟ್ಟರೆ ಬಹುಶಃ ಕರ್ನಾಟಕದಲ್ಲಿ ಬಾಳಿ ಬದುಕಿದ ಶರಣರ ವಿಗ್ರಹಗಳು ;ಒಂದೇ ಕಡೆಯಲ್ಲಿ ಒಂದೇ ಕಲ್ಲಿನಲ್ಲಿ ಅವರ ನಾಮನಿರ್ದೇಶನದೊಡನೆ ದೊರಕುತ್ತಿರುವದು ಅಬ್ಬಲೂರಿನ ಸೋಮೇಶ್ವರ ದೇವಾಲಯದಲ್ಲಿ ಮತ್ತು ಬನವಾ-ಸಿಯ ಮಧುಕೇಶ್ವರ ದೇವಾಲಯದಲ್ಲಿ. ಇತ್ತೀಚೆಗೆ ಡಾ. ಎಮ್. ಎಮ್. ಕಲಬುರ್ಗಿ ಅವರು ಮೂರುಜಾವಿದೇವರ ವಿಗ್ರಹವನ್ನು ಸಂಶೋಧಿಸಿರುವದು ಈ ದೆಸೆಯ ಅಧ್ಯಯನ ಕ್ಷೇತ್ರಕ್ಕೆ ನಾಂದಿಯಾಗಿದೆ. ತಮಿಳು ನಾಡಿನ ಶೈವದೇವಾಲಯದಲ್ಲಿ ೬೩ ಪುರಾತನರ ವಿಗ್ರಹಗಳು ಅಲ್ಲಲ್ಲಿ ದೊರಕುತ್ತವೆ. ಆದರೆ ನಮ್ಮ ನಾಡಿನ ಬಸವಾದಿ ಶರಣರ ವಿಗ್ರಹಗಳು ದೊರಕುವದು ಅಪರೂಪ. ಕಾರಣ ಅವರು ಸ್ಥಾವರಕ್ಕೆ ಮನ್ನಣೆ ನೀಡದಿದ್ದುದೇ ಇರಬೇಕು. ಆದರೂ ತರುವಾಯದ ಜನತೆ ಅವರನ್ನು ಪೂಜಿಸಿದೆ. ಸಾಕ್ಷಿಚಿತ್ರಗಳಂತಿರುವ ಅವರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದೆ ಎಂಬುದಕ್ಕೆ ಇಲ್ಲಿನ ವಿಗ್ರಹಗಳು ನಮಗೆ ಆಧಾರವಾಗಿವೆ.

ಅಪೂರ್ವಲಭ್ಯವಾಗಿರುವ ಈ ವಿಗ್ರಹಗಳ ಸಂರಕ್ಷಣೆ ಈಗ ಅತ್ಯಂತ ಮಹತ್ವದ್ದಾಗಿದೆ. ಈ ವಿಗ್ರಹಗಳಲ್ಲಿ ಅಗ್ಗಣಿ ಹೊನ್ನಯನ ವಿಗ್ರಹದ ಕೆಳಭಾಗವೆಲ್ಲ ಛಿನ್ನವಾಗಿದೆ. ಗುಂಡಬ್ರಹ್ಮಯ್ಯನದಂತೂ ಪೂರ್ತಿಯಾಗಿ ಛಿನ್ನವಾಗಿದೆ. ಮೇಲೆ 'ಗುಂಡು' ಮತ್ತು 'ಬ್ರ' ಎಂಬಿಷ್ಟು ಅಕ್ಷರಗಳು ಕಾಣುತ್ತವೆ. ಇವನ್ನು ಕೆತ್ತಿದ ಕಲ್ಲು ನುಣುಪಾದ ಮೃದುಶಿಲೆಯಾಗಿರುವದರಿಂದ ಇವುಗಳನ್ನು ವ್ಯವಸ್ಥಿತ ರೀತಿಯಲ್ಲಿ ಕಾಪಾಡಬೇಕಾಗಿದೆ. ಸಂಬಂಧಿಸಿದ ಪುರಾತತ್ವ ವಿಭಾಗದವರ ಕಣ್ಣಿಗೆ ಇವು ಈವರೆಗೂ ಬಿದ್ದಿಲ್ಲ. ಅಲ್ಲದೆ ಇದೇ ದೇವಾಲಯಕ್ಕೆ ಬಳ್ಳಿಗಾವೆಯಿಂದ ಪ್ರಭುದೇವರು ಬಂದಿದ್ದರೆಂಬುದಕ್ಕೆ ಪ್ರಮಾಣವಾಗಿರುವ ಇಲ್ಲಿನ 'ಪ್ರಭುಲಿಂಗನ ಗುಡಿ' ಯಂತೂ ಜೀರ್ಣೋದ್ಧಾರದ ಸ್ವರ್ಣ ದಿನಗಳನ್ನು ಎದುರು ನೋಡುತ್ತಿದೆ. ಶಿವಶರಣರು ಬದುಕಿದ್ದರೆಂಬುದಕ್ಕೆ ಏನು ಸಾಕ್ಷಿ? ಎಂದು ಕೇಳುವವರು ಇಲ್ಲಿಗೆ ಬಂದು ಈ ವಿಗ್ರಹಗಳನ್ನೊಮ್ಮೆ ನೋಡಬೇಕು. ಅಲ್ಲಿನ ಶರಣರೇ ಸಾಕ್ಷಿ ನುಡಿಯುತ್ತಾರೆ.

---

* Asiatic Research of Bengal, 1978.

ಶುನಕ ನೀತಿ

ಶ್ರೀನಾಥ್ ರಾಯಸಂ

ಆ ಮನೆಗೂ ಈ ಮನೆಗೂ ಬಹಳೆ
ಹಳೆಯ ಬಾಂಧವ್ಯ. ನನ್ನ ತಾತನ ತಾತನ
ಮುತ್ತಾತ ಆ ಮನೆಯ ಎಂಟನೆಯ
ತಲೆಯ ಮೈ ಮುಕ್ಕಿ ವಿಶ್ವಾಮಿತ್ರ
ವ್ರತ ಪಾಲಿಸಿದಾಗ ಆ ಅವಳು
ಬಾವಿಗಿಳಿದು ಪ್ರಾಣ ಕೆಕ್ಕಿದ
ಕಥೆ ಕೇಳಿ ಉಂಟು.

ನನ್ನಪ್ಪ–ನನ್ನಮ್ಮ
ಆ ಹಳೆಯ ಬಾಂಧವ್ಯ ಮರೆತರೂ
ಈಗ
ಹಿಂದಿನಿಂದಲೇ
ವಿಶ್ವಾಮಿತ್ರ ಬೆನ್ನು ತಟ್ಟುತ್ತಿದ್ದಾನೆ
ಮನೋಜನೊಡನೆ ಮನದಲ್ಲಿ
ಟಿಸಿಲೊಡೆಯುತ್ತಿದ್ದಾನೆ. ಬಾಲಕ್ಕೆ
ಆಹಾರ ಕೊಡುತ್ತಿದ್ದಾನೆ.

ಆ ಮನೆಗೂ ಈ ಮನೆಗೂ
ಈಗ
ಬಳ್ಳಿ ಹಬ್ಬಿಸಿದ್ದೇವೆ
ನಾನು–ಅವಳು.
ನಾನವಳಿಗೆ
ಅವಳೆನಗೆ
ಮೈ ಹಸಿವಿನ ಅನ್ನವಾಗಿದ್ದೇವೆ

ಕಪ್ಪು ಕಪ್ಪು ರಸದೌತಣ ಮೆದ್ದಿದ್ದೇವೆ.
ತಾಂಬೂಲ ಚಪ್ಪರಿಸಿದ್ದೇವೆ. ಇನ್ನೂ
ಏನೇನೋ…………
…………ದ್ದೇವೆ !

ಮೊನ್ನೆ ತಾನೇ
ಘೋನಲ್ಲವಳು
ತಾನುಂಡ ಅನ್ನವನ್ನೆಲ್ಲಾ
ಕಕ್ಕಿದ್ದಾಗಿ ತಿಳಿಸಿದಾಗ
ಇವಳ ಹಳೆಯ
ಎಂಟನೆಯ
ತಲೆಯ
ಆತ್ಮ ಇವಳ ಅನ್ನದಲಿ
ಸೇರಿತ್ತೇ
ಎಂದು ದಿಂಬಿನಿಂಬಿನಲಿ
ಯೋಚಿಸಿದ್ದೇನೆ.
ಕಕ್ಕುವುದೇ ಆದರೆ
ಉಣ್ಣಲೇಬೇಡ ಎಂದು
ಸಲಹೆ ಕೊಟ್ಟಿದ್ದೇನೆ.

ಈಗ
ನಾನು–ಅವಳು
ಊರ ಜನರಲ್ಲೋಡಾಡಿದ್ದೇವೆ.
ಯಾರಿಗೂ ಕಾಣಿಸದೇ ನಕ್ಕವರು
ಎಲ್ಲರೂ ನಗುವಂತೆ
ಕಾಣಿಸಿದ್ದೇವೆ.
ಮುಂದಿನದನ್ನು ಹಿರಿಯರಿಗೊಪ್ಪಿಸಿ
ಹಣೆಗೆ ಕೈಯೇರಿಸಿದ್ದೇವೆ.

ತ್ರೀಪುರ್

ಬುದ್ಧಣ್ಣ ಹಿಂಗಮಿರೆ

[ತೆರೆಗಳ ಘೋರ್ಗರೆತ ಕ್ರಮೇಣ ಕಡಮೆಯಾಗುವುದು. ಚರ್ಚಿನಲ್ಲಿ ಗಂಟೆಗಳ ಸದ್ದು ನಿಂತು ಪ್ರಾರ್ಥನೆಯ ಧ್ವನಿ ಕ್ರಮೇಣ ಹೆಚ್ಚುತ್ತದೆ.]

ನಿನ್ನ ಕೋಟಿ ಕಿರಣ ಬೀರಿ ವಿಶ್ವಹೃದಯ ಬೆಳಗಿಸು
ನಿನ್ನಪಾರ ಕರುಣೆಯಿಂದ ನೆಲದ ಸ್ವಪ್ನ ಅರಳಿಸು
ಜನನ–ಮರಣ ಚಕ್ರದಲ್ಲಿ ಸಿಕ್ಕೊರಲುವ ನಮ್ಮನು
ಬಿಡಿಸು ಭೀತಿ ಕಾಡುತಿರುವ ಪ್ರಶ್ನೆ ನೆಯ್ದ ಬಲೆಯನು.
ನೆಲಮುಗಿಲಿನ ಆಟದಲ್ಲಿ ಮುಗ್ಧರಾದ ನಮ್ಮನು
ಬದುಕಿಸುವುದು ರಕ್ಷಿಸುವುದು ನೀಡಿ ನಿನ್ನ ಕೃಪೆಯನು.

ಏಸು : ಹೇ ದೇವರೇ, ಇಡಿಯ ಮಾನವ ಕುಲದ ದುಃಖವನು ದಾರಿದ್ರ್ಯವನು ಸಹಿಸುವ ಶಕ್ತಿ ಕೊಡು ನನಗೆ.

ಮಿತ್ರರು–ಶತ್ರುಗಳು ಎಂಬ ಭೇದವೆ ಸರಿಯಲ್ಲದ್ದು. ಶತ್ರುಗಳನೂ ಮಿತ್ರರಂತೆ ಕಾಣುವುದೆ ಮಾನವನ ಪರಮ ಧರ್ಮ. ಯಾವ ಹೂವಾದರೇನು, ಎಲ್ಲಿ ಅರಳಿದರೇನು ನಗಿಸದಿರುವನೆ ಸೂರ್ಯ? ಕೋಟಿ ಕಿರಣಗಳ ಚಾಚಿ ಮಣ್ಣ ಕಣ ಕಣದಲ್ಲಿ ಚೈತನ್ಯ ತುಂಬುವನು.

ಯಾಕೇನೊ? ಸ್ನೇಹವಿಲ್ಲದಕ್ಕೆ, ಪ್ರೀತಿಯಿಲ್ಲದಕೆ ಮಾನವನ ಮನಸೊಡೆದು ಹೋಳು ಹೋಳಾಗಿಹುದು. ಕಾಲವೇಬುದಾತನ ಸ್ವಪ್ನನಗರಿಗೆ ಬೆಂಕಿಯಿಕ್ಕಿ ಪಿಡುಜಿಸುತ ಬದಿಹುದು. ಪ್ರಜ್ಞೆಯುಳ್ಳವನೆದುರು ಮೂದುಡಿ ನಿಲ್ಲುವುದು ಅದೆ ವಿಧಿ. ಸಿಡಿಲಿನಾರ್ಭಟಕೆ ಭೀತನಾಗುವನೆ ಸತ್ಯವಂತನು? ಯಾರೇನು ಮಾಡುವರು? ಯಾರ ಕೈಲೇನಿಹುದು? ಇಲ್ಲಿ ನಡೆವುದೆಲ್ಲವೂ ಒಂದು ಮೋಜಿನ ಜಾತ್ರೆ. ಆ ಸಂದರ್ಭ ಘಟಿಸಿದ ಮೇಲೆ ಜನವಿಲ್ಲ, ಜಾತ್ರೆಯಿಲ್ಲ, ಯಾವ ಮೋಜೂ ಇಲ್ಲ. ಶಿಬಿರ ಕಿತ್ತೊಡೆವುದು ಐಹಿಕ ಸುಖವೈಭವ. ರಕ್ಷಿಸುವ ಒಂದೆ ಕೈ ವಿಶ್ವದೆದ್ದಕೂ ವ್ಯಾಪಿಸಿರಲು ಚಿಂತಿಸುವುದೊಳಿತಲ್ಲ. ಬೇರು ಬಿಟ್ಟ ನಂಬಿಗೆಯ ವೃಕ್ಷವನು ಅಲುಗಾಡಿಸುವ ಶಕ್ತಿ ಯಾವ ದೈತ್ಯನಿಗುಂಟು?

[ಸ್ವಾಮೀ, ಕೂಗು. ಹೆಣ್ಣುಧ್ವನಿ]

ಓ, ಯಾರು ಕೂಗಿದವರು? ಯಾರಿದೀ–ಆಕ್ರಂದನ? ಯಾವುದೋ ಭೀತಿಯನ್ನು ಸೂಚಿಸುವ ಆರ್ತಧ್ವನಿ? ಏನು ಸಂಭವಿಸಿರಬೇಕು? ಯಾರೊ

ದುಃಖದಲೆಗನ್ನು ತಿವಿದು ಮಸೆದ ಹಾಗಾಯ್ತು ನನ್ನೆದೆಯಲ್ಲಿ. ಯಾವಳೋ ಅನಾಥೆಯೊಬ್ಬಳು ಧಾವಿಸುತ ರಕ್ಷಣೆಯ ಯಾಚಿಸುತ ಈ ಕಡೆಗೆ ಬರುವಂತೆ ತೋರುತಿದೆ.

ಮೇರಿ : ಸ್ವಾಮೀ... [ಅಳುವ ಧ್ವನಿ: ಬಿಕ್ಕು]

ಏಸು : ಯಾರು, ಏನಾಗಬೇಕು ನನ್ನಿಂದ? ಹೀಗೆ ದುಃಖಿಸಲು ಕಾರಣವೇನು? ನಿನ್ನ ದುಃಖಕ್ಕೆ ಮೂಲವಾಗಿ ಘಟಿಸಿದ ವಿರಸವಾದರೂ ಯಾವುದು?

ಮೇರಿ : ಸ್ವಾಮೀ, ಏನೆಂದು ಹೇಳಲಿ; ನನ್ನ ಮನಸಿನ ತುಂಬ ಹಳದಿ ಹೆಡೆಯಾಡಿಸುವ ನೂರು ಸರ್ಪಗಳು; ಭೀತಿಯ ಬಿರುಗಾಳಿ ಹೊಕ್ಕು ಕಂಗೆಡಿಸಿಹುದು ನನ್ನನ್ನು.

ಏಸು : ಮಗಳೆ, ಭೀತಿಯಾತಕೆ ನಿನಗೆ? ನಿಲ್ಲಿಸು ನಿನ್ನ ಅಳುವನ್ನು. ನೀನೀಗ ಮಂದಿರದ ಪವಿತ್ರ ವಾತಾವರಣದಲ್ಲಿರುವೆ. ಕರುಣೆಯ ಹೊಳೆ ಹರಿವ ಶಕ್ತಿಯ ಸಾನಿಧ್ಯದಲ್ಲಿರುವೆ. ಬಿಡು ನಿನ್ನ ಭೀತಿಯನು. ಕರುಣೆಯೀ ವರ್ತುಲದಲ್ಲಿ ಯಾರೂ ನಿರಾಶರಾಗಬೇಕಿಲ್ಲ.

ಮೇರಿ : ಏನೆಂದಿರಿ....ಪ...ಪ....ಪವಿತ್ರ ವಾತಾವರಣ? ಕರುಣೆಯ ಹೊಳೆ...?

ಏಸು : ಹೌದು.

ಮೇರಿ : ಅಪವಿತ್ರಳಾದ ನನಗೆ...?

ಏಸು : ಇದು ಪತಿತರನ್ನು ಪಾವನಗೊಳಿಸುವ ಸ್ಥಳ. ಮಗಳೆ, ನಿನ್ನ ಈ ಅಸ್ತವ್ಯಸ್ತ ಬದುಕಿಗೆನ್ನಿಂದ ಪ್ರಯೋಜನವಾಗುವಂತಿದ್ದರೆನಗೆ ಅದೆ ಸಾರ್ಥಕ. ಜಗದ ದುಃಖವನು ಕಳೆಯಬೇಕೆಂದು ಇಲ್ಲಿ ಹಗಲಿರುಳು ಪ್ರಾರ್ಥಿಸುವೆ ನಾನು: ಅದಕ್ಕಾಗಿ ಮುಡಿಪು ನನ್ನ ಬದುಕು. ದೈವ ನನಗಿತ್ತ ಕರುಣಾಸ್ರೋತದಲಿ ಮೀಯುವಧಿಕಾರ ಸರ್ವರಿಗೂ ಉಂಟು. ಹೇಳು, ನಿನಗೊದಗಿರುವ ದುಃಖ ಎಂಥದಿದ್ದರೂ ಸರಿಯೆ, ನಿನ್ನ ಕಷ್ಟ ಪರಿಹರಿಸುವ ಕಾರ್ಯಕೆ ಸದಾ ಸಿದ್ಧನಾಗಿರುವೆ ನಾನು.

ಮೇರಿ : ನಿಮ್ಮ ಕರುಣೆಯಲಿ.... (ಭೀತಳಾಗಿ) ಸ್ವಾಮೀ ಬಂದರದೋ ಬಂದರು ಅವರೆ. ಅದೋ ಅಲ್ಲಿ ಕಾಣಸುವರು. ಆ ದಿನ್ನೆಯನ್ನು ಹತ್ತಿ ಇತ್ತಲೇ ಧಾವಿಸಿ ಬರುತಿಹರು. ಅವರ ಕ್ರುದ್ಧ ಮುಖ ನೋಡುವ ಧೈರ್ಯ ನನಗಿಲ್ಲ. ಅವರ ಕ್ರೂರ ನುಡಿ ಕೇಳುವ ಬಲವೂ ನನ್ನಲಿಲ್ಲ. ಅವರೆಲ್ಲರೂ ನನ್ನನ್ನೇ ಹುಡುಕುತ್ತ ಹಿಂಬಾಲಿಸುತಿಹರು. ಅವರ ಕಣ್ಣುಗಳುಗುವ ಬೆಂಕಿಯುರಿಯನ್ನು ಹೇಗೆ ಸಹಿಸಿಕೊಳ್ಳಲಿ ನಾನು?

ಏಸು : ಏನಿದ್ದರೂ ಸ್ಪಷ್ಟವಾಗಿ ಹೇಳಬಹುದು. ಇಲ್ಲಿ ಭಯಪಡುವ ಅಗತ್ಯವೇ ಇಲ್ಲ. ಭೀತರನು ಬದುಕಿಸುವ ನಿರ್ಭೀತಿಯ ವಲಯ ಇದು. ಯಾವಾಗಲೂ ಗೆಲ್ಲುವುದು ಸತ್ಯವೆ ಅಲ್ಲವೆ?

ಮೇರಿ : ನನ್ನನಾಮೂಲಾಗ್ರ ಆವರಿಸಿರುವ ಭೀತಿಯನ್ನು ಹೇಗೆ ಕಳೆದುಕೊಳ್ಳಲಿ ತಂದೆ? ನನ್ನ ಜೀವದ ಬೇಟೆಯಾಡುವ ಇಚ್ಛೆ ಭೀತಿಗಿರುವಂತೆ ತೋರುತಿದೆ. ಅದರ ತೀವ್ರತೆಯಿಂದ, ತಳಮಳದಿಂದ ಮುಕ್ತಗೊಳ್ಳುವುದು ಹೇಗೆ? ಅಲ್ಲಿ ಬರುವವರು ನನ್ನನ್ನು...ನನ್ನನ್ನು ಸಾಯಿಸದೆ ಹಾಗೆ ಬಿಡುವವರಲ್ಲ. ನನ್ನ ಕೊಲ್ಲುವುದಕೆಂದು ಅವರೆಲ್ಲರು ಧಾವಿಸುತ ಬರುತ್ತಿದ್ದಾರೆ ಈ ಕಡೆಗೆ.

ಏಸು : ನಿನ್ನನ್ನು ಕೊಲ್ಲುವರೆ ಅವರು? ಮೃತ್ಯುವಿನ ದೂತರೆ ಅವರು? ತಮ್ಮ ಸಾವನ್ನೆ ತಪ್ಪಿಸಿಕೊಳ್ಳಲಾಗದೆ ಒಳಗೊಳಗೆ ಮುದುಡಿ ಮುಮ್ಮಿಯಾದವರು ನಿನ್ನನ್ನು ಕೊಲ್ಲುವರೆ? ಕೊಲ್ಲುವಧಿಕಾರವಿದೆಯೆ ಅವರ ಕೈಯಲ್ಲಿ? ಮಗಳೆ ಇನ್ನು ಭೀತಿಗೆ ಕಾರಣವಿಲ್ಲ. ನಿನ್ನ ರಕ್ಷಣೆಯ ಹೊಣೆ ಹೊತ್ತಿರುವ ನಾನು ಅವರೆಲ್ಲರನು ಎದುರಿಸಲು ಸಿದ್ಧ. ನಿನಗೀಗ ಒದಗಿರುವ ವಿಪತ್ತು ಯಾವುದು? ಯಾರು ನೀನು?

ಮೇರಿ : ನಾನು [ತಡವರಿಸುತ್ತ] ನಾನು....ನಾ....ನೇ... ! ಹೆಸರು ಮೇರಿ. ಮಗ್ದಲೆಯವಳು. ಕುಪ್ರಸಿದ್ಧ ಕುಲಟೆ. ಅಪರಾಧಿನಿ, ಪಾಪಿ.

ಏಸು : ಮಗ್ದಲೆಯ ಮಗಳೆ! ನನಗೆ ನಾನು ಪುಣ್ಯವಂತ ಎಂದುಕೊಂಡರಾಗುವುದೆ? ಅಥವಾ....ಅಪರಾಧವನು ಯಾರು ಮಾಡಿಲ್ಲ? ಪಾಪವನ್ನು ಯಾರು ಮಾಡಿಲ್ಲ? ಒಂದಿಷ್ಟು ಹೆಚ್ಚು ಕಡಿಮೆ ಎಲ್ಲರೂ ಒಂದೆ ಹಡಗಿನಲ್ಲಿ ಕುಳಿತು ಬಂದವರೆ. ಹಾಗೆ ಪಲವರಲಿ ಯಾರೊಬ್ಬರಾದರೂ ಶುದ್ಧ ಪಾಪಿಗಳೆ ಆಗಿದ್ದ ಪಕ್ಷದಲ್ಲಿ ಹಡಗು ಮುಳುಗದಿರುತಿರಲಿಲ್ಲ. ಪಾಪ-ಪುಣ್ಯದ ತೂಕ ನೋಡುವ ಯಂತ್ರ-ಅದು ಸೂಚಿಸಿದ ಹಾಗೆ ನಮ್ಮ ಈ ಬದುಕು-ಮುಳುಗುವುದು ಅಥವಾ ತೇಲುವುದು.
ಏನಿದ್ದರೂ ಹೇಳಿಬಿಡು.

ಮೇರಿ : ಕುಲಟೆಯಾದವಳು ಏನು ಹೇಳಲಿ ನಾನು? ಹುಳುಹತ್ತಿದ ಪ್ಲೈಉಡ್ಡಿನ ಹಾಗಿರುವ ಬದುಕು ಮತ್ತೆ ಚಿಗುರುವುದುಂಟೆ?
[ಭೀತಿಯಿಂದ-] ಅಯ್ಯೋ, ತಂದೇ, ಒಂದೇ ಬಿಟ್ಟರವರು ಇಲ್ಲಿಗೆ.
[ದಿಣ್ಣೆಯನ್ನು ಹತ್ತಿ ಬಂದ ಜನಗಳ ಗುಂಪು ಅಲ್ಲಿಗೆ ಬಂದು "ಹಿಡಿಯಿರೋ ಅವಳನ್ನು" ಎಂಬ ಗುಜುಗುಜು ಸದ್ದು]

ಧ್ವನಿಗಳು : ಹಿಡಿಯಿರೊ ಅವಳನ್ನು, ಕಲ್ಲು ತೂರಿರಿ.
ಕೊಲ್ಲಿರಿ ಪಾಪಿಯನ್ನು.
[ಗುಜು ಗುಜು ಸದ್ದು]
ಹೀಗೆ–ಇಲ್ಲಿ ಬನ್ನಿರಿ–ಹಿಡಿಯಿರಿವಳನ್ನು.

ಮೇರಿ : ಅಯ್ಯೋ! ಬಿಡಿರಿ ನನ್ನನ್ನು. ಯಾಕೆ ಕೊಲ್ಲುವಿರಿ ನನ್ನನ್ನು?

ಒಬ್ಬ : ಓ! ನಮ್ಮ ಕಣ್ಣಿಗಿಂಗು ಹಚ್ಚಿ ಇಲ್ಲಿ ಬಂದುಬಿಟ್ಟೆಯಾ?

ಮುಖಂಡ : [ಗಡಸು ಧ್ವನಿ] ಪೆದ್ದರೇ, ನಿಮಗೇನು ಗೊತ್ತು ಸುಮ್ಮನಿರಿ. ಈ ಪಾಪಿ ಇಲ್ಲಿ ಬಂದದ್ದೆ ಒಳ್ಳೆಯದಾಯ್ತು. ಯಾಕೆ ಗೊತ್ತೆ? ಇಲ್ಲಿ ಕೇಳಿ. ಏಲೋ ಏಸು,–ಯಾರು ಗೊತ್ತೇ ಇವಳು. ನಿನ್ನ ಆಶ್ರಯ ಕೋರಿ ಬಂದವಳು ?

ಏಸು : ಒಬ್ಬ ಅನಾಥೆಯಲ್ಲವೆ ?

ನಾಯಕ : ಇಲ್ಲಿಯೇ ತಪ್ಪುವುದು ನಿನ್ನ ಧರ್ಮ. ಅನಾಥಳೆ ಇವಳು? ಹಲವು ಜನರ ನಾಥರೊಡನೆ ರಮಿಸುವವಳು ?

[ಜನರ ಧ್ವನಿ: ಅನಾಥಳಂತೆ ಅನಾಥಳು, ಹಲವು ಜನನಾಥರಿರುವವಳು !—(ಗೇಲಿ, ನಗೆ, ಧ್ವನಿ.)]

ಏಸು : (ಶಾಂತ ಸ್ವರದಿಂದ) ಇರಬಹುದು.

ನಾಯಕ : ಒಹುದು ? ಇನ್ನೂ ಸಂಶಯಂದ ಜೋಕಾಲಿಯೆ ? ಇವಳ ಇಂಥ ವರ್ತನೆಯಿಂದ ಹೆಣ್ಣು ಕುಲಕ್ಕೆ ಕಳಂಕ ತಟ್ಟುವುದಿಲ್ಲವೆ ? ಸ್ತ್ರೀಧರ್ಮವೆ ಹಾಳಾಗಲಿಲ್ಲವೆ ? ಇಂಥ ಧರ್ಮಭ್ರಷ್ಟರನ್ನು ದಂಡಿಸುವುದು ಯುಕ್ತವಲ್ಲವೆ ?

ಏಸು : ಯುಕ್ತಾಯುಕ್ತತೆಯ ಮಾತಾಡಿ ದಂಡಿಸುವವರು ನಾವು ಯಾರು ? ಅಥವಾ ದಂಡಿಸುವುದು ಯುಕ್ತವಲ್ಲವೆಂದು ನಾನೇಕೆ ಹೇಳಬೇಕು ?

ನಾಯಕ : ಹಾಗಾದರೆ ಈಕೆಯನ್ನು ದಂಡಿಸುವುದಕೆ ನಿನ್ನ ಅಭ್ಯಂತರವೇನೂ ಇಲ್ಲ ಎಂದ ಹಾಗಾಯಿತು.

ಏಸು : ಸ್ತ್ರೀಧರ್ಮವನು ಹಾಳುಗೆಡಿಸಲು ಕಾರಣರಾದವರನ್ನು ದಂಡಿಸುವುದು ನ್ಯಾಯಸಮ್ಮತವೆ.

ನಾಯಕ : ಹೋಗಲಿ ಬಿಡು. ಅಯ್ಯಾ ಏಸು, ಇವಳ ಕಥೆಯನ್ನೊಂದಿಷ್ಟು ಕೇಳಿ ನೋಡಂತೆ. ಅದನು ಕೇಳಿದ ಮೇಲೆ ನೀನೇನು ಇವಳ ಪರ ವಾದಿಸಲಿಕ್ಕಿಲ್ಲ. ಇವಳೊಬ್ಬ ಕುಲಟೆ. ಇವಳ ವ್ಯಭಿಚಾರದ ಕಪ್ಪು ಇಡಿಯ ಗ್ರಾಮಕ್ಕೆ ಕಲಂಕ ತಂದೊಡ್ಡಿಹುದು. ಅದಕೆಂದೆ ಇವಳ ಬೆನ್ನಟ್ಟಿ ಬಂದಿದ್ದೇವೆ. ನಮಗಿಂತ ಮೊದಲೆ ನಿನ್ನ ಬಳಿ ಬಂದು ಏನೋ ಸುಳ್ಳನಾಡಿ, ನಿನ್ನ ವಂಚಿಸಿ ಆಶ್ರಯ ಕೋರುತಿರುವಳಲ್ಲವೆ ?

ಏಸು : ಹಾಗೇನಿಲ್ಲ. ಇವಳೇನು ಸುಳ್ಳನಾಡಲಿಲ್ಲ. ವಂಚಿಸಲೂ ಇಲ್ಲ.

ನಾಯಕ : ಪೂರ್ವಾಪರಗಳನ್ನು ತಿಳಿದು ಆಶ್ರಯ ನೀಡುವುದು ಉಚಿತ…ಇಂಥ ಕುಲಟೆಯರಿಗೆ ಆಶ್ರಯ ನೀಡುವುದರಿಂದ ಅದು ನಿನಗೆ…

ಏಸು : ಇದು ನಿಮ್ಮ ವಿಷಯವೇನಲ್ಲ. ನನ್ನ ವೈಯಕ್ತಿಕ ಪ್ರಶ್ನೆ ಇದು. ಆಶ್ರಯವನ್ನು ಕೊಡಬಹುದು ಬಿಡಬಹುದು. ಆಶ್ರಯವ ಕೊಡುವವರು ಕುಲಾಚಾರ ಕೃತ್ಯಗಳ ವಿವರ ಕೇಳಬಹುದು ಸಮಯೋಚಿತವಲ್ಲ.

ನಾಯಕ : ಅದಿರಲಿ. ಹೀಗೆ ವ್ಯಭಿಚಾರಗೈದವರ ಕುರಿತು ಏನು ಹೇಳುವುದಯ್ಯ ನಿನ್ನ ಧರ್ಮ ?

[ಏಸು ಮೌನವಾಗಿರುವುದನ್ನು ಗಮನಿಸಿ]
- ಹೀಗೆ ಮೌನವಾಗಿರು-ಎಂದು ಹೇಳುವುದೆ ಮತ್ತೆ ?

ಏಸು : ನನ್ನ ಧರ್ಮ ನನಗಿರಲಿ. ನಿಮ್ಮ ಧರ್ಮಶಾಸ್ತ್ರ ಹೇಳುವುದು ಏನನ್ನು ?

ನಾಯಕ : ಇಂಥ ಕುಲಟೆಯರನ್ನು ಕಲ್ಲು ಹೊಡೆದು ಸಾಯಿಸಬೇಕೆಂದು. ಅದಕೆಂದು ಬಂದಿದ್ದೇವೆ.

ಏಸು : ಹಾಗಾದರೆ ಹಾಗೆಯೇ ಆಗಬಹುದು. ನನ್ನ ಧರ್ಮಕೂ ನಿಮ್ಮ ಧರ್ಮಕೂ ಅಷ್ಟೊಂದು ಅಂತರವೇನಿಲ್ಲವೆಂದಾಯ್ತು.

ನಾಯಕ : ನಿನ್ನ ಸಮ್ಮತವೆ? ಅಂದರೆ ನಾವು ಹಾಗೆ ಮಾಡಬಹುದೆ ?

ಏಸು : ಅದಕ್ಕೆ ನನ್ನ ಅಭ್ಯಂತರವೇನಿಲ್ಲ. ಆದರೆ ನಿಮ್ಮ ಧರ್ಮಶಾಸ್ತ್ರದ ಈ ಶಿಕ್ಷೆ ಅಷ್ಟೊಂದು ಕಠೋರವಾದ್ದೇನಲ್ಲ.

ಜನರಧ್ವನಿ : ಇದೊ ನಾವೆಲ್ಲರೂ ಕಲ್ಲು ತೆಗೆದುಕೊಂಡಿದ್ದೇವೆ.

ಏಸು : [ಮೇರಿಯನ್ನುದ್ದೇಶಿಸಿ] ಮಂಗಳೆ, ನೀನು ಅಪರಾಧಿನಿಯೆಂದು ಇವರು ನುಡಿಯುವುದು ನಿಜವೆ ?

ಜನರಧ್ವನಿ : ಅಯ್ಯಾ ಏಸು, ಇನ್ನೂ ಸಂಶಯವೆ ? ಅವಳನ್ನೇನು ಕೇಳುವಿ ?

ಏಸು : ಇಲ್ಲ ಅಪರಾಧಿನಿಯ ಅಭಿಪ್ರಾಯ ಕೇಳುವುದೂ ಧರ್ಮ.

ನಾಯಕ ; ಆಗಲಯ್ಯ, ಕೇಳು ಕೇಳು.

ಜನರ ಧ್ವನಿ : ಕೇಳು ಕೇಳು. ಬೇಗನೆ ಕೇಳು.

ಮೇರಿ: ನಿಜ ಇವರು ಭಾವಿಸಿದಂತೆ ಅಪರಾಧಿನಿಯೆ ನಾನು. ಇವರೆಲ್ಲರೂ ಹೀಗೆ ಜಲ್ಲಿದರೆಂದ ಮೇಲೆ ನನ್ನ ಮಾತಿಗೆ ಯಾವ ಅರ್ಥವಿದೆ ?

ಜನರಧ್ವನಿ : ಇದೇನು ಇವಳ ವವತು ? ಮಾತಿನ ಮೂಲಕು ?

ನಾಯಕ : ಎಲಾ ಚಾಂಡಾಲಿನೀ,-ನಾನೇನು ಸುಳ್ಳು ನುಡಿದವೆ ? ಅಪರಾಧವನು ಮಾಡಲಿಲ್ಲವೆ ನೀನು ?

ಮೇರಿ : ನಾನು ಮಾಡಲಿಲ್ಲ. ಪರಿಸ್ಥಿತಿ ಹಾಗೆ ಮಾಡಿಸಿದ್ದು. ಆದರೊತ್ತಡಕೆ ಸಿಕ್ಕು ವ್ಯಭಿಚಾರದಲಿ ಜಾರಿದ್ದು. ಹೀಗಿದ್ದರೂ ಆಚಾರವನು ಬಿಟ್ಟವಳಲ್ಲ ನಾನು?

ಜನರ ಧ್ವನಿ : ಏನಯ್ಯಾ ಇವಳ ಆಚಾರ...? !

ನಾಯಕ : ಸಾಕು ಮಾಡು ನಿನ್ನ ರಗಳೆಯನು ! ಇಡಿಯ ಗ್ರಾಮವೇ ಸಾಕ್ಷಿಯಿದೆ ನೀನು ವ್ಯಭಿಚಾರಿಣಿ ಎಂಬುದಕೆ.

ಏಸು : ಆಗಲಿ ನೀವು ಭಾವಿಸಿದಂತೆ ಇವಳು ಅಪರಾಧಿನಿ.

ಜನರ ಧ್ವನಿ : [ತಿರಸ್ಕಾರದಿಂದ] ಕೇಳಿದಿರಾ ? ನಾವು ಭಾವಿಸಿದಂತೆ ಅಂತೆ, ಅಂತೆ–

ಏಸು : ಇವರೆಲ್ಲರ ದೃಷ್ಟಿಯಲಿ ಅಪರಾಧಿನಿ ನೀನು. ಅದಕೆ ಇವರೀಗ ನಿನ್ನನ್ನು ಕಲ್ಲಿನಿಂದ ಹೊಡೆದು ಸಾಯಿಸುವರು ಸಿದ್ಧಳಾಗು ಅದಕೀಗ. ನಿನ್ನ ಪಾಪದ ಮೂಟೆಯನು ನೀನೆ ಹೊರಬೇಕಲ್ಲವೆ ?

ಮೇರಿ : ತಂದೆ. ಇದೆಂತಹ ವೈಚಿತ್ರ್ಯ? ನನ್ನನೀ ಜನರ ಕೈಗೊಪ್ಪಿಸಿ ಹೀಗೆ ಹಿಂಸಿಸುವುದೆ? ನಾನೇನೊ ಸಿದ್ಧಳಾಗಿಹೆನು ದಂಡನೆಯ ಅನುಭವಿಸುವುದಕೆ. ಆದರೆ ನನ್ನ ಮನಸ್ಸು ಒಪ್ಪುವುದಿಲ್ಲ.

ನಾಯಕ : ಕೇಳಿದಿರಾ, ಇವಳ ಮನಸ್ಸು ಒಪ್ಪುವುದಿಲ್ಲವಂತೆ.

ಜನರಧ್ವನಿ : ಓ, ಮನಸ್ಸೇ, ಮನಸ್ಸಂತೆ! ಇವಕ್ಕೇಕೆ ಒಪ್ಪೀತು? ದುಡ್ಡು ಕೊಟ್ಟವರಿಗೆ...ದುಡ್ಡು ಕೊಟ್ಟವರಿಗೇ ಒಪ್ಪುವುದು.

ಮೇರಿ : ಅಯ್ಯೋ, ಕಲ್ಲಿನೇಟಿಗೊಡ್ಡಬೇಕೆ ನನ್ನ ದೇಹವನು?

ಜನರಧ್ವನಿ : ಅಯ್ಯೋ ಪಾಪ! ನಾಥರ ನಳಿದೋಳಿಗೊಡ್ಡುವ ಕೋಮಲ ದೇಹವನ್ನು ಇವಳು ಕಲ್ಲಿನೇಟಿಗೆ ಹೇಗೆ ಒಡ್ಡಿಯಾಳು? ಪಾಪ, ಪಾಪ! [ವ್ಯಂಗ್ಯ ನಗು].

ಮೇರಿ : ಹೊಡೆತ ಸಹಿಸಿಕೊಳ್ಳುವ ಬಲವ ಕೊಡು ತಂದೆಯೇ, ನಾನಿನ್ನು ನಿನ್ನ ಮಾತಿಗೆ ಪ್ರತಿಯಾಡಲಾರೆ. ಹೇಗೂ ನೀನು ಕರುಣಾಮಯಿ. ಮನಸ್ಸೆ, ಕಲ್ಲಿನೇಟುಗಳ ಸಹಿಸುವುದಕ್ಕೆ ಸಿದ್ಧವಾಗು.

[ಏಸುವಿನ ಪಾದಗಳ ಮೇಲೆ ಎರಗುವಳು]

ಏಸು : ಮೇಲೇಳು. ಪ್ರಾಯಶ್ಚಿತ್ತದಿಂದಲೆ ಹಗುರಾಗುವವು ಜವಾಬ್ದಾರಿಗಳು.

ನಾಯಕ : ಏಸು ನಾವಿನ್ನು ಹೊಡೆಯೋಣವೆ?

ಏಸು : ಇನ್ನೊಂದಿಷ್ಟು ತಡೆಯಿರಿ. ಇವಳು ಪಾಪಿಯೇನೋ ನಿಜ. ಕಲ್ಲು ಹೊಡೆಯುವುದರಿಂದ ಆದರ ಪಾಪ ನಿಮ್ಮನಾವರಿಸುವುದು. ನೀವೆಲ್ಲರೂ ಇವಳರಿಯದೆ ಗೈದ ಪಾಪದಲಿ ಪಾಲುಗಾರರಾಗುವಿರಿ. ಅದಕೆ ನೀವೂ ಶಿಕ್ಷೆಯ-ನನುಭವಿಸಬೇಕಾಗುವುದು.

ಜನರಧ್ವನಿ : ಇದೇನಯ್ಯಾ? ಇವಳ ಪಾಪದಲ್ಲಿ ನಾವೂ ಪಾಲುಗಾರರಾಗುವೆವೆ? ನಾವೇನು ಇವಳ ನಾಥರೇನಯ್ಯಾ? [ವ್ಯಂಗ್ಯನಗೆ] ಹೇಗಯ್ಯಾ ಇದು. ಏಸು ನಿನ್ನ ಮಾತಿನ ಅರ್ಥ?

ಏಸು : ಧರ್ಮಶಾಸ್ತ್ರದಲಿ ಹೀಗೆ ಹೇಳಿದ್ದು. ಇವಳಿಗೆ ಕಲ್ಲು ಹೊಡೆಯುವ ಶಿಕ್ಷೆ ಕೊಡಬೇಕು. ಆದರಿಷ್ಟೆ. ಎಂದೂ ಪಾಪಮಾಡದಿರುವವರು ಮಾತ್ರ ಮೊದಲನೆಯ ಕಲ್ಲು ಹೊಡೆಯಬೇಕು. ನಿಮ್ಮಲ್ಲಿ ಪಾಪಮಾಡದವರು ಯಾರೊ ಅವರು ಮಾತ್ರ ಮೊದಲನೆಯ ಕಲ್ಲು ಹೊಡೆಯಬೇಕು. ಅಂಥವರು ನಿಮ್ಮಲ್ಲಿ ಯಾರು, ಮುಂದ ಬರಬೇಕು. ನಾನು ಎಂದೂ ಯಾವ ಪಾಪವನ್ನು ಮಾಡಿದವನಲ್ಲ ಎಂದು ಹೇಳಿ ಕಲ್ಲು ಹೊಡೆಯಬೇಕು.

ಜನ : ಅಂದರೆ? ಎಂಥ ಪಾಪ? ಯಾವ ಪಾಪ?

ಏಸು: ಪಾಪಕ್ಕೇನು? ಇರುವೆಯೊಂದನು ಹಿಂಸಿಸುವುದೂ ಪಾಪವಾಗುವುದು. ಹಿಂಸಾಚಾರದ ಸಣ್ಣಪುಟ್ಟ ಕೃತ್ಯಗಳೂ ಪಾಪಕ್ಕೆ ಮೂಲವಾಗಬಹುದು. ಇನ್ನು ತಡವೇಕೆ? ಯಾರಿದ್ದೀರಿ ನಿಮ್ಮಲ್ಲಿ ಪಾಪ ಮಾಡದವರು?

ನಾಯಕ : [ಒಬ್ಬನನ್ನು ಉದ್ದೇಶಿಸಿ] ಏನು ನೋಡುತ್ತೀ ಹೊಡೆ ಕಲ್ಲನ್ನು

ಒಬ್ಬ : ನಾಯಕ ನಾನು ಹೊಡೆಯಬಹುದಿತ್ತು. ಆದರೆ

ನೇರಿ : ಆ…ದ…ರೆ ಪಾಪಿ ನಾನೊಬ್ಬಳೆ ಅಲ್ಲವೆ ?

ಒಬ್ಬ : ನೀನೊಬ್ಬಳೇ ಅಲ್ಲ ನಾನೂ.

ನಾಯಕ : [ರೊಚ್ಚಿನಿಂದ] ಏನಯ್ಯಾ, ಇವಳ ಶಾಖ ನಿನಗೂ ತಟ್ಟಿತೆ ? ನೀನೂ ಪಾಪಿಯೇ ?

ಒಬ್ಬ : ಹೌದು. ನನ್ನ ಮನಸ್ಸಾವರಿಸಿದ್ದ ಭ್ರಮೆಯ ಮಂಜು ಕರಗಿತು. ವ್ಯಭಿಚಾರವೊಂದೇ ಪಾಪವೆಂದು ಬಗೆದಿದ್ದ ಪಾಮರ ನಾನು. ಇವಳನ್ನು ಹೊಡೆಯಲೆಂದೆತ್ತಿದ ಕೈ ಯಾಕೊ ಗಡ ಗಡ ನಡುಗಿ ಗತಕಾಲದ ನನ್ನ ಪಾಪವೆದ್ದು ಬಂದು ನನ್ನ ಕೈ ತತ್ತರಿಸುತಿವೆ ಕತ್ತರಿಸಿದ ಹಾಗೆ. ಕಳಚಿತಿದೊ ಕಲ್ಲು ಕೈಯೊಳಗಿಂದ ತಾನೆ [ಕಲ್ಲು ಬಿದ್ದ ಸದ್ದು].

ಏಸು : ಪ್ರಾಯಶ್ಚಿತ್ತದಿಂದ ಕರಗುವುದು ಪಾಪ. ಹೇಳು ಧೈರ್ಯವಾಗಿ ಯಾವುದು ನೀನು ಮಾಡಿದ ಪಾಪ ?

ಒಬ್ಬ : ಹತ್ತು ವರುಷಗಳ ಹಿಂದೊಮ್ಮೆ ಪ್ರಯಾಣದವಧಿಯಲಿ ನಡೆದ ದುರ್ಘಟನೆ ಅದು. ನಾನು ಸ್ನೇಹಿತನೊಡನೆ ಮರಳುವ ಹೊತ್ತು ನಾವಿದ್ದ ದೋಣಿ ಬಿರುಗಾಳಿ ಹೊಡೆತಕ್ಕೆ ಸಿಕ್ಕಿತ್ತು [ತೆರೆಗಳ ಅಬ್ಬರ ಹಾಗೂ ಬಿರುಗಾಳಿ ಸದ್ದು] ನಾವಿದ್ದ ದೋಣಿ ಮುಳುಗುತ್ತಿತ್ತು. ನಾನು ಹೇಗೋ ಈಜೀಜುತ್ತ ಸನಿಹದ ದಂಡೆ ಮುಟ್ಟಿದೆ. ಈಜುಬಾರದ ಸ್ನೇಹಿತ ತನ್ನನ್ನು ರಕ್ಷಿಸಲೆಂದು ಎಷ್ಟು ಅರಚಿಕೊಂಡರೂ ರಕ್ಷಿಸಲಿಲ್ಲ ನಾನವನನ್ನು. ಸ್ನೇಹಿತನೆಂಬ ಕಾರಣದಿಂದ ರಕ್ಷಿಸುವ ಮನಸ್ಸಿತ್ತು. ಆದರೇಕೋ ಆ ಹೊತ್ತಿನಲಿ ಅವನ ಹೆಂಡತಿಯ ಸುಂದರ ರೂಪ ನೆನಪಿಗೆ ಬಂದು ನನ್ನ ಭಾವಗಳ ಕಲಕಿತ್ತು. ಇವನು ಸತ್ತರೆ ಅವಳು ನನ್ನ ಕೈವಶವಾಗಬಹುದೆಂದು ದುರಾಶೆಯ ಸುಳಿಯಲ್ಲಿ ಸಿಕ್ಕ ಏನೇನೊ ಕನಸು ಕಟ್ಟುತ್ತ ನಿಂತೆ. ದುರಾಶೆಯ ಕಾರಣದಿಂದ ರಕ್ಷಿಸಲಿಲ್ಲ ನಾನವನನ್ನು. ಅವನಿನ್ನೂ ರಕ್ಷಿಸು ರಕ್ಷಿಸೆಂದು ಕೂಗಿದಂತೆನ್ನಿಸುವುದು. ಇದು ಪಾಪವಲ್ಲದೆ ಮತ್ತೇನು ? ನಾನು ಪಾಪಿ. ಕಲ್ಲಿಂದ ಹೊಡೆಯುವುದು ಆಗದು ನನ್ನಿಂದ.

ನಾಯಕ : [ಕೋಪದಿಂದ] ಸರಿದೂರ, ಪಾಪಿ ನೀನು. ಇವನನ್ನು ಕೇಳುವೆನು. ನೀನೇಕೆ ಸುಮ್ಮನಿರುವೆ ? ಪಾಪಗೈಯುದ ನೀನೇಕೆ ನಿಂತಿರುವೆ ಹೀಗೆ ಬಿಮ್ಮಗೆ ?

ಎರಡನೆಯವ : ನನಗೇನೂ ತೋಚದಾಗಿದೆ. ನಾನೇನೂ ಹೊಡೆಯಬೇಕೆಂದು ಕಲ್ಲನೆತ್ತಿದರೆ ನನ್ನ ನೆನಪ ಬೆಂಬಿಸಿ–ಯಾವುದೋ ಭೂತವೆದ್ದು ಬಂದು— ' ನಾ—ನು—ಯಾ—ರು ಬಲ್ಲೆಯಾ ??—ಎಂದು ಕೇಕೆ ಹಾಕುತ್ತ ಮನದಲ್ಲಿ ಗೊಂದಲವನೆಬ್ಬಿಸಿದೆ. ಆ ಭೂತ ಯಾರದಿದ್ದೀತೆಂದು ಕಣ್ಣಿಟ್ಟು ನೋಡಿದರೆ–

ನಾಯಕ : ನೀನು ಹೇಳುತ್ತಿರುವುದಾದರೂ ಏನು ? ಕಥೆ ತಾನೆ ?

ಎರಡನೆಯವ : ಹೌದು ಅದೆ ನನ್ನ ಪಾಪದ ಕಥೆ.

ಹಾಗೆ ಎದುರು ಬಂದ ಭೂತಾಕೃತಿ ನನ್ನ ಪಾಪದ ಕಟ್ಟನ್ನು ಬಿಚ್ಚಿ ತೋರುತ್ತ ನನ್ನ ಕೃತಿಯ ಖಂಡಿಸುತ ಅಣಕಿಸುತ್ತಿತ್ತು ನನ್ನನ್ನು [ನಗು] ನಾನು ಗರ್ಜಿಸ ಲಾರೆನೆಂದು ಹುಸಿ ನುಡಿದಾಗ ಅದು ಮಿಂಚಿನ ರೂಪ ತಳೆದು ನನ್ನ ಚಿತ್ರ ಭಿತ್ತಿಯ ಮೇಲೆ ಕಾಣಿಸುತ್ತಿತ್ತು.

ಹಿಂದೊಮ್ಮೆ ನಾನು ಪ್ರೀತಿಸಿದ ಹೆಣ್ಣು ಪ್ರತ್ಯಕ್ಷಗೊಂಡು ನಿಂತಂತಾಯ್ತು. ನಾನವಳ ಪ್ರೀತಿಸಿದ್ದೇನೂ ಸುಳ್ಳಲ್ಲ. ಆದರೆ ಅವಳು ಯಾವುದೋ ಬಾಧೆ ಗೊಳಗಾದದ್ದು ಗಮನಕ್ಕೆ ಬಂದಾಗ ನಾನವಳ ಅಸಡ್ಡೆಯಿಂದ ಕಂಡೆ ಅವಳ ಮನ ನೋಯುವ ಹಾಗೆ ನುಡಿದೆ. ಅವಳು ನೊಂದು ಅದೆ ರಾತ್ರಿ ವಿಷ ಪ್ರಾಶನಗೈದು ಮುಕ್ತಳಾದಳು. ಆ ಪಾಪ……

ನಾಯಕ : [ಬೇಸರದಿಂದ] ಅದೇ ಭೂತವಾಗಿ ಕಂಡದ್ದಲ್ಲವೆ ?

ಎರಡನೆಯವ : ಹೌದು. ಅದೆ ಭೂತ…ಅದೆ ಚಿತ್ರ. ಅದೆ ರಾತ್ರಿ…ಅದಕ್ಕೆ ನನ್ನ ಕೈ ಏಳುತ್ತಿಲ್ಲ.

ಏಸು : ಪಾಪ ಯಾರನ್ನೂ ಬಿಡಲಾರದು. ಬದುಕಿರುವವರೆಗೂ ಅದು ನಾಯಿಯ ಹಾಗೆ ಬೆನ್ನಟ್ಟಿ ಕಾಡುವುದು. ಪಶ್ಚಾತ್ತಾಪದಿಂದ ಕರಗುವುದು ಪಾಪ…

ಮೇರಿ : ಪಶ್ಚಾತ್ತಾಪದಿಂದ…ಕ…ರ…ಗು … ವು … ದು … ಪಾಪ … ಹೌದು ತಂದೆ…ಹೌದು ಪಶ್ಚಾತ್…

[ಪುನರುಚ್ಚರಿಸುವಳು]

ನಾಯಕ : [ಇನ್ನೊಬ್ಬನಿಗೆ] ಎಲೋ ನೀನೇಕೆ ಹೀಗೆ ಮುದುಡಿಕೊಂಡದ್ದು ?

ಮೂರನೆಯವ : ಎತ್ತಿದ ಈ ಕಲ್ಲು ಹೊಡೆಯುವ ಮುನ್ನ ಒಂದು ಸಲ ಏಸುವಿನ ಮುಖ ನೋಡಿದೆ. ಯಾಕೊ ನನ್ನ ಕಣ್ಣಿನ ಕಾಂತಿ ಸುಟ್ಟಂತಾಗಿ–ಕಣ್ಣಿಗೆ ಕತ್ತಲು ಕವಿದ ಹಾಗಾಗಿ ತಲೆ ಗಿರ್ರನುತಿದೆ. ಯಾವುದೋ ಚಕ್ರವೊಂದು ಚರಚರನೆ ನನ್ನ ತಲೆಕೊಯ್ಯುವ ಅನುಭವವಾಗುತಿದೆ. ಈ ಮಿಂಚಿನ ಉದ್ವೇಗ ಇಳಿದು ಹೋಗಿ ನನ್ನ ತಪ್ಪು ನನಗೆ ಹೊಳೆಯುತಿದೆ.

ನಾಯಕ : ನೀನೂ ತಪ್ಪು ಮಾಡಿದವನೆ ?

ಮೂರನೆಯವ : ಬೇಟೆಯಾಟದಲಿ ಸತ್ಯತೃಪ್ತಿ ಪಡೆಯುತ್ತಿದ್ದ ನಾನು ಎಂದೂ ಭೀತನಾದದ್ದಿಲ್ಲ. ಆದರೊಂದು ದಿನ ಹುಲಿಯ ಬದಲಿಗೆ ಜಿಂಕೆಯೊಂದನು ಕೊಂದು ಕೆಟ್ಟೆ. ಅದನು ಕೊಲ್ಲುವ ಮುನ್ನ ಯಾರೊ ಅದರ ಹಿಂದೆ ನಿಂತು— "ಕೊಲ್ಲಬೇಡ, ನನ್ನನ್ನು ಕೊಂದು ಪಾಪ ಕಟ್ಟಿಕೊಳ್ಳಬೇಡ." ಹೀಗೆಂದು ಪ್ರಾರ್ಥಿಸುವುದನು ಗಮನಿಸದೆ ಅದಕೊಂದು ಹಿಂಸೆಯನು ಕಟ್ಟಿಕೊಂಡೆ. ಅಂದು ನಾನು ಮಾಡಿದ ಪಾಪ ನನ್ನಲ್ಲಿ ಭೀತಿಯ ಬಾವಿಯನ್ನಗೆಯುತಿದೆ. ನನ್ನ

ಮನಸಿನ ಕೆಟ್ಟಡವಿಯಲ್ಲಿ ಆರ್ಭಟಿಸುತಿವೆ ನನ್ನ ನುಂಗಲೆಂದು ಬಾಯ್ದೆರೆದ ಹುಲಿಚಿರತೆ.

ನಾಯಕ : [ಬೇಸರದಿಂದ] ಸಾಕು ಮಾಡು ನಿನ್ನ ಭೀತಿಯ ಪುರಾಣ–ತೊಲಗು ಇಲ್ಲಿಂದ

ಮೂರನೆಯುವ : ಕಲ್ಲೆಸೆದು ಇನ್ನೊಂದು ಪಾಪಗೈವುದಕಿಂತ ಇಲ್ಲಿಂದ ತೊಲಗುವುದೆ ನನ್ನ ಪಾಲಿನ ಪುಣ್ಯ

ನಾಯಕ : ಪಾಪವೊ, ಪುಣ್ಯವೊ ?–ಹಾಳಾಗು.

ಏಸು : ನಾಯಕ, ಅವನ ಮೇಲೇಕೆ ರೇಗುವುದು ? ತನ್ನ ತಪ್ಪ ನಿವೇದಿಸಿ ಹಗುರಾಯಿತವನೆದೆ. ಈಗ ನಿನ್ನ ಸರತಿ. ಅವರೇನು ಮಾಡುವರು ? ನೀನೆ ಮೊದಲ ಕಲ್ಲ ಎಸೆ. ನೀನೇಕೆ ಎಸೆಯುತಿಲ್ಲ ? ನೀನೇನು ಅಂಥ ಯಾವ ಪಾಪ ಮಾಡಿರಲಾರೆ ?

ನಾಯಕ : ಏನಯ್ಯಾ ಏಸು ? ನಾನು ಮತ್ತು ಪಾಪ

ಏಸು : ನಾನು ಹಾಗೆನ್ನಲಿಲ್ಲ.

ನಾಯಕ : [ರೋಷದಿಂದ] ಏಸು !...

[ರೋಷ ಇಳಿದು ಹೋದ—ಭೀತಸ್ವರದಲ್ಲಿ]

ಇದೇನು, ನನಗೂ ಹೀಗೇಕಾಗುತಿದೆ. ? ಈ ಕೈಯೇಕೆ ಮೇಲೇಳುತಿಲ್ಲ ? ಯಾರೊ ಈ ಕೈಯನ್ನು ಬಿಗಿಹಿಡಿದು ಕಂಭಕ್ಕೆ ಆನಿಸಿ ಹಗ್ಗ ಸುತ್ತುವನುಭವವಾಗುತಿದೆ. ನಾನಾವ ತಪ್ಪು ಮಾಡಿದ್ದೇನೆ ? ನಾನಾವ ಪಾಪ ಮಾಡಿದ್ದೇನೆ ?

ಏಸು : ಅದು ನಿನಗೆ ಗೊತ್ತು. ಅನ್ಯರಿಗೆ ಹೇಗೆ ತಿಳಿದೀತು ?

ನಾಯಕ : [ತಡವರಿಸುತ್ತ] ನ...ನ...ಗೆ... ಗೊತ್ತು ... ಅಯ್ಯೊ, ಯಾರವನು? ನನ್ನನ್ನು ಅಗ್ನಿಕುಂಡದಲಿ ಸುಟ್ಟುಬಿಡುವೆನೆನ್ನುವನು ? ಕೈಯಲ್ಲಿ ಅಗ್ನಿಗೋಲವ ಹಿಡಿದು ನನ್ನತ್ತಲೇ ಬರುತ್ತಿದ್ದಾನೆ ಅವನು ನನ್ನ ಸ್ನೇಹಿತನೆಂದು ಹೇಳುತ್ತ ಅಸ್ಥಿಪಂಜರ ಕುದುರೆ ಹತ್ತಿ ನನ್ನತ್ತಲೇ ಧಾವಿಸಿ ಬರುತ್ತಿದ್ದಾನೆ. ನನ್ನ ಬಳಿಯಲ್ಲಿ ಏನಿರಬೇಕು ಅವನ ಕೆಲಸ ? ಆಕೃತಿಯೆ ! ತೊಲಗಾಚೆ ! ಅಯ್ಯೊ ಬಂದೇ ಬಿಟ್ಟ. ಅವನು ಹತ್ತಿರಕೆ ಒತ್ತಿ ಬಂದಂತೆ ನನ್ನ ಮೈಗೆ ಬರೆಕೊಟ್ಟ ಅನುಭವವಾಗುತಿದೆ. ಹಾ ! ಅಯ್ಯೋ ! ಒಂದು ಮಾರು ಅಂತರದಲ್ಲಿ ನಿಂತು ನನ್ನನ್ನು ದುರುಗುಟ್ಟಿ ನೋಡುತ್ತ ತನ್ನ ಮೊದಲಿನ ರೂಪ ತೋರುತಿದ್ದಾನೆ. ಯಾರು ? ನೀನೆ ? ಸ್ನೇಹಿತ ? ಇಲ್ಲಿ ಹೇಗೆ ಬಂದೆ ? ನಿನ್ನನ್ನು ಕೊಂದವನು ನಾನೆ, ನಾನೆ ? ಹಾ ! ಅಯ್ಯೊ ! ಹೀಗೇಕೆ ನನ್ನ ಮೈ ಸುಡುತ್ತಿದೆ! ಸುಳ್ಳನಾಡಿದರೆ ಸುಟ್ಟುಹಾಕುವೆನೆನ್ನುತ್ತಾನೆ. ಮನ್ನಿಸು ನನ್ನ ತಪ್ಪನ್ನು. ಅಧಿಕಾರಕ್ಕೆ ಆಶಿಪಟ್ಟು ವಂಚಿಸಿದೆ ನಿನ್ನನ್ನು. ಗುಪ್ತವಾಗಿ ನಿನ್ನನ್ನು ಕೊಲ್ಲಿಸಿದ ಪಾಪಿ ನಾನು.

ಜನರಧ್ವನಿ : ಗುಪ್ತವಾಗಿ ಕೊಲ್ಲಿಸಿದ ಪಾಪಿ ?
ನಮ್ಮ ನಾಯಕ ಪಾಪಿ, ಹಾಗಾದರೆ ನಾವು, ನಾವೇನು ? ಪಾಪಿ, ಪಾಪಿಗಳು,... ಪಾಪಿಗಳು

ಮೇರಿ : ಪಾಪಿ ನಾನು ! ಸ್ವಾಮಿ ಪಾಪಿ. ನಾನು !

ಏಸು : ನಾಯಕ, ಪ್ರಾಯಶ್ಚಿತ್ತದಿಂದ ಪಾಪದ ಹೊರೆ ಹಗುರಾಗುವುದು. ಅರಿವಿಲ್ಲದೆ ಗೈದ ಪಾಪ ಬೆಳೆದು ದೊಡ್ಡದಾಗುತ್ತ ಯಾವುದೋ ಸಂದರ್ಭದಲ್ಲಿ ಬದುಕನ್ನು ನುಂಗುವ ಮೊದಲು ಪ್ರಾಯಶ್ಚಿತ್ತದಲಿ ಬೇಯಬೇಕು.

ಜನಧ್ವನಿ : ಏಸೂ ! ಮನ್ನಿಸು ಅರಿಯದೆ ಮಾಡಿದ ನಮ್ಮ ತಪ್ಪನ್ನು. ಹೋ ! ಇದೇನು—ಭೂಮಿ—ಭೂಮಿ ಬಿರಿಯುವ ಸದ್ದು? ಅಯ್ಯೋ. ಈ ನಮ್ಮ ಕಾಲ ಕೆಳಗಿನ ಭೂಮಿ ಬಿರಿಯುತಿದೆ. ಅದರಾಳದಲ್ಲಿ ಭಯಂಕರ ಜ್ವಾಲಾಮುಖಿ ಪ್ರವಾಹ ಹರಿಯುವುದು ಕಾಣುತಿದೆ. ಏ...ಸೂ ! ನಾವೆಲ್ಲಾ. ಇದರಾಳಕ್ಕೆ ಬೀಳಬೇಕೆ ? ಏಸೂ, ರಕ್ಷಿಸು ನಮ್ಮೆಲ್ಲರನು.

ಏಸು : ಭೂಮಿಯ ಸಹನೆಗೂ ಮಿತಿಯುಂಟು. ಭೂಮಿಯ ಸಹನೆ ಮೀರದ ಹಾಗೆ ಎಚ್ಚರದಿಂದ ವರ್ತಿಸುವುದು ಮನುಷ್ಯನ ಕರ್ತವ್ಯ. ನಿಮ್ಮರಿವು ನಿಮ್ಮನ್ನು ರಕ್ಷಿಸುವುದು.

ಜನರಧ್ವನಿ : ಬದುಕಿದೆವು, ನಾವು ಬದುಕಿದೆವು ಏಸೂ– [ಸದ್ದು] ಮತ್ತೇಕೆ ಈ ಸದ್ದು? ಬಿರಿದು ಬಾಯ್ತೆರೆಯುತ್ತಿದ್ದ ಭೂಮಿ ಮತ್ತೆ ಮೊದಲಿನ ಹಾಗೆ ಅಖಂಡ ವಾಯಿತು. ಏಸು ನಮ್ಮೆಲ್ಲರನು ಮುಕ್ತರನಾಗಿ ಮಾಡು. ಯಾಕೊ ನಮ್ಮ ಕಾಲ್ಗಳನು ಕೆಳ ಕೆಳಗೆ ಜಗ್ಗುತಿದೆ ಈ ನೆಲ ?

ಏಸು : ನಿಮ್ಮರಿವು ನಿಮ್ಮನ್ನು ಕಾಪಾಡುವುದು.

ಜನರಧ್ವನಿ : ಏಸು! ಇದೇನು ? ನೀನು ನುಡಿದೊಡನೆ ಈ ನೆಲ ಬಿಟ್ಟಿತು ನಮ್ಮನ್ನು. ನಮ್ಮ ತಲೆ ಮೇಲೆ ಹೇರಿದ ಭಾರ ಹಗುರಾದ ಹಾಗಾಯ್ತು ಏಸು ನಾವಿನ್ನು ಹೊರಡುತ್ತೇವೆ, ವಂದನೆಗಳು ನಿನಗೆ.
[ಜನ ಹೊರಟುಹೋದ ಹೆಜ್ಜೆ ಸದ್ದು]

ಮೇರಿ : [ಗದ್ಗದ ಧ್ವನಿಯಲ್ಲಿ] ಕೊಂದರೇ ನನ್ನನ್ನು ಅವರು ?
[ತನ್ನ ಸುತ್ತಲೂ ಜನವಿಲ್ಲದ್ದನ್ನು ಗಮನಿಸಿ–ಅವರು ದೂರ ಹೊರಟದ್ದನ್ನು ನೋಡಿ]
ತಂದೆ, ಇದೇನು ನಡೆಯಿತು ? ಕಲ್ಲಿಂದ ಹೊಡೆಯಲಿಲ್ಲವೆ ಅವರು ನನ್ನನ್ನು ?

ಏಸು : ಇಲ್ಲ

ಮೇರಿ : ಯಾಕೆ ? ನನ್ನನ್ನು ಕ್ಷಮಿಸಿದರೆ–ಅವರು ?

ಏಸು: ಇಲ್ಲ. ಪಾಪ ಮಾಡದಿರುವವರು ಯಾರೂ ಇಲ್ಲ ಅವರಲ್ಲಿ.

ಮೇರಿ : ಹಾಗಾದರೆ ಅವರು ನನ್ನನ್ನು ಕೊಲ್ಲಲಿಲ್ಲವೆ ? ನಾನು ಸತ್ಯವಾಗಿಯೂ ಸಾಯಲಿಲ್ಲವೆ ? ನಾನು ಜೀವಂತವಾಗಿರುವೆನೊ ಅಥವಾ ಸತ್ತಿರುವೆನೊ ಯಾವುದೂ ಹೊಳೆಯುವುದಿಲ್ಲ.

ಏಸು : ಮಗಳೆ, ಭೀತಳಾಗದಿರು. ನಿನ್ನ ಕೊಲ್ಲುವುದಕ್ಕೆ ಅವರು ಯಾರು ? ರಕ್ಷಿಸುವ ಅಭಯಹಸ್ತ ನಿನ್ನ ಬೆಂಬಲಕಿರಲು–ನಿನ್ನ ಕೊಲ್ಲುವ ಧೈರ್ಯವೆಲ್ಲಿಂದ ಬಂದೀತು ? ನಿನ್ನ ಹೊಡೆಯಲೆತ್ತಿದ ಕೈ ಕೆಳಗಿಳಿದು ಜಾರಿದವು ಕಲ್ಲುಗಳು. ನಿನ್ನನ್ನು ಕೊಲ್ಲಲೆಂದು ಬಂದವರು ಕೊಲ್ಲಲಾರದೆ ಮರಳಿ ತಾವು ಬದುಕಿದರು. ನ್ಯಾಯಾನ್ಯಾಯಗಳ ಪರೀಕ್ಷಿಸುವ ಶಕ್ತಿಯೊಂದಿದ್ದು ಅವರ ಮನಸಿನಲ್ಲಿ ಒಳ ಹೊಕ್ಕು ಹೀಗೆ ಮಾಡಿಸಿತು. ಅವರಿನ್ನು ಇಲ್ಲಿ ಬರಲಾರರು. ರಕ್ಷಿಸುವ ಕೈ ಬಲವಂತವಾಗಿರಲು ಅಧಿಕಾರ, ಗರ್ವಗಳಾಟ ಸಾಗಲಾರದು. ಕಾಯುವ ಕೈ ಒಂದೆಯಾಗಿದ್ದರೂ ಸಹಸ್ರ ಕೈಗೆ ಸಮ ಅದರ ಬಲ.

ಮೇರಿ : [ಕೃತಜ್ಞತಾ ಭಾವದಿಂದ] ತಂದೆ ಬದುಕಿದೆನು ನಾನು. ನೀನಿಲ್ಲದೆ ಬದುಕುತಿರಲಿಲ್ಲ ನಾನು. ನನ್ನ ಅಪರಾಧವನು ಮನ್ನಿಸಿ ಕಾಪಾಡು ತಂದೆಯೇ.

ಏಸು : ನಾನು ಮಾಡಿದ್ದೇನು ? ನನ್ನ ಕೈಯಲೇನಿದೆ ? ನಾನೂ ಒಬ್ಬ ಸಾಮಾನ್ಯ ಮನುಷ್ಯ ನಿನ್ನಂತೆಯೇ. ಬದುಕು ವಿಷವ್ಯೂಹವಿದ್ದಂತೆ. ಅದು ಸುತ್ತಿಕೊಂಡಾಗ ಅಪರಾಧ ಘಟಿಸುವುದು ಸಹಜ. ಪ್ರಾಯಶ್ಚಿತ್ತದ ಅವಧಿ ತುಂಬುವವರೆಗೂ ವೇದನೆಯ ಸಹಿಸಬೇಕಾಗುವುದು. ವ್ಯೂಹ ಕಳಚಿದ ಮೇಲೆ ಅಪರಾಧ ಮಾಡಬಾರದು ಅಷ್ಟೆ. ಪಶ್ಚಾತ್ತಾಪವೆನ್ನುವುದು ಪಾಪವನು ಕರಗಿಸುವುದು.

ಮೇರಿ : ತಂದೆ ನಾ ಮಾಡಿದಪರಾಧ – ಅಷ್ಟಿಷ್ಟಲ್ಲ. ಪಶ್ಚಾತ್ತಾಪದಗ್ನಿಯಲಿ ಬೇಯಲು ನಾನು ಸಿದ್ಧ. ನನಗೀಗ ಪುನರ್ಜನ್ಮವೇ ಲಭಿಸಿದಂತಾಯ್ತು. ಮನ ಮುಸುಕಿದ್ದ ಭೀತಿಯ ತೆರೆ ಹರಿಯಿತು. ಇನ್ನು ಪಾಪದಲಿ ಹೂಳಿ ಹೋಗುವ ಇಚ್ಛೆ ನನಗಿಲ್ಲ. ತಂದೆ, ನಿನ್ನಡಿಯಲೊಂದು ಸ್ಥಾನ ಕಲ್ಪಿಸಿಕೊಟ್ಟು ಅನಾಥಳಾಗಿರುವ ನನ್ನನ್ನು ಮನ್ನಿಸಿ ಮಗಳೆಂದು ಶಿಷ್ಯಳೆಂದು ಸ್ವೀಕರಿಸಬೇಕು. ಸಮಾಜದ ಕ್ರೌರ್ಯಕ್ಕೆ ಮತ್ತೆ ನಾನು ಬಲಿಯಾಗದಂತೆ ರಕ್ಷಿಸಬೇಕು ನನ್ನನ್ನು. ಇಲ್ಲವಾದರೆ ಮತ್ತೆ...

ಏಸು : ಆ ಜನರ ಭಯವಲ್ಲವೆ ನಿನಗೆ ?

ಮೇರಿ : ಹೌದು ತಂದೆ ! ಹೆಣ್ಣು ನಿರಾಶ್ರಿತಳಾಗಿ ಬಾಳುವುದಕ್ಕೆ ಸ್ಥಾನವೆಲ್ಲಿದೆ ಈ ಭೂಮಿಯಲಿ ?

ಏಸು : ಬದುಕಿನ ಬೆಲೆ ಹೆಚ್ಚುವುದು ಪ್ರಾಮಾಣಿಕತೆಯಿಂದ. ಧೈರ್ಯವಿಲ್ಲದಿದ್ದರೆ ಭೂಮಿ ಕಿರಿದಾಗಿ ತೋರುವುದು. ಧೈರ್ಯವಿದ್ದರದು ಹಿರಿದಾಗುವುದು. ನಿನ್ನ ಪ್ರಾಮಾಣಿಕತೆ ದೇವರಿಗೂ ಪ್ರಿಯವಾದದ್ದು.

ಮೇರಿ : ಹಾಗಾದರೆ ನನ್ನ ಬದುಕು ಧನ್ಯವಾಯ್ತು ತಂದೆ. ನಿನ್ನಡಿಯ ಸೇವೆಯಲ್ಲಿ ಸವೆಸುವೆನು ಬದುಕನ್ನು.

ಏಸು : ನನ್ನಡಿಯಲೇನಿದೆ ? ನಿನ್ನ ಸೇವೆ ಸಲ್ಲುವುದೆಲ್ಲ ಅವನಡಿಯಲ್ಲಿ. ಅದೋ ಅಲ್ಲಿ ನಿರಭ್ರ ನೀಲಾಕಾಶ ?

ನೋರಿ : ತಂದೆ, ಇದೇನು ? ಅಲ್ಲೆಲ್ಲ ನಿನ್ನ ಮುಖವೇ ? ನಿನ್ನ ಮುಗುಳ್ನಗೆಯೇ ಮಿಂಚಾಗಿ ಸುಳಿಯುತ್ತಿದೆ. ಅಲ್ಲಿಂದ ಯಾವುದೊ ಧ್ವನಿ ಹರಿದುಬಂದು ನನ್ನ ಕಿವಿಗಳಲಿ ದುಮದುಮಿಸುತ್ತಿದೆ ನಾನು ಧನ್ಯ...

‘ ನಿನ್ನ ಕೋಟಿ ಕಿರಣ ಬೀರಿ... ’

[ಪ್ರಾರ್ಥನೆಯ ಧ್ವನಿ ಕ್ರಮೇಣ ಪ್ರತಿಧ್ವನಿಸುವುದು]

ಅನ್ಯಭಾಷಾ ಬೋಧನೆ

೩. ರಚನಾತ್ಮಕ ಹಾಗೂ ಶ್ರಾವಣ-ಮೌಖಿಕ ಪದ್ಧತಿಗಳು

ವಿಲ್ಯಂ ಮಾಡ್ತಾ

ಅನ್ಯ ಭಾಷೆಯನ್ನು ಕಲಿಸುವಲ್ಲಿ ವ್ಯಾಕರಣ ಭಾಷಾಂತರ ಪದ್ಧತಿಯಂತೆ ನೇರ ಪದ್ಧತಿ ಕೂಡಾ ಅಸಮಂಜಸವೆಂದು ಕಂಡುಬಂದಾಗ ಲಂಡನ್ ವಿಶ್ವವಿದ್ಯಾಲಯದ ಲಂಡನ್ ಇನ್ಸ್ಟಿಟ್ಯೂಟ್ ಆಫ್ ಎಜ್ಯುಕೇಶನ್ ಹಾಗೂ ಬ್ರಿಟಿಷ್ ಕೌನ್ಸಿಲ್ ಇವೆರಡು ಸಂಸ್ಥೆಗಳು ಭಾಷಾ ಬೋಧನಾ ಪದ್ಧತಿಯ ಬಗ್ಗೆ ಆಳವಾದ ಅಧ್ಯಯನ ಹಾಗೂ ಸಂಶೋಧನೆಗಳನ್ನು ನಡೆಯಿಸಿದುವು. ಇವುಗಳ ಫಲವಾಗಿ ರಚನಾತ್ಮಕ ಪದ್ಧತಿ ರೂಪುಗೊಂಡಿತು.

ರಚನಾತ್ಮಕ ಪದ್ಧತಿ :

ಭಾಷೆಯ ರಚನಾತ್ಮಕ ವಿವರಣೆಗೆ ಈ ಪದ್ಧತಿ ಹೆಚ್ಚಿನ ಗಮನವನ್ನೀಯುತ್ತದೆ. ಪಾಠಗಳನ್ನು ಶ್ರೇಣಿರೂಪದಲ್ಲಿ ಯೋಜಿಸಿಕೊಂಡು ಸುಲಭತೆಯಿಂದ ಕ್ಲಿಷ್ಟತೆಯತ್ತ ಅಧ್ಯಾಪನ ಇಲ್ಲಿ ಸಾಗುತ್ತದೆ. ಧ್ವನಿಮಾತ್ಮಕ, ಆಕೃತಿಮಾತ್ಮಕ, ವಾಕ್ಯಾತ್ಮಕ ವಿವರಣೆಗಳೊಡನೆ ಭಾಷೆಯನ್ನು ಇಲ್ಲಿ ಹಂತಹಂತವಾಗಿ ಕಲಿಸುತ್ತಾರೆ. ಈ ದೃಷ್ಟಿಯಿಂದ ಪ್ರಸ್ತುತ ಪದ್ಧತಿ ನೇರ ಪದ್ಧತಿಗಿಂತ ಹೆಚ್ಚು ಪರಿಣಾಮಕಾರಿ ಹಾಗೂ ಸುಧಾರಿತವೆನ್ನಬಹುದು.

ಭಾಷಾಬೋಧನೆಯ ಕೊನೆಯ ಹಂತದಲ್ಲಿ ವಿದ್ಯಾರ್ಥಿ ಭಾಷಾ ಪ್ರಭುತ್ವವನ್ನು ಪಡೆದುಕೊಳ್ಳಬೇಕೆಂಬುದೇ ಈ ಪದ್ಧತಿಯ ಗುರಿ. ಭಾಷೆಯ ಒಂದು ಹಂತವು ವಿದ್ಯಾರ್ಥಿಗೆ ಕರತಲಾಮಲಕವಾಗುವ ತನಕ ಆ ಹಂತದ ರೂಢೀಕರಣ ನಡೆಯುತ್ತದೆ. ಆ ಮೇಲೆಯೇ ಮುಂದಿನ ಹಂತದ ಕಲಿಸುವಿಕೆ. ಹೀಗೆ ಭಾಷಾ ಹಂತಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ಕಲಿಸುವುದು ಪ್ರಸ್ತುತ ಪದ್ಧತಿಯ ವೈಶಿಷ್ಟ್ಯ.

ನೇರ ಪದ್ಧತಿಯಂತೆ ಇಲ್ಲಿಯು ವ್ಯಾಕರಣ ಪರಿಭಾಷೆಗೆ ಮಹತ್ವವಿಲ್ಲ. ವಿದ್ಯಾರ್ಥಿಗಳಿಗೆ 'ವ್ಯಾಕರಣ ಕಲಿಯುತ್ತೇವೆ'— ಎಂಬುದರ ಪ್ರಜ್ಞೆಯಾಗದೆಯೇ ಭಾಷಾ ರಚನೆಗಳನ್ನು ಸುಯೋಜಿತ ಪಾಠಗಳ ಮೂಲಕ ಇಲ್ಲಿ ಕಲಿಸುತ್ತಾರೆ. ಪಠ್ಯಪುಸ್ತಕಗಳನ್ನು ಬರೆಯುವಲ್ಲಿ ಈ ಪದ್ಧತಿಯು ಬಹಳ ಉಪಯೋಗಕಾರಿಯೆಂದೆನಿಸಿದೆ. ಆದ್ದರಿಂದಲೇ ಎ. ಚಂದ್ರಶೇಖರವರು ಪ್ರಸ್ತುತ ಪದ್ಧತಿಯನ್ನು ಕುರಿತು, "...a method of preparing text books rather than a tichnique of teaching" ಎಂದು ವಿಮರ್ಶಾತ್ಮಕವಾಗಿ ಹೇಳಿರುವರು.

ಶ್ರಾವಣ—ಮೌಖಿಕ ಪದ್ಧತಿ :

ನೇರ ಪದ್ಧತಿಯ ವಿಫಲತೆಯಿಂದ ಕಾರಣದಿಂದಾಗಿ ರೂಪುಗೊಂಡ ಇನ್ನೊಂದು ಪದ್ಧತಿಯೆಂದರೆ ಶ್ರಾವಣ ಮೌಖಿಕ ಪದ್ಧತಿ. ಈ ಪದ್ಧತಿಯ ಪ್ರಕಾರ ವಿದ್ಯಾರ್ಥಿಗಳಲ್ಲಿ ಶ್ರವಣ, ಗ್ರಹಣ, ಪಠಣ, ಬರಹ ಕೌಶಲ್ಯಗಳನ್ನು ಚುರುಕುಗೊಳಿಸಲು ಆರಂಭದಲ್ಲಿಯೇ ಗಮನಕೊಡಲಾಗುತ್ತದೆ. ವಿದ್ಯಾರ್ಥಿಯಾದವನು ಈ ನಾಲ್ಕು ಕೌಶಲ್ಯಗಳಲ್ಲಿಯ ಪರಿಣತಿಯನ್ನು ಪಡೆಯುವುದೇ ಅನ್ಯ ಭಾಷಾ ಅಧ್ಯಯನವೆಂದು ಈ ಪದ್ಧತಿಯ ಧೋರಣೆ.

ಮೊತ್ತ ಮೊದಲು ಸರಳವಾದ ಮತ್ತು ಅಧಿಕವಾಗಿ ನಾವು ಬಳಸುವ ಮೂಲ ವಾಕ್ಯಗಳನ್ನು ಕಲಿಸುತ್ತಾರೆ. ಆ ಮೇಲೆ ಈ ಮೂಲ ವಾಕ್ಯಗಳಿಂದ ಇತರ ವಾಕ್ಯಗಳನ್ನು ಸಾಧಿಸುವ ಕ್ರಮವನ್ನು ಕಲಿಸುತ್ತಾರೆ.

ಉದಾಹರಣೆ: —ಮೂಲ ವಾಕ್ಯ : ನಾನು ಊಟ ಮಾಡುತ್ತೇನೆ.

ಸಾಧಿತ ವಾಕ್ಯಗಳು : ನಾನು ಊಟ ಮಾಡಿದೆ.
ಮಾಡುವೆ
ಮಾಡುವುದಿಲ್ಲ
ಮಾಡುತ್ತೇನೆಯೋ ?

ಮೂಲ ವಾಕ್ಯಗಳನ್ನು ಕಲಿಸುವಲ್ಲಿ ಸಂಭಾಷಣೆಗಳನ್ನು ಬಳಸುತ್ತಾರೆ.

ನೀನು ಏನು ತಿನ್ನುತ್ತೀ ?
ನಾನು ರೊಟ್ಟಿ ತಿನ್ನುತ್ತೇನೆ.
ನೀನು ಯಾವ ರೊಟ್ಟಿ ತಿನ್ನುತ್ತೀ ?
ನಾನು ಜೋಳದ ರೊಟ್ಟಿ ತಿನ್ನುತ್ತೇನೆ.
ಅವನು ಏನು ತಿನ್ನುತ್ತಾನೆ.
ಅವನು ದೋಸೆ ತಿನ್ನುತ್ತಾನೆ.
ಅವನು ಯಾವ ದೋಸೆ ತಿನ್ನುತ್ತಾನೆ ?
ಅವನು ತುಪ್ಪದ ದೋಸೆ ತಿನ್ನುತ್ತಾನೆ.………

ಪರಿಮಿತ ಶಬ್ದ ಸಂಪತ್ತಿಯೊಳಗೆ ಸರಳ ಸಂಭಾಷಣೆಗಳನ್ನು ಕಲ್ಪಿಸಿಕೊಂಡು ಭಾಷಾ ರಚನೆಗಳನ್ನು ಕಲಿಸುವುದು ಇಲ್ಲಿಯ ವೈಶಿಷ್ಟ್ಯ. ಇಂತಹ ರಚನೆಗಳನ್ನು ರೂಢೀಕರಿಸುವಲ್ಲಿ ಧ್ವನಿ ಸಂಗ್ರಾಹಕ (Tape recorder) ಗಳನ್ನು ಬಳಸುತ್ತಾರೆ. ಆರಂಭದಲ್ಲಿ ವಿದ್ಯಾರ್ಥಿ ಈ ವಾಕ್ಯಗಳನ್ನು ಮನಸ್ಸಿಟ್ಟು ಕೇಳಬೇಕು. ಹೀಗೆ ಕೇಳುವಲ್ಲಿ ಉಚ್ಚಾರಣೆಗೆ ಮಹತ್ವವನ್ನು ಕೊಡಬೇಕು. ಅನಂತರ ಧ್ವನಿ ಸಂಗ್ರಾಹಕದ ಮಾದರಿಯನ್ನು ಇಲ್ಲವೆ ಶಿಕ್ಷಕನ ಮಾದರಿಯನ್ನು ಅನುಸರಿಸಿ ತಾನು ಅವುಗಳನ್ನು ಸರಿಯಾಗಿ

ಉಚ್ಚರಿಸಬೇಕು. ವಿದ್ಯಾರ್ಥಿಗೆ ಈ ವಾಕ್ಯಗಳ ಉಚ್ಚಾರ ಸರಿಯಾಗಿ ಬರುವ ತನಕ ಈ ರೀತಿಯ ಅನುಕರಣೆಯ ಕಲಿಕೆ (mimicry-memorization) ನಡೆಯುತ್ತದೆ. ಇಂತಹ ಕಲಿಕೆಯಿಂದಾಗಿ ಭಾಷೆಯನ್ನು ಬಳಸುವಲ್ಲಿ ವಿದ್ಯಾರ್ಥಿಗೆ ಸಹಜತೆ ಹಾಗೂ ನಿರರ್ಗಳತೆ ಬಂದು ಬಿಡುತ್ತದೆ.

ಅನ್ಯ ಭಾಷೆಯ ಮೂಲ ರಚನೆಗಳನ್ನು ಮೌಖಿಕವಾಗಿ ವಿದ್ಯಾರ್ಥಿ ಕಲಿತ ಮೇಲೆ, ಅವುಗಳ ಮೇಲೆ ಸಾಕಷ್ಟು ಪ್ರಭುತ್ವವನ್ನು ಗಳಿಸಿದ ಬಳಿಕ ಅವನಿಗೆ ಪಾಠ ಪುಸ್ತಕಗಳ ಸಹಾಯದಿಂದ ಸಾಹಿತಿಕ ಭಾಷೆಯನ್ನು ಕಲಿಸುತ್ತಾರೆ, ಈ ಸಮಯದಲ್ಲಿ ಓದು ಬರಹಗಳ ಕಡೆಗೆ ಹೆಚ್ಚು ಗಮನ ಕೊಡುತ್ತಾರೆ. ಮೊದಲು ಪಾಠ ಪುಸ್ತಕದಲ್ಲಿದ್ದ ವಾಕ್ಯಗಳನ್ನು ಓದಲು ಬರೆಯಲು ಕಲಿಸುತ್ತಾರೆ. ಆ ಮೇಲೆ ಕ್ಲಾಸಿನಲ್ಲಿ ನಡೆದ ಚರ್ಚೆಗಳ ಬಗ್ಗೆ ಸಾರಾಂಶ, ಪ್ರಬಂಧ ಮೊದಲಾದವುಗಳನ್ನು ಬರೆಯಿಸಿ ಬರಹ ಕಲೆಯಲ್ಲಿ ಪ್ರಾವಿಣ್ಯತೆ ಬರುವಂತೆ ಮಾಡುತ್ತಾರೆ.

ವಿದ್ಯಾರ್ಥಿಗಳಿಗೆ ಭಾಷಾ ಕೌಶಲ್ಯಗಳನ್ನು ಕಲಿಸುವುದರಲ್ಲಿ ಈ ಪದ್ಧತಿ ಬಹಳ ಸಹಾಯಕಾರಿ. ಭಾಷಾ ರಚನೆಗಳ ರೂಢೀಕರಣವು ಆರಂಭದಲ್ಲಿ ಸಾಮೂಹಿಕ ಚಟುವಟಿಕೆಯಾಗಿರುವುದರಿಂದ ಪ್ರತಿಯೊಬ್ಬ ವಿದ್ಯಾರ್ಥಿಗೂ ಪಾಠದಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ. ಇದರಿಂದಾಗಿ ಯಾವ ತರಹದ ಸಂಕೋಚವೂ ಇಲ್ಲದೆ ಭಾಷೆಯನ್ನು ಅತಿ ತೀವ್ರವಲ್ಲಿ ಕಲಿಯಲು ಸಾಧ್ಯವಾಗುತ್ತದೆ. ಕಾರಣ ಸಾಮಾನ್ಯ ವಿದ್ಯಾರ್ಥಿಯು ಬೇಗನೆ ಭಾಷೆಯನ್ನು ಕಲಿಯಬಲ್ಲ.

ಹಲವಾರು ಉತ್ತಮ ಅಂಶಗಳನ್ನು ಒಳಗೊಂಡ ಈ ಪದ್ಧತಿಯು ದೋಷ ರಹಿತವಾಗಿಲ್ಲ! ಪ್ರಸ್ತುತ ಪದ್ಧತಿಯಲ್ಲಿ ಅನ್ಯಭಾಷೆ ಹಾಗೂ ಸ್ವಭಾಷೆಗಳ ತುಲನಾತ್ಮಕ ಅಧ್ಯಯನಕ್ಕೆ ಅಸ್ಪದವಿಲ್ಲ. ಕಾರಣ ವಿದ್ಯಾರ್ಥಿ ಅನೇಕ ಭಾಷಾ ಸಮಸ್ಯೆಗಳಲ್ಲಿ ಸಿಕ್ಕಿ ತೊಳಲಾಡಬೇಕಾಗುತ್ತದೆ.

ಭಾಷೆಯನ್ನು ಇಲ್ಲಿ ಹೆಚ್ಚು ಕಡಿಮೆ ಯಾಂತ್ರಿಕವಾಗಿ ಕಲಿಸುತ್ತಾರೆ. ಭಾಷಾ ರಚನೆಗಳ ಘಟಕಗಳಾದ ಧ್ವನಿಮಾ ಆಕೃತಿಮಾಗಳ ಪರಿಚಯ ಮಾಡಿಕೊಡದೆ ಒಮ್ಮಲೇ ಸಂಭಾಷಣೆಗಳ ರೂಢೀಕರಣಕ್ಕೆ ಕೈಹಾಕುವುದರಿಂದ ವಿದ್ಯಾರ್ಥಿಗಳು ಒಂದು ಸಂದರ್ಭದಲ್ಲಿ ಕಲಿತ ವಾಕ್ಯಗಳನ್ನು ಇನ್ನೊಂದು ಸಂದರ್ಭದಲ್ಲಿ ಬಳಸಲು ಎಷ್ಟೋ ಸಲ ಅಶಕ್ಯರಾಗುತ್ತಾರೆ.

ಪ್ರಸ್ತುತ ಪದ್ಧತಿಯ ಪ್ರಕಾರ ಭಾಷೆಯ ಚಾಕ್ಷುಷ ರೂಪವನ್ನು ಅಧ್ಯಾಪನದ ಕೊನೆಯ ಹಂತದಲ್ಲಿ ಕಲಿಸುತ್ತಾರೆ. ಇದರಿಂದ ವಿದ್ಯಾರ್ಥಿಗಳಿಗೆ ತಾವು ಕೇಳಿದ ಧ್ವನಿಗಳೆಲ್ಲವನ್ನೂ ಯಾವ ಚಾಕ್ಷುಷ ಸಹಾಯವೂ ಇಲ್ಲದೆ ಬಹಳ ಕಾಲ ಜ್ಞಾಪಕದಲ್ಲಿಡಬೇಕಾಗುತ್ತದೆ. ಕೆಲವು ಧ್ವನಿಗಳು ತೀರಾ ಹೊಸದಾಗಿರುವ ಸಂಭವ ಇರುವುದರಿಂದ ಬರಹದ ಸಹಾಯವಿಲ್ಲದೆ ಅವನ್ನು ಕಲಿಯಲು ವಿದ್ಯಾರ್ಥಿಗಳು ಸ್ವಾಭಾವಿಕವಾಗಿ ಹಿಂಜರಿಯುತ್ತಾರೆ.

ವಯಸ್ಕರಿಗೆ ರಚನಾ ಮಾದರಿಗಳ ರೂಢೀಕರಣ, ಕಂಠ ಪಾಠ ಮಾಡುವಿಕೆ ಇತ್ಯಾದಿಗಳು ನಿರುತ್ಸಾಹವನ್ನುಂಟು ಮಾಡುತ್ತವೆಯಲ್ಲದೆ ಬಹಳ ಆಯಾಸದಾಯಕವೂ ಆಗಿವೆ. ಆದುದರಿಂದ ಅಧ್ಯಾಪಕನು ಬಹಳವಾಗಿ ವಿದ್ಯಾರ್ಥಿಗಳನ್ನು ಆಕರ್ಷಿಸುವ, ಅವರಲ್ಲಿ ಉತ್ಸಾಹ ಕುತೂಹಲಗಳನ್ನು ಕೆರಳಿಸುವ ಸಾಮರ್ಥ್ಯವನ್ನು ಹೊಂದಿದವನಾಗಿರಬೇಕಾಗುತ್ತದೆ.

ಭಾಷೆಯನ್ನು ಹಂತ ಹಂತಗಳಲ್ಲಿ ಕಲಿಸುವ ಯೋಜನೆ ಇಲ್ಲಿ ಇಲ್ಲದಿರುವುದರಿಂದ ನಿರ್ದಿಷ್ಟತೆ ಕಡಿಮೆಯಾಗಿ ಅಸ್ತವ್ಯಸ್ತತೆ ಹೆಚ್ಚಾಗಿ ಭಾಷಾ ಅಧ್ಯಯನದಲ್ಲಿ ಅನೇಕ ತೊಡಕುಗಳುಂಟಾಗುತ್ತವೆ.

ಈ ಎಲ್ಲ ಅವಗುಣಗಳಿಂದಾಗಿ ಅನ್ಯಭಾಷಾ ಬೋಧನೆಯಲ್ಲಿ ಶ್ರಾವಣ–ಮೌಖಿಕ ಪದ್ಧತಿಯು ಅಷ್ಟು ಸಮಂಜಸವಾಗಿ ಕಾಣದಿದ್ದರೂ ಹಿಂದಿನ ಪದ್ಧತಿಗಳಿಗಿಂತ ಅನುಕೂಲವೇ ಆಗಿದೆ ಎನ್ನಬೇಕಾಗುತ್ತದೆ.

(ಮುಂದುವರಿಯುವುದು)

ಕಿಸೆ

ಜಿ. ಕೃಷ್ಣರಾವ್

ಕಿಸೆ ತುಂಬಿರೆ ಸ್ವರ್ಗ
ಕಿಶೆ ಬರಿದಿರೆ ನರಕ
ಹಿಪ್ಪು, ಸ್ಟ್ರೇಟು, ಸೈಡು
ಚಿಕ್ಕದು, ದೊಡ್ಡದು
ಒಳಗಿಸೆ, ಕಳ್ಳಕಿಸೆ
ಯಾವುದೆ ಆಗಲಿ–ಮಡಿಚಿ ಇಡಲು
ಕಿಸೆಯೊಂದು ಬೇಕು.
ಕಿಸೆಯೊಳಗೆ ಕೈ ಹಾ
ಕಿದರೆ ಸಾಕು, ಮಾಡಿಕೊಂಡ
ವರಿಂದ ಬೇಡಿ ತಿಂಬುವ
ವರೆಗು ಆಸೆಯಿಂದೋಡಿ
ಬರುವರು.
ಕಿಸೆಯಿಂದಲೆ
ಹೆಂಡಿರು ಮಕ್ಕಳು
ನಂಟರು ಗೆಳೆಯರು
ಸೊಸೈಟಿ ಸಮಾಜ
ಎಲ್ಲವು ಎಲ್ಲರು.
ಕಿಸೆಗೆ—
ಮೇಲು ಕೀಳು, ಜಾತಿ ಕುಲ
ಬಡವ ಬಲ್ಲಿದ–ಭಾವಗಳಿಲ್ಲ
ಅದರ ಗುಣರಹಿತರಿಗೊಂದೆ
'ಪ್ರವೇಶ' ವಿಲ್ಲ
ಎಂತಹ ಸಮಾನತೆ !
ತಿಳಿಯದು ಕತೆ
ಏನೆ ಆಗಲಿ

ಕಿಸೆಯೊಂದು ಬೇಕು
ಕಿಸೆಯಿದ್ದರೆ ಸಾಲದು–ಬರಿ
ಕಿಸೆಯಿದ್ದರೆ ಸಾಲವದು.
ಕಿಸೆ.........ತುಂಬಿರಬೇಕು.
ಹಿಡಿದೊ ? ಬಿಟ್ಟೊ ?
ಬ್ಲ್ಯಾಕೊ ? ಬ್ಲಾಕೋ ?
ಅಂತರವೊ ? ಮುಖಾಂತರವೊ ?
ಕೈ ಮೇಲೋ ? ಕೆಳಗೊ ?
ಒಟ್ಟು–ಕಿಸೆ
ತುಂಬಿರಬೇಕು.
ಬೆರಳಿಂದ, ತಲೆಯಿಂದ ಆದರೆ...
ತುಂಬಿರಬೇಕು.
ಅಂತೂ ತುಂಬಿರಬೇಕು ಕಿಸೆ
ಏಕೆಂದರೆ,
ಕಿಸೆ ತುಂಬಿರೆ ಎಲ್ಲರೂ ಹತ್ತಿರ
ಕಿಸೆ ಬರಿದಿರೆ ಎಲ್ಲವೂ ದೂರ
ದೊಡ್ಡವರ ಬೆಲೆ ಕಿಸೆಯಿಂದ
ಸಣ್ಣವರ ಹೊಲೆ ಕಿಸೆಯಿಂದ
ಓ ಬುದ್ಧ ! ಓ ಬಸವ ! ಓ ಗಾಂಧೀ !
ಇದುವೆ ಕಿಸೆಯ ಮಹಿಮೆ
ಇದರ ದಂಧೆಯ ನೀವರಿಯುಲಿಲ್ಲ
ಕಾರಣ–ನಿಮಗೆ ಕಿಸೆಗಳಿರಲಿಲ್ಲ
ಅದಕಾಗಿ ನಿಮ್ಮನೆಲ್ಲ
ನಮ್ಮ ಕಿಸೆಗಿಳಿಸಿದೆವು
ನಿಮ್ಮಿಂದಲೆ ಘನತೆ ಗೌ
ರವಗಳ ಬೆಳೆಸಿದೆವು
ಇದರ ಮಹಿಮೆಯನರಿಯಲು
ನಮ್ಮನು ನಿಮ್ಮ ಕಿಸೆಗಿಳಿಸಲು
ಒಮ್ಮೆ, ಕಿಸೆ ಹೊಲಿಸ ಬನ್ನಿ
ಸಾಧ್ಯವಾದರೆ.........ಕಿಸೆ
ಹರಿದು ಬನ್ನಿ.

ಹೊಯ್ಸಳ-ಸಂಗಮರ ಸಂಬಂಧ

ಎಸ್. ರಾಜಶೇಖರ

ವಿಜಯನಗರದ ಸಂಗಮ ಅರಸರು ಉತ್ತರ ಮೇರೆಯನ್ನು ರಕ್ಷಿಸುವಲ್ಲಿ ಸಮರ್ಥರಾಗುವಂತೆ, ಹೊಯ್ಸಳ ಮೂರನೆಯ ವೀರಬಲ್ಲಾಳನು ಅವರಿಗೆ ಉತ್ತೇಜನವಿತ್ತ ಸಂಬಂಧದಲ್ಲಿಯೂ ಸಂಗಮ ಅರಸರು ಹೊಯ್ಸಳರ ನಿರ್ವಿವಾದ ಉತ್ತರಾಧಿಕಾರಿಗಳೆಂಬ ವಿಷಯದಲ್ಲಿಯೂ ಫಾ. ಹೆರಾಸ್. ಡಾ. ಸಾಲೆತ್ತೊರೆ ಮತ್ತು ಡಾ. ಪಿ. ಬಿ. ದೇಸಾಯಿ ಅವರು ಇತಿಹಾಸ ತಜ್ಞರ ಆಸಕ್ತಿಯನ್ನು ಕೆರಳಿಸಿದ್ದಾರೆ. ಫಾ॥ ಹೆರಾಸ್ ಅವರ ಅಭಿಪ್ರಾಯದಲ್ಲಿ. "....ಇಳಿವಯಸ್ಸಿನ ಹೊಯ್ಸಳ ದೊರೆಯು ೧ನೆಯ ಹರಿಹರನನ್ನು ತನ್ನ ರಾಜ್ಯದ ಉತ್ತರ ಭಾಗದ ಮಾಂಡಳಿಕನನ್ನಾಗಿ ಮಾಡಿ, ಆತನ ಪಟ್ಟಬಂಧ ಮಹೋತ್ಸವವನ್ನು ನೆರವೇರಿಸಿದನು"[೧]. ಅವರು ಇನ್ನೂ ಮುಂದುವರಿದು " ಸಂಗಮ ಮನೆತನದ ಆರಂಭದ ಇಬ್ಬರು ಅರಸರ ಆಳ್ವಿಕೆಯಲ್ಲಿ, ಹೊಯ್ಸಳರ ಪ್ರದೇಶದಲ್ಲಿ ಯಾವ ಯುದ್ಧ ಸಂಭವಿಸದಿದ್ದುದೂ, ಹರಿಹರ ಮತ್ತು ಬುಕ್ಕರು ಮೈಸೂರು ಪ್ರದೇಶದಲ್ಲೆಲ್ಲ ಮನ್ನಣೆ ಹೊಂದಿದ್ದುದೂ ನಿಜವಾಗಿಯೂ ಆಸಕ್ತಿ ಕೆರಳಿಸುವಂತಹದಾಗಿದೆ. ಹೊಯ್ಸಳ ರಾಜ್ಯದ ಹೃದಯದಂತಿದ್ದ ಪ್ರಸ್ತುತ ಮೈಸೂರು ರಾಜ್ಯದಲ್ಲೆಲ್ಲೂ ಹರಿಹರ ಮತ್ತು ಬುಕ್ಕರಿಗೆ ಯುದ್ಧ ಮಾಡುವ ಆಸಕ್ತಿಯಿದ್ದಂತೆ ತೋರುವುದಿಲ್ಲ. ಉಭಯ ಅರಸರನ್ನು ತಮ್ಮ ಸಹಜ ಹಾಗೂ ನಿರ್ವಿವಾದವಾದ ದೊರೆಗಳೆಂದು ಹೊಯ್ಸಳ ರಾಜ್ಯದಲ್ಲೆಲ್ಲ ಸ್ವಾಗತಿಸಲಾಯಿತು."[೨] ಎಂದೂ ಬರೆದಿದ್ದಾರೆ. " ಹೊಯ್ಸಳರ ಸಾಮಂತರೂ, ದಂಡನಾಯಕರೂ ಸಂಗಮ ಅರಸರನ್ನು ಹೊಯ್ಸಳರ ನ್ಯಾಯಸಮ್ಮತ ಉತ್ತರಾಧಿಕಾರಿಗಳೆಂದು ಮನ್ನಿಸಿದ್ದರು"[೩] ಎಂದು ಡಾ. ಸಾಲೆತ್ತೊರೆ ಬರೆದಿದ್ದಾರೆ. " ಹೊಯ್ಸಳರಿಂದ ಸಂಗಮರಿಗೆ ಸಾರ್ವಭೌಮತ್ವದ ಹಸ್ತಾಂತರವಾದುದು ನಿರಾತಂಕವಾಗಿತ್ತು. ಅದು ಒಂದೇ ಅರಸುಮನೆತನದಲ್ಲಿ

---

೧. Begnings of Vijayanagar History, H. Heras, p. 67.

೨. Ibid, pp. 102–103.

೩. Saletore B.A., *Theories Concerning the Origion of Vijayanagar*, Vijayanagara Sexcentenary Commemoration Volume, p. 157.

ನಡೆದ ಅಧಿಕಾರದ ಹಸ್ತಾಂತರದಂತಿತ್ತು"[೪] ಎಂದು ಡಾ. ಪಿ. ಬಿ. ದೇಸಾಯಿ ಅಭಿಪ್ರಾಯಪಟ್ಟಿದ್ದಾರೆ.

ಹೊಯ್ಸಳರು ಮತ್ತು ಸಂಗಮ ಸಹೋದರರ ನಡುವೆ ಒಳ್ಳೆಯ ತಿಳಿವಳಿಕೆ ಇತ್ತು ಮತ್ತು ಸಂಗಮರ ಏಳಿಗೆಯು ಹೊಯ್ಸಳರ ಸಕ್ರಿಯ ಸಹಾಯದಿಂದಲೇ ಸಾಧ್ಯವಾಯಿತು ಎಂಬ ಸಿದ್ಧಾಂತವು ಕೆಳಗಿನ ಅಂಶಗಳನ್ನು ಆಧರಿಸಿದೆ :

(i) ತಮ್ಮ ಉಳಿದ ಸಾರ್ವಭೌಮಾಧಿಕಾರ ನಿರ್ದೇಶಕ ಬಿರುದುಗಳೊಂದಿಗೆ ಸಂಗಮರು **ಮಹಾಮಂಡಳೇಶ್ವರ** ಎಂಬ ಬಿರುದನ್ನೂ ಹೊಂದಿದ್ದರು.

(ii) ಉತ್ತರ ಮೇರೆಯನ್ನು ಭದ್ರಪಡಿಸುವಲ್ಲಿ ಮೂರನೆಯ ವೀರಬಲ್ಲಾಳನು ಹರಿಹರನಿಗೆ ಉತ್ತೇಜನವಿತ್ತಿದ್ದನು.

(iii) ಮೂರನೆಯ ಬಲ್ಲಾಳನು ಅನುಸರಿಸಿದ ಅಧಿಕಾರ ವಿಕೇಂದ್ರೀಕರಣದ ಧೋರಣೆಯು ಹರಿಹರನಿಗೆ ಮುಕ್ತ ಅವಕಾಶವನ್ನಿತ್ತಿದ್ದಿತು.

(iv) ಉಭಯತರಲ್ಲಿ ವೈರತ್ವವಿರಲಿಲ್ಲ.

(v) ಸಂಗಮರು ಮತ್ತು ಹೊಯ್ಸಳರ ನಡುವೆ ರಕ್ತಸಂಬಂಧವಿತ್ತು.

(vi) ತಾವು ಹೊಯ್ಸಳ ರಾಜ್ಯವನ್ನು ಆಳುತ್ತಿರುವುದಾಗಿ ಸಂಗಮರು ಹೆಮ್ಮೆ ಪಟ್ಟುಕೊಳ್ಳುತ್ತಿದ್ದರು.

(vii) ಹೊಯ್ಸಳರ ದಂಡನಾಯಕರು ಸಂಗಮ ಅರಸರ ಸೇವೆಯಲ್ಲಿ ಮುಂದುವರಿದರು.

ಮೇಲೆ ಹೆಸರಿಸಿದ ಅಂಶಗಳನ್ನು ಪ್ರಸ್ತುತ ಲೇಖನದಲ್ಲಿ ವಿಮರ್ಶಾತ್ಮಕವಾಗಿ ವಿಶ್ಲೇಷಿಸುವ ಉದ್ದೇಶವಿದೆ.

"ಮಹಾಮಂಡಳೇಶ್ವರನಾಗಿ ಹರಿಹರನು ಸಿಂಹಾಸನವೇರಿದ್ದು ಆತನಿಗೆ ಸಾರ್ವಭೌಮಾಧಿಕಾರವನ್ನು ಹೊಂದಲು ಮತ್ತು ವಿಸ್ತೃತ ಪ್ರದೇಶದ ಮೇಲೆ ಪ್ರಭುತ್ವವನ್ನು ಸ್ಥಾಪಿಸಲು ಸಹಾಯಕವಾಯಿತು" ಎಂದೂ "ಹೊಯ್ಸಳ ಮನೆತನವು ಅಸ್ತಂಗತವಾದ ನಂತರ ತಾವು ಸ್ವತಂತ್ರ ಸಾರ್ವಭೌಮರಾದಾಗಲೂ ತನ್ನ ಸಹಜ ಸೂಚ್ಯಾರ್ಥಗಳನ್ನು ನೀಗಿ ಪರಮೋನ್ನತ ಅರ್ಥವನ್ನೀಯುವ ಮಹಾಮಂಡಳೇಶ್ವರ ಎಂಬ ಬಿರುವನ್ನು ಹೊಂದುವದು ಅಭಿಮಾನ ಪುರಸ್ಸರವಾದ ಪ್ರತಿಷ್ಠೆಯೆಂದು ಅವರು ಭಾವಿಸಿದ್ದರು. ಹರಿಹರ, ಬುಕ್ಕ, ಆತನ ಉತ್ತರಾಧಿಕಾರಿ ಎರಡನೆಯ ಹರಿಹರ ಅಲ್ಲದೇ, ಬಹುಕಾಲದ ನಂತರ ಸಿಂಹಾಸನವನ್ನೇರಿದ ಎರಡನೆಯ ದೇವರಾಯ ಇವರು ತಮ್ಮ ಇತರ ಸಾರ್ವ-

೪. A History of Karnatak: Ed., Dr. P.B. Desai, Colloborators, Dr. S.H. Ritti and Dr. B. R. Gopal, p. 320. (ಇನ್ನುಮುಂದೆ ಪಾ. ಪಿ. ಬಿ. ದೇಸಾಯಿ ಎಂದು ಉಲ್ಲೇಖಿಸಲಾಗಿದೆ.)

ಭೌಮತ್ವ ಸೂಚಕ ಬಿರುದುಗಳೊಂದಿಗೆ ಮಹಾಮಂಡಳೇಶ್ವರ ಎಂಬ ವಿಶಿಷ್ಟ ಬಿರುದನ್ನು ಹೊಂದಿರುವವನ್ನುಉಲ್ಲೇಖಿಸುವ ಅಸಂಖ್ಯ ಶಿಲಾಶಾಸನಗಳಿಂದ ಇದು ದೃಢಪಡುತ್ತದೆ. ಈ ಬಿರುದಿನೊಂದಿಗೆ ಅವರು ಬೆಳೆಸಿಕೊಂಡಿದ್ದ ಭಾವನಾತ್ಮಕ ಸಂಬಂಧವು ಹೊಯ್ಸಳ ಮನೆತನದೊಂದಿಗಿನ ಅವರ ನಿಸ್ಸಂಶಯಾತ್ಮಕ ವಿಧೇಯತೆಯನ್ನು ಪುಷ್ಟೀಕರಿಸುತ್ತದೆ."[೫] ಎಂದು ಡಾ. ದೇಸಾಯಿಯವರು ಬರೆದಿದ್ದಾರೆ. ನಮ್ಮ ಮಾತಿನಲ್ಲಿ ಹೇಳುವುದಾದರೆ ಸಂಗಮ ಮನೆತನದ ಆರಂಭದ ಅರಸರು ಧರಿಸಿದ್ದ ಮಹಾಮಂಡಳೇಶ್ವರ ಎಂಬ ಬಿರುದು, ಅವರು ಹಿಂದೆ ಹೊಯ್ಸಳರ ಸಾಮಂತರಾಗಿದ್ದರೆಂಬುದನ್ನು ತೋರಿಸುತ್ತದೆ ಎಂಬುದೇ ಡಾ. ದೇಸಾಯಿಯವರ ಭಾವನೆಯಾಗಿದೆ. ಆದರೆ. ಈ ಬಿರುದಿಗೆ ಅತಿಶಯ ಮಹತ್ವವನ್ನು ಕೊಡಲಾಗಿದೆ ಎಂದು ನನಗನಿಸುವುದು. ಸಂಗಮ ಮತ್ತು ಹೊಯ್ಸಳ ಅರಸರು ಧರಿಸಿದ್ದ ಬಿರುದುಗಳನ್ನು ಲಕ್ಷ್ಯಪೂರ್ವಕವಾಗಿ ನೋಡಿದಾಗ ಈ ಮಾತಿನ ಅರ್ಥವಾಗುತ್ತದೆ. ಕಲ್ಯಾಣದ ಚಾಲುಕ್ಯರನ್ನು ಸೋಲಿಸಿಯೇ ಹೊಯ್ಸಳರು ತಮ್ಮ ಸ್ವತಂತ್ರ ರಾಜ್ಯವನ್ನು ಕಟ್ಟಿದ ವಿಷಯ ಸರ್ವವಿದಿತವಾಗಿದೆ. ಒಂದನೆಯ ಬಲ್ಲಾಳನು ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಸಾರ್ವಭೌಮತ್ವವನ್ನು ಮನ್ನಿಸಿದ್ದರೂ ಆತನ ಸಾಮಂತನಾಗಿದ್ದ ನೊಳಂಬವಾಡಿಯ ಅರಸನನ್ನು ಸೋಲಿಸುವದರ ಮೂಲಕ ಆತನು ಚಾಲುಕ್ಯರ ಸಾರ್ವಭೌಮತ್ವಕ್ಕೆ ಆತಂಕವನ್ನೊಡ್ಡಿದ್ದನು.[೬] ಈ ಮೂಲಕ ಆತನು ಸ್ವತಂತ್ರ ರಾಜ್ಯವನ್ನು ಕಟ್ಟುವ ಹಾರ್ದಿಕ ಪ್ರಯತ್ನದಲ್ಲಿ ನಿರತನಾದನು. ಚಾಲುಕ್ಯ ರಾಜ್ಯವನ್ನು ನಿರ್ಮೂಲಗೊಳಿಸಲು ವಿಷ್ಣುವರ್ಧನನು ಹಲವಾರು ಪ್ರಯತ್ನಗಳನ್ನು ಮಾಡಿದನು ಮತ್ತು ಚಾಲುಕ್ಯ ರಾಜ್ಯದ ಸೀಮೆಯಲ್ಲಿ ಹೊಯ್ಸಳ ರಾಜ್ಯದ ಮೇರೆಗಳನ್ನು ವಿಸ್ತರಿಸುವಲ್ಲಿ ಯಶಸ್ವಿಯಾಗಿದ್ದನು. ಚಾಲುಕ್ಯರ ಸಾಮಂತನಾಗಿದ್ದ ಗಂಗದೊರೆ ಸನ್ನಿಯನನ್ನು ೧೧೨೦ ರಲ್ಲೂ,[೭] ಪಾಂಡ್ಯ ಅರಸ ತ್ರಿಭುವನ ಮಲ್ಲನನ್ನು ೧೧೧೭ ರಲ್ಲೂ[೮] ಮತ್ತು ಗೋವೆಯ ಅರಸನನ್ನು ಕೂಡ ಸೋಲಿಸಿದನು. ಆತನ ದಂಡನಾಯಕ ಗಂಗರಾಜನು ಕನ್ನಗಲದ ಯುದ್ಧದಲ್ಲಿ ಚಾಲುಕ್ಯ ಸೈನ್ಯವನ್ನು ಚದುರಿಸಿದನು. ಆರನೆಯ ವಿಕ್ರಮಾದಿತ್ಯನ ಸಾವಿನೊಂದಿಗೆ ಚಾಲುಕ್ಯ ಮನೆತನದ ಅವಸಾನ ಸನ್ನಿಹಿತವಾಗಿ, ಹೊಯ್ಸಳ ಮನೆತನದ ಉನ್ನತಿ ಆರಂಭವಾಯಿತು. ತಮ್ಮ ಸಾರ್ವಭೌಮರೊಂದಿಗೆ ಹೋರಾಟದಲ್ಲಿ ನಿರತರಾಗಿದ್ದಾಗಲೂ ಹೊಯ್ಸಳರು ಮಹಾಮಂಡಳೇಶ್ವರ ಎಂಬ ಬಿರುದು ಧರಿಸಿದ್ದುದು ಅವರ ಶಾಸನಗಳಿಂದ ವ್ಯಕ್ತವಾಗುತ್ತದೆ.[೯] ಹೊಯ್ಸಳರ ಮೂರನೆಯ ಬಲ್ಲಾಳನೂ ಕೂಡ ತನ್ನ

---

೫. Ibid, p. 320.

೬. E. C., V, Bl. 58.

೭. Ibid, VII, Sh. 17.

೮. Ibid, XI, Dg. 90.

೯. Ibid, XII. Gb. 12, 34; Tp. 66, 128; Md. 62, 106; Sr. 60, 62.

ಉಳಿದ ಸಾರ್ವಭೌಮ ಸೂಚಕ ಬಿರುದುಗಳೊಂದಿಗೆ ಮಹಾಮಂಡಳೇಶ್ವರ ಎಂಬ ಬಿರುವನ್ನು ಧರಿಸಿದ್ದನು.[೧೦] ಇಲ್ಲಿ ಹೊಯ್ಸಳರು ಚಾಲುಕ್ಯರಿಗೆ ತಮ್ಮ ವಿಧೇಯತೆಯನ್ನು ವ್ಯಕ್ತಗೊಳಿಸುವದಕ್ಕಾಗಿಯೇ ಮಹಾಮಂಡಳೇಶ್ವರ ಎಂಬ ಬಿರುವನ್ನು ಹೊಂದಿದ್ದರೆಂದು ಊಹಿಸುವದು ಅಸಂಬದ್ಧವೂ, ಅತರ್ಕವೂ ಹಾಗೂ ಅವಾಸ್ತವವೂ ಆಗಿದೆ. ಚಾಲುಕ್ಯ ಮನೆತನಕ್ಕೆ ಹೊಯ್ಸಳ ಮನೆತನವು ಅಧೀನವಾಗಿದ್ದಿತೆಂಬುದನ್ನು ವ್ಯಕ್ತಗೊಳಿಸುವದಕ್ಕಾಗಿಯೇ ವೀರಬಲ್ಲಾಳನು ಈ ಬಿರುವನ್ನು ಧರಿಸಿದ್ದನೆಂದು ತಿಳಿಯುವದೂ ಸೂಕ್ತವಾಗಲಾರದು. ಈ ಬಿರುದು ತನ್ನ ವಾಸ್ತವಿಕ ಅರ್ಥವನ್ನು ಕಳೆದುಕೊಂಡಿದ್ದ ೧೨,೧೩ ಹಾಗೂ ೧೪ ನೆಯ ಶತಮಾನಗಳ ಅರಸರ ಬಿರುದುಗಳಲ್ಲಿ ಸಾಮಾನ್ಯವಾಗಿ ಸೇರಿಕೊಂಡಿದ್ದಿತೆಂಬ ಸಂಬಂಧವಲ್ಲಿ ಸಮಾಧಾನಕರ ವಿವರಣೆಯನ್ನೀಯ ಬಹುದು. ಈ ಅರ್ಥದಲ್ಲಿ ಗಮನಿಸಿದಾಗ, ಸಂಗಮ ಅರಸರು ಹೊಯ್ಸಳ ಮನೆತನಕ್ಕೆ ತಾವು ಅಧೀನರಾಗಿದ್ದುದನ್ನು ತೋರಿಸುವದಕ್ಕಾಗಿ ಈ ಬಿರುದನ್ನು ಹೊಂದಿರದೆ, ಸ್ವತಃ ಹೊಯ್ಸಳರೇ ಆ ಬಿರುದನ್ನು ಹೊಂದಿದ್ದರಿಂದ ಈ ವಿಷಯದಲ್ಲಿ ಸಂಗಮರು ಅವರನ್ನು ಅನುಕರಿಸಿದರೆಂದು ಹೇಳಬಹುದು.

ತಮ್ಮ ಚಟುವಟಿಕೆಗಳೆಲ್ಲೆಲ್ಲ ಸಂಗಮ ಸಹೋದರರು ಹೊಯ್ಸಳರ ಸಕ್ರೀಯ ಉತ್ತೇಜನವನ್ನು ಪಡೆದಿದ್ದರೆಂದು ನಂಬುವ ಡಾ. ದೇಸಾಯಿಯವರು "...ಹರಿಹರನ ಏಳಿಗೆ ಹಾಗೂ ಹೊಸ ವಿಜಯನಗರ ರಾಜ್ಯದ ಸ್ಥಾಪನೆ ಇವು ಸಾರ್ವಭೌಮನಾದ ಮೂರನೆಯ ವೀರಬಲ್ಲಾಳನಿಗೆ ಪ್ರತಿಯಾಗಿ ಹಾಗೂ ಆತನ ವಿರುದ್ಧ ಸಂಭವಿಸಿದ ಘಟನೆಗಳಾಗಿರದೆ, ಅವುಗಳನ್ನು ಆತನ ತಿಳಿವಳಿಕೆ. ಸಮ್ಮತಿ ಹಾಗೂ ಸಕ್ರೀಯ ಸಹಾಯಗಳೊಂದಿಗೆ ಸಾಧಿಸಲಾಗಿತ್ತು. ದೊರೆ ಮತ್ತು ಸಾಮಂತ ಇವರಲ್ಲಿ ಪರಸ್ಪರ ಭಿನ್ನಾಭಿಪ್ರಾಯ ತಲೆದೋರಿದ ಅಥವ ಸಂಘರ್ಷ ಉಂಟಾದ ಒಂದು ಉದಾಹರಣೆಯೂ ಸಿಕ್ಕುವುದಿಲ್ಲ. ತನ್ನ ರಾಜ್ಯದ ಸೀಮೆಯೊಳಗೇ ತನ್ನ ಸಾಮಂತನೊಬ್ಬನಿಗೆ ಸ್ವತಂತ್ರ ರಾಜ್ಯವನ್ನು ಕಟ್ಟಿ ಅವರ ಸೀಮೆಗಳನ್ನು ವಿಸ್ತರಿಸಲು ಅವಕಾಶ ಕೊಡುವ ಈ ಸಾರ್ವಭೌಮ ದೊರೆಯಂತಹ ಉದಾಹರಣೆ ಸಿಕ್ಕುವದು ಅಪರೂಪ. ಅಭೂತಪೂರ್ವ ಪ್ರಸಂಗ ಹಾಗೂ ಅಸಾಮಾನ್ಯ ಘಟನೆಗಳಿಂದಾಗಿ ಇಂತಹ ಕ್ರಮ ಕೈಗೊಳ್ಳುವದು ಅನಿವಾರ್ಯವಾಗಿತ್ತು."[೧೧] ತಮ್ಮ ಅಭಿಪ್ರಾಯವನ್ನು ಪುಷ್ಟೀಕರಿಸಲು ಅವರು. ೧೩೩೬ ರಲ್ಲಿ ಹರಿಹರನು ಬಾರಕೂರದಲ್ಲಿ ಕಟ್ಟಿಸಿದ ಕೋಟೆಯನ್ನು, ೧೩೩೮ ರಲ್ಲಿ ಮೂರನೆಯ ವೀರಬಲ್ಲಾಳನು ತಾನು ಅಲ್ಲಿ ನೆಲೆಗೊಳಿಸಿದ್ದ ಸೈನ್ಯವನ್ನು ವೀಕ್ಷಿಸಲು ಇತ್ತ ಸಂದರ್ಶನವನ್ನು ಅವರು ಉಲ್ಲೇಖಿಸುತ್ತಾರೆ. ಮೂರನೆಯ ವೀರಬಲ್ಲಾಳನ ಬಾರಕೂರು ಸಂದರ್ಶನವನ್ನು ಕುರಿತು ಬರೆಯುತ್ತ

---

೧೦. Ibid, Gb. 30, Md. 83, Etc.

೧೧. A History of Karnatak, pp. 318–319.

ಡಾ. ಹೆರಾಸ್ ಅವರು "ತನ್ನ ಮಹಾಮಂಡಳೇಶ್ವರನಾದ ಹರಿಹರನು ಅಲ್ಲಿ ಹೊಸದಾಗಿ ಕಟ್ಟಿಸಿದ್ದ ಕೋಟೆಯನ್ನು ಪರೀಕ್ಷಿಸಲು ಇತ್ತ ಸಂದರ್ಶನವಂತೆ ತೋರುತ್ತದೆ"[೧೨] ಎಂದು ಹೇಳಿದ್ದಾರೆ. ಆದರೆ ವೀರಬಲ್ಲಾಳನು ಬಾರಕೂರಿಗೆ ಸಂದರ್ಶನವಿತ್ತುದನ್ನು ಉಲ್ಲೇಖಿಸುವ ಶಾಸನದ ವಿಶ್ಲೇಷಣೆಯಿಂದ ನಮಗೆ ಅನೇಕ ಹೊಸ ವಿಷಯಗಳು ತಿಳಿದು ಬರುತ್ತವೆ. ೧೩೩೮ನೆಯ ವರ್ಷದ ಈ ಶಾಸನವು ಮೂರನೆಯ ವೀರಬಲ್ಲಾಳನ ಸಂದರ್ಶನವನ್ನು ಉಲ್ಲೇಖಿಸುವುದರ ಜೊತೆಗೆ, ಆತನ ಆಜ್ಞೆಯ ಮೇರೆಗೆ ಅಂಕೆಯ ನಾಯಕನು ಅಲ್ಲಿ ಉಳಿಯಲು ಒಪ್ಪಿದುದನ್ನೂ ಅದಕ್ಕೆ ಪ್ರತಿಯಾಗಿ ಆತನಿಗೆ ಬಾಗಿವಾಳ ಹಳ್ಳಿಯನ್ನು ದಾನವಾಗಿ ಕೊಡಲಾಯಿತೆಂಬುದನ್ನೂ ವಿವರಿಸುತ್ತದೆ.[೧೩] ಈ ಶಾಸನದಲ್ಲಿ ಹರಿಹರನ ಉಲ್ಲೇಖವೇ ಇಲ್ಲ. ಆ ಕೋಟೆಯನ್ನು ಕಟ್ಟಿಸಿದ್ದ ಹರಿಹರನು ವೀರಬಲ್ಲಾಳನ ಆಜ್ಞೆಯಂತೆ ವರ್ತಿಸುತ್ತಿದ್ದರೆ, ಅದರಲ್ಲಿ ಆತನ ಉಲ್ಲೇಖವಿರಲೇಬೇಕಾಗಿತ್ತು. ಪ್ರತಿಯಾಗಿ ವೀರಬಲ್ಲಾಳನು ಅಂಕೆಯನಾಯಕನಿಗೆ ಬಾರಕೂರ ಕೋಟೆಯ ರಕ್ಷಣೆಯ ಭಾರವನ್ನು ನಿರ್ವಹಿಸಿಕೊಟ್ಟುದರಿಂದ, ಬಹುತರವಾಗಿ ಆತನ ಓರ್ವ ಚಿಕ್ಕ ಸರದಾರನಾಗಿದ್ದ ಹರಿಹರನು ಉಪಟಳದಿಂದ ರಕ್ಷಿಸಲು ಅಗತ್ಯವಾಗಿದ್ದ ವ್ಯವಸ್ಥೆಯನ್ನು ಮಾಡಲು ಹಾಗೂ ಅಂಕೆಯ ನಾಯಕನ ವಶದಲ್ಲಿ ಒಂದು ಸೇನಾಪಡೆಯನ್ನು ಸ್ಥಾಪಿಸಲು ಬಾರಕೂರಿಗೆ ಬಂದನೆಂದು ಊಹಿಸಬಹುದು. ಏಕೆಂದರೆ ವೀರಬಲ್ಲಾಳನು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾಗ ಹರಿಹರನು ಮಹಾಮಂಡಳೇಶ್ವರ ಎಂಬ ಬಿರುದನ್ನು ಹೊಂದುವ ಧೈರ್ಯ ಪಡೆದಿದ್ದನು.

ಈ ಶಿಲಾಶಾಸನವು ಬಾರಕೂರು ಹಾಗೂ ಹಂಪೆ ಪ್ರದೇಶಗಳಲ್ಲಿ ಹೊಯ್ಸಳ ಸತ್ತೆಯನ್ನು ಭದ್ರಪಡಿಸಿದುದನ್ನು ದೃಢಪಡಿಸುತ್ತದೆ. ಈ ಸಂದರ್ಭದಲ್ಲಿ ಮೂರನೆಯ ಬಲ್ಲಾಳನ ಹಂಪೆ ವಾಸ್ತವ್ಯವನ್ನು ಕುರಿತು ವಿಮರ್ಶಿಸಬೇಕು. ಹರಿಹರನ ಹೆಚ್ಚುತ್ತಿರುವ ಪ್ರಭಾವವನ್ನು ಹತ್ತಿಕ್ಕುವ ಉದ್ದೇಶದಿಂದ ಮೂರನೆಯ ವೀರಬಲ್ಲಾಳನಿಗೆ ಹಂಪೆ ಪ್ರದೇಶದಲ್ಲಿ ವಾಸ್ತವ್ಯ ಮಾಡಬೇಕಾಗಿ ಬಂತು. ಅಲ್ಲಿ ಆತನ ವಾಸ್ತವ್ಯ ಅಗತ್ಯವಾಗಿತ್ತು. ೧೩೪೫ ರ ಸುಮಾರಿಗೆ ಹರಿಹರನು ಗುತ್ತಿಯಲ್ಲಿ ಭದ್ರವಾಗಿ ನೆಲೆಯೂರಿದ್ದ. ಅದು ಆತನ ಕಾರ್ಯಕ್ಷೇತ್ರವಾಗಿತ್ತು.[೧೪] ಅನಂತರ ಹಂಪೆ, ಆನೆಗುಂದಿ ಭಾಗದಲ್ಲಿಯೂ ಆತನು ತನ್ನ ಪ್ರಭಾವವನ್ನು ಬೀರುವಲ್ಲಿ ಯಶಸ್ವಿಯಾದನು. ಈ ರೀತಿ ಬಾರಕೂರು ಪ್ರದೇಶದಲ್ಲಿ ತನ್ನ ಸ್ವಾಮ್ಯವನ್ನು ಪುನರ್ ಸ್ಥಾಪಿಸಿದ ನಂತರ ಹಂಪೆ ಪ್ರದೇಶಕ್ಕೆ ತೆರಳಿ ಅಲ್ಲಿ ಕೆಲ ಸಮಯ ವಾಸ್ತವ್ಯ ಮಾಡಿದನು. ೧೩೪೫ ರ ಒಂದು ಶಾಸನದಲ್ಲಿ ಆತನು ಶ್ರೀ ವೀರವಿಜಯ ವಿರೂಪಾಕ್ಷಪುರದಿಂದ ಆಳುತ್ತಿದ್ದುದಾಗಿ ಉಲ್ಲೇಖವಿದೆ.[೧೫]

---

೧೨. Heras, pp. 67–68.

೧೩. E. C. V, Ak. 183.

೧೪. L. R. 23, pp. 52–53.

೧೫. E. C. IX, Ht. 43.

೧೩೪೦ ನೆಯ ವರ್ಷದ ಶಾಸನವೊಂದರಲ್ಲಿ ಕುಮಾರ ವಿರೂಪಾಕ್ಷನನ್ನು ಯುವರಾಜ ಪಟ್ಟಕ್ಕೆ ಕೂಡ್ರಿಸುವ ಸಮಾರಂಭದ ಉಲ್ಲೇಖವಿದೆ.[೧೬] ಈ ಪ್ರದೇಶದ ಮೇಲೆ ಇನ್ನೂ ಹೊಯ್ಸಳರ ಸ್ವಾಮ್ಯ ಇತ್ತೆಂಬುದನ್ನೂ ಆ ಪ್ರದೇಶವನ್ನು ಬೇರೆ ಯವರಿಗೆ ಬಿಟ್ಟುಕೊಡುವ ವಿಷಯವನ್ನು ಅವರು ಸಹಿಸಲಾರರೆಂಬುದನ್ನೂ ಆ ಪ್ರದೇಶದ ಜನತೆಗೆ ಮನಗಾಣಿಸಿಕೊಡುವದಕ್ಕಾಗಿ ಬಲ್ಲಾಳನು ಉದ್ದೇಶಪೂರ್ವಕ ವಾಗಿ ನೆರವೇರಿಸಿದ ಕಾರ್ಯವಾಗಿತ್ತು. ೧೩೪೦ ಮತ್ತು ೧೩೪೨ ರ ಮಧ್ಯದಲ್ಲಿ ಮೂರನೆಯ ಬಲ್ಲಾಳನು ಉಣ್ಣಾಮಲೆ ಪ್ರದೇಶದಲ್ಲಿ ನೆಲೆಸಿಂತಾಗ ಹರಿಹರನಿಗೆ ತನ್ನ ಸ್ಥಾನವನ್ನು ಭದ್ರಮಾಡಿಕೊಳ್ಳಬೇಕಾಗಿತ್ತೆಂದು ತೋರುತ್ತದೆ. ೧೩೪೦ ರಲ್ಲಿ ಆತನ ಅಧಿಕಾರಿಯಾಗಿದ್ದ ಚಾಮರಾಜನು ಬಾದಾಮಿಯ ಕೋಟೆಯನ್ನು ಕಟ್ಟಿಸಿದನು.[೧೭] ಉತ್ತರ ಕನ್ನಡ ಜಿಲ್ಲೆ ಪ್ರದೇಶದಲ್ಲಿಯೂ ಆತನ ಪ್ರಭಾವ ಹಾಗೂ ಅಧಿಕಾರ ಒಡ ಮೂಡಿದ್ದವು. ಹೊನ್ನಾವರದ ಅರಸನಾಗಿದ್ದ ಜಲಾಲ ಉದ್ದೀನ ಮುಹ್ಮದನು ಹರಿಹರನ ಪ್ರಭುತ್ವವನ್ನು ಮನ್ನಿಸಿದ್ದನೆಂದು ಇಬ್ನಬಬೂತ ಹೇಳಿದ್ದಾನೆ.[೧೮] ಹರಿಹರನ ಉದಯವು ಈ ರೀತಿ ಹೊಯ್ಸಳ ಶಕ್ತಿಗೆ ಮಾರಕವಾಗಿ ಪರಿಣಮಿಸಿತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕುಂದುತ್ತಿದ್ದ ಹೊಯ್ಸಳರ ಪ್ರತಿಷ್ಠೆಯನ್ನು ಎತ್ತಿಹಿಡಿಯುವ ನಿರ್ಧಾರವನ್ನು ಕೈಕೊಂಡಿದ್ದ ಬಲ್ಲಾಳನು ೧೩೪೨ರಲ್ಲಿ ಹಂಪೆ ಪ್ರದೇಶಕ್ಕೆ ಬಂದು ಅಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದನು. ೧೩೪೨ರ ಶಾಸನವೊಂದರಲ್ಲಿ ಬಲ್ಲಾಳನ ಮಗನನ್ನು ಹಂಪೆಯೊಡೆಯನೆಂದು ಕರೆಯಲಾಗಿದ್ದು[೧೯]. ಅದು ಹಂಪೆ–ಆನೆಗುಂದಿ ಪ್ರದೇಶದ ಮೇಲಿದ್ದ ಹೊಯ್ಸಳರ ಹಕ್ಕನ್ನು ಎತ್ತಿ ಹೇಳುವದೇ ಅದರ ಉದ್ದೇಶ ವಾಗಿರಬೇಕು.

ತನ್ನ ರಾಜ್ಯದ ಸಮಸ್ಯೆಗಳನ್ನು ಬಿಡಿಸಲು ಅಶಕ್ತನಾಗಿದ್ದ ಮೂರನೆಯ ಬಲ್ಲಾಳನು ಸಾಮಂತರೊಡನೆ ತನ್ನ ಅಧಿಕಾರವನ್ನು ಹಂಚಿಕೊಂಡಿದ್ದನೆಂದು ಆಗಾಗ ಹೇಳಲಾಗಿದೆ.[೨೦] ತನ್ನ ಮಂತ್ರಿಗಳು, ದಂಡನಾಯಕರು, ಸಾಮಂತರು ಹಾಗೂ ಪ್ರಾಂತೀಯ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ಹಾಗೂ ಸ್ವಾತಂತ್ರ್ಯವನ್ನು ದಯ ಪಾಲಿಸುವದೇ ಆ ವಿಧಾನವಾಗಿತ್ತು. ಮಾದಿಗಿದೇವ. ಮಾವ ದಂಡನಾಯಕ. ಸಿಂಗೆಯ ದಂಡನಾಯಕ. ಕಾಮೆಯ ದಂಡನಾಯಕ. ಅಳಿಯ ಬಲ್ಲಪ ದಂಡನಾಯಕ. ಮಹಾ ಮಂಡಳೇಶ್ವರ ವೀರಹರಿಯಪ್ಪವೊಡೆಯ ಮುಂತಾದವರು ಮೂರನೆಯ ಬಲ್ಲಾಳ ನೊಡನೆ ಪಾಲ್ಗೊಂಡ ಅಧಿಕಾರಿಗಳಲ್ಲಿ ಪ್ರಮುಖರಾಗಿದ್ದಾರೆ.

---

೧೬. E. C. VI. Cm. 105.
೧೭. Ind. Anti, X, p. 63.
೧೮. Heras, p. 68.
೧೯. E. C. IV, Yd. 29.
೨೦. "*Ballala III and Vijayanagara*", Dr. P. B. Desai *The Hoysal Dynasty; Ed by* Dr. B. SheikhAli, pp. 339–340.

ಹರಿಹರನನ್ನುಳಿದು ಎಲ್ಲ ಅಧಿಕಾರಿಗಳು ಬಲ್ಲಾಳನ ಸೇವೆಯಲ್ಲಿದ್ದಂತೆ ತಿಳಿದು ಬರುತ್ತದೆ. ಆದರೆ ಹರಿಯಪ್ಪ ಅಂದರೆ ಹರಿಹರನಿಗೆ ಹೊಯ್ಸಳರ ಯಾವ ಶಾಸನ ದಲ್ಲೂ ಉಲ್ಲೇಖವಿಲ್ಲ. ಅಂತೆಯೇ ಸಂಗಮರ ಯಾವ ಶಾಸನದಲ್ಲೂ ಹರಿಹರನು ಬಲ್ಲಾಳನ ಇಲ್ಲವೇ ಹೊಯ್ಸಳರ ರಾಜ್ಯದಲ್ಲಿ ಅಧಿಕಾರಿಯಾಗಿದ್ದ ಬಗೆಗೆ ಉಲ್ಲೇಖವಿಲ್ಲ. ಮೂರನೆಯ ವೀರಬಲ್ಲಾಳನು ತನ್ನ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ಸ್ವಾತಂತ್ರ್ಯ ವನ್ನು ಕೊಟ್ಟಿದ್ದ ಸಂಗತಿಯನ್ನು ಅಲ್ಲಗಳೆಯಲಿಕ್ಕಾಗದಿದ್ದರೂ ಹರಿಹರನಿಗೂ ಅದೇ ರೀತಿ ಆತನು ಹೆಚ್ಚಿನ ಅಧಿಕಾರವನ್ನಿತ್ತಿದ್ದನೆಂದು ಊಹಿಸಲಿಕ್ಕಾಗದು.

ಸಂಗಮ ವಂಶದ ಶಾಸನಗಳ ಕೂಲಂಕುಶ ಅಧ್ಯಯನದಿಂದ "ಪ್ರಭು ಮತ್ತು ಸಾಮಂತರ ನಡುವೆ ವಿರಸ ಉಂಟಾದ ಮತ್ತು ಘರ್ಷಣೆ ಸಂಭವಿಸಿದ ಒಂದು ಉದಾಹರಣೆಯೂ ಸಿಕ್ಕುವುದಿಲ್ಲ"[೨೧] ಎಂಬ ಹೇಳಿಕೆಯನ್ನು ವಿಮರ್ಶಿಸಲು ಸಹಾಯಕ ವಾಗುತ್ತದೆ. ೧೩೪೦ ನೆಯ ವರ್ಷದ, ಹೊಯ್ಸಳ ರಾಜ್ಯದ ಮಧ್ಯವರ್ತಿ ನಾಡಾದ ನೆಲಮಂಗಲ ತಾಲ್ಲೂಕಿನ ಶಾಸನವೊಂದರಲ್ಲಿ ಹರಿಹರನು ಆ ಪ್ರದೇಶದಲ್ಲಿ ಆಳುತ್ತಿದ್ದ ಬಗೆಗೆ ಉಲ್ಲೇಖವಿದೆ.[೨೨] ಮೂರನೆಯ ಬಲ್ಲಾಳನು ಹರಿಹರನಿಗೆ ಉತ್ತರ ಮೇರೆಯ ರಕ್ಷಣೆಯ ಭಾರವನ್ನು ನಿರ್ವಹಿಸಿ ಕೊಟ್ಟಿದ್ದನೆಂಬ ವಾದವನ್ನು ಒಪ್ಪಿಕೊಂಡರೆ, ಆತನು ಹೊಯ್ಸಳ ರಾಜ್ಯವನ್ನು ಆಳುತ್ತಿದ್ದನೆಂದು ಉಲ್ಲೇಖಿಸುವ ಶಾಸನವೊಂದು ಆತನ ಕಾಲಕ್ಷೇತ್ರದಿಂದ ಅತೀ ದೂರದ ಪ್ರದೇಶದಲ್ಲಿ ಸಿಕ್ಕುವದಕ್ಕೆ ಆ ವಿವರಣೆಯನ್ನೀಯು–ವುದು ಕಠಿಣವಾಗುತ್ತದೆ. ಇದಕ್ಕೆ ಕೊಡಬಹುದಾದ ಒಂದೇ ಒಂದು ಸಮಾಧಾನಕಾರಕ ವಿವರಣೆಯೆಂದರೆ, ೧೩೪೦ ರ ಸುಮಾರಿಗೆ ಮೂರನೆಯ ಬಲ್ಲಾಳನು ಉಣ್ಣಾಮಲೆ ಪ್ರದೇಶದಲ್ಲಿ ಕಾರ್ಯನಿರತನಾದ ಸಂಧಿಯನ್ನು ಸಾಧಿಸಿ, ಹರಿಹರನು ಈ ಪ್ರದೇಶದಲ್ಲಿ ಸ್ವತಂತ್ರ ರಾಜ್ಯವನ್ನು ನಿರ್ಮಿಸುವ ಯತ್ನದಲ್ಲಿ ತೊಡಗಿದ್ದನೆಂಬುದೇ ಆಗಿದೆ. ಇದಕ್ಕೆ ಪ್ರತಿಯಾಗಿ ಸ್ವತಃ ಮೂರನೆಯ ಬಲ್ಲಾಳನೇ ಹರಿಹರನಿಗೆ ಹೊಯ್ಸಳ ರಾಜ್ಯವನ್ನಾಳಲು ಸಮ್ಮತಿಸಿದ್ದನೆಂದು ಹೇಳುವದು ಸರಿಯಾಗಲಾರದು.

ಒಂದನೆಯ ಬುಕ್ಕನ ಶಾಸನವೊಂದರಲ್ಲಿ ಹೊಯ್ಸಳರು ಮತ್ತು ಸಂಗಮರ ನಡುವಿನ ವೈರತ್ವವನ್ನು ಕುರಿತು ಅಸಂದಿಗ್ಧ ಭಾಷೆಯಲ್ಲಿ ಉಲ್ಲೇಖವಿದೆ. ಇಂತಹ ಉಲ್ಲೇಖವಿರುವುದು ತತ್ಕಾಲೀನ ಶಾಸನದಲ್ಲಿ ತತ್ಕಾಲೀನ ಐತಿಹಾಸಿಕ ಆಧಾರವನ್ನು ಕುರಿತು ಹೇಳುತ್ತ ಡಾ. ದೇಸಾಯಿಯವರು ಬೇರೊಂದು ಪ್ರಸಂಗದಲ್ಲಿ "ಇದು ಸಂಗಮ ಅರಸರ ತತ್ಕಾಲೀನ ಹೇಳಿಕೆಯಾಗಿರುವುದರಿಂದ ಅಲ್ಲಿ ಕಲ್ಪನೆಗಾಗಲಿ ಅತಿಶಯೋಕ್ತಿ–ಗಾಗಲಿ ಅವಕಾಶವಿಲ್ಲ"[೨೩] ಎಂದು ಬರೆದಿದ್ದಾರೆ. ಮೇಲೆ ಉಲ್ಲೇಖಿಸಿದ ಒಂದನೆಯ ಬುಕ್ಕನ ಶಾಸನದಲ್ಲಿ ಮಲ್ಲಿತಮ್ಮ ಎಂಬ ಆತನ ದಂಡನಾಯಕನನ್ನು ಕುರಿತು "ತುರುಕ

---

೨೧. A History of Karnatak, p. 318.

೨೨. E.C IX, Nl 19.

೨೩. *Ballla III and Vijayanagar*, Dr. P.B. Desai, The Hoysala Dynasty p.331.

ದಳಕ್ಕೆ ಶೇವಿಕಾದಳಕ್ಕೆ ಪಾಂಡ್ಯರುಬ್ಬರದಳಕ್ಕೆ ಹೊಯಿಸಣದಳಕ್ಕೆ ಮಹೋನ್ನತಿವೆತ್ತ"[೨೪] ಎಂದು ವರ್ಣನೆಯಿದೆ. ಅಂದರೆ ಮಲ್ಲಿತಮ್ಮನು ಮುಸಲ್ಮಾನರು, ಸೇವುಣರು, ಆಂಧ್ರರು, ಪಾಂಡ್ಯರು ಹಾಗೂ ಹೊಯ್ಸಳ ರಾಜ್ಯಗಳ ಬಲವಾದ ಸೇನಾಪಡೆಯ ಮೇಲೆ ವಿಜಯಸಾಧಿಸಿದ್ದನೆಂಬುದು ಅದರ ತಾತ್ಪರ್ಯ. ಇದು ಸ್ಪಷ್ಟವಾಗಿ ಹೊಯ್ಸಳರು ಹಾಗೂ ಸಂಗಮರ ನಡುವಿನ ಘರ್ಷಣೆಯನ್ನು ಉಲ್ಲೇಖಿಸುತ್ತಿದ್ದು, ಬಹುತರವಾಗಿ ಮೂರನೆಯ ವೀರಬಲ್ಲಾಳನ ಮರಣಾನಂತರ ಹೊಯ್ಸಳ ರಾಜ್ಯದ ಬುನಾದಿ ಶಿಥಿಲಗೊಂಡಾಗ ಈ ಘರ್ಷಣೆ ಸಂಭವಿಸಿರಬಹುದು. ಈ ಸನ್ನಿವೇಶದ ಬೆಳಕಿನಲ್ಲಿ ೧೩೪೪ರ ಶಾಸನವೊಂದನ್ನು ನೋಡಬೇಕು. ಇದು ಹುಣಸೂರು ಪ್ರದೇಶದಲ್ಲಿ ನಡೆದ ಕಾದಾಟವನ್ನು ಉಲ್ಲೇಖಿಸುತ್ತಿದ್ದು ಆ ಯುದ್ಧದಲ್ಲಿ ಹರಿಯಪ್ಪ ಒಡೆಯನ ಕೆಲವು ಗೌಡರು ನಿರತರಾಗಿದ್ದರೆಂದು ಹೇಳುತ್ತದೆ.[೨೫] ಯುದ್ಧದ ಬಗೆಗೆ ವಿವರಗಳೇನೂ ಆ ಶಾಸನದಲ್ಲಿಲ್ಲ. ಆದರೆ, ಮೂರನೆಯ ಬಲ್ಲಾಳನ ಮರಣಾನಂತರ, ತನ್ನ ಪ್ರದೇಶ ವಿಸ್ತೀರ್ಣದ ಆಶೆಯಿಂದ ಹರಿಹರನು ಹೊಯ್ಸಳರೊಂದಿಗೇ ಯುದ್ಧ ಮಾಡಿರಬಹುದೆಂಬುದು ಸ್ಪಷ್ಟವಿದೆ. ಡಾ. ದೇಸಾಯಿಯವರು ಗೋಗ್ರಹಣ ಸಂಬಂಧದಲ್ಲಿ ನಡೆದ ಸ್ಥಾನಿಕ ಘರ್ಷಣೆಯಾಗಿರಬಹುದೆಂದು ಊಹಿಸುತ್ತಾರೆ.[೨೬] ಅದು ನಿಜವಾಗಿದ್ದ ಪಕ್ಷದಲ್ಲಿ ಆ ಶಾಸನದಲ್ಲಿ ಕೇವಲ ಹರಿಹರನ ಉಲ್ಲೇಖವಿದ್ದು, ಆ ಪ್ರದೇಶದ ಅರಸರಾಗಿದ್ದ ಹೊಯ್ಸಳರ ಉಲ್ಲೇಖವಿರದೇ ಇರುವುದು ವಿಸ್ಮಯವನ್ನುಂಟು ಮಾಡುತ್ತದೆ. ಸಮಸ್ಯೆಯನ್ನು ಸಂಪೂರ್ಣವಾಗಿ ಗ್ರಹಿಸದೆ ಡಾ. ಸಾಲೆತ್ತೊರೆ ಅವರು "ಹೊಯ್ಸಳ ಮತ್ತು ಸಂಗಮ ಸಹೋದರರ ನಡುವೆ ವಿರಸಕ್ಕೆ ಸಂಬಂಧಿಸಿದ ಯಾವ ಹೇಳಿಕೆಗಳಿಗೂ ಮಹತ್ವ ಕೊಡಬೇಕಾಗಿಲ್ಲ. ಏಕೆಂದರೆ, ಅಂತಹ ವಿರಸ ಇರಲೇ ಇಲ್ಲ" ಎಂದು ಅಭಿಪ್ರಾಯಪಟ್ಟಿದ್ದಾರೆ.[೨೭] ತಾವು ಹೊಯ್ಸಳ ಪ್ರದೇಶದ ಸಾರ್ವಭೌಮರೆಂದು ಹೇಳಿಕೊಳ್ಳುವಲ್ಲಿ ಸಂಗಮ ಅರಸರು ಅಭಿಮಾನಪಟ್ಟುಕೊಳ್ಳಲಿಕ್ಕೆ ಅವರ ಹೊಯ್ಸಳ ಅರಸರಿಗೆ ಋಣಿಯಾಗಿದ್ದರೆಂಬ ಕಾರಣಕ್ಕಾಗಿ ಇವರು ಅವರ ಮೇಲೆ ಸಾಧಿಸಿದ ವಿಜಯವೇ ಅದಕ್ಕೆ ಕಾರಣವಾಗಿತ್ತು. "ಶ್ರೀ ಬುಕ್ಕಣ್ಣ ಒಡೆಯರು ಹೊಯ್ಸಳಾನ್ವಯ ಮಹೀಮಂಡಳಮಂ ನಿಜಭುಜಮಂಡನವಾಗಿ ಪಾಲಿಸುತ"[೨೮] ಎಂದು ಬುಕ್ಕನ ಕಾಲದ ಶಾಸನವೊಂದರಲ್ಲಿ ಉಲ್ಲೇಖವಿದೆ. ಇನ್ನೊಂದು ಶಾಸನದಲ್ಲಿ "ಶ್ರೀ ವೀರ ಬುಕಂಣವೊಡೆಯರು ತಮ್ಮ ಭುಜಬಲದಿಂದ ವೈರಿಯರಂ ಗೆಲ್ದುಕೊಂಡು ಹೊಯ್ಸಳರ ರಾಜ್ಯದ ಹರಿಹರ ಪಟ್ಟಣದ ನೆಲೆವೀಡಿನಲ್ಲಿ ಸುಖಸಂಕಥಾ ವಿನೋದದಿಂ ಸ್ಥಿರ ರಾಜ್ಯಂಗೆಯ್ಯುತ್ತಿದ್ದಲ್ಲಿ..." ಎಂಬ

---

೨೪. E. C. IX. Cd or. 7.

೨೫. E.C. IV Hunsur 114.

೨೬. *Ballla III and Vijayanagara*, Dr. P. B. Desai, The Hoysala Dynasty p. 334.

೨೭. Vijayanagara Sexcentenary Commemoration Volume p. 143

೨೮. MAR 1925, No. 84.

ಉಲ್ಲೇಖವಿದೆ.[೨೯] ಇದಕ್ಕೆ ಕೊಡಬಹುದಾದ ಸಮಾಧಾನಕರವಾದ ಅರ್ಥವೆಂದರೆ ಬುಕ್ಕನು ಹೊಯ್ಸಳ ನಾಡಿನಲ್ಲಿದ್ದ ತನ್ನ ವೈರಿಗಳನ್ನು ಸದೆಬಡಿದು ಅಲ್ಲಿ ತಾನು ಗೆದ್ದುಕೊಂಡಿದ್ದ ಹರಿಹರಪುರದಿಂದ ರಾಜ್ಯಭಾರ ನಡೆಸುತ್ತಿರುವುದಾಗಿ ಹೆಮ್ಮೆಪಟ್ಟು ಕೊಂಡಿದ್ದಾನೆ.

೧೩೪೬ರ ಶೃಂಗೇರಿ ಶಾಸನವು[೩೦] ಹೊಯ್ಸಳರ ಮೇಲೆ ಸಂಗಮ ಅರಸರು ಸಾಧಿಸಿದ ಅಂತಿಮ ವಿಜಯದ ಸ್ಪಷ್ಟ ನಿದರ್ಶನ ಆಗಿದೆ. ಹೊಯ್ಸಳ ರಾಜ್ಯವನ್ನು ಆಳುತ್ತಿದ್ದ ಒಂದನೆಯ ಹರಿಹರನು ತನ್ನ ಸಹೋದರ, ಅಳಿಯ ಹಾಗೂ ಇತರ–ರೊಂದಿಗೆ ವಿದ್ಯಾತೀರ್ಥ ಶ್ರೀಪಾದಸ್ವಾಮಿಗಳಿಗೆ ಗೌರವವನ್ನು ಸಲ್ಲಿಸಲು ಶೃಂಗೇರಿಗೆ ಬಂದಿದ್ದುದನ್ನು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಪೂರ್ವಪಶ್ಚಿಮ ವಾರಿಧಿಪರ್ಯಂತ ಭೂಮಂಡಳವನ್ನು ಗೆದ್ದುಕೊಂಡ ವಿಜಯದ ಸ್ಮಾರಕಾರ್ಥವಾಗಿ ಆತನು ಕೊಟ್ಟ ದಾನವನ್ನು ಕೂಡ ಶಾಸನವು ಉಲ್ಲೇಖಿಸುತ್ತದೆ. ನಾಲ್ಕನೆಯ ವೀರಬಲ್ಲಾಳನ ಮರಣ ಸಂಭವಿಸಿದ ವರ್ಷ, ಯಾವ ಘರ್ಷಣೆಯಿಲ್ಲದೆ ಹರಿಹರನು ಹೊಯ್ಸಳ ನಾಡಿನ ಮೇಲೆ ತನ್ನ ಪ್ರಭುತ್ವ ಸ್ಥಾಪಿಸಿದನೆಂದು ಫಾ. ಹೆರಾಸ್ ಬರೆದಿದ್ದಾರೆ.[೩೧] ೧೩೪೬ರಲ್ಲಿ ಸಂಭವಿಸಿದ ನಾಲ್ಕನೆಯ ಬಲ್ಲಾಳನ ಮರಣದಿಂದಾಗಿ ಹೊಯ್ಸಳ ಪ್ರದೇಶದಲ್ಲಿ ಸಂಗಮರು ಸ್ಥಾಪಿಸಲೆತ್ನಿಸಿದ ಪ್ರಭುತ್ವದ ಮಾರ್ಗದಲ್ಲಿಯ ಒಂದೇ ಒಂದು ಅಡೆತಡೆಯು ನಿವಾರಣೆಯಾ–ದಂತಾಯಿತು. ಮೂರನೆಯ ವೀರಬಲ್ಲಾಳನ ಮರಣಾನಂತರ, ಸಂಗಮರು ಹೊಯ್ಸಳ ಪ್ರದೇಶಗಳ ಮೇಲೆ ತಮ್ಮ ಪ್ರಭುತ್ವವನ್ನು ಸಾವಕಾಶವಾಗಿ ವಿಸ್ತರಿಸುವಲ್ಲಿಯೂ ಮತ್ತು ಹೊಯ್ಸಳರ ಅಧಿಕಾರಿಗಳನ್ನು ತಮ್ಮೆಡೆಗೆ ಆಕರ್ಷಿಸುವಲ್ಲಿಯೂ ಯಶಸ್ವಿಯಾಗಿದ್ದರು. ಅವರಲ್ಲಿ ಬಲ್ಲಪ ದಣ್ಣಾಯಕನು ಅತ್ಯಂತ ಸುಪ್ರಸಿದ್ಧ ಅಧಿಕಾರಿಯಾಗಿದ್ದನು. ಶಾಸನವೊಂದರ ಪ್ರಕಾರ ಆತನು ನಾಲ್ಕನೆಯ ಬಲ್ಲಾಳನ ಕೂಡ ಹೊಯ್ಸಳ ಪ್ರದೇಶ–ವನ್ನು ಆಳುತ್ತಿದ್ದನು ವಿಸ್ತಾರಗೊಳ್ಳುತ್ತಿದ್ದ ಸಂಗಮರ ಶಕ್ತಿಯನ್ನು ಎದುರಿಸುವ ಸಾಮರ್ಥ್ಯವಿಲ್ಲವೆಂಬುದನ್ನು ಮನಗಂಡಾಗ ಬಲ್ಲಪನು ಹರಿಹರನಿಗೆ ತನ್ನ ವಿಧೇಯತೆಯನ್ನು ವ್ಯಕ್ತಗೊಳಿಸಿದನು. ನಂತರ ಆತನು ಹರಿಹರನ ಅಳಿಯನಾಗುವದರ ಮೂಲಕ ತನ್ನ ರಾಜಕೀಯ ಅಂತಸ್ತನ್ನು ಉತ್ತಮಗೊಳಿಸಿಕೊಂಡನು. ತನ್ನ ಸಹೋದರರು ಹಾಗೂ ಅಳಿಯ ಬಲ್ಲಪ ದಂಡನಾಯಕನೊಂದಿಗೆ ಮೊದಲನೆಯ ಹರಿಹರನು ಶೃಂಗೇರಿಗೆ ಇತ್ತ ಭೆಟ್ಟಿಯು ಆತನ ವಿಜಯದ ಸಂಕೇತವಾಗಿದ್ದಿತು. ೧೩೪೬ ರ ನಂತರ ಎಲ್ಲೂ ಉಲ್ಲೇಖಿತವಾಗದ ಹೊಯ್ಸಳರ ಮೇಲೆ ಸಂಗಮರು ಸಾಧಿಸಿದ ವಿಜಯವೇ ಇದಾಗಿತ್ತು. ಮೂರನೆಯ ಬಲ್ಲಾಳನ ವಿಧವೆ ಚಿಕ್ಕಾಯಿ ತಾಯಿಯು ಈ ಸಂದರ್ಭದಲ್ಲಿ ದಾನವಿತ್ತಂತೆ ಶೃಂಗೇರಿಯ ಶಾಸನದಲ್ಲಿ ಉಲ್ಲೇಖವಿದೆ. ಸಂಗಮರು ಹೊಯ್ಸಳರಿಗೆ

೨೯. MAR 1936, No. 24.

೩೦. E.C. VI, Sg. 1.

೩೧. Heras, p. 106.

ನಿಜವಾಗಿಯೂ ವಿಧೇಯರಾಗಿದ್ದರೆ, ಅವರು ತಮ್ಮ ಹಾಗೂ ಬಲ್ಲಪನ ಹೆಸರುಗಳೊಂದಿಗೆ ಮೂರನೆಯ ಬಲ್ಲಾಳನ ವಿಧವೆಯ ಹೆಸರನ್ನು ಸೇರಿಸಬಹುದಿತ್ತು. ಆದರೆ ಈ ಶಾಸನದಲ್ಲಿ ಅವರೊಂದಿಗೆ ಅವಳ ಹೆಸರು ಉಲ್ಲೇಖಿತವಾಗದೆ ದಾನವನ್ನಿತ್ತಿನ್ನುಳಿದವರೊಡನೆ ಅವಳ ಹೆಸರು ಬರುತ್ತದೆ.

ಬಲ್ಲಪ ದಂಡನಾಯಕನನ್ನು ಕುರಿತು ಡೆರೆಟ್ಟರ ಅಭಿಪ್ರಾಯವನ್ನು ಇಲ್ಲಿ ಗಮನಿಸುವದು ಅಪ್ರಾಸಂಗಿಕವಾಗಲಾರದು. "ಆಗಸ್ಟ್ ೧೩೪೩ ರ ಶಾಸನವೊಂದರಲ್ಲಿ ವೀರಬಲ್ಲಾಳದೇವರಸನ ಮಗನಾದ ವೀರವಿರೂಪಾಕ್ಷದೇವರ ಹೆಸರಿನಲ್ಲಿ, ಅವರ ಪಟ್ಟಬಂಧೋತ್ಸವ ಪ್ರಸಂಗದಲ್ಲಿ ಬಲ್ಲಪ ದಂಡನಾಯಕನೊಡನೆ ಕೂಡಿಕೊಂಡು ರೈತರಿಗೆ ಕೆಲವೊಂದು ಸಾಲವಿನಾಯತಿಯನ್ನಿತ್ತ ಉಲ್ಲೇಖವಿದೆ... ಬಲ್ಲಪ ದಂಡನಾಯಕನು ಈ ರಾಜರನ್ನು ಸೃಷ್ಟಿಸುವಂತಹ ಸ್ಥಿತಿಯಲ್ಲಿದ್ದು ಹೊಯ್ಸಳರನ್ನು ತ್ಯಜಿಸಿ ಹರಿಹರನಿಗೆ ತನ್ನ ವಿಧೇಯತೆಯನ್ನು ವ್ಯಕ್ತಗೊಳಿಸಲು ಅವಕಾಶಕ್ಕಾಗಿ ಕಾಯುತ್ತಿದ್ದನೆಂದು ಹೇಳಲು ಹಿಂಜರಿಯಬೇಕಿಲ್ಲ. ಹೊಯ್ಸಳ ಪ್ರಜೆಗಳು ತನ್ನನ್ನು ಬೆಂಬಲಿಸುವಂತೆ ಹರಿಹರನು ಅವ್ಯಾಹತವಾಗಿ ಒತ್ತಾಯಿಸಿದ್ದನು. ಬಲ್ಲಪ ದಂಡನಾಯಕನು ಇಂತಹ ಒತ್ತಾಸೆಯನ್ನು ಕೆಲಕಾಲ ನಿಯಂತ್ರಿಸಿದ್ದನು. ೧೩೪೪ ನೆಯ ವರ್ಷದ ಮಾರ್ಚ್ ತಿಂಗಳ ಸುಮಾರಿಗೆ ಹೊಯ್ಸಳ ನಾಡಿನ ಕೆಲವೊಂದು ಪ್ರದೇಶಗಳು, ವಿಶೇಷವಾಗಿ ಉತ್ತರ ಭಾಗವು ವಿಜಯನಗರದ ಆಡಳಿತವನ್ನು ಸ್ವೀಕರಿಸಿದ್ದವು. ಪ್ರತಿಯಾಗಿ ನಾಲ್ಕನೆಯ ಬಲ್ಲಾಳನು ಸ್ವಯಂಪ್ರೇರಣೆಯಿಂದ ಹರಿಹರನ ಕೂಡ ಕಾದಾಟದಲ್ಲಿ ನಿರತನಾಗಿದ್ದಾಗ ಆತನ ಬಹುಜನ ಪ್ರಜೆಗಳು ಉಭಯತರಿಂದ ಸ್ವತಂತ್ರರಾಗಿರಲು ಬಯಸಿದ್ದರು. ಅಲ್ಲದೇ ಆ ಉದ್ದೇಶವನ್ನು ಸಾಧಿಸಲು ಅವರು ಯುದ್ಧ ಕೂಡ ಮಾಡಿದರು. ಹೊಯ್ಸಳರ ಸೇವೆಯಲ್ಲಿದ್ದ ಅನೇಕ ಅಧಿಕಾರಿಗಳು ವಿಜಯನಗರದ ಅರಸರ ಊಳಿಗಕ್ಕೆ ಸೇರಿದ್ದರಿಂದ ೧೩೪೬ ರ ಮಧ್ಯದ ಸುಮಾರಿಗೆ ಪ್ರತಿರೋಧವು ಹತ್ತಿಕ್ಕಲ್ಪಟ್ಟಿತ್ತು."[೩೨]

ಬಲ್ಲಪ ದಂಡನಾಯಕನು ೧೩೪೩ ರಲ್ಲಿ ಮೊದಲನೆಯ ಹರಿಹರನ ಅಳಿಯನಾದನೆಂದು ಫಾ. ಹೆರಾಸ್ ಅಭಿಪ್ರಾಯಪಟ್ಟಿದ್ದಾರೆ[೩೩]. ಪ್ರತಿಯಾಗಿ ಬಲ್ಲಪ ದಂಡನಾಯಕನು ೧೩೪೬ ರಲ್ಲಿ ಹರಿಹರನ ಅಳಿಯನಾದನೆಂದು ಡಾ. ಸಾಲೆತ್ತೊರೆ ಅವರು ಮನಂಬುಗುವಂತೆ ಸಾಧಿಸಿದ್ದಾರೆ.[೩೪] ೧೩೪೬ ರ ಮುಂಚಿನ ಯಾವ ಶಾಸನದಲ್ಲೂ ಬಲ್ಲಪ ದಂಡನಾಯಕನನ್ನು ಹರಿಹರನ ಅಳಿಯನೆಂದು ಉಲ್ಲೇಖಿಸಿಲ್ಲ. ಆದರೆ ೧೩೪೬ರಲ್ಲಿ ಮೂರು ಶಾಸನಗಳಲ್ಲಿ ಆತನನ್ನು ಅಳಿಯ ಬಲ್ಲಪನೆಂದು ಕರೆಯಲಾಗಿದೆ.[೩೫]

---

೩೨. The Hoysalas, 1957, J.Duncan M. Derrett, p. 173

೩೩. Haros, p. 92.

೩೪. Ind. Ant, Vol, 62, p. 3.

೩೫. E.C. X Mr. 61; MAR for 1916, p. 57; EC; Sg.1.

ಹೊಯ್ಸಳ ಮತ್ತು ಸಂಗಮ ಮನೆತನಗಳ ಸಂಬಂಧವನ್ನು ಬಲವಾಗಿ ಪ್ರತಿಪಾದಿಸುವ ಡಾ. ಸಾಲೆತ್ತೊರೆ ಮತ್ತು ಡಾ. ದೇಸಾಯಿ ಇವರು ತಮ್ಮ ಸಿದ್ಧಾಂತವನ್ನು ಕೆಳಗಿನ ಅಂಶಗಳ ಮೇಲೆ ಆಧರಿಸಿದ್ದಾರೆ:

(i) ಹರಿಹರನ ಅಳಿಯನಾದ ಬಲ್ಲಪ ದಂಡನಾಯಕನು ಸಿಂಗೆಯ ದಂಡನಾಯಕನ ಸಹೋದರನಾಗಿದ್ದು ಸಿಂಗೆಯ ದಂಡನಾಯಕನು ಮೂರನೆಯ ವೀರ ಬಲ್ಲಾಳನ ದತ್ತುಪುತ್ರನಾಗಿದ್ದನು.

(ii) ಈ ರೀತಿ ಮೂರನೆಯ ವೀರಬಲ್ಲಾಳನೊಡನೆ ಸಂಬಂಧ ಹೊಂದಿದ್ದ ಸಂಗಮರನ್ನು ಹೊಯ್ಸಳ ಸೇವೆಯಲ್ಲಿದ್ದ ಅಧಿಕಾರಿಗಳು ಮತ್ತು ಪ್ರಜೆಗಳು ಅವರ ಸಹಜ ಉತ್ತರಾಧಿಕಾರಿಗಳೆಂದು ಮನ್ನಿಸಿದರು. ಆದರೆ ಈ ಸಿದ್ಧಾಂತವು ತೀರ ಅವಾಸ್ತವವಾಗಿದೆ. ಈ ವೈವಾಹಿಕ ಸಂಬಂಧವು ೧೩೪೬ ಅಂದರೆ, ನಾಲ್ಕನೆಯ ಬಲ್ಲಾಳನು ಮರಣ ಹೊಂದಿದ ನಂತರ ಸ್ಥಾಪಿಸಲ್ಪಟ್ಟಿತೆಂಬುದನ್ನು ಇಲ್ಲಿ ಸ್ಮರಿಸಬೇಕು. ತನ್ನ ಪ್ರಭುತ್ವವನ್ನು ಭದ್ರಪಡಿಸಲು ಬಲ್ಲಪ ದಂಡನಾಯಕನ ಸಹಾಯ ಅಗತ್ಯವೆಂದೆನಿಸಿದ್ದರಿಂದ ಹರಿಹರನು ಆತನನ್ನು ಅಳಿಯನನ್ನಾಗಿ ಮಾಡಿಕೊಂಡ. ಆತನ ಸಹಾಯದಿಂದ ಹೊಯ್ಸಳ ನಾಡಿನ ಕೇಂದ್ರ ಪ್ರದೇಶದ ಮೇಲೆ ಸುಲಭವಾಗಿ ನಿಯಂತ್ರಣ ಹೊಂದಬಹುದಾಗಿತ್ತು. ಈ ವಿಷಯದ ಬೆಳಕಿನಲ್ಲಿ ಕೋಲಾರ ಭಾಗದ ಶಿಲಾಶಾಸನಗಳನ್ನು ನೋಡಬೇಕು. ೧೩೪೩ (?)ರ ಈ ಶಾಸನಗಳು ಬಲ್ಲಪ ದಂಡನಾಯಕನ ವಿಜಯವನ್ನು ಉಲ್ಲೇಖಿಸುತ್ತದೆ.[೩೬] ಈ ವಿಜಯವು ನಿಸ್ಸಂಶಯವಾಗಿ ಹರಿಹರನೊಡನೆ ಸಂಭವಿಸಿದ ಯುದ್ಧವನ್ನು ಕುರಿತಾಗಿರಬೇಕು. ಏಕೆಂದರೆ ೧೩೪೦ರಲ್ಲಿ ಆತನು ನೆಲಮಂಗಲದಂತಹ ತೀರ ದೂರದ ಪ್ರದೇಶದ ವರೆಗೂ ಏರಿಹೋಗಿದ್ದನು.[೩೭] ಹರಿಹರನು ಬಲ್ಲಪನೊಡನೆ ಏರ್ಪಡಿಸಿದ ವೈವಾಹಿಕ ಸಂಬಂಧವು ರಾಜತಾಂತ್ರಿಕ ನೈಪುಣ್ಯದ ಕೃತಿಯಾಗಿದ್ದು, ಬಲ್ಲಪ ದಂಡನಾಯಕನನ್ನು ತನ್ನೆಡೆಗೆ ಒಲಿಸಿಕೊಂಡು, ಹೊಯ್ಸಳ ನಾಡಿನ ಮಧ್ಯಭಾಗದಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸುವದೇ ಆತನ ಉದ್ದೇಶವಾಗಿತ್ತು. ೧೩೪೬ರಲ್ಲಿ ನಾಲ್ಕನೆಯ ವೀರಬಲ್ಲಾಳನ ಮರಣಾನಂತರ ಹೊಯ್ಸಳ ಗದ್ದುಗೆಗೆ ಉತ್ತರಾಧಿಕಾರಿಗಳಿರಲಿಲ್ಲವೆಂಬುದನ್ನು ಅರಿತಿದ್ದ ಬಲ್ಲಪ ದಂಡನಾಯಕನು ಹರಿಹರನ ಪಕ್ಷವನ್ನು ಸೇರಿದನು. ಆದುದರಿಂದ ೧೩೪೬ರ ಶೃಂಗೇರಿ ಶಾಸನವು ಬಲ್ಲಪ ದಂಡನಾಯಕನನ್ನು "ಅಳಿಯ" ಎಂದು ಅತ್ಯಂತ ಮಹತ್ವವನ್ನಿತ್ತು ಆತನನ್ನು ಉಲ್ಲೇಖಿಸಿದೆ.[೩೮] ಬಲ್ಲಪ ದಂಡನಾಯಕನೊಡನೆ ವೈವಾಹಿಕ ಸಂಬಂಧವನ್ನು ಹೊಂದುವಲ್ಲಿ ಹರಿಹರನಿಗೆ ಇನ್ನೊಂದು ಉದ್ದೇಶವಿತ್ತು. ಅದು ಉತ್ತರದಲ್ಲಿ ಸ್ಥಾಪಿತವಾದ ಬಹಮನಿರಾಜ್ಯ.

---

೩೬. E. C. X. Kl. 54;

೩೭. E.C. IX Nl, 19

೩೮. E.C. VI.Sg. 1.

ಸಂಗಮ ಹಾಗೂ ಹೊಯ್ಸಳ ಅಧಿಕಾರಿಗಳಲ್ಲಿ ಆಗಾಗ ಸಂಭವಿಸುತ್ತಿದ್ದ ಕಾದಾಟಗಳು ಸಂಗಮರ ಅಭಿವೃದ್ಧಿ ಮಾರ್ಗದಲ್ಲಿನ ದೊಡ್ಡ ಆತಂಕವಾಗಬಹುದಿತ್ತು. ಮತ್ತು ರಾಜ್ಯದಲ್ಲಿ ರಾಜಕೀಯ ಶಿಥಿಲತೆಯನ್ನುಂಟು ಮಾಡಬಹುದಿತ್ತು. ಈ ರಾಜಕೀಯ ಶಿಥಿಲತೆಯ ದುರುಪಯೋಗ ಪಡೆದು ಬಹಮನಿ ಅರಸರು ಕೃಷ್ಣಾ ನದಿಯ ದಕ್ಷಿಣಕ್ಕೆ ತಮ್ಮ ರಾಜ್ಯವನ್ನು ವಿಸ್ತರಿಸುವ ಸಂಭವವಿತ್ತು.

ಹೊಯ್ಸಳರ ಸೇವೆಯಲ್ಲಿದ್ದ ಅಧಿಕಾರಿಗಳು ಮತ್ತು ದಂಡನಾಯಕರು ಹೊಯ್ಸಳರ ಪತನಾನಂತರ, ಸಂಗಮರ ಸೇವೆಯಲ್ಲಿ ಸೇರಿಕೊಂಡರು. ಏಕೆಂದರೆ ಸಂಗಮರನ್ನು ಅವರು ಹೊಯ್ಸಳರ ಸಹಜ ಉತ್ತರಾಧಿಕಾರಿಗಳೆಂದು ತಿಳಿದಿದ್ದರು ಎಂಬುದಾಗಿ ಫಾ. ಹೆರಾಸ್[೩೯], ಡಾ. ಸಾಲೆತ್ತೊರೆ[೪೦] ಹಾಗೂ ಡಾ. ದೇಸಾಯಿಯವರು[೪೧] ಅಭಿಪ್ರಾಯಪಟ್ಟಿದ್ದಾರೆ. ಆದರೆ ಸಾಮಂತರು ಹಾಗೂ ದಂಡನಾಯಕರು ಬೇರೆ ಬೇರೆ ರಾಜಮನೆತನಗಳ ಸೇವೆಯಲ್ಲಿದ್ದ ಅನೇಕ ಉದಾಹರಣೆಗಳು ಕರ್ನಾಟಕದಲ್ಲಿ ಮಾತ್ರವಲ್ಲ ಭಾರತದ ಇತಿಹಾಸದಲ್ಲೂ ಸಿಕ್ಕುತ್ತವೆ. ಆದುದರಿಂದ ಪಂಡಿತರ ಈ ಅಭಿಪ್ರಾಯಕ್ಕೆ ವಿಶೇಷ ಮಹತ್ವ ಕೊಡಬೇಕಾದ ಅಗತ್ಯವಿಲ್ಲ.

ಮೇಲಿನ ಅಂಶಗಳ ವಿಶ್ಲೇಷಣೆಯಿಂದ ಕಂಡುಬರುವ ಒಂದು ವಿಷಯವೆಂದರೆ. ಹೊಯ್ಸಳ ಹಾಗೂ ಸಂಗಮ ಅರಸರ ನಡುವೆ ಯಾವಾಗಲೂ ಸಾಮರಸ್ಯವಿತ್ತು ಬಾಂಧವ್ಯವಿತ್ತು ಎಂದು ಮುಂತಾಗಿ ನಿರ್ಣಯಿಸುವದು ಸಾಧ್ಯವಿಲ್ಲ. ತೋರಿಕೆಯ ಬಾಂಧವ್ಯವು ಹರಿಹರನ ಸಮಯಸಾಧಕತೆಯನ್ನು ತೋರಿಸಿಕೊಡುತ್ತದಲ್ಲದೆ. ಅವರ ನಡುವಿನ ಸಾಮರಸ್ಯವನ್ನಲ್ಲ.

---

೩೯. Heras, pp,126–127,

೪೦. Vijayanagara Sexcentenaory Commemoration, p.157,

೪೧. A History of Karnrtaka p, 320.

ಬಿಟ್ಟಿಯ ಬೆತ್ತ

ಎಚ್. ವಿ. ನಾಗೇಶ್

ಇದೊಂದು ಸಂಶೋಧನಾತ್ಮಕ ಪ್ರಬಂಧವಲ್ಲ. ಅಂಥ ಪ್ರಬಂಧಗಳು ಬರಲಿ ಎಂದು ಹಾರೈಸಿ ಬರೆದ ನಿಬಂಧ.

ಬಿಟ್ಟಿ–ಜೀತಗಾರಿ ಬೇರೆ ಬೇರೆ ಹೆಸರುಗಳನ್ನೂ ಸ್ವರೂಪಗಳನ್ನೂ ಹೊಂದಿ ಭಾರತದ ಬೇರೆ ಬೇರೆ ಭಾಗಗಳಲ್ಲಿ ಬಹಳ ಕಾಲದಿಂದಲೂ ಇದೆ. ಮೂಲಾರ್ಥದಲ್ಲಿ ಆಳುವ ರಾಜನಿಗಾಗಿ ಪುಕ್ಕಟೆಯಾಗಿ ದುಡಿಯುವುದು ಎಂದಿತ್ತು. ಮನುಸ್ಮೃತಿಯಲ್ಲಿ ತೆರಿಗೆ ಕೊಡಲಾಗದ ಕೆಲವರಿಂದ ತೆರಿಗೆಯ ಬದಲಾಗಿ ಬಿಟ್ಟಿಕೆಲಸ ಮಾಡಿಸಿಕೊಳ್ಳುವುದನ್ನು ಹೇಳಿದೆ. ಅರಸನಾದವನು ಕಾರುಕರೆನ್ನಿಸಿಕೊಳ್ಳುವ ಅಡಿಗೆಯವರು ಹಾಗೂ ಅಗಸರಿಂದ, ಶಿಲ್ಪಿ, ಕಮ್ಮಾರ ಮೊದಲಾದ ಕೈಗಾರಿಕೆಯವರಿಂದ, ಹೊರೆ ಹೊರುವುದೇ ಮೊದಲಾದ ದೇಹಶ್ರಮದ ಕೆಲಸ ಮಾಡುವ ಶೂದ್ರರಿಂದ ಪ್ರತಿ ತಿಂಗಳಲ್ಲಿ ಒಂದೊಂದು ದಿನ ಬಿಟ್ಟಿ ಕೆಲಸಮಾಡಿಸಿಕೊಳ್ಳಬೇಕೆಂದಿದೆ (ಅಧ್ಯಾಯ ೭, ಶ್ಲೋಕ ೧೩೮). ಈ ಬಿಟ್ಟಿ ಕೆಲಸದ ಪ್ರಯೋಜನವನ್ನು ಅರಸನಾದವನು ತೆಗೆದುಕೊಂಡು ತೀರುತ್ತಾನೆಂದು ಹೇಳಲು ಸಾಧ್ಯವಿಲ್ಲ. ಅಗತ್ಯವಾದಾಗ ಮಾತ್ರ ಆ ಸೇವೆಯನ್ನು ಅರಸನು ಪಡೆಯುತ್ತಿರಬೇಕು. ನಮ್ಮ ಮಾಂಡಲಿಕರೂ, ತುಂಡರಸರೂ, ಪಾಳೆಯಗಾರರೂ ಬಿಟ್ಟಿ ಪಡೆಯುತ್ತಿದ್ದರೆಂದು ತಿಳಿಯುತ್ತದೆ (ಅಲ್ಟೇಕರ್, ಸಾಲೆತ್ತೂರ್ ಇ.).

ಕಾಲಕ್ರಮೇಣ ಬಿಟ್ಟಿಯ ಅರ್ಥ ಸಾಕಷ್ಟು ಬದಲಾದಂತೆ ಕಾಣುತ್ತದೆ. ರಾಜನಿಗೆ ಕಾರುಕರೂ, ಕೈಗಾರಿಕೆಯವರೂ, ಶೂದ್ರರೂ ಕೊಡಬೇಕಾಗಿದ್ದ ಬಿಟ್ಟಿ ಸೇವೆಯನ್ನು ಊರಿನ ಗಾವುಂಡನಿಗೆ ಸಲ್ಲಿಸಬೇಕಾಯಿತು. ತೆರಿಗೆಯ ಬದಲು ಸಂದಾಯ ಮಾಡುವ ಸೇವೆಯಲ್ಲದೆ ಅದು ಮಾನ ಅಂತಸ್ತುಗಳನ್ನು ಹೆಚ್ಚಿಸುವ ಸಾಧನವೂ ಆದಂತೆ ಕಾಣುತ್ತದೆ.

ಭೂಮಿಯ ಒಡೆತನ ರಾಜನಿಂದ ಭೂಮಾಲಿಕನಿಗೆ ಬರುತ್ತಿದ್ದಂತೆ ಹಾಗೂ ಬ್ರಿಟಿಷ್ ಆಡಳಿತೆಯ ಕಾಲದಲ್ಲಿ ಬಿಟ್ಟಿಯ ಸಂಪ್ರದಾಯದಲ್ಲಿ ಮತ್ತಷ್ಟು ಮಾರ್ಪಾಟುಗಳಾದವು. ಭೂಮಾಲಿಕರು ತಮ್ಮ ಭೂಮಿಯಲ್ಲಿ ನೆಲೆಸಿದ ಒಕ್ಕಲುಗಳಿಂದ ಬಿಟ್ಟಿಯನ್ನು ಪಡೆಯುತ್ತಿದ್ದರು. ಸಾಗುವಳಿ ಮಾಡುವ ರೈತ ಕುಟುಂಬಗಳು ವರ್ಷಕ್ಕೆ ಇಂತಿಷ್ಟು ಆಳು (ಒಬ್ಬನು–ಳು ಒಂದು ದಿನ ಮಾಡುವ ಕೆಲಸ) ಎಂದು ಸಂಪ್ರದಾಯದಂತೆ ತಮ್ಮ ಧಣಿಗಳ (ಒಡೆಯರ) ಬಿಟ್ಟಿ ಮಾಡುತ್ತಿದ್ದರು. ಕನ್ನಡ ಜಿಲ್ಲೆ

ಗಳಲ್ಲಿ ಬ್ರಾಹ್ಮಣರು, ಕೊಂಕಣಿಗರು ಹಾಗೂ ಮೇಲ್ಜಾತಿಯ ಕೆಲವು ಜನರು ಬಿಟ್ಟಿ ಮಾಡಬೇಕಿದ್ದಿಲ್ಲ. ಅವರು ಮೇಲ್ಜಾತಿಗೆ ಸೇರಿದವರಾದ್ದರಿಂದಲೂ, ಕೃಷಿಯೇತರ ಉದ್ಯೋಗಗಳಲ್ಲಿ ತೊಡಗಿದವರಾದ್ದರಿಂದಲೂ, ಅವರಿಂದ ದೇಹಶ್ರಮದ ಕೆಲಸ ಮಾಡಿಸುವುದು ತಪ್ಪು ಎಂಬ ಭಾವನೆಯಿದ್ದುದರಿಂದಲೂ ಈ ರಿಯಾಯತಿ ಸಿಕ್ಕಿರಬೇಕು. ಆದರೂ ಹೆಚ್ಚಿನ ಸಂದರ್ಭಗಳಲ್ಲಿ ಇವರು ಬಿಟ್ಟಿಯ ಬದಲಿಗೆ ನಗದು ರೂಪದಲ್ಲಿ ಹಣ ಕೊಡಬೇಕೆಂಬ ನಿರ್ಬಂಧನೆಯೂ ಪ್ರಚಲಿತವಿತ್ತು. ಭೂಬಾಡಿಗೆ ಅಥವಾ ಕಂದಾಯದೊಡನೆ "ಬಿಟ್ಟಿ ಬಾಬ್ತು" ಎಂದು ಒಂದಿಷ್ಟು ಹಣ ಸಂದಾಯವಾಗುತ್ತಿತ್ತು.

ಬಿಟ್ಟಿಯ ಪ್ರಮಾಣ ಸಂಪ್ರದಾಯದಿಂದ ನಿರ್ಧಾರವಾಗುತ್ತಿತ್ತು. ಆಗೊಮ್ಮೆ ಈಗೊಮ್ಮೆ ಇದರ ಪುನರ್ವಿಮರ್ಶೆ ಆಗುತ್ತಿರಬೇಕು. ಏನಿದ್ದರೂ ಜನರ ನೆನಪಿನಲ್ಲಿ ಹಾಗೂ ಬಾಯಿಮಾತಿನಲ್ಲಿ ನಿಶ್ಚಿತವಿರುತ್ತಿತ್ತು. ಮುಂದೆ ಬ್ರಿಟಿಷ್ ಕಾಲದಲ್ಲಿ ಇದನ್ನು ಬರೆದಿಡುವ ಪದ್ಧತಿ ಬಂತು. ಎದುರ್ನುಡಿ (ಗೇಣಿ ಪತ್ರ) ಯಲ್ಲಿ ಬಿಟ್ಟಿಯ ಪ್ರಮಾಣ ನಮೂದಿಸುತ್ತಿದ್ದರು. ವರ್ಷದಲ್ಲಿ ಇಂತಿಷ್ಟು ಹೂಟೆಯಾಳು (ಉಳುವವನು) ಅಥವಾ ಮೇಲಾಳು (ಬೇರೆ ಕೆಲಸಗಳನ್ನು ಮಾಡುವವನು) ಪ್ರತಿ ಮನೆಯಿಂದ ಬಿಟ್ಟಿ ಕೆಲಸಕ್ಕೆ ಬರಬೇಕೆಂದು ಬರೆಯಿಸುತ್ತಿದ್ದರು. ಮಾನವಶ್ರಮ ಮಾತ್ರವಲ್ಲ ಪ್ರಾಣಿಶ್ರಮವೂ ಸೇರುತ್ತಿತ್ತು. ಒಂದೋ ಎರಡೋ ಅಥವಾ ಅದಕ್ಕಿಂತ ಹೆಚ್ಚೋ ಜೋಡುಗಳು (ಎರಡು ಎತ್ತು ಅಥವಾ ಕೋಣಗಳು) ದುಡಿಯಲು ಬರುತ್ತಿದ್ದವು. ಹೆಚ್ಚಾಗಿ ನೇಟಿಯ (ಭತ್ತದ ಸಸಿ ನೆಡುವ, ನೆಟ್ಟಿಯ) ಕಾಲದಲ್ಲಿ ಹಾಗೂ ಅನಂತರದ ಕೊಯ್ಲಿನ (ಬೆಳೆ ಕೊಯ್ಯುವ) ಕಾಲದಲ್ಲಿ ಬಿಟ್ಟಿಯ ಉಪಯೋಗವಾಗುತ್ತಿತ್ತು. ಇಂಥ ಸಂದರ್ಭಗಳಲ್ಲಿ ಧಣಿ ಹೇಳಿದ ದಿನ, ಹೇಳಿದಷ್ಟು ಸಂಖ್ಯೆಯಲ್ಲಿ ಬಿಟ್ಟಿ ಸಲ್ಲಿಸಬೇಕಾಗುತ್ತಿತ್ತು. ಒಕ್ಕಲುಗಳು ತಮ್ಮ ಮನೆಯ ಕೆಲಸದ ನೆಪಹೇಳಿ ತಪ್ಪಿಸಿಕೊಳ್ಳುವಂತಿಲ್ಲ. ಹಾಗೆ ಮಾಡಿದರೆ ಸಂಪ್ರದಾಯದಂತೆ ದಂಡ ತೆರಬೇಕಾಗುತ್ತಿತ್ತು.

ಬಿಟ್ಟಿ ಕೆಲಸ ಮಾಡುವ ಆಳಿಗೆ ಉಳಿದ ಕೃಷಿ ಕೆಲಸಗಾರನಿಗೆ ಅಥವಾ ಕೂಲಿಯಾಳಿಗೆ ಸಿಗುವಂತೆ ನಗದು ಹಣ ಅಥವಾ ಕಾಳಿನರೂಪದ ವೇತನವಿಲ್ಲ. ಕೆಲವು ಧಣಿಗಳು ಮಧ್ಯಾಹ್ನದ ಊಟ ಕೊಟ್ಟರುಂಟು; ಇಲ್ಲದಿದ್ದರೆ ಇಲ್ಲ. ಮತ್ತೆ ಕೆಲವರು 'ಕಾಫಿ ಕಾಸೆಂ'ದು ದಿನದ ಕೆಲಸ ಮುಗಿದ ಮೇಲೆ ಆಣೆ ಎರಡಾಣೆ ಕೊಡುತ್ತಿದ್ದುದುಂಟು. ಕೇರಳದ ಕರಾವಳಿಯ ಕಡೆ 'ಕಳ್ಳಿನ ಕಾಸು' (ಸೆರೆ ಕುಡಿಯಲು ಹಣ) ಸಿಗುತ್ತಿತ್ತಂತೆ. ಒಟ್ಟಿನಲ್ಲಿ ಈ ಅಲ್ಪ ಸಂಭಾವನೆಗಳನ್ನು ಬಿಟ್ಟರೆ ಬಿಟ್ಟಿಯೆಂದರೆ ಬೆಳಗಿನ ಜಾವದಿಂದ ಸಂಜೆಗತ್ತಲಿನವರೆಗೆ ಕೊಡುವ ಕಡ್ಡಾಯದ ಪುಕ್ಕಟೆ ದುಡಿಮೆ.

ಬಿಟ್ಟಿಯೊಡನೆ ತಳಕು ಹಾಕಿಕೊಂಡ ಒಂದೆರಡು ಸಂಪ್ರದಾಯಗಳೂ ಇವೆ. ಅವುಗಳಲ್ಲೊಂದು 'ಧಣಿ ಮರ್ಯಾದೆ'. ಕೃಷಿ ಮಾಡುವವರು ಅಡಿಕೆ, ತೆಂಗಿನಕಾಯಿ, ತರಕಾರಿ, ಕೋಳಿ, ಕಸಬರಿಗೆ ಮುಂತಾದ ಉತ್ಪನ್ನಗಳನ್ನು ನಿರ್ದಿಷ್ಟ ಪ್ರಮಾಣದಲ್ಲಿ

ವರ್ಷಕ್ಕೊಮ್ಮೆ ಧಣಿಗೆ ಸಲ್ಲಿಸಬೇಕಾಗುತ್ತದೆ. ಶ್ರಮರೂಪದ ಸಂದಾಯವನ್ನು ಮಾತ್ರ ಬಿಟ್ಟಿ ಎಂದು ಅರ್ಥಮಾಡಿದರೆ ಧಣಿ ಮರ್ಯಾದೆಯು ಬಿಟ್ಟಿಯಲ್ಲ, ಆದರೆ ಒಕ್ಕಲುಗಳ ದೃಷ್ಟಿಯಲ್ಲಿ ತಮ್ಮ ದೈಹಿಕ ಶ್ರಮವಿರಲಿ, ತಮ್ಮ ಪ್ರಾಣಿಗಳ ಶ್ರಮವಿರಲಿ ಅಥವಾ ಧಣಿಮರ್ಯಾದೆಯೇ ಇರಲಿ, ಇವೆಲ್ಲ ಬಿಟ್ಟಿಯೇ ಸರಿ. ' ಹೊಸತಿನ ಹೊರೆ ' ಎಂಬ ಇನ್ನೊಂದು ಸಂಪ್ರದಾಯವಿದೆ. ನವರಾತ್ರಿಯ ಸಂದರ್ಭದಲ್ಲಿ ಒಕ್ಕಲು ಧಣಿಗೆ ಹಸಿರುವಾಣಿಯ (ತರಕಾರಿ) ಹೊರೆಯೊಂದನ್ನು ಸಲ್ಲಿಸಬೇಕು. ಧಣಿಮರ್ಯಾದೆ ಹಾಗೂ ಹೊಸತಿನ ಹೊರೆಯನ್ನು ಸಲ್ಲಿಸಲಾಗದವರು ಹಣದ ರೂಪದಲ್ಲಿ ಕೊಡುವುದಿತ್ತು. ಅದನ್ನು ಎದರ್ನುಡಿಯಲ್ಲಿ ಕೂಡ ಕಾಣಿಸಲಾಗುತ್ತಿತ್ತು. ಇವೆಲ್ಲ ತೆರಿಗೆ ಅಥವಾ ಗೇಣಿ ಸಂದಾಯದ ಬೇರೆ ಬೇರೆ ಮಾರ್ಗಗಳೆಂಬುದು ನಿಜವಾದರೂ ಇವು ಹಣದ ಲೆಕ್ಕಾಚಾರದಿಂದ ಮಾತ್ರವೇ ಮುಖ್ಯವಲ್ಲ. ಅವು ಧಣಿಯ 'ಮರ್ಯಾದೆ' ಯನ್ನು ಹೆಚ್ಚಿಸುವಂಥವು. ತನ್ನ ಭೂಮಿಯನ್ನು ಉಳುವ ಒಕ್ಕಲುಗಳ ಮೇಲೆ ಹಾಗೂ ಕೃಷಿಯೇತರ ಕುಟುಂಬಗಳ ಮೇಲೆ ಅಧಿಕಾರವನ್ನು ಸಾರುವ ಸಂಕೇತಗಳು.

ಇಂದು ಈ ಪದ್ಧತಿ ನಿಧಾನವಾಗಿ ಮಾಯವಾಗುತ್ತಿದೆ. ನಮ್ಮ ರಾಜ್ಯದ ಕರಾವಳಿಯ ಕೆಲ ತಾಲೂಕುಗಳಲ್ಲಿ ಮಲೆನಾಡಿನ ಒಂದಿಷ್ಟು ಭಾಗದಲ್ಲಿ ಹಾಗೂ ಮಲಬಾರಿನ ಸಾಂಪ್ರದಾಯಿಕ ಹಳ್ಳಿಗಳಲ್ಲಿ ಮಾತ್ರ ಅದಿನ್ನೂ ಜೀವಂತವಾಗಿದೆ. ಬಿಟ್ಟಿಯನ್ನು ವಿರೋಧಿಸುವ ಒಕ್ಕಲುಗಳ ಸಂಖ್ಯೆ ಹೆಚ್ಚಿದೆ. ಕೇರಳದಲ್ಲೂ ನಮ್ಮ ರಾಜ್ಯದ ಹೆಚ್ಚಿನ ಕಡೆಗಳಲ್ಲೂ ಅವರು ಸಂಘಟಿತರಾಗಿದ್ದಾರೆ. ಒಂದೆ ಧಣಿಗಳ ಹೆದರಿಕೆಯಿಂದಲೂ ಮೇಲ್ಜಾತಿಯವರೆಂಬ ಗೌರವದಿಂದಲೂ, ಶ್ರಮರೂಪವಲ್ಲಿ ಒಂದಿಷ್ಟು ಕಂದಾಯ ಸಲ್ಲಿಸುವುದು ಅನುಕೂಲವೆನಿಸಿದ್ದರಿಂದಲೂ ಒಕ್ಕಲುಗಳು ಪ್ರತಿರೋಧವಿಲ್ಲದೆ ಬಿಟ್ಟಿಯನ್ನು ಒಪ್ಪುತ್ತಿದ್ದರು. ಬಿಟ್ಟಿಯಿಂದಾಗಿ ಕೊಡಬೇಕಾದ ಗೇಣಿ ಅತ್ಯಂತ ಕಡಿಮೆ ಇರುತ್ತಿತ್ತು. ಅಲ್ಲದೆ ಒಕ್ಕಲುಗಳ ಸಂಕಟ ಕಾಲವಲ್ಲಿ ಧಣಿಯ ಸಹಾಯ ಸದಾ ಇರುತ್ತಿದ್ದುದರಿಂದ ಬಿಟ್ಟಿ ಸಹ್ಯವೆನಿಸುತ್ತಿತ್ತು. ಆದರೆ ಬದಲಾಯಿಸಿದ ಸನ್ನಿವೇಶವಲ್ಲಿ ಬಿಟ್ಟಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದು ಕಷ್ಟದ ಮಾತು. ಅಲ್ಲಲ್ಲಿ ಉಳಿದುಕೊಂಡಿದ್ದರೆ ಅದು ಆ ಧಣಿಗಳ ಹಣದ ದರ್ಪವಿರಬೇಕು ಅಥವಾ ಹೊಸದಾಗಿ ಸಿಕ್ಕಿದ ರಾಜಕೀಯ ಅಧಿಕಾರದ ಕಾರಣದಿಂದ ಇರಬೇಕು ಅಥವಾ ಒಮ್ಮೊಮ್ಮೆ ಪ್ರಜಾನುರಾಗದ ಬಲದಿಂದ ಸಾಧ್ಯವಾಗಿರಬೇಕು.

ಒಂದು ಸುಂದರ ಉದಾಹರಣೆಯಿಂದ **ಬಿಟ್ಟಿ** ಪದ್ಧತಿಯ ಕಾರ್ಯ, ಶಕ್ತಿಗಳ ಪರಿಚಯ ಮಾಡಿಕೊಳ್ಳೋಣ :

'ಕೊ....' ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿಗೆ ಸೇರಿದ ಒಂದು ಹಳ್ಳಿ. ಈ ಇಡೀ ಹಳ್ಳಿ ನಾಡವ ಅಥವಾ ಬಂಟರೆನ್ನಿಸಿಕೊಳ್ಳುವ ಜಾತಿಯ ಪ್ರಸಿದ್ಧ ಕುಟುಂಬವೊಂದಕ್ಕೆ ಸೇರಿದ್ದು. ಇಲ್ಲಿ ಹತ್ತಿರ ಹತ್ತಿರ ಇರುವ ಎಂಟು 'ಬೆಟ್ಟು' (ಹಳ್ಳಿಯ ವಿಭಾಗ)ಗಳಿದ್ದು ಸುಮಾರು ನೂರೈವತ್ತು ಒಕ್ಕಲುಗಳ ಕುಟುಂಬಗಳಿವೆ. ಪ್ರತಿ

ಕುಟುಂಬವೂ ನೆಟ್ಟಿ ಹಾಗೂ ಕೊಯ್ಲಿನ ಕಾಲದಲ್ಲಿ ಧಣಿಗಳಿಗೆ ಸಂಪ್ರದಾಯದ ಪ್ರಕಾರ ಬಿಟ್ಟಿಮಾಡುತ್ತದೆ. ಬಿಟ್ಟಿಯ ಕರೆಬಂದಾಗ ಆಳುಗಳು ಎತ್ತು ಅಥವಾ ಕೋಣಗಳ ಜೋಡುಗಳ ಸಹಿತ ಹೋಗುತ್ತಾರೆ. ಧಣಿಗಳ ಅಜ್ಞೆ ಎಂದರೆ ರಾಜಾಜ್ಞೆ. ಮೀರುವ ವರಿಗೆ ಧೈರ್ಯಬೇಕು. ನೆಟ್ಟಿಗೆ ನಾಲ್ಕಾರು ದಿನಗಳಿದ್ದಾಗ ಧಣಿಗಳ ಮನೆಯ ಊಳಿಗದವನು (ನಂಬಿಗಸ್ಥ ಆಳು; ಧಣಿಯ ನಂತರ ಮನೆಯ ಕಾರಭಾರವನ್ನು ನಡೆಸುವ ಪ್ರಮುಖ ವ್ಯಕ್ತಿ–ಸ್ವಜಾತಿಯವನು ಅಥವಾ ಕೆಳಜಾತಿಯವನು) ಒಂದು ಬಣ್ಣದ ಜಲ್ಲನ್ನು (ಬೆತ್ತ, ಕೈಯಲ್ಲಿ ಹಿಡಿಯುವ ಕೋಲು) ಹಿಡಿದು ಹೇಳಿಕೆಗೆಂದು ಮೊದಲನೆಯ 'ಬೆಟ್ಟಿ'ಗೆ ಹೋಗುತ್ತಾನೆ. ಅಲ್ಲಿನ ಒಂದು ಮನೆಗೆ ಹೋಗಿ ಇಂತಿಷ್ಟು ಬಿಟ್ಟಿ ಆಳು ಬೇಕಾಗಿವೆಯೆಂದೂ ಬೇರೆ ಇಂತಿಷ್ಟು ಮನೆಗಳಿಗೂ ಈ ಸುದ್ದಿ ಮುಟ್ಟಿಸಬೇಕೆಂದೂ ಹೇಳಿ ಆ ಬೆತ್ತವನ್ನು ಅಲ್ಲಿಯೇ ಬಿಟ್ಟು ಮನೆಗೆ ಮರಳುತ್ತಾನೆ. ಆ ಒಕ್ಕಲಿಗರು ಧಣಿಯ ಬಿಟ್ಟಿ ಸಂದೇಶವನ್ನು ಸಾರುವ ಹಾಗೂ ಅಧಿಕಾರವನ್ನು ಪ್ರತಿನಿಧಿಸುವ ಆ ಬೆತ್ತವನ್ನು ಮುಂದಿನ ಕುಟುಂಬಕ್ಕೆ ಒಯ್ದು ಅಲ್ಲಿಯೇ ಬಿಟ್ಟು ಬರುತ್ತಾರೆ. ಅದು ಅಲ್ಲಿಂದ ಮತ್ತೊಂದು ಒಕ್ಕಲಿಗೆ ಮುಟ್ಟುತ್ತದೆ; ನಂತರ ಮತ್ತೊಂದಕ್ಕೆ. ಹೀಗೆ ಊಳಿಗದವನು ಹೇಳಿದಷ್ಟು ಜನರು ಹೇಳಿದ ದಿನಕ್ಕೆ ಸರಿಯಾಗಿ ನೆಟ್ಟಿಯ ಕೆಲಸಕ್ಕೆ ಹಾಜರಿರುತ್ತಾರೆ.

ಮಾರನೆಯ ದಿನ ಅಥವಾ ಆ ನಂತರದ ದಿನಗಳ ನೆಟ್ಟಿಕೆಲಸಕ್ಕೆ ಬೇಕಾದ ಜನರನ್ನೂ ಹೆಚ್ಚಿನ ಕಷ್ಟವಿಲ್ಲದೆ ಕರೆಯಬಹುದು. ಬಿಟ್ಟಿಯ ಬೆತ್ತವೇ ಆ ಕೆಲಸವನ್ನು ಮಾಡುತ್ತದೆ. ಒಂದು ಬೆಟ್ಟಿನಿಂದ ಇನ್ನೊಂದು ಬೆಟ್ಟಿಗೆ ಆ ಬಣ್ಣದ ಜಲ್ಲಿನ ಸಂದೇಶ ಹೋಗುತ್ತದೆ. ಸಂಪ್ರದಾಯದಂತೆ ಒಕ್ಕಲುಗಳು ಬಿಟ್ಟಿ ದುಡಿಯಲು ಬರುತ್ತಾರೆ. ಎಲ್ಲ ಬೆಟ್ಟುಗಳ ತಿರುಗಾಟ ಮುಗಿಸಿದ ನಂತರ ಒಂದು ವೃತ್ತ ಪೂರ್ತಿಯಾದಂತೆ ಆಯಿತು. ಆಗ ಆ ಬೆತ್ತ ಧಣಿಗಳ ಮನೆಗೆ ಬಂದು ತಲುಪುತ್ತದೆ. ಅನೇಕಾನೇಕ ತಲೆಮಾರುಗಳಿಂದ ಆ ಮನೆಯಲ್ಲಿ ಆಳುತ್ತಿದ್ದ ಬಣ್ಣದ ಬೆತ್ತ ೧೯೭೨ರ ಸುಮಾರಿಗೆ ನಿಂತಿತಂತೆ. ಬಿಟ್ಟಿಯ ಪ್ರಭಾವ ಕುಗ್ಗಿದುದರ ಸಂಕೇತವಿರಬೇಕು! ಹೊಸ ಭೂಕಾಯ್ದೆಗಳು, ಸಾಮಾಜಿಕ ಶಾಸನಗಳು, ಬೆಳೆಯುತ್ತಿರುವ ವಿದ್ಯಾಭ್ಯಾಸ, ಸಾಂಪ್ರದಾಯಿಕ ಕೆಳಜಾತಿಯವರಲ್ಲಿ ಈಗ ಬಂದ ಜಾಗೃತಿ, ಆಧುನಿಕತೆಯ ಅನೇಕ ಪ್ರಭಾವಗಳು–ಇವುಗಳಿಂದಾಗಿ ಬಿಟ್ಟಿಯ ಬೆತ್ತ ಹಿಂದಿನಂತೆ ಈಗ ತಿರುಗುವುದಿಲ್ಲ. ಆದರೆ ಹಿಂದೆ ಅದು ತಿರುಗುತ್ತಿದ್ದಾಗ ಮಾಡಿದ ಕಾರ್ಯ ಹಾಗೂ ತೋರುತ್ತಿದ್ದ ದರ್ಪವೇನೂ ಸುಳ್ಳಲ್ಲ!

ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ

ಕ್ರಿ.ಶ. ೧೨೦೪

ಆರ್. ಎನ್. ಗುರವ

ಪಾರ್ಶ್ವನಾಥ ಪುರಾಣವೆಂಬ ಚಂಪೂಕಾವ್ಯವನ್ನು ಬರೆದ ಕವಿಕುಳತಿಳಕ ಪಾರ್ಶ್ವ ಪಂಡಿತನು ಪ್ರಸ್ತುತ ಕಲ್ಹೊಳೆಯ ಶಾಸನವನ್ನು ರಚಿಸಿರುತ್ತಾನೆ. ಶಾಸನವು ಚಂಪೂ ಪರಂಪರೆಯಲ್ಲಿ ಸಾಗಿದೆ. ಸಂಸ್ಕೃತ ಪ್ರಚುರತೆ ಅಲಂಕಾರನೈಪುಣ್ಯಗಳಿಂದ ಕೂಡಿದ ಈ ಶಾಸನ ರಸಮಯವಾಗಿದೆ. ಸುಮಾರು ನೂರು ವರುಷಗಳ ಹಿಂದೆ ಡಾ. ಫ್ಲೀಟ್ ಅವರು ಈ ಶಾಸನವನ್ನು JBBRAS X ಸಂಪುಟದಲ್ಲಿ ಪ್ರಕಟಿಸಿದುದಾಗಿ ತಿಳಿದು ಬರುತ್ತದೆ. ಆದರೆ ಈ ಸಂಪುಟ ಈಗ ಸುಲಭಲಭ್ಯವಿಲ್ಲದ ಕಾರಣ, ಇದು ಕನ್ನಡ ಒಬ್ಬ ಸುಪ್ರಸಿದ್ಧ ಕವಿಗೆ ಸಂಬಂಧಿಸಿದ ಕಾರಣ, ಮೂಲ ಶಾಸನವನ್ನೇ ಓದಿ ಇಲ್ಲಿ ಪ್ರಕಟಿಸಲಾಗಿದೆ.

ಕಲ್ಹೊಳೆ ಈಗಿನ ಕಲ್ಹೋಳಿ. ಅದು ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನಲ್ಲಿಯ ಒಂದು ಗ್ರಾಮ. ಗೋಕಾಕದಿಂದ ಈಶಾನ್ಯಕ್ಕೆ ಸುಮಾರು ಎಂಟು ಮೈಲು ಅಂತರದಲ್ಲಿ ಇದೆ. ಪ್ರಸ್ತುತ ಶಾಸನವನ್ನು ಪಾರ್ಶ್ವನಾಥ ಬಸದಿಯ ಗೋಡೆಯಲ್ಲಿ ಕಟ್ಟಲಾಗಿದ. ಒಳ್ಳೆ ಸುಸ್ಥಿತಿಯಲ್ಲಿದೆ. ಅಕ್ಷರಗಳು ಚನ್ನಾಗಿ ಕೆತ್ತಿದ್ದು ಅಂದವಾಗಿರು–ತ್ತವೆ. **ಶಾಸನದ ಭಾಷೆ ಮತ್ತು** ಲಿಪಿ ಕನ್ನಡ. ಆದರೆ ಮೊದಲಿನ ಮಂಗಲ ಪದ್ಯ ಹಾಗೂ ಕಡೆಯ ಐದು ಫಲಶ್ರುತಿ ಪದ್ಯಗಳು ಸಂಸ್ಕೃತದಲ್ಲಿವೆ.

ಶಾಸನದಲ್ಲಿ ಬಂದಿರುವ **ಅರಸುಮನೆತನ** ಸವದತ್ತಿ ರಟ್ಟರದು. ಸಾಮಂತ, ಮಹಾಸಾಮಂತ, ಮಹಾಮಂಡಳೇಶ್ವರ ಹೀಗೆ ಬೆಳೆದು ಬಂದು ಶಾಸನಕಾಲದಲ್ಲಿ ಅದು ಸ್ವತಂತ್ರವಾಗಿ ಬಾಳುತ್ತಿದ್ದ ಮನೆತನ. ನಾಮಶೇಷವಾಗಿದ್ದ ಚಾಳುಕ್ಯಸಾಮ್ರಾಜ್ಯದಲ್ಲಿ ಆಧಿಪತ್ಯಕ್ಕಾಗಿ ಪ್ರಯತ್ನಿಸುತ್ತಿರುವ ದೇವಗಿರಿ ಯಾದವ ಹಾಗೂ ದೋರಸಮುದ್ರದ ಹೊಯ್ಸಳರ ಪರಿಳಿತದ ಕಾಲವದು. ಈ ಕಾಲದಲ್ಲಿ ಅನೇಕ ಮಹಾಮಂಡಳೇಶ್ವರರ ಮನೆತನಗಳು ಸ್ವತಂತ್ರವಾಗಿ ಬಾಳಬೇಕೆಂದು ಹವಣಿಸುತಿದ್ದವು. ಅವುಗಳಲ್ಲಿ ಸವದತ್ತಿ ರಟ್ಟರದು ಒಂದು ಮನೆತನ. ಅದು ಕಾರ್ತವೀರ್ಯನ ಕಾಲದಲ್ಲಿ ಸ್ವತಂತ್ರವಾಗಿ ಬಾಳಲು ಆರಂಭಿಸಿತು. ಆದುದರಿಂದ ಶಾಸನದಲ್ಲಿ ಕಾರ್ತವೀರ್ಯನಿಗೆ 'ಸಾಮ್ರಾಜ್ಯಲಕ್ಷ್ಮಿಯನ–ನುಭವಿಸುತ್ತಮಿರೆ' ಎಂದು ವರ್ಣಿಸಲಾಗಿದೆ (ಸಾ–೧೮–೧೯). ಕ್ರಿ.ಶ. ೧೧೯೯ ರಿಂದ ೧೨೧೯ ವರೆಗೆ ಈತನ ಶಾಸನಗಳು ಸಿಗುತ್ತವೆ.

'ರಾಜಾವಳೀ ಚ ಕರ್ತ್ತಾರಂ ಸ್ಥಾನಗೌರವಮೇವ ಚ ।
ದತ್ತಿಶ್ಚ ತತ್ಫಲಂ ಚೈವ ಶಾಸನಂ ಪಂಚಲಕ್ಷಣಂ[೧]||'

ಎಂಬ ಶಾಸನದ ಲಕ್ಷಣಾನುಸಾರವಾಗಿ ಪ್ರಸ್ತುತ ಶಾಸನದಲ್ಲಿ ಕಾರ್ತವೀರ್ಯನ ರಾಜಾವಳಿ ನಾಲ್ಕು ತಲೆಮಾರಿನ ವರೆಗೆ ಕೊಟ್ಟಿದೆ. ಇಮ್ಮಡಿ ಸೇನ. ಆತನ ರಾಣಿ ಲಕ್ಷ್ಮೀದೇವಿ. ಅವರ ಪುತ್ರ ಕತ್ತಮ ಎಂದರೆ ಮುಮ್ಮಡಿ ಕಾರ್ತವೀರ್ಯ. ಆತನ ಸತಿ ಪದ್ಮಲದೇವಿ. ಆ ಇರ್ವರಿಗೆ ಹುಟ್ಟಿದ ಪುತ್ರ ಲಕ್ಷ್ಮೀದೇವ. ಆತನ ರಾಜ್ಞಿ ಚಂದ್ರಿಕಾದೇವಿ. ಇವರಿಗೆ ಕಾರ್ತವೀರ್ಯ ಹಾಗು ಮಲ್ಲಿಕಾರ್ಜುನ ಎಂಬ ಇಬ್ಬರು ಮಕ್ಕಳು. ಇದೇ ಕಾರ್ತವೀರ್ಯನು ನಾಲ್ಕನೆಯ ಕಾರ್ತವೀರ್ಯನೆಂದು ಪ್ರಸಿದ್ಧನಾಗಿ ಶಾಸನಕಾಲದಲ್ಲಿ ರಾಜ್ಯವಾಳುತ್ತಿದ್ದ. ಆತನ ಮಹಾದೇವಿ ಏಚಲದೇವಿ. ಏಚಲದೇವಿಗೆ ಶಾಸನದಲ್ಲಿ ಚಕ್ರವರ್ತಿತನುಜೆ ಎನ್ನಲಾಗಿದೆ. ಆದರೆ ಅವಳು ಯಾವ ಚಕ್ರವರ್ತಿಯ ಮಗಳು ಎಂಬುದು ಗೊತ್ತಾಗುವದಿಲ್ಲ(ಸಾ. ೪–೧೫).

ಕಾರ್ತವೀರ್ಯ, ಮಲ್ಲಿಕಾರ್ಜುನರ ತಾಯಿಯಾದ ಚಂದ್ರಿಕಾದೇವಿಯ ವಂಶಾ–ವತಾರವನ್ನು ಮುಂದೆ ಹೇಳಿದೆ. ಯದುವಂಶದಲ್ಲಿ ರೆಬ್ಬನೆಂಬ ಪ್ರಭು. ಆತನಿಗೆ ಹೊಲ್ಲಾದೇವಿಯೆಂಬ ಹೆಂಡತಿ. ಅವರ ಪುತ್ರ ಬ್ರಹ್ಮ. ಆತನ ಸತಿ ಚಂದಲದೇವಿ. ಇವರಿಗೆ ರಾಜನೆಂಬ ಮಗನು. ರಾಜನ ರಾಣಿ ಮೈಳಲದೇವಿ. ಇದೇ ದಂಪತಿ ಚಂದ್ರಿಕಾ–ದೇವಿಯ ತಾಯಿತಂದೆ. ಚಂದ್ರಿಕಾದೇವಿಗೆ ಸಿಂಹನೃಪಾಳನೆಂಬ ತಮ್ಮ. ಸಿಂಹನ ಹೆಂಡತಿ ಭಾಗಲದೇವಿ. ಅವರಿಗೆ ರಾಜನೆಂಬ ಪುತ್ರ. ರಾಜನಿಗೆ ಚಂದಲದೇವಿ ಹಾಗು ಲಕ್ಷ್ಮಾದೇವಿಯೆಂಬ ಇಬ್ಬರು ರಾಣಿಯರು. ಈ ರಾಜರಸ ಹಗರಟಗೆ ನಾಡಿನ ಅಧಿಪತಿ. ಈ ಮನೆತನದ ಧರ್ಮ ಜೈನಧರ್ಮ. ಈ ರಾಜರಸನು ಕಲ್ಹೊಳೆಯಲ್ಲಿ ತ್ರಿಕೂಟ–ಮಂಡಿತ ಪಾರ್ಶ್ವಜಿನಾಲಯವನ್ನು ಕಟ್ಟಿಸಿ ಅದಕ್ಕೆ ಬಂಗಾರದ ಕಳಸ. ಮಕರತೋರಣ–ಮಾನಸ್ತಂಭಾದಿಗಳನ್ನು ಮಾಡಿಸಿದ (ಸಾ. ೧೯–೪೩).

ಮುಂದೆ ಈ ರಾಜರಸನ ಗುರುಕುಳವನ್ನು ವರ್ಣಿಸಿದೆ. ಕುಂದಕುಂದಾನ್ವಯದ ವಿಶ್ರುತ ಮೂಲಸಂಘದೊಳಗೆ ದೇಸಿಯವೆಂಬ ಗಣ. ಆ ಗಣದಲ್ಲಿ ಪುಸ್ತಕವೆಂಬ ಗಚ್ಛ. ಈ ಗಚ್ಛದ ಹನಸೋಗೆಯೆಂಬ ಬಳಿ. ಈ ಬಳಿಯಲ್ಲಿ ಮಲಧಾರಿಯೆಂಬ ಮುನೀಂದ್ರ. ಆತನ ಅಗ್ರಶಿಷ್ಯ ಸೈದ್ಧಾಂತಿಕ ನೇಮಿಚಂದ್ರ. ಅವನ ಶಿಷ್ಯ ಶುಭಚಂದ್ರ ಭಟ್ಟಾರಕ. ಈತನು ಮಂಡಳಾಚಾರ್ಯನಾಗಿದ್ದನು (ಸಾ. ೪೨–೫೨).

ಈ ಶುಭಚಂದ್ರ ಭಟ್ಟಾರಕರಿಗೆ ಕಾರ್ತವೀರ್ಯ ದೇವರಸನು ಕಲ್ಹೊಳೆಯಲ್ಲಿ ರಾಜರಸ ಮಾಡಿಸಿದ ಪಾರ್ಶ್ವನಾಥಜಿನಾಲಯಕ್ಕೆ ೨೦೦೦ ಕಂಬ ಭೂಮಿಯನ್ನು ಉಕ್ತವಾದ ತಿಥಿಯಲ್ಲಿ ದಾನ ಮಾಡಿಕೊಟ್ಟನು: ಹಾಗೂ ಮನೆಯ ನಿವೇಶನ. ಗಾಣ. ಅಂಗಡಿಗಳು. ಬಣಂಜಿಯ ನಿವೇಶನ ಮತ್ತು ಮೂವತ್ತು ಕಂಬ ಹೂದೋಟ ದಾನ

---

೧. ಮುತ್ತಗೆ ಶಾಸನ. ಸಾ:ಶ. ಕ್ರಿ.ಶ. ೧೨೦೨. The Kadambas of Goa and their Inscriptions; No. 58; Ph. D. Thesis of Dr. R. N. Gurav.

ಮಾಡಿದನು. ಅದೇ ಪ್ರಕಾರ ಬೆಳಗಲೆ ಮುಖ್ಯವಾಗಿ ನಾಲ್ಕುಂ ಪಟ್ಟಣದ ಸೆಟ್ಟಿಯರು ಹಾಗು ಸಮಸ್ತ ಮುಂಮುರಿದಂಡಂಗಳು ಕೆಲವು ದಾನಗಳನ್ನು ಬಿಟ್ಟರು (ಸಾ. ೫೨–೭೬).

ಶಾಸನದ ತಿಥಿ : ೫೪–೫೫ ಸಾಲುಗಳಲ್ಲಿ ಶಾಸನದ ತಿಥಿ 'ಶಕ ವರ್ಷ ೧೧೨೭ ನೆಯ ರಕ್ತಾಕ್ಷಿ ಸಂವತ್ಸರದ ಪುಷ್ಯ ಶುದ್ಧ ಬಿದಿಗೆ ಶನಿವಾರದಂದುತ್ತರಾಯಣ ಸಂಕ್ರಮಣದಲ್ಲಿ' ಎಂದು ಹೇಳಿದೆ. ಶಕ ವರ್ಷ ೧೧೨೭ ಕ್ಕೆ ರಕ್ತಾಕ್ಷಿ ಸಂವತ್ಸರ ಗತ (expird) ವಾಗಿರದೆ ವರ್ತಮಾನ (Current)ವಾಗಿದೆ. ಈ ವರ್ಷಕ್ಕೆ ಕ್ರಿ. ಶ. ೧೨೦೪ ಸಮಾನವಾಗುತ್ತದೆ. ಪ್ರಸ್ತುತ ವರ್ಷದಲ್ಲಿ ಪುಷ್ಯ ಬಿದಿಗೆ ಶನಿವಾರ ದಿವಸ ಸರಿಯಾಗಿ ಬರುತ್ತದೆ. ಹೀಗೆ ತಿಥಿಯ ಉಲ್ಲೇಖ ಸರಿಯಾಗಿದ್ದು ಅದಕ್ಕೆ ಸಮಾನವಾಗಿ ಇಂಗ್ರೇಜಿ ತಾರೀಖ **೨೫ ಶನಿವಾರ ದಿಸೆಂಬರ ೧೨೦೪** ಆಗುತ್ತದೆ.

ಶಾಸನದಲ್ಲಿ ಉಕ್ತವಾದ ಸ್ಥಳಗಳು : (೧) ಕೂಂಡಿ ಮಂಡಳ (ಪದ್ಯ ೩), ಕೂಂಡಿ ಮೂಱುಸಾಸಿರ (ಸಾ. ೫೫); (೨) ವೇಣುಗ್ರಾಮ (ಸಾ. ೧೮); (೩) ಹಗರಟಗೆ ನಾಡು (ಪದ್ಯ ೧೪); (೪) ಕುಪಣಪುರ (ಸಾ. ೪೧); (೫) ಕಲ್ಹೊಳೆ (ಸಾ. ೪೨); ಸಿಂದನ ಕಲ್ಹೊಳೆ (ಸಾ. ೪೩–೪೪); (೬) ಹನಸೋಗೆ (ಸಾ. ೪೫); (೭) ಕುಱುಂಬೆಟ್ಟ–ಗಂಪಣ (ಸಾ. ೫೫–೫೭); (೮) ಕಂಕಣಸೂರ (ಸಾ. ೫೭); (೯) ಬೆಳಗಲೆ (ಸಾ. ೬೧); (೧೦) ಏಳುವರೆ ಹನ್ನೊಂದುವರೆ (ಸಾ. ೬೩); (೧) **ಕೂಂಡಿ ಮಂಡಳ ಹಾಗೂ ಕೂಂಡಿಮೂಱುಸಾಸಿರಗಳು** ಒಂದೆ. ಅದು ಸಾಂಪ್ರದಾಯಿಕವಾಗಿ ಮೂರು ಸಾವಿರ ಹಳ್ಳಿಗಳ ಒಂದು ರಾಜಕೀಯ ಭಾಗ. ಸಾಧಾರಣವಾಗಿ ಉತ್ತರಕ್ಕೆ ಕೃಷ್ಣಾ ನದಿ ಮತ್ತು ದಕ್ಷಿಣಕ್ಕೆ ಮಲಪ್ರಭಾ ನದಿ ಹಾಗೂ ಸವದತ್ತಿಯನ್ನು ಒಳಮಾಡಿಕೊಂಡ ಈಗಿನ ಬೆಳಗಾವಿ ಜಿಲ್ಲೆ. ಅಳಿದು ಹೋದ ಕೂಂಡಿಪಟ್ಟಣ ಅದರ ಮುಖ್ಯ ಸ್ಥಳ. (೨) **ವೇಣುಗ್ರಾಮ :** ಈಗಿನ ಬೆಳಗಾವಿ ನಗರ. (೩) **ಹಗರಟಗೆ ನಾಡು :** ವಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ಸಿಂದಗಿ ತಾಲೂಕಗಳ ಪೂರ್ವ ಭಾಗ ಮತ್ತು ಗುಲಬರ್ಗಾ ಜಿಲ್ಲೆಯ ಸೋರಾಪೂರ ತಾಲೂಕಿನ ಬಹುಭಾಗ ಕೂಡಿದ ನಾಡು. ಸೋರಾಪೂರ ತಾಲೂಕಿನ ಹಗರಟಗಿ ಗ್ರಾಮ ಈ ನಾಡಿನ ಪ್ರಮುಖ ಗ್ರಾಮ. (೪) **ಕುಪಣಪುರ:** ಈಗಿನ ಕೊಪ್ಪಳ. ರಾಯಚೂರ ಜಿಲ್ಲೆಯಲ್ಲಿಯ ಒಂದು ತಾಲೂಕ ಸ್ಥಳ. ಹುಬ್ಬಳ್ಳಿ–ಹೊಸಪೇಟೆ ರೈಲ ಮಾರ್ಗದ ಮೇಲೆ ರೇಲ್ವೆ ಸ್ಟೇಶನವಾಗಿದೆ. (೫) **ಕಲ್ಹೊಳೆ :** ಮೇಲೆ ಬಂದಿದೆ. ಅದಕ್ಕೆ ಸಿಂದನ ಕಲ್ಹೊಳೆಯೆಂದೂ ಹೆಸರವಿತ್ತು. (೬) **ಹನಸೋಗೆ :** ಸಧ್ಯಕ್ಕೆ ಗುರುತಿಸಲು ಬರುವುದಿಲ್ಲ. 'ಹನಸೋಗೆಯ ಬಳಿ' ಯೆಂಬುದು ಒಂದು ಜೈನ ಸಂಪ್ರದಾಯ.[೨] (೭) **ಕುಱುಂಬೆಟ್ಟ:** ಗೋಕಾಕ ತಾಲೂಕಿ–

೨. 'ಇಂಗಳೇಶ್ವರದ ಬಳಿ' ಎಂದು ಅಥಣಿಯಲ್ಲಿ ದೊರೆತ ಒಂದು ತ್ರುಟಿತ ಶಾಸನದಲ್ಲಿ ಮತ್ತೊಂದು ಜೈನ ಸಂಪ್ರದಾಯದ ಉಲ್ಲೇಖ ಬರುತ್ತದೆ. (ಸ್ವಂತ ಸಂಗ್ರಹ).

ನಲ್ಲಿಯ ಈಗಿನ ಸಿಂದೀಕುರಬೇಟ. ಗೋಕಾಕದಿಂದ ವಾಯುವ್ಯಕ್ಕೆ ಸುಮಾರು ಆರು ಮೈಲುಗಳ ಮೇಲೆ ಆದೆ. ಕೆಲವು ಹಳ್ಳಿಗಳ ಸಮೂಹಕ್ಕೆ ಕಂಪಣವೆಂದು ಶಾಸನಗಳಲ್ಲಿಯ ಅರ್ಥ. ಕಲ್ಹೊಳೆ ಗ್ರಾಮವು ಈ ಕುಱುಂಬೆಟ್ಟಗಂಪಣದಲ್ಲಿ ಸಮಾವೇಶಗೊಂಡಿತ್ತು. (೮) **ಕಂಕಣನೂರ** : ರಾಯಬಾಗ ತಾಲೂಕಿನಲ್ಲಿಯ ಈಗಿನ ಕಂಕಣವಾಡಿ. ಕಲ್ಹೋಳಿ ಯಿಂದ ಉತ್ತರಕ್ಕೆ ಸುಮಾರು ಐದು ಮೈಲುಗಳ ಮೇಲೆ ಆದೆ. (೯) **ಬೆಳಗಲೆಯು** ಮುಧೋಳ ತಾಲೂಕಿನಲ್ಲಿ ಮುಧೋಳ – ಮಹಾಲಿಂಗಪೂರ ರಸ್ತೆಯ ಮೇಲೆ ಮುಧೋಳದಿಂದ ಸುಮಾರು ಹತ್ತು ಮೈಲು ಇರುತ್ತದೆ.[3] (೧೦) **ಏಳುವರೆಯು** ರಾಷ್ಟ್ರಕೂಟ ಚಾಳುಕ್ಯರ ರಾಜ್ಯವಾಗಿದ್ದ ಸಪ್ತಾರ್ಧಲಕ್ಷಪ್ರದೇಶವಾಗಿರಬಹುದು. **ಹನ್ನೊಂದುವರೆ** ಸಧ್ಯಕ್ಕೆ ತಿಳಿಯುವಂತೆಯಿಲ್ಲ.

ಶಾಸನ ಪಾಠ[4]

[**ವೃತ್ತಗಳು** : ೧, ೪೨, ೪೩, ೪೪: ಅನುಷ್ಟುಬ್
೨, ೩, ೬, ೭, ೧೩, ೧೪, ೧೭ ೩೧ ೩೩, ೩೪, ೪೧: ಕಂದ
೪, ೫, ೧೬, ೩೭, ೪೦: ಶಾರ್ದೂಲವಿಕ್ರೀಡಿತಂ
೮, ೧೮, ೧೯, ೨೧, ೨೫, ೨೮, ೩೫: ಚಂಪಕಮಾಲೆ
೯, ೧೧, ೧೨, ೨೨, ೨೬, ೨೯, ೩೦, ೩೨, ೩೬, ೩೯: ಉತ್ಪಲಮಾಲೆ
೧೦, ೧೫, ೨೦, ೨೩, ೨೪, ೨೭, ೩೮: ಮತ್ತೇಭವಿಕ್ರೀಡಿತಂ
೪೫: ಶಾಲಿನಿ. ೪೬ : ವಸಂತತಿಳಕ]

(1)§ ಓಂ ನಮಃ ಸಿದ್ಧೇಭ್ಯಃ [।।*]
ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂ [।*]
ಜೀಯಾತ್ತ್ರೈಳೋಕ್ಯನಾಥಸ್ಯ ಶಾಸನಂ ಜಿನಶಾಸನಂ ॥ [೧*]

(2) ಶ್ರೀಜನ್ಮಭೂಮಿ ವರಸುರ–
ಭೂಜಂ ಕ್ಷೀರಾಂಬುರಾಶಿಯಂತೆ ಗಭೀರಂ
ಶ್ರೀಜೈನಶಾಸನಂ ಸಲೆ
ರಾಜಿಸುತಿರ್ಕ್ಕಮಳರಾಜಪೂಜಿತಮ(3)ಹಿಮಂ ॥ [೨*]
ವಿಳಸಿತವಿಪುಳಾಮೃತಗೋ–
ಕುಲದಿಂದಂ ಸಕಳಸಸ್ಯಸಂಪದದಿಂ ನಿ-

---

೩. ಅಜಿತನಾಥ ಪುರಾಣ ೧೨-೪೭ ರಲ್ಲಿ ಬಂದಿರುವ ಬೆಳುಗಲಿ ಐನೂರರ ಮುಖ್ಯಗ್ರಾಮ ಈ ಬೆಳುಗಲೆಯಾಗಿರಬಹುದು.

೪. ೧೯೪೭ ರಲ್ಲಿ ನಾನು ಗೋಕಾಕ ತಾಲೂಕಿನಲ್ಲಿ ತಹಸೀಲದಾರನಾಗಿದ್ದ ಸಮಯದಲ್ಲಿ ತೆಗೆದು ಕೊಂಡ ಶಾಸನದ ಅಚ್ಚುಗಳಿಂದ.

§ ಈ ಇಂಗ್ಲೀಷ ಅಂಕಿಗಳು ಶಾಸನದ ಸಾಲುಗಳನ್ನು ಸೂಚಿಸುತ್ತವೆ.

ಮ್ಮೃಳವರ್ಣ್ಣದಿಂದೆ ವಿಧು–
ಮಂಡಳದಂತಿರೆ ಕೊಂಡಿಮಂಡಳಂ ಕಣ್ಗೊಳಿಕುಂ ॥ [೩*]

ಅ(4)ದನಾಳ್ವಂ ॥
ಸೇನಂ ಸಾಹಸಭೀಮಸೇನನಸಕೃದ್ವಿದ್ವಾವಿಳಾಸೇನನಾ–
ಜ್ಞಾನಾರೀಪ್ರಿಯವಲ್ಲಭಂ ಪೃಥುಸಭಂ ತೀಬ್ರಾಂಶುತೇಜಃಪ್ರಭಂ
ನಾನಾದಾನಿ ವೃಷಾಭಿವಾ(5)ನಿ ರಣಭೂಸೇನಾನಿ ರಟ್ಟಾನ್ವಯ–
ಶ್ರೀನೇತ್ರಂ ಬುಧಮಿತ್ರನುಜ್ವಳಯಶಃಪಾ(ಃಪಾ)ತ್ರಂ ನೃಪಂ ರಂಜಿಪಂ॥ [೪*]

ಆ ಸೇನಾವನಿಪಂಗಮಪ್ರತಿಮಲಕ್ಷ್ಮೀದೇವಿಗಂ ಪುಟ್ಟಿದಂ
ಭೂಸಂ(6)ರಕ್ಷಣದಕ್ಷದಕ್ಷಿಣಭುಜಂ ವಿಧ್ವಸ್ತಶತ್ರುಬ್ರಜಂ
ತ್ರಾಸಾನಮ್ರನೃಪಾಳಿಪಾಳಿತಜಯಶ್ರೀಕೇಳಿ ಸಸ್ಮಾನ್ವಿತಾ–
ಭ್ಯಾಸಂ ಸೂನೃತವಾಗ್ವಿಳಾಸನವನೀನಾಥೋತ್ತಮಂ ಕತ್ತಮ॥ [೫*]

(7)ಆ ವಿಭುವಿನ ವಧು ಪದ್ಮಲ–
ದೇವಿ ಕಳಾರೂಪವಿಭವಜಿನಮತದೊಳ್ವಾ–
ಗ್ದೇವಿ ರತಿದೇವಿ ಲಕ್ಷ್ಮೀ–
ದೇವಿ ಶಚೀದೇವಿಯೆನಿಸಿ ಮಿಗೆ ಸೊಗಯಿಸುವಳ್ ॥[೬*]

ಶ್ರೀಪತಿನಾ ವಿಷ್ಣುಃ ಪೃ(8)ಥು–
ವೀಪತಿಯೆನೆ ಲಕ್ಷ್ಮಿದೇವನೊಗೆದಂ ವಸುದೇ–
ವೋಪಮ ಕತ್ತಮವಿಭುಂಗಂ
ಶ್ರೀಪದ್ಮಲದೇವಿಯೆಂಬ ನುತದೇವಕಿಗಂ ॥ [೭*]

ಪ್ರಕಟಿತತೇಜನನ್ವಯಸರೋಜಸಮೂಹವಿಕಾಸಿ ಸಜ್ಜನ–
ಪ್ರ(9)ಕರರಥಾಂಗಸಮ್ಮದಕರಂ ನಿಯತಾಭ್ಯುದಯಂಪ್ರಶೋಭಿತಾ–
ಧಿಕನಿಜಮಂಡಳಂ ಜಿತಕಳಂಕ ಪವಿತ್ರಚರಿತ್ರನಾಗಿ ಚಂ–
ದ್ರಿಕೆಗಧಿನಾಥನಾದನಿದು ವಿಸ್ಮಯಮಾ ಪ್ರಭು ಲಕ್ಷ್ಮಭೂಭುಜಂ ॥ [೮*]

ಶ್ರೀಯು(10)ವತೀಶ ಹೇಮಗರುಡಧ್ವಜಮಂಡಿತಮಂಡಳೇಶನಾ–
ರಾಯಣ ಲಕ್ಷ್ಮಣಂಗೆ ತನುಜಬ್ಬ್ರಜದಂತೆ ಧರೋರುಭಾರಧಾ–
ರೇಯರನೂನದಾನಜಯಧರ್ಮ್ಮಧರರ್ವ್ವಿಭು ಕಾರ್ತ್ತವೀರ್ಯ್ಯಲ–
ಕ್ಷ್ಮೀಯುತ(11)ಮಲ್ಲಿಕಾರ್ಜ್ಜುನಮಹೇಶ್ವರರಾದರತರ್ಕ್ಯವಿಕ್ರಮರ್ ॥[೯*]

---

೫. ಉಪಧ್ಮಾನೀಯ ಅಕ್ಷರದ ಮೊಳೆ ಲಭ್ಯವಿಲ್ಲದ ಮೂಲಕ ವಿಸರ್ಗ ಹಾಗೂ ಪಕಾರಗಳನ್ನು ಬಿಡಿಸಿ ಬರೆಯಲಾಗಿದೆ. ಅ. ಟಿ. ೬, ೭ ಮತ್ತು ೮ಗಳಲ್ಲಿಯೂ ಇದೇ ಕ್ರಮವನ್ನು ಅನುಸರಿಸಲಾಗಿದೆ.

೬. ಅ. ಟಿ. ೫ ನೋಡಿರಿ.

ಪರಚಕ್ರಂ ನಿಜವಿಕ್ರಮಕ್ಕಗಿದು ತೇಜಃಚಕ್ರಮಂ ಬಿಟ್ಟು ಕೋ–
ಪರಚಕ್ರಕ್ಕೆಣೆಯುಪ್ಪಿನಂತಿರಿವಿನಂ ದಿಕ್ಚಕ್ರಮಂ ಬ್ಯಾಪಿಸು–
ತ್ತಿರೆ ಕೀರ್ತ್ಯಂಗನೆ ಕಾರ್ತ್ತವೀರ್ಯ್ಯ(12)ನಖಿಳೋರ್ವ್ವೀಚಕ್ರಮಂ ಚಕ್ರಿಯಂ–
ತಿರೆ ದೋರ್ದ್ದಂಡದೊಳಾಂತನಚ್ಯುತಗುಣಂ ಶ್ರೀರಟ್ಟನಾರಾಯಣಂ ||[೧೦*]

ಮೇರು ನಭಸ್ತಳಂ ಜಳಧಿಮತ್ಪತಿಯುಂನತಿಸನ್ಮಹತ್ವಗಂ–
ಭೀರಗುಣಕ್ಕೆ ಮಚ್ಚರಿಪ್ರವೆಂದಮರಾದ್ರಿಯನಿಕ್ಕಿ ಮೆ(13)ಟ್ಟಿಯಾ
ನೀರದಮಾರ್ಗ್ಗಮಂ ಪುದಿದು ವಾರಿಧಿಯಂ ಮಿಗೆ ದಾಂಟಿ ಕೀರ್ತ್ತಿಯಾ–
ಶಾರಮಣಗ್ಗೆ ಬಂಣಿಪುದು ಪೆಂಪಿನಲಂಪಿನೆ ಕಾರ್ತ್ತವೀರ್ಯ್ಯನ ||[೧೧*]

ಊರ್ಜ್ಜಿತತೇಜನಾರ್ಜ್ಜಿತಯಶಂ ಪರಿತರ್ಜ್ಜಿತರಾಷ್ಟ್ರಕಂಟಕಂ
ನಿರ್ಜ್ಜಿತದುರ್ಜ್ಜಯಾರಿನಿವಹಂ ಕ(14)ಮಳಾಧಿಪನಂತೆ ದಾನಿ ನಾ–
ಗಾರ್ಜ್ಜುನನಂತೆ ರಾವಣವಿದಾರಣಕಾರಣ ರಾಮನಂತೆ ಮಿ–
ಕ್ಕರ್ಜ್ಜುನನಂತೆ ರಂಜಿಪನಿಳೇಶಶಿಖಾಮಣಿ ಮಲ್ಲಿಕಾರ್ಜ್ಜುನಂ ||[೧೨*]

ಶ್ರೀಚಕ್ರವರ್ತ್ತಿತನುಜೆ ಕ–
ಳಾಚತುರೆ ವಿಶಾಳಲೋಳ(15)ಲೋಚನೆಯೆನಿಸಿ–
ರ್ದ್ದೀಚಲದೇವಿ ಸತೀತ್ವಸು–
ಲೋಚನೆಯೆನೆ ಕಾರ್ತ್ತವೀರ್ಯ್ಯವಧು ಪೆಸರ್ವಡೆದಳ್ ||[೧೩*]

ಸ್ವಸ್ತಿ[I*] ಸಮಧಿಗತಪಂಚ ಮಹಾಶಬ್ದ ಮಹಾಮಂಡಳೇಶ್ವರಂ ಲತ್ತನೂರ್ಪ್ಪುರ–ವರಾಧೀಶ್ವರಂ ತ್ರಿವಳೀ(16 ತೂರ್ಯ್ಯನಿರ್ಗ್ಘೋಷಣಂ ರಟ್ಟಕುಲಭೂಷಣಂ ಸಿಂದೂರ–ಲಾಂಛನಂ ಸಫಳೀಕೃತವಿದ್ವಜ್ಜನಾಭಿವಾಂಛನಂ ವೀರಕಥಾಕರ್ಣ್ಣನಜಾತರೋಮಾಂಚಂ ಸಾಹಿತ್ಯವಿದ್ಯಾವಿರಿಂಚಂ ಸುವರ್ಣ್ಣಗರುಡಧ್ವಜಂ ಸಹಜಮಕರಧ್ವಜಂ ಸಂಗ್ರಾಮ(17) ಕೌತೂಹಳೀಕೃತಗದಾದಂಡಂ ಕದನಪ್ರಚಂಡಂ ಸಿಂಧುರಾರಾತಿಬಂಧುರಕಬನ್ಧ–ನರ್ತ್ತನಸೂತ್ರಧಾರಂ ವೈರಿಮಂಡಳಿಕಗಂಡತಳಪ್ರಹಾರಂ ಪರವಧೂನಂದನಂ ವಿಭವ–ಸಂಕ್ರಂದನಂ ಸಾಹಸೋತ್ತುಂಗಂ ಸಮಾರಾಧಿ(18)ತಮಹಾಲಿಂಗನಿಮಮೊದಲಾ–ದನೇಕ ನಾಮಾವಳೀವಿರಾಜಿತಂ ಶ್ರೀಕಾರ್ತ್ತವೀರ್ಯ್ಯದೇವಂ ನಿಜಾನುಜ ಯುವರಾಜ ವೀರ ಮಲ್ಲಿಕಾರ್ಜ್ಜುನದೇವಂ ಬೆರಸಾ ವೇಣುಗ್ರಾಮಸ್ಕಂಧಾವಾರದೊಳು ಸುಖದಿಂ ಸಾಮ್ರಾಜ್ಯಲಕ್ಷ್ಮಿ(19)ಯನನುಭವಿಸುತ್ತಮಿರೆ

ಶ್ರೀಕವಿವಿಬುಧಸ್ತ್ರೀರ–
ತ್ನಾಕಳಿತಂ ಜಳಧಿಯಂದದಿಂ ಯಮಕುಳಲ–
ಕ್ಷ್ಮೀಕಾಂತಂ ಶ್ರಿತಕಮಳಾ–
ನೀಕಂ ಹಗರಟಗೆನಾಡು ಜಗದೊಳಗೆಸೆಗುಂ || [೧೪*]

ಆ ನಾಡನಾಳ್ವಂ ||

ಯದುವಂ(20)ಶಂ ಶ್ರಿತರಾಜಹಂಸಮೆಸೆದಿರ್ಕ್ಕುಂ ವ್ಯೋಮದಂತಲ್ಲಿಯು-
ಭ್ಯುದಯಂ ಬೆತ್ತನುದಾತ್ತವೃತ್ತನುರುತೇಜಂ ಕೀರ್ತ್ತಿಭಾಜಂ ಸಮು-
ದ್ಯದಿಳೇಜ್ಯಂ ಸುಮನಃಪ್ರಪೂಜ್ಯನಮಳಸ್ವಾಂತಂ ಜಿತಧ್ವಾಂತನೊ-
ಪ್ಪಿದನಾ(21)ದಂ ಕಮಳಾಧಿಪಪ್ರಭುತೆಯಿಂ ಶ್ರೀರೆಬ್ಬನುರ್ವ್ವೀಶ್ವರಂ ॥ (೧೫*)

ಆ ರೆಬ್ಬಪ್ರಭುವಿಂಗಮುಗ್ರವಧು ಹೊಲ್ಲಾದೇವಿಗಂ ಸ್ವಾನ್ವಯೋ-
ದ್ಧಾರಂ ಧೀರನುದಾರನುದ್ಧಗುಣಸಾರಂ ಶಂಭವದಂಭೋಧಿಗಂ-
ಭೀರಂ ವಾಗ್ವನಿತಾಸ್ತನಸ್ಥಗಿತ(22)ಹಾರಂ ಸೌಖ್ಯಸಂಪಾದಕಾ-
ಚಾರಂ ಬ್ರಹ್ಮನವೋಲತರ್ಕ್ಯಮಹಿಮಂ ಬ್ರಹ್ಮಾಹ್ವಯಂ ಪುಟ್ಟಿದಂ|| [೧೬*]

ಜಳನಿಧಿಗಭೀರಭೃತಭೂ-
ವಳಯಬ್ರಹ್ಮಂಗಮುಚಿತವೇಳೋಪಮಚಂ-
ದಲದೇವಿಗವೊಗೆದುಂ ಮಂ-
ಡಳ(23)ನಾಥಂ ರಾಜನಂದದಿಂ ರಾಜರಸಂ || [೧೭*]

ಪಂದಿದಿರೆ ರಾಗದಿಂ ಸಕಳಮಂಡಳಮಪ್ರತಿಮಪ್ರಸಾದಸಂ-
ಪದಮಖಿಳಾಶೆಯಂ ನೆಱೆಯೆ ಪೂರಿಸೆ ಜೈನಮತಾಮೃತಾರ್ಣ್ಣವಂ
ಪದೆದಭಿವೃದ್ಧಿಯಂ ತಳೆಯೆ ತಂನ ಪೆಸರ್ಗ್ಗನು(24)ರೂಪಮಾಗೆ ಯ-
ಭ್ಯುದಯಮನೆಯ್ದಿದಂ ವಿಮಳವೃತ್ತವಿರಾಜಿತರಾಜಭೂಭುಜಂ|| [೧೮*]

ಕ್ಷಿತಿಪತಿರಾಜರಾಜನ ಮನೋರಮೆ ಮೈಳಲದೇವಿ ತಾಂ ಯಶ-
ಸ್ವತಿ ನುತಿಯೋಗ್ಯಭಾಗ್ಯವತಿ ದಾನದಯಾವತಿ ಸತ್ಕಳಾಸರ-
ಸ್ವತಿ(25)ಯಭಿರೂಪರೂಪಮಳಯಾವತಿ ಜೈನಪದಾಂಬುಜಾರ್ಚ್ಚನಾ-
ವತಿ ಪುರುಪುಣ್ಯಪುತ್ರವತಿ ರಂಜಿಸುವಳ್ಸುವಿಶಾಳಶೀಳದಿಂ || [೧೯*]

ಕುಳವಿಸ್ತಾರಕರಾಜರಾಜವಿಭುಗಂ ಶ್ರೀರೋಹಿಣೀಮೂರ್ತ್ತಿಮೈ-
ಳಲಮಾದೇವಿಗಮಾ(26)ತ್ಮಜರ್ಪ್ಪತಿಹಿತಶ್ರೀಚಂದ್ರಿಕಾದೇವಿನಿ-
ರ್ಮ್ಮಳರುಕ್ಚಂದ್ರಿಕೆಯಂತೆ ಸಿಂಹಮಹಿಮ ಸೌಮ್ಯಂಬೊಲಾದರ್ಮ್ಮಹೀ-
ತಳಪೂಜ್ಯರ್ವ್ವಿಬುಧೇಜ್ಯರುಜ್ವಳಗುಣಶ್ರೀಕಾಂತರಾತ್ಮಂತಿಕಂ || [೨೦*]

ಅನುಪಮಶೌರ್ಯ್ಯಶಾಳಿ ಯ(27)ದುವಂಶಶಿರೋಮಣಿ ರಾಜರಾಜನಂ-
ದನೆ ವಿಬುಧಾಭಿನನ್ದನೆ ಘಟೋದರಸುಸ್ಥಿತಸರ್ಪ್ಪದರ್ಪ್ಪಭಂ-
ಜನೆ ಪತಿಚಿತ್ತರಂಜನೆ ಜಗಂನುತಜೈನಮತಾಮೃತಾಬ್ಧಿವ-
ರ್ದ್ಧನಕರಚಾರುಚಂದ್ರಿಕೆ ಮಹಾಸತಿ ಚಂದ್ರಿಕೆ ಧನ್ಯೆ ಧಾತ್ರಿಯೊ(28)ಳ್ ||
[೨೧*]

---

೭. ಅ. ಟಿ. ೫ ನೋಡಿರಿ.

ಶ್ರೀಪತಿಲಕ್ಷ್ಮದೇವಮಹಿವಲ್ಲಭವಲ್ಲಭೆ ಕಾರ್ತ್ತವಿರ್ಯ್ಯಧಾ-
ತ್ರೀಪತಿಮಲ್ಲಿಕಾರ್ಜ್ಜುನಮಹೀಶರ ಮಾತೃ ಮಹಾಸತೀತ್ವಸೀ-
ತೋಪಮೆ ಜೈನಪೂಜನಸುರೇಂದ್ರವಧೂಪಮೆ ರೂಪಕಂತುಕಾ-
ನ್ತೋಪಮೆ ರಂಜಿ(29)ಪಳ್ನಿಗಳ್ಪ ಚಂದಲದೇವಿ ಸಮಸ್ತಧಾತ್ರಿಯೋಳ್ ||
[೨೨*]

ಸ್ಫುರಿತಾನರ್ಘ್ಯವಣಿಪ್ರಣೂತಕಟಕಪ್ರಖ್ಯಾತದಾನೇಂದ್ರಭೂ-
ಮಿರುಹೋರ್ವ್ವೀತಳಧಾರಿ ತುಂಗಶಿಖರಶ್ರೀಮದ್ಭುಜಾದಂಡಮಂ-
ದರದಿಂ ವೈರಿಬಳಾ(30) ಬ್ಧಿಯಂ ಮಥಿಯಿಸುತ್ತುದ್ಯಜ್ಜಯಶ್ರೀವಧೂ-
ವರನಾದಂ ಯದುವಂಶಭಾಳತಿಳಕಂ ಸಿಂಹಾವನೀಪಾಳಕಂ || [೨೩*]

ಸಬಳಂಗೊಂಡು ಸಮಗ್ರ ಸಿಂಹಮಹಿಪಂ ಮೇಲ್ವಾಯಿಸಲ್ವಾಜಿಯಿಂ
ಸಬಳಂ ವೈರಿಬಳಂ ಜವಂಗೆ ಕ(31)ಬಳೀ ಬೇತಾಳಜಾಳಕ್ಕೆ ಕೊ-
ಟ್ಟ ಬಲಿಶ್ರೇಣಿಬಳಾರಿಗಿತ್ತಬಡಿನಂ ಹಾರ್ದ್ದಿರ್ದ್ದ ಹರ್ದ್ದಿಂಗೆ ಬಿ-
ರ್ದ್ದುದ ವೃಕಕ್ಕೆತ್ತಿದ ಬುತ್ತಿಯೆಂದೊಡಹಿತರ್ಮ್ಮಯ್ರ್ದ್ದೋಱಿ ಮಾಱಾಂಪರೇ ||
[೨೪*]

ಜನಪತಿ ಸಿಂಗಿದೇವನ ಮನಃಪ್ರಿಯೆ ಭಾಗಲದೇವಿ (32) ಭಾಗ್ಯಮೋ-
ದಿನಿ ಗುಣಯೂಥನಾಥಮುನಿದಾನವಿನೋದಿನಿ ಸಂಶ್ರಿತಾರ್ತ್ತಿಭೇ-
ದಿನಿ ವಿಬುಧಪ್ರಮೋದಿನಿ ಕಳಾಗಮವೇದಿನಿ ನಿತ್ಯಸತ್ಯವಾ-
ದಿನಿ ದುರಿತಾಪನೋದಿನಿ ಪತಿಬ್ರತೆ ಪೂಜಿತರೂಪೆ ರಂ(33)ಜಿಪಳ್|| [೨೫*]

ಭೋಗಪುರಂದರಪ್ರತಿಮಸಿಂಹಮಹೀಪತಿಗಂ ಜಿನಾರ್ಚ್ಚನೋ-
ದ್ಯೋಗಸಚೀಚರಿತ್ರವತಿ ಭಾಗಲದೇವಿಗವಾದನಾತ್ಮಜಂ
ರಾಗಸಮಾಗಮಪ್ರದಸುಮೂರ್ತ್ತಿ ಜಯಂತನತಿಪ್ರಸಿದ್ಧಜೈ(34)-
ನಾಗಮವಾರ್ದ್ಧಿವರ್ದ್ಧನಸಕಳಾನಿಧಿ ರಾಜರಸಂ ಸಮಂಜಸಂ || [೨೬*]

ಜಿನಪೂಜಾವಿಬುಧಾಧಿಪಂ ವಿಪುಳತೇಜಂ ಪ್ರಾಪ್ತಧರ್ಮ್ಮಪ್ರಭಾ-
ವನಯಂ ಪುಣ್ಯಜನೋತ್ತಮಂ ಗುಣಗಣಾಂಭೋರಾಶಿ ವೈರಿಪ್ರಭಂ-
ಜ(35)ನನುರ್ವ್ವೀಧನದಂ ಮಹಿಶ್ವರನೆನಿಪ್ಪೀ ಪೆಂಪಿನಿಂ ಲೋಕಪಾ-
ಳನಿವಂ ರಾಜರಸಂ ಜಗದ್ವಳಯಮಂ ಪಾಳಿಪ್ಪುದೇನೊಪ್ಪದೇ|| [೨೭*]

ಕ್ಷಿತಿ ಸಲೆ ಕೂರ್ತ್ತು ಕೀರ್ತ್ತಿಪುದು ಮೂರ್ತ್ತಿಮನೋಭವ ರಾಜನಂ ಸಮ-
ರ್ಚ್ಚಿತಜಿನರಾಜನಂ ಯದುಕು(36)ಳಾಮೃತವಾರಿಧಿರಾಜನಂ ಸಮುಂ-
ನತಿಗಿರಿರಾಜನಂ ಗುಣವಿರಾಜಿತರಾಜತನೂಜಸಿಂಹಭೂ -
ಪತಿಸುತರಾಜನಂ ವಿಷಮವಾಜಿಸುಶಿಕ್ಷಣವತ್ಸರಾಜನಂ || [೨೮*]

ಪಿಂಗದವಾರ್ಯ್ಯಶೌರ್ಯ್ಯಮಸುಹೃಂನರಲೋಕಜಗ(37)ದ್ದಳಂಗೆ ರಾ-
ಜಂಗೆ ಜಗತ್ಪ್ರಮೋದಜನಕಾಭ್ಯುದಯಂ ಯದುವಂಶಸಂಭವೋ-
ತ್ತುಂಗಗುಣಾಚ್ಯುತಂಗೆ ವಿಜಯಪ್ರಿಯವೃತ್ತಿನೃಪಾಳಸಿಂಹಜಾ-
ತಂಗೆ ಪರಾಕ್ರಮಂ ಪೊಸತೆ ಬಣ್ಣಿಸುವೆಂದು ಸಮಸ್ತ(38)ಧಾತ್ರಿಯೊಳ್|| [೨೯*]

ದ್ಯೂತಮೃಗವ್ಯಪಾನಸಗಣಿಕಾಪರದಾರಖಳಪ್ರಸಂಗಚೌ-
ರ್ಯ್ಯಾತುಳವಲ್ಲಮೇಷಖಗಯುದ್ಧನಿಷಿದ್ಧವಿನೋದನೋದ್ಯತ-
ಬ್ಭೂತಳನಾಥರಪ್ಪರದು ಮಾಣ್ದು ಜಿನಸ್ನಪನಾರ್ಚ್ಚನಾ(39)ಮಹೀ-
ಖ್ಯಾತಮುನೀಂದ್ರದಾನರತರಪ್ಪರೆ ರಾಜನೃಪಾಳ ನಿಂನ ಪೋಲ್ || [೩೦*]

ಸತಿ ಚಂದಲದೇವಿ ಪತಿ-
ಬ್ರತೆ ಲಕ್ಷ್ಮಾದೇವಿಯೆಂಬರಿರ್ವ್ವರುಮವನೀ-
ಪತಿ ರಾಜನೃಪನ ರಾಣಿಯ-
ರತಿಶಯಗುಣಯುತೆಯ(40)ರೆನಿಸಿ ನೆಗಳ್ದರ್ಜ್ಜಗದೊಳ್ || [೩೧*]

ಸ್ವಸ್ತಿ[1*] ಸಮಸ್ತಪ್ರಶಸ್ತಿಸಹಿತ ಶ್ರೀಮನ್ಮಹಾಮಂಡಳೇಶ್ವರಂ ಕುಪಣಪುರವ-
ರಾಧೀಶ್ವರಂ ಯದುಕುಳಾಂಬರದ್ಯುಮಣಿ ಬುಧಜನಚಿಂತಾಮಣಿ ನಿಜಭುಜಾಸಿನಿರ್ದ್ದ-
ಳಿತರಿಪುನೃ(41)ಪಕಂಠಕಂದಳಂ ನರಲೋಕಜಗದ್ದಳಂ ಅನವರತಜಿನಸವನಸುರಭಿಸಲಿಲ-
ಪವಿತ್ರೀಕೃತೋತ್ತಮಾಂಗಂ ಧರ್ಮ್ಮಕಥಾಪ್ರಸಂಗಂ ಜಿನಸಮಯಸುಧಾರ್ಣ್ಣ-
ವಸುಧಾಕರಂ ಸಮ್ಯಕ್ತ್ವರತ್ನಾಕರನೆನಿಸಿ ನೆಗಳ್ದ ||

ಕ್ಷ(42)ತ್ರಿಯ ಮಸ್ತಕಾಭರಣ ರಾಜನೃಪಂ ವಿಭುಸಿಂಹಸೂನು ರ-
ತ್ನತ್ರಯಮೂರ್ತ್ತಿ ನಿರ್ಮ್ಮಳಿನಧರ್ಮ್ಮಮೆನುತ್ತದನೊಲ್ದು ಪೇಳ್ವವೋ-
ಲ್ಧಾತ್ರಿಗೆ ಮಿಕ್ಕ ಕಲ್ಹೊಳೆಯೊಳೆತ್ತಿಸಿದಂ ಜಿನಶಾಂತಿಗೇಹಮಂ
ನೇತ್ರವಿಚಿತ್ರಮಂ (43)ಮಹಿತರೀಟಮನಪ್ರತಿಮತ್ರಿಕೂಟಮಂ || [೩೨*]

ಅಂತನಂತಸುಖಶ್ರೀಕಾಂತಶಾನ್ತಿನಾಥಸಮುತ್ತುಂಗ ಚೈತ್ಯನಿಧಾನಮಂ ಕನಕಕಳ-
ಶಮಕರತೋರಣಮಾನಸ್ತಂಭವಿರಾಜಮಾನಮಂ ರಾಜರಸಂ ಸಿಂದನ ಕಲ್ಹೊ(44)-
ಳೆಯಲ್ಲಿ ಮಾಡಿಸಿ ತಂನ್ನ ಗುರುಗಳುಂ ಜಗದ್ಗುರುಗಳುಮೆನಿಸಿದ ಶುಭಚಂದ್ರ-
ಭಟ್ಟಾರಕದೇವರ್ಗ್ಗೆ ಕೊಟ್ಟನವರ ಗುರುಕುಳಕ್ರಮಮೆಂತೆನೆ ||

ಜಯನಿಳಯಕುಂಡಕುಂದಾ-
ನ್ವಯವಿಶ್ರುತಮೂಲ(45)ಸಂಘ ದೇಸಿಯಗಣೋ-
ದಯ ಪುಸ್ತಕಗಚ್ಛದೊಳತಿ-
ಶಯಮೆನೆ ಹನಸೋಗೆಯೆಂಬ ಬಳಿ ಬಗೆಗೊಳಿಕುಂ || [೩೩*]

ಗುರುಕುಳತಿಳಕಪ್ಪಾರ್ವವನ-
ಚರಿತಗುಗ್ಗಣಭರಿತರಲ್ಲಿ ನೆಗಳ್ದವ್ರಿಜಿತ-
ಸ್ಮರಮಲಧಾರಿಮುನೀಂದ್ರ-
ರ್ಚ್ಚರಣಾಂ(46)ಬುಜನತನರೇಂದ್ರರಪಗತತಂದ್ರರ್ ||[೩೪*]
ಪದನಖಸಂಕುಳಂ ವಿಷಮಬಾಣವಿಷಾಹಿಮಹಾವಿಷಾಪಹಾ-
ರದ ಮಣಿ ನಾಮಮದಕ್ಕರಮೆ ಮೋಹಪಟುಗ್ರಹಭೇದಿಮಂತ್ರಮಂ-
ಗದ ಮಳಮಾ ಜವಂಜವ(47)ರುಜಾಹರಣೌಷಧಮೆಂದೊಡೇನನೆಂ-
ಬುದೊ ಮಲಧಾರಿದೇವಮುನಿಪೋತ್ತಮ ಭಾವತಪಃಪ್ರಭಾವಮಂ ||[೩೫*]
ಶಾಂತರಸಾವತಾರಮಲಧಾರಿಮುನೀಶ್ವರರಗ್ರಶಿಷ್ಯ ಸೈ
ದ್ಧಾಂತಿಕ ನೇಮಿಚಂದ್ರನುರುಧರ್ಮ್ಮರತಂ (48)ಶ್ರುತವಾರ್ಧ್ದಿ ನೇಮಿಚಂ-
ದ್ರಂ ತಮಮಂ ನಿವಾರಿಪ ಕಳಾಗುಣಭದ್ರಸಮಾನುಷಾಮೃತ-
ಸ್ವಾಂತಸಮಂತಭದ್ರನೆನೆ ಬಂಣಿಸರಾರಕಳಂಕವೃತ್ತನಂ || [೩೬*]
ಆ ಸೈದ್ಧಾಂತಿಕನೇಮಿಚಂದ್ರಯತಿಪಯ್ಯಾಚಾಯ್ಯಶಿಷ್ಯಗ್ಗ(49)ಣಾ-
ವಾಸಶ್ರೀಶುಭಚಂದ್ರಭಾಸಂರಯಶೋ ಭಟ್ಟಾರಕವ್ರಿಶ್ವಧಾ-
ತ್ರೀಸಂಪೂಜಿತಶೀಳಧಾರಕರುದಗ್ರಾನಂಗಸಂಹಾರಕ-
ಶ್ರೀಸದ್ದರ್ಶನಬೋಧವೃತ್ತಪದವೀವಿಸ್ತಾರನಿಸ್ತಾರಕರ್ || [೩೭*]
ಶುಭಚಂದ್ರಂ (50)ಸ್ವಗುಣೋಲ್ಲಸತ್ಕುವಳಯಶ್ರೀ ಚಂದ್ರಿಕಾಽಬ್ಧವೃ-
ತ್ತಿಭವಪ್ರಾಭವದಿಂ ದಿಗಂಬರಕುಳಶ್ರೀ ವೃದ್ಧಿಯಂ ಮಂಡಳ-
ಪ್ರಭುಸಂಪೂಜಿತಪಾದನುಜ್ವಳಗುಣಾಢ್ಯಂ ಶಾಸ್ತ್ರರೂಪಂ ಕಳಾ-
ವಿಭವಾತ್ಯಂನತವೃ(51)ತ್ತನಭ್ಯುದಯಯುಕ್ತಂ ಮಾಳ್ಪುದೇನೊಪ್ಪದೇ [೩೮*]
ಮಾರಮದಾಪಹಾರಿ ಪರಮೋಗ್ರತಪಶ್ಶುಭಚಂದ್ರದೇವಭ-
ಟ್ಟಾರಕಶಿಷ್ಯರೀ ಲಲಿತಕೀರ್ತ್ತಿಸಮುಂನತನಾಮಧೇಯಭ-
ಟ್ಟಾರಕರಿಂದು ಸಲ್ಲಲಿತಕೀರ್ತ್ತಿ(52)ಗಳನ್ವಿತಶಾಂತಮೂರ್ತ್ತಿಗಳ್
ಸಾರಚತುಷ್ಟಯಾರ್ತ್ಥಚಯವೇದಿಗಳುತ್ತಮಸತ್ಯವಾದಿಗಳ್|| [೩೯*]

ಸ್ವಸ್ತಿ [I*] ಸಮಸ್ತಗುಣಸಂಪಂನರುಂ ಭವ್ಯಪ್ರಸಂನರುಂ ಚಂದಲದೇವೀವಂದಿ-
ತಪದಾರವಿಂ(53)ದರುಂ ನಿಜಾತ್ಮಭಾವನಾನಿಷ್ಪಂದರುಂ ಶ್ರೀರಾಜನೃಪಾಳಸಂಪ್ರತಿಷ್ಠಿತ-
ಶಾಂತಿನಾಥದೇವರ ಬಸದಿಯಾಚಾಯ್ಯರುಂ ಮಂಡಳಾಚಾಯ್ಯರುಮಪ್ಪ ಶುಭಚಂ-
ದ್ರಭಟ್ಟಾರಕದೇವಗ್ಗೆ ಶ್ರೀ ಕಾರ್ತ್ತವೀರ್ಯ(54)ದೇವಂ ಆ ಶಾಂತಿನಾಥದೇವರಂ-
ಗಭೋಗಕ್ಕಂ ರಂಗಭೋಗಕ್ಕಮಾ ಬಸದಿಯ ಖಂಡಸ್ಫುಟಿತಜೀರ್ಣ್ಣೋದ್ಧರಣಕ್ಕಮಲ್ಲಿಪ್ಪ
ಮುನಿಜನಂಗಳಾಹಾರಾಭಯಭೈಷಜ್ಯಶಾಸ್ತ್ರದಾನಕ್ಕಂ ಶಕವರ್ಷಂ ೧೧೨೭ನೆಯ ರಕ್ತಾ-

೮. ಅ. ಟಿ. ೫ ನೋಡಿರಿ.

ಕ್ಷಿಸಂವತ್ಸರದ ಪು(55)ಷ್ಯಶುದ್ಧ ಬಿದಿಗೆ ಶನಿವಾರದಂದುತ್ತರಾಯಣಸಂಕ್ರಮಣದಲ್ಲಿ ಕೊಂಡಿ ಮೂಱುಸಾಸಿರದ ಬಳಿಯ ಕುಱುಂಬೆಟ್ಟಗಂಪಣದೊಳಗಣ ಸಿಂದನ ಕಲ್ಹೊಳೆ-ಯಲ್ಲಿ ಯಲ್ಲಿಯ ಕಳಗಡಿಯರ ಸಿಂದಗಾವುಂಡಂ ಮುಖ್ಯವಾಗಿ ಹಂ(56)ನಿಬ್ಬರ್ಗಾ[೯*]ವುಂಡಗಳಱಿಯೆ ಹಂನೆರಡು ತಪ್ಪಡಿಯ ಕುಱುಂಬೆಟ್ಟ ಗೋಲಿಂದೆರಡು ಸಹಸ್ರ ಕಂಬ ಕೆಯ್ಯಂ ಧಾರಾಪೂರ್ವ್ವಕಂ ಸರ್ವ್ವನಮಸ್ಯವಾಗಿ ಕೊಟ್ಟನಾ ಕೆಯ್ಯ ಸೀಮೆ [I*] ಊರಿಂ ಬಡಗಲು ಕಂಕಣನೂರ ಹೆದ್ದಾರಿಯಿಂ (57)ಮೂಡಲ್ನವಿಲಹಳ್ಳದ ಮುರಿವಿನಲ್ಲಿ ನೈರರೃತ್ಯದ ಕೋಣನೋಳ್ನಟ್ಟಕಲ್ಲಲ್ಲಿಂ ಬಡಗಮುಖಂ ಬೀಳಿಯ ಬಾವಿಯಿಂ ಮೂಡಲಾಗಿ ಪಡುವಣ ಸೀಮೆ ನಡೆಯಲ್ಕೆಂವೊರಡಿಯಲ್ಲಿ ವಾಯುಬ್ಯದ ಕೋಣನೋಳ್ನಟ್ಟ ಕಲಲ್ಲಿಂ ಮೂಡಲುಂ ಬಡಗಣ ಸೀಮೆ ನಡೆಯಲೀಶಾನ್ಯದ ಕೋಣನೋಳ್ನಟ್ಟ ಕಲ್ಲಲ್ಲಿಂ ತೆಂಕಮುಖಂ ಪಂಚವಸದಿಯ ಮಾನ್ಯದಿಂ ಪಡುವಲಾಗಿ ಮೂಡಣಸೀಮೆ ನಡೆಯಲ್ನವಿಲಹಳ್ಳದಲ್ಲಿ ಆಗ್ನೇಯ ಕೋಣನೋಳ್ನಟ್ಟ ಕಲ್ಲಲ್ಲಿಂ ಪಡುಮುಖಂ ತೆಂ(59,ಕಣ ಸೀಮೆ ನವಿಲಹಳ್ಳಂ[I*] ಆ ಬಸದಿಯ ಸಂಮುಂಧದ ಮನೆಯ ನಿವೇಶನವಿಂಮೊಳನುಂ ಗೇಣು ಬಾಚಿವಿಡಿಯ ರಾಜಹಸ್ತದಲಾ ಬಸದಿಯಿಂ ಬಡಗಲು ರಾಜವೀಥಿಯಿಂ ಮೂಡಲು ಪಡುವಣಕ್ಕೆಯ ಹಸ್ತಂ ನಾ(60)ಲ್ವತ್ತು ಸಿರಿವಾಗಿಲಕಲ್ಲಿಂ ಮೂಡಲು ಪಂಚವಸದಿಯ ಕೇರಿಯಲ್ಲಿಗೆ ಬಡಗಣಕ್ಕೆಯ ಹಸ್ತವಿಪ್ಪತ್ತಾಱು ಆ ಕೇರಿಯಿಂ ಪಡುವಣ ಭಾಗಂಬಿಡಿದು ಮೂಡ-ಣಕ್ಕೆಯ ಹಸ್ತ ನಾಲ್ವತ್ತು ತೆಂಕಣಕ್ಕೆಯಂ ಹಸ್ತ ಮೂ(61)ವತ್ತೆರಡಾ ಮಾನ್ಯದೊಳ-ಗಣಂಗಡಿ ನಾಲ್ಕು ಗಾಣವೊಂದಾ ಬಸದಿಯ ಬಣಂಜೆಯ ನಿವೇಶನವಯ್ದು ಊರಿಂ ಪಡುವಲು ಹೂದೋಂಟದ ಕಂಬಂ ಮೂವತ್ತು[I*] ಮತ್ತಮಾವೂರ ಸಂತೆಯಂ ಮಾಡಲುಪೇಡಿ ಬೆಕ[ಗ](62)ಲೆಮುಂಖ್ಯವಾಗಿ ನಾಲ್ಕುಂ ಪಟ್ಟಣದ ಸೆಟ್ಟಿಯರುಂ ಮಹಾನಾಡಾಗಿ ನೆರೆದಿರ್ದ್ದಲ್ಲಿ ಆ ಶಾನ್ತಿನಾಥದೇವರ ನಿತ್ಯಾಭಿಷೇಕಕ್ಕಮಷ್ಟವಿಧಾರ್ಚ್ಚನೆಗಂ ಸರ್ವ್ವಬಾಧಾಪರಿಹಾರವಾಗಿ ಬಿಟ್ಟ ಎತ್ತುಕ(63)ತ್ತೆಕೋಣಂ ಮೊದಲಾದವಱುವತ್ತು ೬೦ ॥ ಮತ್ತಮೇಳೆವರೆ ಹಂನೊಂದುಮರೆಯ ಸಮಸ್ತಮಂಮುರಿದಂಡಂ ಮುಖ್ಯವಾಗಿ ನಾಡುಗಳು ಬಿಟ್ಟಾಯದ ಕ್ರಮಮೆಂತೆಂದೊಡೆ [I*] ಸಕಳಧಾನ್ಯಮಾವುದಂ ಬಂ(64)ದಡಂ ಹೇಱಿಂಗೊಂಮಾನಂ ಭಂಡಿಗೆ ಬಳ್ಳವೆರಡು ಹಸರಕ್ಕಡಕೆ ಅಯ್ದು ಹೇಱಿಂಗೆಲೆ ನೂಱು ಹೊತ್ತಳಕ್ಕಯ್ವತ್ತು ಹಾಡಕ್ಕೆ ಸೊಲ್ಲಗೆ ಎಣ್ಣೆ ಓಲೆಯ ಹೊಱೆ ಮಾಱಿತಕ್ಕೆ ಒಂದಂ ಕಟ್ಟೋಲೆ ಕಿಱುಕುಳಮೇನು ಮಾ(65)ಱಿದಡಂ ಸುಟ್ಟುಗಾಯಂ ಹಿಡಿವತ್ತಿ ಕಂಬಿಗೆ ಮಡಕೆ ಒಂದು ॥

ಶ್ರೀಜನ್ಮಾಯತಮೂರ್ತ್ತಿ ಕೀರ್ತ್ತಿಮಹಿಮಾವಿಸ್ತಾರಿ ಧಾತ್ರಿಸ್ಫುರ-
ತ್ತೇಜಶ್ಚಕ್ರಧರಂ ಜಗಂನುತಯಶಂ ತಂನಂದದಿಂದಂದು ರಾ-
ರಾಜಿಪ್ಪೀ ಜಿನಶಾ(66)ನ್ತಿನಾಥನವನೀನಾಥಪ್ರಣೂತೋದಯಂ
ರಾಜಕ್ಷ್ಮಾಪತಿಗೀಗೆ ಬೇೞ್ಪ ಬರವಂ ಜನ್ಮಾರ್ಕ್ಕತಾರಂಬರಂ ॥ [೪೦*]

ಲಲಿತಪದಾತ್ಥಾ೯ಳಂಕೃತಿ–
ಗಳಿನೊಸರ್ವ ರಸಂಗಳಿಂದೆ ಬುಧರೊಳ್ಪುಳಿಕಾ–
ವಳಿಸಸ್ಯವೊಗೆಯೆ (67)ಕವಿಕುಳ–
ತಿಳಕ[ಂ*] ಶಾಸನಮನೊಲ್ದು ಪೇಳ್ದಂ ಪಾರ್ಶ್ವಂ ।। [೪೧*]

ಬಹುಭಿರ್ವ್ವಸುಧಾ ದತ್ತಾ ರಾಜಭಿಸ್ಸಗರಾದಿಭಿಃ [I*]
ಯಸ್ಯ ಯಸ್ಯ ಯದಾ ಭೂಮಿಃ ತಸ್ಯ ತಸ್ಯ ತದಾ ಫಲಂ ‖ [೪೨*]

ಗಣ್ಯಂತೇ ಪಾಂಸವೋ ಭೂಮೇರ್ಗ್ಗಣ್ಯಂತೇ ವೃಷ್ಟಿಬಿಂದವಃ [I*]
ನ(68) ಗಂಣ್ಯಂತೇ ವಿಧಾತ್ರಾಪಿ ಧರ್ಮ್ಮಸಂರಕ್ಷಣೇ ಫಲಂ ‖ [೪೩*]

ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುಂಧರಾಂ [I*]
ಷಷ್ಟಿರ್ವ್ವರ್ಷಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿ(ಕೃ)ಮಿಃ ‖ [೪೪*]

ಸಾಮಾನ್ಯೋಯಂ ಧರ್ಮ್ಮಸೇತುರ್ನೃಪಾಣಾಂ
ಕಾ(69)ಲೇ ಕಾಲೇ ಪಾಲನೀಯೋ ಭವದ್ಭಿಃ
ಸರ್ಬ್ಬಾನೇತಾನ್ಭಾವಿನಃ ಪಾರ್ತ್ಥಿವೇಂದ್ರಾ–
ನ್ಭೂಯೋ ಭೂಯೋ ಯಾಚತೇ ರಾಮಚಂದ್ರಃ ।। [೪೫*]

ಮದ್ವಂಶಜಾಃ ಪರಮಹೀಪತಿವಂಶಜಾ ವಾ
ಪಾಪಾದಪೇತಮ(70)ನಸೋ ಭುವಿ ಭೂಮಿಪಾಳಾ
ಯೇ ಪಾಳಯಂತಿ ಮಮ ಧರ್ಮ್ಮಮಿಮಂ ಸಮಗ್ರಂ
ತೇಭ್ಯೋ ಮಯಾ ವಿರಚಿತೋಂಜಳಿರೇಷ ಮೂರ್ದ್ಧ್ನಿ ‖ [೪೬*]

ಮಂಗಳಂ ಮಹಾಶ್ರೀ ಶ್ರೀ ಅರ್ಹತೇ ನಮಃ ‖

ಸುಖಾಂತನಾಟಕ

ಸಿ. ಆರ್. ಯರವಿನತೆಲಿಮಠ

ಒಂದು ಕೈಯಲ್ಲಿ ಮುಖವಾಡ, ಇನ್ನೊಂದು ಕೈಯಲ್ಲಿ ಕುರುಬನ ಕೈಕೋಲನ್ನು ಹಿಡಿದು, ಸರಳ ವೇಷ ಧರಿಸಿ, ಮನಮೋಹಕ ಭಂಗಿಯಲ್ಲಿ ನಿಂತು ಲಾವಣ್ಯವನ್ನು ಸೂರೆಮಾಡುವ ಯುವತಿ ಥಾಲಿಯು ಗ್ರೀಕಪುರಾಣಗಳ ಪ್ರಕಾರ ಸುಖಾಂತನಾಟಕದ ಚೇತನಸ್ವರೂಪ. ಒಂಬತ್ತು ಜನ ಕಾವ್ಯಕನ್ನಿಕೆಯರಲ್ಲಿ ಒಬ್ಬಳಾದ ಈ ಬಹುರೂಪಿಣಿಯ ನಿಜರೂಪವನ್ನು ಅದ್ಯಂತ ಬಣ್ಣಿಸುವುದು ಅಸಾಧ್ಯ. ಗಾಳಿಯಾಗಿ ಸುತ್ತಲೂ ಸುಳಿಯಬಲ್ಲ, ಬೆಳಕಾಗಿ ಜನಮನವನ್ನು ಬೆಳಗಬಲ್ಲ, ಪಾದರಸದಂತೆ ಪ್ರವಹಿಸಬಲ್ಲ ಇವಳನ್ನು ಸ್ಥಿರೀಕರಿಸುವುದೂ ಅಸಾಧ್ಯ. ಸಚ್ಚಿದಾನಂದಳೂ ನಿತ್ಯಪರಿಪೂರ್ಣಳೂ ಆದ ಇವಳಿದ್ದೆಡೆ ಸುಖಸಮೃದ್ಧಿ, ಇವಳಿದ್ದೆಡೆ ಸುವರ್ಣವೃಷ್ಟಿ. ಇವಳು ಚಿರಂಜೀವಿಯೂ ಹೌದು; ಚಿರಯುವತಿಯೂ ಹೌದು. ಇವಳ ರೂಪವೈವಿಧ್ಯದಂತೆ ಭಾವಲಹರಿಗಳೂ ಅನೇಕ. ಕಲ್ಪನೆಯ ಬೆನ್ನೇರಿ ಬಂದು ನಗೆಯ ಚಾಬೂಕಿನಿಂದ ದೋಷಗಳ ಬೇಟೆಯಾಡುವುದು ಇವಳ ಧರ್ಮ. ಕೊಲ್ಲುವ ಮುನ್ನ ಇಲಿಗಳೊಂದಿಗೆ ಬೆಕ್ಕು ಚಿನ್ನಾಟವಾಡುವಂತೆ ಇವಳು ಕೆಲಹೊತ್ತು, ಆ ದೋಷಗಳೊಂದಿಗೆ ಚಿನ್ನಾಟವಾಡುತ್ತಾಳೆ. ಇವಳ ಭಾವತರಂಗಗಳಲ್ಲಿ ಮುಖ್ಯವಾದುದು ಹಾಸ್ಯಲಹರಿ. ನಗೆ ಇವಳ ಜೀವಾಳ, ತಾನು ನಕ್ಕು ಅನ್ಯರನ್ನು ನಗೆಗಡಲಿನಲ್ಲಿ ಮೀಯಿಸುವುದೇ ಇವಳ ಕಾರ್ಯ. ಹಾಸ್ಯಲಹರಿಯ ಒತ್ತಡ ಹೆಚ್ಚು ಕಡಿಮೆ ಆದಂತೆ ಇವಳ ನಗೆ ವ್ಯತ್ಯಾಸಗೊಳ್ಳುತ್ತ ಹೋಗುತ್ತದೆ. ಒಮ್ಮೆ ಕಾರ್ಮೋಡದಂತೆ ಗರ್ಜಿಸುವ ಇವಳು ಇನ್ನೊಮ್ಮೆ ಮಂದಹಾಸ ಬೀರಬಲ್ಲಳು. ಜಿರುನಗೆ, ಕಿರುನಗೆ, ಅಟ್ಟಹಾಸ, ವಿಕಟಹಾಸ, ಕುಹಕನಗೆ, ಕಚಗುಳಿ ನಗೆ, ಇತ್ಯಾದಿ ಥಾಲಿಯಾಳ ನಗೆಯ ನೂರು ಮುಖಗಳು. ರಸೋಭಿಜ್ಞಳು, ಸೃಜನಶೀಲಳೂ ಆದ ಈ ಬಹುರೂಪಿಣಿಯ ನಿಜರೂಪವನ್ನು ತತ್ವಜ್ಞಾನಿಗಳು ಒಂದು ಬಗೆಯಾಗಿ, ಮನೋವಿಜ್ಞಾನಿಗಳು ಬೇರೊಂದು ಬಗೆಯಾಗಿ, ಕವಿಗಳು ಇನ್ನೊಂದು ಬಗೆಯಾಗಿ ತಮ್ಮ ಅನುಭವಕ್ಕೆ ನಿಲುಕಿದಷ್ಟನ್ನು ಕಂಡಿದ್ದಾರೆ. ತಮ್ಮ ಅನುಭವಕ್ಕೆ ನಿಲುಕಿದಷ್ಟನ್ನು ಥಾಲಿಯಾಳ ಬಗೆಗೆ ಹೇಳಿದ್ದಾರೆ.

ಶಾಪೆನ್ ಹಾವರನಂಥ ತತ್ವಜ್ಞಾನಿ ಸುಖಾಂತನಾಟಕದ ಚೇತನಸ್ವರೂಪವನ್ನು ಕುರಿತು ಹೀಗೆ ಹೇಳಿದ್ದಾನೆ:

ದುರಂತನಾಟಕ ಜೀವನದಲ್ಲಿ ನಿರಾಶೆಯನ್ನು ಹುಟ್ಟಿಸಿ, ನಿವೃತ್ತಿಮಾರ್ಗದತ್ತ ಮಾನವನನ್ನು ಎಳೆದೊಯ್ಯುತ್ತಿದ್ದರೆ ಸುಖಾಂತ ನಾಟಕ ಪ್ರವೃತ್ತಿಮಾರ್ಗವನ್ನು

ಪ್ರತಿಪಾದಿಸುತ್ತದೆ. ಜೀವನದಲ್ಲಿ ಸಂಕಷ್ಟಗಳು ಸಾವಿರ. ಅದನ್ನಾರೂ ಅಲ್ಲಗಳೆಯು ವಂತಿಲ್ಲ. ಆ ಕಷ್ಟಗಳನ್ನು ಎದುರಿಸಿ, ಅವುಗಳಿಗೆ ಸರಿಯಾದ ಪರಿಹಾರ ಕಂಡುಹಿಡಿದು ಜಯಶಾಲಿಯಾಗುವಲ್ಲಿ, ಅಪಾರ ಆನಂದ ಉಂಟು. ಹೀಗಾಗಿ ಸುಖಾಂತನಾಟಕದಿಂದ ಮಾನವನು ಕಲಿಯಬೇಕಾದುದು: ಜೀವನನಾಟಕದಲ್ಲಿ ಅಪಾರ ದುಃಖವಿದ್ದರೂ, ಭಯಭೀತರಾಗದೆ ಆ ದುಃಖಸಾಗರವನ್ನು ಕಡೆಮುಟ್ಟಿ ಈಜಿ ಪಡೆವ ಸುಖವೇ ನಿಜವಾದ ಸುಖ. ಸುಖದುಃಖಗಳ ಸಂಗಮದಲ್ಲಿ ಮಿಂದು ಪವಿತ್ರರಾಗಿ ಅಳು ನುಂಗಿ ನಕ್ಕರೆ, ಅದೇ ಸ್ವರ್ಗ. ಈ ಸುಖವನ್ನು, ಸ್ವರ್ಗವನ್ನು ಪ್ರತಿಪಾದಿಸುವ ಸುಖಾಂತನಾಟಕದಲ್ಲಿ ನಿರಾಶೆಯ ಕಪ್ಪು ಛಾಯೆ ಕಂಡುಬಂದರೂ ಅಲ್ಪ. ಅಲ್ಲಿ ನಗೆಯ ವಸ್ತುವಿಗೇನೂ ಕೊರತೆಯಿಲ್ಲ. ಆ ನಗೆ ಹೃದಯವನ್ನು ಹಗುರಾಗಿಸುತ್ತದೆ, ಮನಸ್ಸನ್ನು ಹಿಗ್ಗಿಸುತ್ತದೆ. ಒಟ್ಟಿನಲ್ಲಿ ಜೀವನದ ಸರಿಯಾದ, ಸುಂದರಕಲ್ಪನೆಯನ್ನು ಸುಖಾಂತನಾಟಕ ಮಾಡಿ ಕೊಡುತ್ತದೆ.[೧]

ಹೇಗಲ್‌ನೆಂಬ ಮನೋವಿಜ್ಞಾನಿ ಸುಖಾಂತನಾಟಕದ ಚೇತನ ಸ್ವರೂಪವನ್ನು ಕುರಿತು ಹೀಗೆ ಹೇಳಿದ್ದಾನೆ:

ಹಾಸ್ಯ, ಆನಂದ ಮತ್ತು ಆತ್ಮವಿಶ್ವಾಸಗಳಿಂದ ಕೂಡಿಕೊಂಡ ಈ ಚೇತನ ಶುಷ್ಕ ನಗೆಯನ್ನು ಹುಟ್ಟಿಸುವ ಸಾಧನಕ್ಕಿಂತ ಭಿನ್ನವಾಗಿದೆ. ಅದು ತನ್ನಲ್ಲಿರುವ ವಿಪರ್ಯಾಸವನ್ನು ಜಯಿಸುವ ಶಕ್ತಿಯನ್ನು ಪಡೆದಿರುವುದರ ಜೊತೆ ಕಹಿ ಅನುಭವಗಳಿಂದ ಮನಸ್ಸನ್ನು ಕಹಿಮಾಡಿಗೊಳ್ಳದ, ಅನಿಷ್ಟ ಘಟನೆಗಳಿಂದ ನಿರ್ಲಿಪ್ತವಾಗಿ ನಿಲ್ಲುವ ಅಗಾಧ ಶಕ್ತಿಯನ್ನು ಹೊಂದಿದೆ. ಈ ಚೇತನವೆನ್ನುವುದು ಮನಸ್ಸಿನ ಒಂದು ಸ್ಥಿತಿ – ಚಿದಾನಂದ ರೂಪ. ಇದು ಆತ್ಮನ ಸುಸ್ಥಿತಿ, ತನ್ನರುವಿನಲ್ಲಿ ತಾನಿದ್ದು ಆಶೆ ಆಕಾಂಕ್ಷೆ ಈಡೇರದಿರುವುದನ್ನು ಕೂಡ ಸಹಿಸುವ ಮಾನಸಿಕ ಸ್ಥಿತಪ್ರಜ್ಞಾವಂತಿಕೆ.[೨]

ಸಾಹಿತಿ ವಿಮರ್ಶಕ ಮೆರಿಡಿಥ್‌ನು ಹೇಳುವ ಸುಖಾಂತನಾಟಕದ ಚೇತನ ಸ್ವರೂಪದ ವಿವರಣೆ ಹೀಗಿದೆ:

ವ್ಯವಹಾರಜ್ಞಾನವನ್ನಾಧರಿಸಿ ಹೇಳುವುದಾದರೆ ಮಾನವನ ಸಕಲ ವ್ಯಾಪಾರ ಗಳನ್ನು ಅವ್ಯಕ್ತವಾದ ಚೇತನವಸ್ತುವೊಂದು ನಿರೀಕ್ಷಿಸುತ್ತದೆ; ನಿಯಂತ್ರಿಸುತ್ತದೆ. ಆಕಾಶದಲ್ಲಿ ತೇಲುವ ಹದ್ದು ನೆಲದ ಮೇಲೆ ಕಣ್ಣಿರಿಸಿ, ತನಗೆ ಇಷ್ಟವಾದ ಬೇಟೆಯನ್ನು ಅರಸುವಂತೆ ಈ ಚೇತನ ಸುಸಂಸ್ಕೃತ ಮಾನವನ ಸದೋಷಗಳನ್ನು ಅರಸುತ್ತದೆ. ಅದು ಮಾನವನ ಭವಿಷ್ಯದ ಬಗ್ಗೆ ಕುತೂಹಲಿಯಲ್ಲ; ವರ್ತಮಾನದ ಬಗ್ಗೆ ಮಾತ್ರ ಆಸಕ್ತ. ಮಾನವ ತನ್ನ ಆಚಾರವಿಚಾರಗಳನ್ನು ಅತಿಕ್ರಮಿಸಿ, ಅಹಂಭಾವ,

---

೧. Schopenhauer, Arthur, *The world As will and Idea*, Vol- III (Tr, by R. B. Haldare and J. Kemp), p. 278

೨. Hegel, G., *The Philosophy of Fine Art*, p. 179,

ನಾಟಕೀಯತೆ. ಕಪಟ, ವಾಗಾಡಂಬರ, ವಿದ್ಯಾಗರ್ವಗಳ ಉಗಮಸ್ಥಾನವೆನಿಸಿದಾಗ; ಆತ್ಮವಂಚನೆ, ವ್ಯಕ್ತಿಪೂಜೆ, ಸಮ್ಯಕ್‌ದೃಷ್ಟಿರಾಹಿತ್ಯ, ಮತಿವೈಕಲ್ಯಗಳಿಗೆ ಗುಲಾಮನಾದಾಗ ಅವನ ತಲೆಯಮೇಲಿರುವ ಚೇತನೆ ಅವನ ಮೇಲೆ ತನ್ನ ಬೆಳ್ಳಿ ಮೆರುಗಿನ ವಕ್ರದೃಷ್ಟಿ ಬೀರಿ, ಅವನನ್ನು ನಗೆಯ ವರ್ಷಾಧಾರೆಯಿಂದ ತೋಯಿಸುತ್ತದೆ. ಈ ಚೇತನೆ ಸುಖಾಂತನಾಟಕದ ನಾಟ್ಯಧರ್ಮ[೩].

ವಿಲರ್ಡ ಸ್ಮಿಥ್‌ನು ಸುಖಾಂತನಾಟಕಗಳನ್ನು ಅಭ್ಯಸಿಸುವಾಗ ತನಗಾದ ಅನುಭವವನ್ನು ಹೀಗೆ ಬರೆದಿಟ್ಟಿದ್ದಾನೆ. ಸುಖಾಂತನಾಟಕಗಳನ್ನು ಹೆಚ್ಚು ಅಭ್ಯಾಸ ಮಾಡಿದಂತೆ ಅವುಗಳ ತುಂಬ ಸಂಚರಿಸುವ, ಕೈ ಕಣ್ಣುಗಳಿಗೆ ನಿಲುಕದ, ಆವುದೋ ಚೇತನವಸ್ತುವಿನ ಸಾನಿಧ್ಯದ ಅರಿವಾಗುತ್ತದೆ. ಒಂದು ಕ್ಷಣವೂ ನಿಶ್ಚಲವಾಗಿರದ ಈ ಚೇತನಾ ಸರೋವರದ ಸಿರಿಗನ್ನಡಿಯ ಮೇಲೆ ಕುಣಿಯುವ ಸೂರ್ಯಕಿರಣದಂತೆ ಸದಾ ಸಂದೇಶವಾಹಕವಾಗಿ ತನ್ನ ಲೀಲೆಯಲ್ಲಿ ತಾನಿರುತ್ತದೆ."[೪]

ಪ್ರೊ. ವ್ಹಿ. ಎನ್. ಭೂಷಣ ಥಾಲಿಯಾಳ ಬಹುರೂಪ ಮತ್ತು ಅಗಾಧ ಶಕ್ತಿಯ ಬಗ್ಗೆ ಇನ್ನೂ ಸುಂದರವಾಗಿ, ಸ್ಪಷ್ಟವಾಗಿ ಹೇಳಿದ್ದಾರೆ.

"ಥಾಲಿಯಾ ಏಕಕಾಲಕ್ಕೆ ಅನೇಕ ರೂಪಧರಿಸಬಲ್ಲಳು, ಖಗಗಳಂತೆ ಹಾರುತ್ತಿರುವಾಗ ರೂಪಬದಲಿಸುತ್ತ ಹೋಗುವಳು. ಸೂರ್ಯಕಿರಣದಂತೆ ಕೈಗೆ ಸಿಕ್ಕಳು. ಆದರೆ ಅವಳನ್ನು ಹಿಡಿಯಹೋದ ಹಿಡಿಯನ್ನು ಬೆಳಕಿನಿಂದ ತುಂಬುವಳು."[೫]

ಈ ಚೈತನ್ಯ ರೂಪಿ ಥಾಲಿಯಾ ತೋರಿಸುವಂತೆ ನಮ್ಮ ಜೀವನ ಮೋಜಿನದಾಗಿದೆ. ಅವಳು ಜೀವನದಲ್ಲಿ ಯಾವತ್ತೂ ದೊರೆಯಬಹುದಾದ ಸುಖಾನಂದಗಳ ಅರಿವುಮಾಡಕೊಟ್ಟು ನಮ್ಮ ಆಶೆ ಆಕಾಂಕ್ಷೆ, ಧೈರ್ಯ, ಸ್ಥೈರ್ಯ ಮತ್ತು ವಿಶ್ವಾಸಗಳನ್ನು ಬಲಪಡಿಸುವ ಮಹಾಶಕ್ತಿಯಾಗಿದ್ದಾಳೆ. ಅವಳೆಂದೂ ಪಲಾಯನವಾದವನ್ನು ಪ್ರತಿಪಾದಿಸಳು. ಜೀವನದ ಎಲ್ಲ ಗಂಭೀರ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಿ, ಸರಿಯಾದ ಪರಿಹಾರ ಕಂಡುಹಿಡಿಯುತ್ತಾಳೆ. ಅವಳಿಗೆ ಜೀವನದ ಅಡ್ಡಿ, ಆತಂಕ, ಕುಂದುಕೊರತೆಗಳನ್ನು ಸಮಗ್ರವಾಗಿ ತಿಳಿದುಕೊಳ್ಳುವ ಆಸಕ್ತಿ ಬಹಳ. ಮಾನವಕಲ್ಯಾಣಕ್ಕಾಗಿ ಹಗಲಿರುಳು ಶ್ರಮಿಸುವ ಇವಳು "ಅಳು ನುಂಗಿ ನಗು" ಎಂದು ಪದೇಪದೇ ಒತ್ತಿಹೇಳುತ್ತಾಳೆ. ಅವಳ ಹಾಸ್ಯದ ಹೊನಲಲ್ಲಿ ಮಾನಸಿಕ ಅಸ್ವಾಸ್ಥ್ಯವಷ್ಟೇ ಅಲ್ಲ, ದೈಹಿಕ ಆಲಸ್ಯಗಳೂ ಕೊಚ್ಚಿಕೊಂಡು ಹೋಗುತ್ತವೆ. ಅವಳ ನಗೆಬೆಳದಿಂಗಳು ನಮಗೆ ತಂಪನ್ನೂ, ಬೆಳಕನ್ನೂ ಅಮಿತೋತ್ಸಾಹವನ್ನೂ, ಆಹ್ಲಾದವನ್ನೂ ನೀಡುತ್ತದೆ.

× × × × ×

---

೩. Meredith, G., *An Essay On Comedy*, pp. 88—90-

೪. Smith, Willard, *The Nature of Comedy*, p. 10.

೫. Bhushan, V. N. *Hawk Over Heron*, p. 4.

Comedy ಬಹಳ ಅರ್ಥಪೂರ್ಣವಾದ ಪದ. ಕನ್ನಡದಲ್ಲಿ ಅದರ ಅರ್ಥವೈಶಾಲ್ಯ ವನ್ನೊಳಗೊಂಡ ಒಂದೂ ಪದ ಸಿಕ್ಕದು. ವಿನೋದನಾಟಕ, ನಗೆನಾಟಕ, ಹಾಸ್ಯ ಪ್ರಧಾನನಾಟಕ, ಸುಖಾಂತನಾಟಕವೆಂದು ಕೆಲವರು ಕರೆದಿದ್ದರೂ ಇವು ಅರ್ಥದೃಷ್ಟಿ ಯಿಂದ ಇನ್ನೂ ಊನವೆನಿಸುತ್ತವೆ. ಇದು ಕೇವಲ ವಿನೋದವೂ ಅಲ್ಲ. ಹಾಸ್ಯವೂ ಅಲ್ಲ, ಸುಖಾಂತವೂ ಅಲ್ಲ. ಇವೆಲ್ಲ ಗುಣ ವೈಶಿಷ್ಟ್ಯಗಳನ್ನೊಳಗೊಂಡ ನಾಟಕಪ್ರಕಾರ. ಹೀಗಾಗಿ Comedy ವಿನೋದ ಹಾಸ್ಯಪ್ರಧಾನ ಸುಖಾಂತನಾಟಕ.

Comedy ಗೆ ಮೂಲ Komos ಎಂಬ ಗ್ರೀಕ ಪದ. Komos ಎಂದರೆ ಮದ್ಯಾಮೋದ: ಮುಂದೆ ಇದು ಲ್ಯಾಟಿನ್ ಭಾಷೆಯಲ್ಲಿ Comoedia ಎಂದೂ. ಇಟಾಲಿಯನ್‌ದಲ್ಲಿ Commedia ಎಂದೂ ರೂಪತಾಳಿತು. ಇಲ್ಲಿಯವರೆಗೆ ಇದು ಪ್ರಹಸನ (Farce) ರೂಪದಲ್ಲಿದ್ದಿತು. ಮಧ್ಯಯುಗದಲ್ಲಿ ಇದಕ್ಕೆ ಸುಖಾಂತಕಥೆ ಎಂಬ ಅರ್ಥ ಬಂದಿತು. ಚಾಸರ ಕವಿಯು ಕಥೆಗಳು ಸುಖಾಂತವಿದ್ದು Comedy ಎಂದು ಕರೆಯಲ್ಪಟ್ಟುದನ್ನು ಇಲ್ಲಿ ಗಮನಿಸಬೇಕು. ಡಾಂಟೆ ಮಹಾಕವಿಯು La Comedia ಪದವನ್ನು ಇದೇ ಅರ್ಥದಲ್ಲಿ ಬಳಸಿದ್ದಾನೆ. ಮುಂದೆ ಪವಾಡ ವಸ್ತುಗಳನ್ನೊಳಗೊಂಡ (Mystery) ನಾಟಕಗಳಿಗೆ ಈ ಪದವನ್ನು ಬಳಸ ಲಾಯಿತು. ಪುನರುಜ್ಜೀವನ (Renaissance) ಯುಗದಲ್ಲಿ ಮೂಲದಲ್ಲಿದ್ದ ಪ್ರಹಸನ ಎಂಬ ಅರ್ಥವನ್ನು ಮತ್ತೆ ಆರೋಪಿಸಲಾಯಿತು. ಈಗ ಮಾತ್ರ ಮಧ್ಯಯುಗದಲ್ಲಿ ಪ್ರಚಲಿತವಿದ್ದ ಸುಖಾಂತನಾಟಕ ಎಂಬರ್ಥ ಮತ್ತು ರೆನೆಸಾನ್ಸ ಪಂಡಿತರು ಪ್ರಾಚೀನ ಗ್ರೀಕ Comedy ಗೆ ಕೊಟ್ಟ ಪ್ರಹಸನ ಎಂಬರ್ಥಗಳೂ ಸೇರಿಕೊಂಡಿವೆ. ಅಂತೆಯೇ Comedy ಹಾಸ್ಯಪ್ರಧಾನ ಸುಖಾಂತ ನಾಟಕ.

(೧) ಪ್ರಹಸನ (Farce), (೨) ವಿನೋದ (Fun), (೩) ವಾಕ್‌ಚಾತುರ್ಯ (Wit), (೪) ಹಾಸ್ಯ (Humour), ಮತ್ತು ವಿಡಂಬನೆ (Satire), ಇವು ಸುಖಾಂತ ನಾಟಕದ ಮೂಲ ಅಂಶಗಳಾಗಿವೆ.

೧) **ಪ್ರಹಸನ** (Farce) : ಇದು ನಗೆ ಬುಗ್ಗೆ. ಇದರ ಉದ್ದೇಶ ಪ್ರೇಕ್ಷಕರನ್ನು ನಗೆಯಲ್ಲಿ ಮುಳುಗಿಸುವುದು. ಇದಕ್ಕೆ ಗಹನವಾದ ಅರ್ಥವಾಗಲಿ ವಿಶಾಲವಾದ ದೃಷ್ಟಿಕೋನವಾಗಲಿ ಇರುವುದಿಲ್ಲ. ಹೀಗಾಗಿ ಇದರಿಂದ ಬುದ್ಧಿಗಾಗಲಿ ಭಾವಕ್ಕಾಗಲಿ ಯಾವದೇ ರೀತಿಯ ಪ್ರಚೋದನೆ ಸಿಕ್ಕದು. ಇದರ ಪರಿಣಾಮ ಕೇವಲ ದೇಹದ ಮೇಲೆ, ಅದರಲ್ಲಿಯೂ ಪುಪ್ಪುಸದ ಮೇಲೆ. ಮೂಲದಲ್ಲಿ ಸುಖಾಂತನಾಟಕ ಇಂಥ ಪ್ರಹಸನವೇ ಆಗಿದ್ದಿತು. ಅರಿಸ್ಟೋಫೆನಸ್ ಮೊದಲಾದವರ ಗ್ರೀಕ ಸುಖಾಂತ ನಾಟಕಗಳು ಇದಕ್ಕೆ ಉತ್ತಮ ಉದಾಹರಣೆ. ಇದುವರೆಗೆ ವಿವೇಚಿಸಿದ ಸಂಗತಿಗಳಿಂದ ತಿಳಿದು ಬರುವುದಿಷ್ಟು: ಪ್ರಹಸನವೇ ಸುಖಾಂತನಾಟಕಕ್ಕೆ ಮೂಲ. ಪ್ರಹ- ಸನವೇ ಬೆಳೆದು ಸುಖಾಂತನಾಟಕವಾಯಿತೆಂದರೂ ತಪ್ಪಾಗಲಿಕ್ಕಿಲ್ಲ. ಆದರೂ ಒಂದು ಮಹತ್ವದ ವಿಷಯವನ್ನು ಇಲ್ಲಿ ಅವಶ್ಯ ಗಮನಿಸಬೇಕು. ಪ್ರಹಸನ ಕೇವಲ ಹಾಸ್ಯದಲ್ಲಿ ಹುಟ್ಟಿ ಹಾಸ್ಯದಲ್ಲಿ ಕೊನೆಗೊಳ್ಳುವುದು. ಹಾಸ್ಯ ಸುಖಾಂತನಾಟಕದಲ್ಲಿ

ಹಾಸುಹೊಕ್ಕಾಗಿ ಹಮ್ಮಿಕೊಂಡಿದ್ದರೂ ಹಾಸ್ಯವನ್ನಷ್ಟೆ ಒಳಗೊಂಡಿರುವ ಪ್ರಹಸನ ಸುಖಾಂತನಾಟಕವೆಂದು ಕರೆಯಿಸಿಕೊಳ್ಳಲಾರದು. ಅದಕ್ಕಿರುವ ದೃಷ್ಟಿಶೂನ್ಯತೆ ಮತ್ತು ಅರ್ಥರಾಹಿತ್ಯ ಮೊದಲಾದ ಕೊರತೆಗಳನ್ನು ಗಮನಿಸಿದ್ದಾದರೆ ಸುಖಾಂತನಾಟಕಕ್ಕಿಂತ ಅದೆಷ್ಟು ಭಿನ್ನವಾಗಿರುವುದು ಸ್ಪಷ್ಟವಾಗುತ್ತದೆ. ಸುಖಾಂತ ನಾಟಕಕ್ಕಿರುವ ಅಂತಃಸತ್ವ ಅದಕ್ಕಿಲ್ಲ. ಪ್ರಹಸನ ಸುಖಾಂತನಾಟಕದ ಒಂದಂಶವಾಗಿದ್ದು ಅದರ ಅಲ್ಪ ಭಾಗವನ್ನು ಪ್ರತಿಬಿಂಬಿಸುತ್ತದೆ. ಎಲ್. ಜೆ. ಪಾಟ್ಸನು ಪ್ರಹಸನ ಮತ್ತು ಸುಖಾಂತ ನಾಟಕಗಳ ನಿಕಟ ಸಂಬಂಧ ಮತ್ತು ಅಂತರವನ್ನು ಮನೋಜ್ಞವಾಗಿ ಹೀಗೆ ಹೇಳುತ್ತಾನೆ: Though farce is not comedy, comedy can contain farce, just as wine can have bubbles, though effervescence is not a generic quality of wine.[೬] ಸುಖಾಂತನಾಟಕ ಮದ್ಯವಿದ್ದಂತೆ. ಪ್ರಹಸನ ಅದಕ್ಕಿರುವ ನೊರೆ ಇದ್ದಂತೆ. ನೊರೆಯಿಂದ ಯಾವ ಪರಿಣಾಮವೂ ಆಗದು; ತೃಪ್ತಿಯೂ ಉಂಟಾಗದು. ಪ್ರಹಸನವನ್ನು ಸುಖಾಂತನಾಟಕದಿಂದ ಬಿಂಗಡಿಸುವ ಪ್ರಯತ್ನವೆಂದರೆ ನೀರ ಮೇಲಿನ ಗುಳ್ಳೆಯನ್ನು ಬಿಂಗಡಿಸುವ ವೈಫಲ್ಯವೆಂದೇ ಹೇಳಬೇಕು.

(೨) **ವಿನೋದ** (Fun) : ಮೂಲದಲ್ಲಿ ಸುಖಾಂತನಾಟಕ ಮದ್ಯಾಮೋದದಲ್ಲಿ ಹುಟ್ಟಿ, ನೃತ್ಯ ಸಂಗೀತಗಳೊಂದಿಗೆ ಮುನ್ನಡೆದು ಮದುವೆಯ ಮೋಜಿನಲ್ಲಿ ಮುಕ್ತಾಯ ಗೊಳ್ಳುವರೀತಿಯನ್ನು ಸ್ಮರಿಸಿದರೆ ಅಲ್ಲಿ ಆಮೋದ ಪ್ರಮೋದಕ್ಕಿರುವ ಪ್ರಾಮುಖ್ಯತೆಯ ಸ್ಪಷ್ಟಕಲ್ಪನೆ ನಮಗಾಗುತ್ತದೆ. ನಾಟಕದಲ್ಲಿ ವಿನೋದ ಮುಖ್ಯ. ಅದರಲ್ಲಿಯೂ ಸುಖಾಂತನಾಟಕದಲ್ಲಿ ಆಮೋದ ಪ್ರಮೋದಕ್ಕೆ, ಸಂಗೀತ, ನೃತ್ಯ, ಹಾಸ್ಯ ಮೊದಲಾದ ವಿವಿಧ ವಿನೋದಕ್ಕೆ ಅಧಿಕಪ್ರಾಶಸ್ತ್ಯ. ಅಂತೆಯೇ ಭಿನ್ನ ಭಿನ್ನ ಅಭಿರುಚಿಯ ಪ್ರೇಕ್ಷಕರನ್ನು ತಣಿಸುವ ಏಕೈಕ ಸಮಾರಾಧನೆ ಈ ಸುಖಾಂತನಾಟಕ.

(೩) **ವಾಕ್ ಚಾತುರ್ಯ** (Wit) : ವಾಕ್‌ಚಾತುರ್ಯ ಸುಖಾಂತನಾಟಕದಲ್ಲಿ ಒಂದು ಪ್ರಮುಖ ವಿನೋದಪ್ರಕಾರವಾಗಿ ಕಾಣಿಸಿಕೊಳ್ಳುತ್ತದೆ. ಥಾಲಿಯಾಳ ಬುದ್ಧಿ-ಚಾತುರ್ಯ ಸುಖಾಂತನಾಟಕದ ತುಂಬೆಲ್ಲ ಕಾಣಿಸಿಕೊಳ್ಳುತ್ತದೆ. ಆದರೆ ಅದು ವಾಕ್ ಚಾತುರ್ಯವಾಗಿ ಆವಿರ್ಭವಿಸಿದರೆ, Wit ಆಗುತ್ತದೆ. Wit ಒಂದು ಪ್ರಕಾರದ ಆಟವೇ ಹೌದು. ಇಲ್ಲಿ ಥಾಲಿಯಾ ಶಬ್ದಗಳೊಂದಿಗೆ ಆಟವಾಡುತ್ತಾಳೆ. ಬುದ್ಧಿ ಚುರುಕಾಗಿದ್ದಂತೆ ಅವಳ ನಾಲಿಗೆಯೂ ಹರಿತವಾದದ್ದುಂಟು. ರೆಸ್ಟೊರೇಶನ ನಾಟಕಕಾರರು Wit ನ್ನು ಧಾರಾಳವಾಗಿ ಬಳಸಿದ್ದಾರೆ. ಹೀಗಾಗಿ ಆ ನಾಟಕಗಳನ್ನು ಬುದ್ಧಿಚಾತುರ್ಯ ಮತ್ತು ವಾಕ್‌ಚಾತುರ್ಯ ಮೆರೆಯುವ ನಾಟಕ (Comedy of Wit) ಎಂದು ಕರೆಯ ಲಾಗುತ್ತಿದೆ. ರೆಸ್ಟೊರೇಶನ ನಾಟಕಕಾರರ ಜಾಡು ಹಿಡಿದು ಆಸ್ಕರ ವಾಯಿಲ್ಡ್ ಎಂಬ ವನೂ Wit ನ್ನು ವಿಶೇಷವಾಗಿ ಬಳಸಿದ್ದಾನೆ. ಹಾಗೆ ಆಧುನಿಕ ನಾಟಕಕಾರರ ಮಾಲಿಕೆ

೬. Potts, L. J., *Comedy*, p. 30

ಯಲ್ಲಿ ಸೇರುವ ಬರ್ನಾಡ್ ಶಾ, ಮಾಮ್ ಮತ್ತು ಕಾವರ್ಡ್ ಮೊದಲಾದ ನಾಟಕಕಾರರು ವಾಕ್ ಮತ್ತು ಬುದ್ಧಿಚಾತುರ್ಯದ ನಾಟಕಕ್ಕೆ ಹೆಸರಾಗಿದ್ದಾರೆ.

೪) ಮೃದು ಹಾಸ್ಯ (Humour):

ಹಾಸ್ಯ ಸುಖಾಂತನಾಟಕದ ಒಂದು ಮಹತ್ವದ ಅಂಶ ವಾಕ್‌ಚಾತುರ್ಯಶಾಲಿಯಾಳ ಬುದ್ಧಿಮತ್ತೆಯನ್ನು ಬೆಳಗಿದರೆ, ಹಾಸ್ಯ ಅವಳ ಹೃದಯಮಾರ್ದವತೆಯನ್ನು ಬೆಳಗುತ್ತದೆ. Wit ಬುದ್ಧಿಯನ್ನು ಉದ್ದೀಪನಗೊಳಿಸಿದರೆ, Humour ಹೃದಯವನ್ನು ಹಗುರಾಗಿಸುವುದು. ಮೃದು ಹಾಸ್ಯದ ಮೂಲ ತತ್ವ 'ನಕ್ಕು ನಗಿಸುವುದು' ಇಲ್ಲಿ ಸಹೃದಯತೆ ಎದ್ದು ಕಾಣುತ್ತದೆ. ಹಾಸ್ಯಮನೋವೃತ್ತಿವುಳ್ಳ ವ್ಯಕ್ತಿ ಅನ್ಯರೊಡನೆ ಬೆರೆತು, ಅವರ ಸುಖದುಃಖದಲ್ಲಿ ಪಾಲುಗೊಂಡು, ಅವರನ್ನು ಹಾಸ್ಯದಹೊನಲಿನಲ್ಲಿ ತೇಲಿಸಿಬಿಡುತ್ತಾನೆ. ಹಾಸ್ಯಮನೋವೃತ್ತಿವುಳ್ಳವನಿಗೆ ಜೀವನ ರಸಮಯವೂ ಸಂತೋಷಭರಿತವೂ ಆಗುತ್ತದೆ. ಹಾಸ್ಯಮನೋವೃತ್ತಿ ಇಲ್ಲದವನಿಗೆ ಜೀವನ ನೀರಸವಾಗಿ ತೋರುತ್ತದೆ. ಒಟ್ಟಿನಲ್ಲಿ ಹಾಸ್ಯ ಊಟದಲ್ಲಿ ಉಪ್ಪಿದ್ದಂತೆ. ಅದರ ಬಳಕೆಯೂ ಉಪ್ಪಿನಂತೆ ಮಿತವಾಗಿರಬೇಕು. ಹಾಸ್ಯ ಕಡಿಮೆಯಾದರೂ ನಾಟಕ ರುಚಿಗೆಡುವುದು, ಹೆಚ್ಚಾದರೂ ರುಚಿಗೆಡುವುದು. ನಗೆ, ಹಾಸ್ಯ ಮತ್ತು ಸುಖಾಂತ ನಾಟಕಗಳ ಸ್ವರೂಪ ಮತ್ತು ಪರಿಣಾಮವನ್ನು ಪ್ರೊ. ವ್ಹಿ. ಎನ್. ಭೂಷಣ ಒಂದೇ ಮಾತಿನಲ್ಲಿ ಹೀಗೆ ಹೇಳಿದ್ದಾರೆ;

"Laughter lubricates the soul; humour is the salt of life; comedy sweetens the heart"[೭] ಹೀಗಾಗಿ ಸುಖಾಂತನಾಟಕದ ನಳಪಾಕ ಸಿದ್ಧವಾಗಲು ಹಾಸ್ಯ ಬೇಕೇ ಬೇಕು.

೫) ವಿಡಂಬನೆ (Satire):

ಹಾಸ್ಯ ಮೃದುವಾಗಿ ಮುನ್ನಡೆದರೆ ವಿನೋದ, ವಿಕೃತವಾಗಿ ಮುನ್ನಡೆದರೆ ವಿಡಂಬನೆರೂಪ ತಾಳುತ್ತದೆ. ವಿನೋದ ರೂಪದಲ್ಲಿದ್ದಾಗ ಸಂತೋಷವನ್ನುಂಟು ಮಾಡುವ ಹಾಸ್ಯ ವಿಡುಂಬನೆ ರೂಪತಾಳಿದಾಗ ವಿನೋದದಿಂದ ದೂರ ಸರಿಯುತ್ತದೆ. ಇದಕ್ಕೆ ಕಾರಣ—ವಿಡಂಬನೆ ರಾಗದ್ವೇಷದಲ್ಲಿ ಹುಟ್ಟಿ ಎಲ್ಲೆಡೆಯೂ ಅಸಮಾಧಾನ ಅಸಂತೋಷವನ್ನು ಹರಡುವುದು. ವಿನೋದಕ್ಕೂ ವಿಡಂಬನೆಗೂ ಬಹಳ ಅಂತರವಿದೆ. ಅವೆರಡನ್ನು ಒಟ್ಟಿಗೆ ತರುವುದೆಂದರೆ ಸುಖಾಂತನಾಟಕಕ್ಕೆ ಒಂದು ಗಂಡಾಂತರ ತಂದೊಡ್ಡಿದಂತೆ. ತಾತ್ವಿಕದೃಷ್ಟಿಯಿಂದ ವಿಡಂಬನೆ ಹಾಸ್ಯವಿನೋದಗಳೊಂದಿಗೆ ಹೊಂದಿಕೊಳ್ಳದು. ಆದರೆ ರೂಢಿಯಲ್ಲಿ ವಿಡಂಬನೆ ಇಲ್ಲದ ಸುಖಾಂತ ನಾಟಕವಿಲ್ಲ. ಹೀಗಾಗಿ ಅವೆರಡರಲ್ಲಿ ಅನಿವಾರ್ಯ ಸ್ನೇಹಸಂಬಂಧ ಪ್ರಾರಂಭ

---

೭. Bhushan, V. N. *Hawk Over Heron* P. 21.

ದಿಂದಲೂ ಬೆಳೆದು ಬಂದಿದೆ. ಅನೇಕ ಗ್ರೀಕ ಕಾಮೆಡಿಗಳಲ್ಲಿ ವಿಡಂಬನೆ ಹಾಸುಹೊಕ್ಕಾಗಿ ಬೆರೆತಿದೆ. ಆರಿಸ್ಟೋಫೆನಿಸ್ಸನೂ ವಿಡಂಬನೆಯನ್ನು ಧಾರಾಳವಾಗಿ ಬಳಸಿದ್ದಾನೆ ಆವನು ತನ್ನ ಸುಖಾಂತ ನಾಟಕಗಳಲ್ಲಿ ಗಣ್ಯ ವ್ಯಕ್ತಿಗಳ ಅಪಹಾಸ ಮಾಡಿದ್ದಾನೆ. Creon, Socrates ಮತ್ತು Euripides ಮೊದಲಾದವರನ್ನು ತನ್ನ ಹರಿತವಾದ ವಿಡಂಬನೆಯ ಅಲಗಿಗೆ ಗುರಿಮಾಡಿದ್ದಾನೆ. ಆರಿಸ್ಟೋಫನಸ್‌ನ ತರುವಾಯ ಬಂದ ಗ್ರೀಕ ನಾಟಕಕಾರರು ವಿಡಂಬನೆಯನ್ನು ಸಮಾಜದ ರೀತಿ ನೀತಿ ಅಪಹಾಸ ಮಾಡಲು ಉಪಯೋಗಿಸಿದ್ದಾರೆ. ಗ್ರೀಕ ಸುಖಾಂತನಾಟಕಗಳಲ್ಲಿ ಕಂಡುಬರುವಂತೆ ರೋಮನ್ ಮತ್ತು ಫ್ರೆಂಚ್ ನಾಟಕಗಳಲ್ಲಿಯೂ ವಿಡಂಬನೆ ಅಧಿಕ ಪ್ರಮಾಣದಲ್ಲಿ ಕಂಡು ಬರುತ್ತದೆ. ಪ್ರಾರಂಭದ ಇಂಗ್ಲೀಷ ಸುಖಾಂತನಾಟಕಗಳಲ್ಲಿ ವಿಡಂಬನೆ ಕಡಿಮೆ ಪ್ರಮಾಣದಲ್ಲಿ ಕಾಣಿಸಿಕೊಂಡರೂ, ಶೆಕ್ಸಪಿಯರನ ಸುಖಾಂತನಾಟಕಗಳಲ್ಲಿ ಅದು ಇಲ್ಲದಿದ್ದರೂ, ಒಟ್ಟಿನಲ್ಲಿ ಇಂಗ್ಲೀಷ ಸುಖಾಂತ ನಾಟಕಗಳಲ್ಲಿ ವಿಡಂಬನೆಗೆ ಕೊರತೆ ಇಲ್ಲ. ಶೆಕ್ಸಪಿಯರನ ತರುವಾಯ ಬಂದ ನಾಟಕಕಾರರು ವಿಡಂಬನೆ ಇಲ್ಲದ ಸುಖಾಂತನಾಟಕಗಳನ್ನು ಬರೆದಿರುವುದು ಕಡಿಮೆ. ಬೆನ್ ಜಾನ್ಸನ್, ಶೆರಿಡನ್, ಆಸ್ಕರ ವಾಯಿಲ್ಡ್, ಬರ್ನಾರ್ಡ್ ಶಾ. ಪ್ರೈ, ಮಾಮ್, ಕಾವರ್ಡ್ ಮೊದಲಾದವರ ನಾಟಕಗಳು ವಿಡಂಬನೆಯಿಂದ ತುಂಬಿ ತುಳುಕುತ್ತವೆ. ವಿಡಂಬನೆಯನ್ನು ಮಿತವಾಗಿ ಬಳಸಿದಲ್ಲಿ ಸುಖಾಂತನಾಟಕ ಗಂಭೀರ ಸ್ವರೂಪ ತಾಳುತ್ತದೆ. ವಿಡಂಬನೆ ಹೆಚ್ಚಾದಂತೆ ಸುಖಾಂತನಾಟಕ ವಿಕೃತರೂಪ ತಾಳುವ ಸಂಭವ ಉಂಟು. ಆರಿಸ್ಟೋಫೆನಸ್‌ನಂಥ ಪ್ರತಿಭಾವಂತ ನಾಟಕಕಾರ ಮಾತ್ರ ಹಾಸ್ಯ, ವಿನೋದ, ವಿಡಂಬನೆ ಎಲ್ಲವನ್ನೂ ಸಮರ್ಥವಾಗಿ ಬಳಸಬಲ್ಲ. ಮಧ್ಯಮಮಟ್ಟದ ನಾಟಕಕಾರನ ಕೈಯಲ್ಲಿ ವಿಡಂಬನೆ ಸಿಕ್ಕು ಸುಖಾಂತನಾಟಕ ಹೇಗೆ ವಿಕೃತಗೊಳ್ಳುವುದೆಂಬುದಕ್ಕೆ ಬೆನ್ ಜಾನ್ಸನ್‌ನ Volpone ದಂಥ ನಾಟಕಗಳೇ ಸಾಕ್ಷಿ.

* * * *

ಸಾಹಿತ್ಯಕ್ಕೆ ಕಥಾವಸ್ತುವನ್ನು ಪೂರೈಸುವುದು ಜನಜೀವನ. ಮೂಲವಸ್ತು ಒಂದೇ ಇದ್ದು ಅದು ಕಲಾವಿದನ ಬುದ್ಧಿ, ಪ್ರತಿಭೆ ಮತ್ತು ದರ್ಶನಗಳ ತಾರತಮ್ಯದಿಂದ ನೂರುನೂರು ರೂಪ ಧಾರಣ ಮಾಡುತ್ತದೆ. ಆದರೆ ಅದು ಕವಿಯ ದೃಷ್ಟಿ ಕೋನವನ್ನವಲಂಬಿಸಿರುತ್ತದೆ. ಅದಕ್ಕಾಗಿ ವಿಮರ್ಶಕರೊಬ್ಬರ 'ಸುಖಾಂತನಾಟಕ ಒಂದು ದೃಷ್ಟಿ ವೈಶಿಷ್ಟ್ಯ' ಎಂಬ ಮಾತಿನಲ್ಲಿ ಸತ್ಯಾಂಶವಿದೆ. ಕೆಲವರು ಜೀವನವನ್ನು ದುರಂತವಾಗಿ, ಇನ್ನು ಕೆಲವರು ಸುಖಾಂತವಾಗಿ ಚಿತ್ರಿಸಲು ಅವರ ದೃಷ್ಟಿವೈಶಿಷ್ಟ್ಯವೇ ಮುಖ್ಯ ಕಾರಣ. ಹೊರೇಸ್ ವಾಲ್ಪೋಲ ಹೇಳುವ "Life is a comedy to those who think, tragedy to those who feel" ಎಂಬ ಮಾತು ಅರ್ಥ ಪೂರ್ಣವಾಗಿದೆ.

ಕೆರೆಗೆಹಾರ ಆಶಯದ ಜಾನಪದ ಹಾಡುಗಳು

ಬಸವರಾಜ ಮಲಶೆಟ್ಟಿ

ಜಾನಪದ ಮನಸ್ಸು ಪ್ರಕೃತಿಯ ವೈಶಿಷ್ಟ್ಯಗಳಿಗೆ ಕಲ್ಪನೆಯ ಬಣ್ಣ ಬೆರೆಸಿ ತನ್ನದೇ ಆದ ಅದ್ಭುತಲೋಕವನ್ನು ಸೃಷ್ಟಿಸಿದೆ. ಆ ಲೋಕದಲ್ಲಿರುವುದೆಲ್ಲ, ಅಲ್ಲಿ ನಡೆಯುವುದೆಲ್ಲ ಅದಕ್ಕೆ ತೀರಸಹಜವಾದುದು, ನಿತ್ಯ ಸತ್ಯವಾದುದು. ತಾರ್ಕಿಕ ವಿಶ್ಲೇಷಣೆಗೆ ಅಲ್ಲಿ ಎಡೆಯಿಲ್ಲ. ಸಾಮಾನ್ಯವಾಗಿರುವದಾವುದೂ ಆ ಮನಸ್ಸಿಗೆ ಮಹತ್ವದ್ದೆನಿಸಿಲ್ಲ, ವಿಶೇಷವೆನಿಸಿಲ್ಲ. ಅದು ಅತಿರಂಜಿತ ವಿಷಯಗಳಲ್ಲಿಯೇ ಸತ್ಯ – ಸೌಂದರ್ಯವನ್ನು ಕಂಡಿದೆ.

ಈ ಜಾನಪದ ಮನಸ್ಸು ತನ್ನ ಅಗಾಧವಾದ ಪ್ರತಿಭೆಯನ್ನು ಆಶಯ[೧] (Motif)ಗಳಲ್ಲಿ ಅಭಿವ್ಯಕ್ತಗೊಳಿಸಿದೆ. ಜಾನಪದ ಸೃಷ್ಟಿಯ ವರ್ಣಪ್ರಪಂಚದಲ್ಲಿರುವ ಈ ಆಶಯಗಳ ನಕ್ಷತ್ರರಾಶಿ ಅಪಾರವಾದುದು. ಆಶಯಗಳೆಂದರೆ ಜಾನಪದ ಜಗತ್ತಿನ ಚೇತನಗಳೆನಿಸುವ ಕಲ್ಪನೆಗಳು, ವಿಚಿತ್ರ ನಂಬಿಕೆಗಳು, ಅದ್ಭುತ ವಸ್ತುಗಳು, ಪವಾಡ ರೂಪದ ಘಟನೆಗಳು – ಎಂದು ಮುಂತಾಗಿ ಹೇಳಬಹುದು. ಜಾನಪದಕ್ಕೆ ವೈಶಿಷ್ಟ್ಯಪೂರ್ಣವಾದ ಸ್ವತಂತ್ರ ಅಸ್ತಿತ್ವವನ್ನು ಕಲ್ಪಿಸಿಕೊಡುವದರಲ್ಲಿ ಈ ಆಶಯಗಳ ಪಾಲು ಹಿರಿಯದಾಗಿದೆ. ಇವುಗಳ ಹೊರತಾಗಿ ಜಾನಪದ ಕಲ್ಪನೆಯೇ ಅಸಾಧ್ಯ. ಏಳು ಮಲ್ಲಿಗೆ ಹೂವಿನ ತೂಕದ ರಾಜಕುಮಾರಿ. ಯಾವುದೋ ವಸ್ತುವನ್ನು ಪಡೆಯಲು ಏಳು ಸಮುದ್ರಗಳನ್ನು ದಾಟಿ ಹೋಗುವ ರಾಜಕುಮಾರ. ಕಥಾನಾಯಕಿಯನ್ನು ಬಂಧಿಸಿ ತನ್ನ ಅರಮನೆಯಲ್ಲಿಟ್ಟುಕೊಂಡಿರುವ ರಾಕ್ಷಸ. ವಿಘ್ನಗಳ ಪರಿಹಾರಕ್ಕಾಗಿರುವ ಮಂತ್ರಿಸಿದ ಮೂರು ಹರಳುಗಳು– ಇಂಥ ಹೇಳಿಕೆಗಳೆಲ್ಲ ಆಶಯಗಳೆನಿಸುವವು. ಇವುಗಳ ಹಿನ್ನೆಲೆಯಲ್ಲಡಗಿರುವ ಕಲ್ಪನೆಯ ಬೆಡಗು ಮನೋಹರವಾದುದು. ಜಾನಪದ ಸಾಹಿತ್ಯ – ಕಲೆಗಳೆಲ್ಲ ಈ ಆಶಯಗಳ ಸರಮಾಲೆಯಿಂದಲೇ ತುಂಬಿಕೊಂಡಿವೆ.

---

೧. 'Motif' ಎಂಬ ಪದಕ್ಕೆ ಸಮಾನಾರ್ಥವಾಗಿ ನಮ್ಮಲ್ಲಿ ಬೇರೆ ಬೇರೆ ಪದಗಳನ್ನು ಉಪಯೋಗಿಸಿದ್ದರೂ ಹೆಚ್ಚಾಗಿ 'ಆಶಯ' ಎಂಬುದನ್ನು ಬಳಸಲಾಗುತ್ತಿದೆ.

Motif = ವಿನ್ಯಾಸ—ಜೀ. ಶಂ. ಪರಮಶಿವಯ್ಯ–ಹೊನ್ನ ಬಿತ್ತೇವು ಹೊಲಕೆಲ್ಲ–ಪು. ೬೫.

Motif = ಪ್ರೇರಕ— ಡಾ. ಹಾ. ಮಾ. ನಾಯಕ–ಹೊನ್ನ ಬಿತ್ತೇವು ಹೊಲಕೆಲ್ಲ–ಪು. ೫೦೫.

ಒಂದು ಜಾನಪದ ಹಾಡಾಗಲಿ, ಜಾನಪದ ಕಥೆಯಾಗಲಿ. ಅದು ಹಬ್ಬಿ ಬೆಳೆದಿರುವುದು ಆಶಯಗಳ ಗುಂಫನ ಹಂದರದ ಮೇಲೆ. ಕಥೆಯ ಓಟ ಸುಗಮವಾಗಿ ಸಾಗಲು, ಅದರ ಗತಿ ಹೊಸತಿರುವು ಪಡೆಯಲು. ಎರಡು ಸನ್ನಿವೇಶಗಳು ಒಂದಕ್ಕೊಂದು ತಳುಕಿಸಲು ಆಶಯಗಳು ತೀರ ಅವಶ್ಯಕವಾದವುಗಳು. ಆಶಯಗಳು ಹಾಡು–ಕಥೆಗಳಿಗೆ ಜೀವಂತತೆಯನ್ನು ತಂದುಕೊಟ್ಟಿವೆ.

ಜಾನಪದ ಕಥೆಗಳನ್ನು ಮಾದರಿ(Type) ಮತ್ತು ಆಶಯ(Motif)ಗಳ ಆಧಾರದ ಮೇಲೆ ವರ್ಗೀಕರಿಸುವ ನೂತನ ವಿಧಾನವನ್ನು ಪ್ರಥಮಸಲ ಕಂಡು ಹಿಡಿದವನು ಕಾರ್ಲೆಕ್ರೋನ್. ಇದನ್ನು ಬೆಳೆಸಿ ಕಾರ್ಯರೂಪಕ್ಕೆ ತಂದವರು ಅಂಟಿಆರ್ನೆ ಮತ್ತು ಸ್ಟಿಥ್ ಥಾಂಪ್ಸನ್. ಜಾನಪದ ಕಥೆಗಳ ಅಧ್ಯಯನ ಚರಿತ್ರೆಯ ಕೊನೆಯ ಘಟ್ಟದಲ್ಲಿರುವ ಈ ವಿಧಾನ ಇಂದು ಜಗತ್ತಿನಾದ್ಯಂತ ಬಳಸಲ್ಪಡುತ್ತಿದೆ. ಮಾದರಿ ಕಥೆಯ ತಂತ್ರಕ್ಕೆ ಸಂಬಂಧಿಸಿದ್ದರೆ ಆಶಯವು ಕಥೆಯ ವಸ್ತುವಿಗೆ ಸಂಬಂಧಿಸಿದೆ. "ಆಶಯ ಜಾನಪದ ಕಥೆಯಲ್ಲಿಯ ಒಂದು ಕನಿಷ್ಠ ಘಟಕ. ಸಂಪ್ರದಾಯದಲ್ಲಿ ಜೀವಂತವಾಗಿರುವ ಶಕ್ತಿ ಅದಕ್ಕಿದೆ. ಈ ಶಕ್ತಿಯನ್ನು ಪಡೆಯಲು ಅದು ಅಸಹಜ ಹಾಗು ಅದ್ಭುತವಾಗಿರುತ್ತದೆ."[೨] ಎಂದು ಖ್ಯಾತ ಜಾನಪದ ವಿದ್ವಾಂಸ ಸ್ಟಿಥ್–ಥಾಂಪ್ಸನ್ ಅಭಿಪ್ರಾಯಪಡುತ್ತಾನೆ. ಆಶಯವು ತನ್ನ ಅಸಾಮಾನ್ಯ ಗುಣದಿಂದ ಮನರಂಜನೆ ನೀಡುವುದರಿಂದ ಮನಸ್ಸಿಗೆ ತುಂಬಾ ಹಿಡಿಸುವುದರಿಂದ ಜನತೆ ಅದನ್ನು ಪುನಃ ಪುನಃ ನೆನಪಿಸಿಕೊಳ್ಳುತ್ತಾರೆ.[೩]

ಆಶಯಗಳನ್ನು ಮೂರು ವಿಭಾಗಗಳಲ್ಲಿ ವರ್ಗೀಕರಿಸಲಾಗಿದೆ

೧) ಕಥೆಯಲ್ಲಿ ಬರುವ ದೇವತೆಗಳು, ಅಸಹಜ ಪ್ರಾಣಿಗಳು, ಭೂತಗಳು, ಕಿನ್ನರರು, ಕಿರಿಯಮಗು ಮತ್ತು ಕ್ರೂರಿಯಾದ ಮಲತಾಯಿ ಮೊದಲಾದ ಪಾತ್ರಗಳು.

೨) ಕಥೆಯ ಬೆಳವಣಿಗೆಗೆ ಸಹಾಯಕವಾಗಿರುವ ಮಾಂತ್ರಿಕ ವಸ್ತುಗಳು, ಅಸಾಮಾನ್ಯ ವೇಷಭೂಷಣಗಳು, ವಿಚಿತ್ರ ನಂಬಿಕೆಗಳು – ಮೊದಲಾದವುಗಳು (ಮಂತ್ರಿಸಿದ ಹರಳುಗಳ ಪ್ರಭಾವದಿಂದ ತೊಂದರೆಗಳು ದೂರಾಗಿ ಕಥೆ ಮುಂದುವರೆಯುವುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು.)

೩) ಏಕೈಕ ಘಟನೆಗಳು – (ಕೆರೆಗೆಹಾರವಾಗುವ ಸನ್ನಿವೇಶ ಇಂಥದೆಂದು ಇಲ್ಲಿ ಹೇಳಬಹುದು.)

---

೨. Stith Thompson—The Folk Tale—PP 415.

೩. Stith Thompson—Standard Dictionary of Folklore, Mythology and Legend Vol. II, PP—753.

೪. Stith Thompson—The Folk Tale—PP. 416.

'ಕೆರೆಗೆಹಾರ'[೫] ಅಂದರೆ ಕೆರೆಗೆ ಬಲಿ, ಆಹಾರ. ಕೆರೆಯಲ್ಲಿ ನೀರು ಬೀಳದಾದಾಗ ಅವರ ಪ್ರೀತ್ಯರ್ಥವಾಗಿ ಒಬ್ಬ ಹೆಣ್ಣುಮಗಳನ್ನು ಬಲಿಯಾಗಿ ಅರ್ಪಿಸಿದರೆ ನೀರು ಬೀಳುವದೆಂಬ ನಂಬಿಕೆ. ಇದು ಜಗತ್ತಿನಾದ್ಯಂತ ಕಂಡುಬರುವ ನರಬಲಿಯ ಒಂದು ಪ್ರಕಾರ. ಇದು ನಮ್ಮಲ್ಲಿ ಪರಂಪರಾಗತವಾಗಿ ನಡೆದು ಬಂದ ವಿಷಯ. ಕೃಷ್ಣದೇವರಾಯ ತಾನು ಕಟ್ಟಿಸಿದ ಕೆರೆಗೆ ೬೦ ಜನರನ್ನು ಬಲಿಕೊಟ್ಟನೆಂದು ಇಬ್ಬರು ವಿದೇಶಿ ಪ್ರವಾಸಿಗರು ಹೇಳುವ ಮಾತು ಕೂಡ ಈ ನಂಬಿಗೆಯನ್ನು ದೃಢಪಡಿಸುತ್ತದೆ.[೬] ಈ ಕೆರೆಯ ಬಲಿಯ ವಿಷಯವನ್ನು ಕುರಿತು ಅಸಂಖ್ಯ ಹೇಳಿಕೆಗಳಿವೆ, ಹಾಡುಗಳಿವೆ, ಕಥೆಗಳಿವೆ. ಅವುಗಳಲ್ಲಿ ಹಲವಾರು ಪ್ರಾದೇಶಿಕ ಭಿನ್ನತೆಗಳಿದ್ದರೂ ಮುಖ್ಯ ವಿಷಯ ಮಾತ್ರ ಸಾಮಾನ್ಯವಾಗಿ ಒಂದೇ ತೆರನಾಗಿರುತ್ತದೆ. ನಮ್ಮಲ್ಲಿ ಪ್ರಚಾರದಲ್ಲಿರುವ 'ಕೆರೆಗೆಹಾರ' ಆಶಯದ ೭ ಹಾಡುಗಳನ್ನು ಇಲ್ಲಿ ಚರ್ಚಿಸಲಾಗಿದೆ.

೧. ಕೆರೆಗೆ ಹಾರ[೭] :

ಕಲ್ಲನಕೇರಿ ಮಲ್ಲನಗೌಡ ಕೆರಿಯೊಂದ ಕಟ್ಟಿಸ್ಯಾನು
ಕೆರಿಯೊಂದ ಕಟ್ಟಿಸ್ಯಾನು ಸೆರಿಮುಕ್ಕ ನೀರಿಲ್ಲ.

ಜೋಯಿಸರ ಹತ್ತಿರಹೋಗಿ ಹೊತ್ತಿಗೆ ತೆಗೆಸಿ ಕೇಳುತ್ತಾನೆ. ಹಿರಿಸೊಸೆ ಮಲ್ಲವ್ವನನ್ನು ಕೆರೆಗೆಹಾರ ಕೊಟ್ಟರೆ ನೀರು ಬೀಳುವದೆಂದು ಜೋಯಿಸ ಹೇಳಿದ. ಆದರೆ ಹಿರಿಯ ಸೊಸೆಯನ್ನು ಹಾರಕೊಟ್ಟರೆ ಹಿರಿಯತನಕ್ಕೆ ಯಾರು ? ವಿಚಾರಿಸಿ.

ಕಡೆಸೊಸಿ ಭಾಗೀರತಿನ್ನ ಹಾರವ ಕೊಡಬೇಕು
ಹಾರವ ಕೊಡಬೇಕಂತ ಮಾತಾತು ಮನಿಯಾಗ

ಬಾಯಿಬಿಟ್ಟು ಯಾರೂ ಹೇಳದಿದ್ದರೂ ಭಾಗೀರಥಿ ಈ ವಿಷಯವನ್ನು ಅರಿತುಕೊಂಡಳು. ಕೊನೆಯಸಲ ಒಮ್ಮೆ ತೌರೂರಿಗೆ ಹೋಗಿಬರುವ ಇಚ್ಛೆಯನ್ನು ಹೇಳಿಕೊಂಡಾಗ ಅವಳತ್ತೆ, "ಸರ್‍ರನ ಹೋಗವ್ವ, ಭರ್‍ರನ ಬಾರವ್ವ" ಎಂದು ಹೇಳಿ ಕಳುಹಿದಳು. ಭಾಗೀರಥಿಯ ಅನಿರೀಕ್ಷಿತ ಬರವನ್ನು ಕಂಡು ಅಪ್ಪ, ಅವ್ವ. ಅಕ್ಕ ಎಲ್ಲರೂ "ಎಂದಿಲ್ಲದ ಭಾಗೀರತಿ ಇಂದ್ಯಾಕ" ಅಳುತ್ತಾ, ದುಃಖಿಸುತ್ತಾ, ಬಾಡಿದ ಮುಖದಿಂದ

---

೫. ಶ್ರೀ ಬೆಟಗೇರಿ ಕೃಷ್ಣಶರ್ಮರು ತಾವು ಸಂಗ್ರಹಿಸಿದ ಹಾಡಿಗೆ 'ಕೆರೆಗೆಹಾರ' ಎಂದು ತಲೆಬರಹ ಕೊಟ್ಟರು. ಅದು ಇಂದು ಒಂದು ಆಶಯವಾಗಿ ಅಂಗೀಕರಿಸಲ್ಪಟ್ಟಿದೆ.

೬. Sewell–A Forgotton Empire—P. 163.
ಡಾ. ಎಂ. ಚಿದಾನಂದಮೂರ್ತಿ—ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ—ಪು. ೧೫೬ (ಉಧೃತ)

೭. ಸಂ: ಶ್ರೀ ಕೃಷ್ಣಶರ್ಮಾ ಬೆಟಗೇರಿ—ಜಯಕರ್ನಾಟಕ. ಸಂ.-೧೦. ಪು. ೮೨ ಮತ್ತು ಕನ್ನಡದ ಬಾವುಟ (ಎರಡನೆಯ ಆವೃತ್ತಿ).
ಈ ಹಾಡಿನ ರಸವಿಮರ್ಶೆಗೆ ತೀ. ನಂ. ಶ್ರೀಯವರ ಸಮಾಲೋಕನ— "ಕೆರೆಗೆಹಾರ", (ಪು. ೮೭–೯೫)—ನೋಡಬಹುದು.

ಬಂದೆ ಎಂದು ಕೇಳುವರು. ಅವರಿಗೆಲ್ಲ ಅವಳು ಕೊಟ್ಟ ಉತ್ತರ "ನಮ್ಮತ್ತಿ ನಮ್ಮಾವ ಬ್ಯಾರಿಡತಾರಂತ" ಎಂದು ಮಾತ್ರ. "ಇಟ್ಟೂರ ಇಡಲೇಳು ಹೊಲಮನಿ ಕೊಡತೇನು" ಎಂದು ಹೇಳಿದ ತಂದೆಗೆ "ಹೊಲಮನಿ ಒಯ್ದು ಹೊಳೆದಂಡ್ಯಾಗ್ಹಾಕಪ್ಪ" ಎಂದು ಉತ್ತರಿಸುವಳು. ವಾಲಿಯ ಜೋಡನ್ನು ಕೊಡುವೆನೆಂದ ತಾಯಿಗೆ "ವಾಲೀಯ ಜೋಡೊಯ್ದು ಒಲಿಯಾಗ ಹಾಕವ್ವ" ಎಂದು, ಜೊತೆಯಲ್ಲಿ ಮಕ್ಕಳನ್ನು ಕಳಿಸುವೆನೆಂದು ಸಮಾಧಾನ ಹೇಳಿದ ಅಕ್ಕನಿಗೆ "ಮಕ್ಕಳಿದ್ದರೇನಕ್ಕ ದುಕ್ಕ ಕಳದಾವೇನ ?" ಎಂದು ಹೇಳುವಳು. ಮನೆಯವರಾರಿಗೂ ತಿಳಿಸದ ನಿಜ ಸಂಗತಿಯನ್ನು ತನ್ನ ಗೆಳತಿಯ ಮುಂದೆ "ನಮ್ಮತ್ತಿ ನಮ್ಮಾವ ಕೆರಿಗ್ಹಾರ ಕೊಡತಾರಂತ" ಎಂದು ಹೇಳಿದಾಗ ಆ ಗೆಳತಿಯಾದರೋ, "ಕೊಟ್ಟೂರ ಕೊಡಲೇಳು ಇಟ್ಟಂಗ ಇರಬೇಕು" ಎಂದು ಧೈರ್ಯ ಹೇಳುತ್ತಾಳೆ.

ತೌರಿನಿಂದ ಮರಳಿಬಂದಮೇಲೆ, ಬಲಿಯಾಗುವ ದಿನ ಸಮೀಪಿಸಿದಂತೆಲ್ಲ ಭಾಗೀರಥಿಯ ದುಃಖ ಹೆಚ್ಚಾಗುತ್ತದೆ. ಕೆರೆಯ ಪೂಜೆಗೆ ಹೋಗುವ ಸಿದ್ಧತೆ ನಡೆಯುತ್ತದೆ. ಉಳಿದ ಸೊಸೆಯರಾರೂ ಜಳಕ ಮಾಡಲು ನಿರಾಕರಿಸುವರು. ಭಾಗೀರಥಿ ಜಳಕ ಮಾಡಿ ಮುತ್ತೈದೆಯರೊಂದಿಗೆ ಕೆರೆಗೆ ಬರುವಳು. ಪೂಜೆ ಮುಗಿಸಿ ಮರಳಿ ಬರುವಾಗ ಉದ್ದೇಶಪೂರ್ವಕವಾಗಿ ಒಂದು ಬಂಗಾರದ ಬಟ್ಟಲನ್ನು ಬಿಟ್ಟುಬರುತ್ತಾರೆ. ಹೋಗಿ ಅದನ್ನು ತರಲು ಯಾರೂ ಸಿದ್ಧರಾಗುವದಿಲ್ಲ. "ಸಣ್ಣ ಸೊಸಿ, ಭಾಗೀರಥಿ ನೀ ಹೋಗಿ ತರಅವ್ವ" ಎಂದು ಹೇಳಿದರು. ಅವಳು ಹೋಗಿ ಬಟ್ಟಲು ತೆಗೆದುಕೊಂಡು ಕೆರೆಯ ಮೆಟ್ಟಿಲುಗಳನ್ನು ಹತ್ತುತ್ತಿರುವಾಗ ಕೆರೆಯ ನೀರು ತುಂಬಿ ಕ್ರಮ ಕ್ರಮವಾಗಿ ಮೇಲೇರುವುದು. ಭಾಗೀರಥಿ ಮುಳುಗಿ ಕೆರೆಗೆಹಾರವಾದಳು.

ಇತ್ತ ದಂಡಿನಲ್ಲಿದ್ದ ಭಾಗೀರಥಿಯ ಗಂಡನಾದ ಮಾದೇವರಾಯನಿಗೆ ಕನಸಿನಲ್ಲಿ

> ಸೆಲ್ಯಾ ಸುಟ್ಹಾಂಗಾತು ಕೋಲು ಮುರಿದ್ಹಾಂಗಾತು
> ಕಟ್ಟಿಸಿದ ಮಾಳೆಲ್ಲ ತಟ್ಟನೆ ಬಿದ್ಹಾಂಗಾತು.

ಬತ್ತಲಗುದುರಿಯನ್ನೇರಿ ಊರಿಗೆ ಬಂದನು. ಜೇರೆಯವರು ಕಾಲಿಗೆ ನೀರು ಕೊಡಲು ಬಂದಾಗ "ನನಮಡದಿ ಭಾಗೀರತಿ ಎಲ್ಲಿಗ್ಹೋಗ್ಯಾಳವ್ವ" ಎಂದು ಕೇಳುವನು. ತೌರಿಗೆ ಹೋಗಿರುವಳೆಂದು ಸುಳ್ಳು ಹೇಳುವಳು. ಅಲ್ಲಿಗೆ ಹೋಗಿ ವಿಚಾರಿಸಲು, ಭಾಗೀರಥಿಯ ಗೆಳತಿಯಿಂದ ನಿಜ ವಿಷಯ ತಿಳಿಯುವದು. ನೇರವಾಗಿ ಕೆರೆಯ ದಂಡೆಗೆ ಬಂದು ನಿಟ್ಟುಸಿರುಬಿಡುತ್ತ ಕಣ್ಣೀರು ಸುರಿಸಿದ.

> ಸಾವಿರ ವರಹ ಕೊಟ್ಟರು ಸಿಗಲಾರದ ಸತಿನೀನು
> ಸಿಗಲಾರದ ಸತಿನೀನು ನನಬಿಟ್ಟು ಎಲ್ಲಿಗ್ಹೋದೆ
> ಮುನ್ನೂರ ವರಹಾ ಕೊಟ್ಟು ಮುತ್ತಿನೋಲಿ ಮಾಡ್ಸಿದ್ದೆ
> ಮುತ್ತಿನೋಲಿ ಇಟ್ಟಗೊಳ್ಳಿ ಮುತ್ತೈದಿ ಎಲ್ಲಿಗ್ಹೋದೆ

ಹೀಗೆ ನುಡಿದು "ಜಿಟ್ಟನು ಕಣ್ಣೀರ ಹಾರಿದ ಕೆರಿನೀರಾಗ". ಇದು ಕಥೆಯ ವಸ್ತು.

ಇಲ್ಲಿ ಕೆರೆಗೆಹಾರವಾಗುವ ಘಟನೆ–ಜನಜೀವನದಲ್ಲಿ ಉಳಿದುಕೊಂಡು ಬಂದಿರುವ ವಿಚಿತ್ರ ಮೂಢನಂಬಿಕೆ ಅನ್ನುವ ಕಾರಣದಿಂದ ಮತ್ತು ಅದೊಂದು ಸ್ವತಂತ್ರ ಬಿಡಿ ಘಟನೆಯಾಗಿರುವದರಿಂದ–ಅದೊಂದು ಆಶಯ, ಇಷ್ಟೇ ಅಲ್ಲ ಮುಖ್ಯ ಆಶಯ. ಈ ಆಶಯದ ಉದ್ದಿಶ್ಯಕ್ಕೆ ಪೋಷಕವಾಗುವ ರೀತಿಯಲ್ಲಿಯೇ ಕಥೆಯ ಬೆಳವಣಿಗೆಯ ಕ್ರಮವಿದೆ. ಇದಲ್ಲದೆ ಈ ಹಾಡಿನಲ್ಲಿ ಇನ್ನೂ ಹಲವಾರು ಆಶಯಗಳಿರುವದನ್ನು ನಾವು ಗುರುತಿಸಬಹುದು. ಹೊತ್ತಿಗೆ ತೆಗೆಯಿಸುವದು ಒಂದು ಆಶಯ. ಈ ವಿಷಯದಲ್ಲಿರುವ ಜನಪದ ಮನಸ್ಸಿನ ನಂಬಿಗೆ ಅಚಲವಾದುದು. ಏನಾದರೂ ಸಾಂಸಾರಿಕ ತಾಪ–ತ್ರಯಗಳಿದ್ದರೆ ಹೊತ್ತಿಗೆ ತೆಗೆಯಿಸಿ ಯಾವ ದೇವರ, ಯಾವ ಭೂತದ ಕಾಟವೆಂದು ತಿಳಿದು ಅದಕ್ಕೆ ತಕ್ಕ ರೀತಿಯಲ್ಲಿ ಬಲಿ ಅರ್ಪಿಸುವದು ಸಾಂಪ್ರದಾಯಿಕ ನಂಬಿಗೆ. ಇಲ್ಲಿ ಕೂಡ ಕೆರೆಯಲ್ಲಿ ನೀರು ಬೀಳದಾದಾಗ ಮಲ್ಲನಗೌಡ ಹೊತ್ತಿಗೆ ತೆಗೆಯಿಸುತ್ತಾನೆ. ದಂಡಿನಲ್ಲಿರುವ ಮಾದೇವರಾಯನಿಗೆ ಕನಸು ಬಿದ್ದಿರುವದು ಆಶಯ. ‘ಸೆಲ್ಯಾ ಸುಟ್ಹಾಂಗ’ ‘ಕೋಲು ಮುರಿದ್ಹಾಂಗ’, “ಕಟ್ಟಿಸಿದ ಮಾಲೆಲ್ಲ ತಟ್ಟನೆ ಬಿದ್ಹಾಂಗ” ಅವನಿಗೆ ಕನಸಾದುದು ಸಾಂಕೇತಿಕವಾಗಿದೆ. ಒಮ್ಮೊಮ್ಮೆ ಜೀವನದ ಘಟನೆಗಳಿಗೂ, ಕನಸುಗಳಿಗೂ ಸಂಬಂಧ ಕಂಡುಬರಬಹುದಾದರೂ, ಇಲ್ಲಿ ಬಳಸಿಕೊಂಡಿರುವ ರೀತಿಯಲ್ಲಿ ಅದೊಂದು ಆಶಯವೇ. ಅಡಿಗೆಗೆ ಇಟ್ಟಾಗ “ಹತ್ತುಕೊಪ್ಪರಿಗೆ ನೀರು ಉಕ್ಕಿ ಮಳ್ಳಿತಿತ್ತು.” ಭಾಗೀರಥಿ ನೈವೇದ್ಯವನ್ನು ಬಂಗಾರ ಬುಟ್ಟಿಯಲ್ಲಿ ತುಂಬುತ್ತಾಳೆ. ಮರಳಿಬರುವಾಗ ಬಂಗಾರದ ಬಟ್ಟಲವನ್ನು ಮರೆತು ಬರುತ್ತಾರೆ. ಇಲ್ಲಿ ಹೇಳಲ್ಪಟ್ಟಿರುವ ಹತ್ತು ಕೊಪ್ಪರಿಗೆ ನೀರು, ಬಂಗಾರದ ಬುಟ್ಟಿ, ಬಂಗಾರದ ಬಟ್ಟಲ ಇವೆಲ್ಲ ಅಸಾಮಾನ್ಯ ಹೇಳಿಕೆಗಳಾಗಿರುವದರಿಂದ ಆಶಯಗಳಾಗಿವೆ.

೨. ಮುಲಪುರಿಹಾಡು[೮] :

ಗೌಡsಗೌಡರು ಕೂಡಿ ಕೆರಿಬಾಂವಿ ಕಟ್ಟಿಸ್ಯಾರ
ಕೆರಿಯಾರ ಕಟ್ಟಿಸಿ ಹನ್ನೆಡ್ಡವರಸಾತ
ಹನ್ನೆಡ್ಡವರಸಾತ ಸೇರಿಮುಕ್ಕ ನೀರಿಲ್ಲ.

ದೇವರನ್ನು ಕೇಳಿಸಿನೋಡಿದಾಗ ಹಿರಿಸೊಸೆ ಮಲ್ಲವ್ವನನ್ನು ಕೆರೆಗೆಹಾರಕೊಡಬೇಕೆಂದು ತಿಳಿಯಿತು. ಮಲ್ಲವ್ವನ ತೌರುಮನೆ ಅದೇ ಊರಲ್ಲಿರುತ್ತದೆ. ಕ್ಯಾಮಣ್ಣ ತರಲಿಕ್ಕೆ ಹೋಗಿ ತನ್ನವರನ್ನೆಲ್ಲ ಭೆಟ್ಟಿಯಾಗಿ ಬರುತ್ತಾಳೆ. ತಂದೆ, ತಾಯಿ. ಅಕ್ಕ, ಅಣ್ಣ ಎಲ್ಲರಿಗೂ “ನಮ್ಮತ್ತಿ ನಮ್ಮಾವ ಬ್ಯಾರಿಡತಾರಂತ” ಎಂದು ತನ್ನ ದುಃಖಕ್ಕೆ ಕಾರಣ ಹೇಳುತ್ತಾಳೆ. ಆ ಮೇಲೆ ತನ್ನ ಗೆಳತಿಯಾದ

೮, ಮುಲಪುರಿ-ಮಲ್ಲವ್ವ. ಲೇಖಕರ ಸಂಗ್ರಹ. (ಅಪ್ರಕಟಿತ)

ನಿಂಗವನ ಕಂಡಾಳ ಮಾದುಕ್ಕ ಮಾಡ್ಯಾಳ
ಎಂದಿಲ್ಲ ಮಲಪುರಿ ಇಂದ್ಯಾಕ ಮಾದುಕ್ಕ
ನಮ್ಮತ್ತಿ ನಮ್ಮಾವ ಕೆರಿಗ್ಹಾರ ಕೊಡತಾರ
ಇಸ್ವಽರ ಹೇಳ್ಯಾಳ ಮನಿಗ್ಯಾರೆ ಬಂದಾಳ.

ದುಃಖಿಸುತ್ತಲೇ ತನ್ನ ಮನೆಗೆಲಸಗಳನ್ನು ಮಾಡಿಮುಗಿಸುತ್ತಾಳೆ. ಕೆರೆಗೆ ಬಲಿಯಾಗುವ ದಿನ ಮುತ್ತೈದೆಯರೊಂದಿಗೆ ನೈವೇದ್ಯ ಹೊತ್ತುಕೊಂಡು ಮುಂದಾಗಿ ನಡೆದು ಹೋಗಿ ಕೆರೆಯನ್ನು ತಲುಪುವಳು. ಪೂಜೆ ಮುಗಿಸಿ, ನೈವೇದ್ಯ ಹಿಡಿದಾದ ಮೇಲೆ,

ಎಲ್ಲಾರು ಉಂಡಾರು ಮಲಪುರಿ ಉಣವಾಗ
ಮಲಪುರಿ ಉಣವಾಗ ಕಣ್ಣೀರ ಹರದಾವ.

ಮರೆತುಬಂದ ಬಟ್ಟಲವನ್ನು ತರಲಿಕ್ಕೆ ಹೋದಾಗ ಕೆರೆಯಲ್ಲಿ ನೀರು ತುಂಬಿಬಂದು ಮುಳುಗಿಹೋದಳು. ಅವಳ ಗಂಡ ಮಾತುರಾಯ ದಂಡಿನಿಂದ ಬರುತ್ತಾನೆ. ಅವನ ತಾಯಿ

ಕದಗೋಳ ತೆಗಿದಾಳ ಸೆಳಿಮಂಚ ಹಾಕ್ಯಾಳ
ಸೆಳಿಮಂಚೇನ ಮಾಡಲಿ ಮಡದೆಲ್ಲಿಗೆ ಹೊಗ್ಯಾಳ
ನಿನಮಡದಿ ಮಲಪುರಿ ತವರ್ಮನೆಗೆ ಹೋಗ್ಯಾಳ.

ತೀವ್ರವೇ ತೌರುಮನೆಗೆ ಹೋಗಿ ವಿಚಾರಿಸಿದ. ಅಲ್ಲಿ "ಗೆಳತಿ ನಿಂಗವ್ವ ಮನಿಗ್ಯಾರೆ ಹ್ವಾದಾಳ" ಎಂದು ಹೇಳುವರು. ನಿಂಗವ್ವನನ್ನು ಕೇಳಲಾಗಿ "ನಿಮ್ಮವ್ವ ನಿಮ್ಮಪ್ಪ ಕೆರಿಗ್ಹಾರ ಕೊಟ್ಟಾರ" ಎಂದು ನಡೆದ ವಿಷಯ ತಿಳಿಸುವಳು. ಕೆರೆಗೆ ಬಂದು

ಮೂರಸಲ್ಲಕರದಾಗ ಮಲಪುರಿ ಓಗೊಡತಾಳ
ಕಾಮಾಳದ ಹೂವಾಗಿ ತೇಲ್ಯಾಡತಾಳ
ನಸಗಽ ತೋರಿದ್ಹಾಂಗ ಇನ್ನೊಬ್ರಿಗೆ ತೋರ್ಬ್ಯಾಡ
ಇಸ್ವಽರ ಹೇಳ್ಯಾನ ತಾನೂನು ಜಿಗದಾನ.

ಈ ಹಾಡು 'ಕೆರೆಗೆಹಾರ'ದ ಜಾಡಿನಲ್ಲಿಯೇ ಸಾಗುತ್ತಿದ್ದರು ಅಲ್ಪಸ್ವಲ್ಪ ಬದಲಾವಣೆಗಳನ್ನೊಳಗೊಂಡಿದೆ. 'ಕೆರೆಗೆಹಾರ'ದ ಪಾಠಾಂತರವಾದ ಈ ಹಾಡು ಪಾಠಾಂತರಕ್ಕೇ ಒಂದು ಒಳ್ಳೆಯ ನಿದರ್ಶನವಾಗಿದೆ. ಆಶಯದ ದೃಷ್ಟಿಯಿಂದ ಕೆಲವು ಹೊಸ ಆಶಯಗಳನ್ನು ಇಲ್ಲಿ ಕಾಣಬಹುದು. ಕೆರೆಯಲ್ಲಿ ಮುಳುಗಿಹೋದ ಮಲ್ಲವ್ವ-ನನ್ನು ಅವಳ ಗಂಡ ಮೂರುಸಲ ಕರೆದ. ಮತ್ತು ಅವಳು ಕ್ರಮಕ್ರಮವಾಗಿ ಏಳು ಮೆಟ್ಟಿಲುಗಳನ್ನು ಇಳಿದಾಗ ಕೆರೆಯಲ್ಲಿ ನೀರು ತುಂಬಿಬಂದಿತು— ಎಂದು ಹೇಳುವಲ್ಲಿಯ ಮೂರು ಮತ್ತು ಏಳು ಇವು ಆಶಯಗಳು. ಜಾನಪದದಲ್ಲಿ ಈ ಅಂಕೆಗಳಿಗೆ ವಿಶಿಷ್ಟ ಸ್ಥಾನವಿದೆ. ಅಂತ್ಯದಲ್ಲಿ ಮಲ್ಲವ್ವ ಕಮಲದ ಹೂವಾಗಿ ತೇಲುವದು ಕೂಡ ಒಂದು ಹೆಚ್ಚಿನ ಆಶಯ.

೩. ಅಣಜಿ ಹೊನ್ನಮ್ಮ[೯] :

ಉಚ್ಚಂಗಿದುರ್ಗದ ಎಲ್ಲಮ್ಮನ ದರ್ಶನಕ್ಕೆ ಹೊರಟ ಯಾತ್ರಿಕರ ಬಂಡಿಗಳು ಮಧ್ಯಾಹ್ನದ ಊಟಮಾಡಲು ಅಣಜಿಯ ಬಳಿಯಲ್ಲಿ ನಿಂತವು. ಆದರೆ ನೀರೇ ಇರಲಿಲ್ಲ. ಭಕ್ತರ ಈ ತೊಂದರೆಯನ್ನು ನಿವಾರಿಸಲು ದೇವಿ ಎಲ್ಲಮ್ಮ ದುರ್ಗದಿಂದಿಳಿದು ಬಂದು, ಕೊರವಂಜಿಯ ರೂಪದಲ್ಲಿ ಕಂಡು, ಒರತೆ ತೋಡಿಸಿ ಭಕ್ತರಿಗೆ ಗಂಗೆಯ ದರ್ಶನ ಮಾಡಿಸಿದಳು. ಈ ಒರತೆನೀರು ಎಷ್ಟು ದಿನ ಸಾಕಾದೀತು ? ಶಾಶ್ವತವಾದುದನ್ನೇ ಯೋಚಿಸಿ, ದೇವಿ ಹಣ್ಣುಹಣ್ಣು ಮುದುಕಿಯಾಗಿ ಬಂದು ಗೌಡನ ಅತಿಥಿಯಾದಳು. ಮಧ್ಯರಾತ್ರಿಯಲ್ಲಿ ಗೌಡ ಎಚ್ಚತ್ತು ನೋಡಿದ. ಮನೆಯಲ್ಲೆಲ್ಲ ಅಪೂರ್ವ ಪ್ರಕಾಶ ತುಂಬಿದೆ. ಒಂದು ಅಪರಿಚಿತ ಧ್ವನಿ

ಬಾರಪ್ಪ ಕೆಂಚನಗೌಡ
ಅಣಜಿಕೆರೆ ಕಟ್ಟಿಸಬೇಕು

ಎಂದು ನುಡಿದುದನ್ನು ಕೇಳಿ ಇದು ಮನೆದೇವರಾದ ಉಚ್ಚಂಗಿ ಎಲ್ಲಮ್ಮನ ಧ್ವನಿಯೇ ಎಂದು ಗೌಡ ತಿಳಿದುಕೊಂಡ. ಕೆರೆ ಕಟ್ಟಿಸಲು ಪ್ರಾರಂಭಿಸಿದ. ಆದರೆ ಕೆಲಸ ಸಾಗದಾಯಿತು. ಗುದ್ದಲಿಗಳು ಮುರಿಯತೊಡಗಿದವು, ಏರಿಯ ಹೆಂಟೆಗಳು ನಿಲ್ಲದಾದವು. ಒಡ್ಡರ ಪ್ರಯತ್ನವೆಲ್ಲ ನಿಷ್ಫಲವಾಯಿತು. ಗೌಡ ಶಾಸ್ತ್ರ ಕೇಳಿಸಿದ. ಕೆರೆ ಗೌಡನ ಹೆಂಡತಿಯ ಬಲಿ ಕೇಳುವದೆಂದು ತಿಳಿಯಿತು. ಹೆಂಡತಿಯನ್ನು ಕಳೆದುಕೊಳ್ಳಲಾರದ ಕೆಂಚನಗೌಡ ಚಿಂತಿಸಿದ. ಸೊಸೆಯಾದ ಹೊನ್ನಮ್ಮನನ್ನು ಬಲಿಕೊಟ್ಟರೆ ನಡೆದೀತೆಂದು ಶಾಸ್ತ್ರದವರು ಹೇಳಿದ ಮೇಲೆ ಅಂತೆಯೇ ನಿರ್ಧರಿಸಿದ. ಗೌಡನ ಮಗ ಮಲ್ಲನಗೌಡ ಇದೇ ಸಂದರ್ಭದಲ್ಲಿ ಮಲೆನಾಡಿಗೆ ಯಾತ್ರೆ ಹೊರಡುತ್ತಾನೆ. ಆಗ ಅನೇಕ ಅಪಶಕುನಗಳಾದವು. ಹೊನ್ನಮ್ಮ ಪತಿಯ ಹಣೆಗೆ ಹಚ್ಚಲು ತಂದ ವಿಭೂತಿ ಒಡೆಯಿತು, ಜೋಡೆರಡು ಹಲ್ಲಿಗಳು ನುಡಿದವು, ಮಲ್ಲನಗೌಡನ ತಲೆಗೆ ಬಾಗಿಲು ಬಡಿಯಿತು. ಅವನ ಬಿಲ್ಲು ಬಾಣಗಳು ಕೆಳಗೆ ಬಿದ್ದು ಮುರಿದವು. ಆದರೂ ಆತ ನಿಲ್ಲದೆ ಯಾತ್ರೆಗೆ ಹೋದನು. ಇತ್ತ ನಾದಿನಿ ಹೊಳಲವ್ವನೊಂದಿಗೆ ಕೆಮ್ಮಣ್ಣು ತರಲುಹೋದ ಹೊನ್ನಮ್ಮ ತೀರ ದನಿವಾದಾಗ ಹೊಳಲವ್ವನ ತೊಡೆಯ ಮೇಲೆ ತಲೆಯಿಟ್ಟು ಮಲಗುವಳು. ನಿದ್ರೆಯಲ್ಲಿ ತನ್ನ ಗಂಡನಿಗೆ ಮತ್ತೊಂದು ಮದುವೆಯಾದಂತೆ ಕನಸುಕಂಡು ಬೆಚ್ಚಿಬೀಳುವಳು. ಕಳವಳಕ್ಕೀಡಾಗಿ ಭಾರವಾದ ಹೆಜ್ಜೆಯಿಡುತ್ತ ಮನೆಗೆ ಬರುವಾಗ ಕುರುಬಗೌಡ

ಇನ್ನ ಗೌಡರ ಹೊನ್ನಮ್ಮ
ನಿನ್ನ ಕೆರೆಗೆ ಇಡುತಾರಂತ

೯. ಜೀ. ಶಂ. ಪರಮಶಿವಯ್ಯ— ಜನಪದ ಕಾವ್ಯಕಥೆಗಳು. (ಪು. ೩೯೯–೪೦೭)

ಎಂದು ಹೇಳಿದ. ಈ ಮಾತಿನಿಂದ ಹೊನ್ನಮ್ಮ ತನ್ನ ಬದುಕಿನ ಕೊನೆ ಸಮೀಪಿಸಿತೆಂದು ತಿಳಿದುಕೊಳ್ಳುವಳು. ಮನೆಗೆ ಬಂದು ಮಗ ದೇವೇಂದ್ರನಿಗೆ

ಬಾರಪ್ಪ ನನ ಮಗನೆ
ನೀನು ಕುಡಿದ ಮೊಲೆ
ನಾಳೆ ಇಲ್ಲವಲ್ಲೊ !

ಎನ್ನುತ್ತಾಳೆ. ಹೊನ್ನಮ್ಮ ಕೊನೆಯ ಬಾರಿಗೆ ತೌರಿಗೆ ಹೋಗಿಬರಲು ಅಪೇಕ್ಷಿಸುವಳು. ಆಗ ಕೆಂಚನಗೌಡ ಕಾಯ್ದ ಬಂಡೆಯ ಮೇಲೆ ಉಗುಳಿ, ಅದು ಆರುವದರೊಳಗಾಗಿ ತಿರುಗಿ ಬರುವಂತೆ ತಿಳಿಸುತ್ತಾನೆ. ಅದಕ್ಕೆ ಒಪ್ಪಿ ಹೊನ್ನಮ್ಮ ತೌರೂರಿಗೆ ಹೋಗುತ್ತಾಳೆ. ಮುಂದೆ ತನ್ನ ಗಂಡನನ್ನು ಯಾರೂ ನೋಯಿಸಬಾರದೆಂದು ಹೇಳಿ

ನಮ್ಮತ್ತಿ ನಮ್ಮಾವ ಬ್ಯಾರೆ ಮಾಡ್ಯದರೆ
ಚಿಕ್ಕೋಳು ಹೊನ್ನವ್ವ ಕೊಡಿರವ್ವ

ಹೀಗೆ ತಿಳಿಸಿ ಬರುತ್ತಾಳೆ. ಗಂಗೆಪೂಜೆಗೆ ಹೋಗಲು ಸಿದ್ಧತೆಗಳು ನಡೆಯುತ್ತವೆ. ಊರ ಮುತ್ತೈದೆಯರೊಂದಿಗೆ ಹೊನ್ನಮ್ಮ ಕೆರೆಗೆಬಂದು ಪೂಜೆ ಮಾಡಿದಳು. ಮಾವನ ಆದೇಶದಂತೆ ಮೂರುಹಿಡಿ ಮಣ್ಣು ತೆಗೆದಾಗ ನೀರು ನುಗ್ಗಿ ಬಂದಿತು. ಮುತ್ತೈದೆಯರಿಗೆ ಉಡಿ ತುಂಬಿದ ಮೇಲೆ ಎಲ್ಲರೂ ಮನೆಗೆ ಹೊರಡುತ್ತಾರೆ. ಕೆಂಚನಗೌಡ ಹೊನ್ನಮ್ಮನಿಗೆ ತಿಳಿಯದಂತೆ ಒಂದು ಬೆಳ್ಳಿಯ ಬಟ್ಟಲವನ್ನು ಮುಚ್ಚಿಟ್ಟುಕೊಂಡು, ಅದು ಕೆರೆಯಲ್ಲಿರುವದಾಗಿ ಹೇಳಿ, ಅದನ್ನು ತೆಗೆದುಕೊಂಡು ಬರಲು ಹೊನ್ನಮ್ಮನನ್ನು ಕಳಿಸುತ್ತಾನೆ. ಅವಳು ಕೆರೆಯಲ್ಲಿಳಿದು ಮುಂದೆ ಮುಂದೆ ಹೋದಂತೆಲ್ಲ ಪ್ರವಾಹ ಹೆಚ್ಚಾಗುತ್ತ ಬರುವದು. ಮಾವನಿಗೆ ಈ ವಿಷಯ ತಿಳಿಸಿದಾಗ

ಗಡಗಡನೆ ಹೋಗವ್ವ
ಓಡೋಡಿ ಬಾರವ್ವ

ಎಂದು ಹೇಳುತ್ತಾನೆ. ಹಾಗೇ ಮುಂದುವರೆಯುತ್ತಾಳೆ. ನೀರು ಕುತ್ತಿಗೆಯವರೆಗೆ ಬಂದಾಗ

ಹೆಂಗೆ ಹೋಗಲಿ ಮಾವ
ನನ್ನ ಕುತ್ತಿಗೆ ಬಂದಾವು ನೀರ

ಎನ್ನುವಳು, ಮಾವಮಾತ್ರ

ಬಂದSರ ಬರಲಿವ್ವ
ನೀ ಗಾಡ ಹೋಗಿ ತಾರವ್ವ

ಎಂದು ಹೇಳುವನು. ತನ್ನ ಅಂತ್ಯ ಸಮೀಪಿಸಿತೆಂದು ತಿಳಿದಾಗ ಹೊನ್ನಮ್ಮನಿಗೆ ಆ ಕತ್ತಲೆಯಲ್ಲಿ ಮಾವನೊಬ್ಬನೇ ಇದ್ದಾನೆಂಬ ವಿಷಯ ತಿಳಿದುದರಿಂದ

ನಾನು ಹೋಗತೀನಿ
ನೀವು ಹೋಗಿ ಮಾವಯ್ಯ

ಎಂದು ಕೊನೆಯ ನುಡಿ ನುಡಿದು ನೀರುಪಾಲಾದಳು. ಕೆಂಚನಗೌಡ ಕೆರೆಯ ದಂಡೆಯ ಮೇಲೆ ಮಗುವಿನಂತೆ ಹೊರಳಾಡಿ ಅತ್ತನು. ಮಲೆನಾಡಿಗೆ ಹೋಗಿದ್ದ ಮಲ್ಲನಗೌಡ ಮರಳಿ ಬಂದ ಮೇಲೆ ಅವನಿಗೆ ಚಿಕ್ಕಹೊನ್ನಮ್ಮನನ್ನು ಕೊಟ್ಟು ಮದುವೆ ಮಾಡಿದರು.

ದೇವಿ ಎಲ್ಲಮ್ಮ ಮೊದಲು ಕೊರವಂಜಿಯಾಗಿ ಕಾಣಿಸಿಕೊಳ್ಳುವದು, ಆ ಮೇಲೆ ಹಣ್ಣುಹಣ್ಣು ಮುದುಕಿಯಾಗಿ ಬಂದು ಗೌಡನ ಅತಿಥಿಯಾಗಿರುವದು ಆಶಯ. ದೇವ-ದೇವತೆಗಳು ಬೇರೆ ಬೇರೆ ರೂಪದಲ್ಲಿ ಕಾಣಿಸುತ್ತಾರೆಂಬ ನಂಬಿಕೆಗೆ ಇದು ಉದಾಹರಣೆಯಾಗಿದೆ. ಮಲ್ಲನಗೌಡ ಮಲೆನಾಡಿಗೆ ಹೊರಟಾಗ–ಹೊನ್ನಮ್ಮ ಅವನ ಹಣೆಗೆ ಹಚ್ಚಲು ತಂದ ವಿಭೂತಿ ಒಡೆಯಿತು, ಜೋಡೆರಡು ಹಲ್ಲಿಗಳು ನುಡಿದವು, ಅವನ ತಲೆಗೆ ಬಾಗಿಲು ಬಡಿಯಿತು, ಬಿಲ್ಲು ಬಾಣಗಳು ಕೆಳಗೆ ಬಿದ್ದು ಮುರಿದವು. ಈ ಹೇಳಿಕೆಗಳೆಲ್ಲ ಒಟ್ಟಾರೆ ಒಂದು ಅರ್ಥವನ್ನು ಧ್ವನಿಸುತ್ತವೆ. ಜಾನಪದ ಜೀವನದಲ್ಲಿ ಬೇರುಬಿಟ್ಟಿರುವ ಈ ಅಪಶಕುನಗಳು ಇಲ್ಲಿ ಆಶಯಗಳಾಗಿವೆ. ತೌರಿಗೆ ಹೊರಟ ಹೊನ್ನಮ್ಮನನ್ನು ಕೆಂಚನಗೌಡ ವಿಚಿತ್ರ ನಿಬಂಧನೆಗೊಳಪಡಿಸುತ್ತಾನೆ. ಕಾಯ್ದ ಕಲ್ಲಮೇಲೆ ಉಗುಳಿ, ಆ ಉಗುಳು ಆರುವದರಲ್ಲಿ ಮರಳಿ ಬರುವಂತೆ ಎಚ್ಚರಿಸುತ್ತಾನೆ. ಈ ಅಸಾಮಾನ್ಯ ನಿಬಂಧನೆ ಕೂಡ ಒಂದು ಆಶಯವೇ. ಗೌಡ ತನ್ನ ಅರಮನೆಗೆ ಬಂದನು. ಚಿಕ್ಕಹೊನ್ನಮ್ಮ ತೌರಿಗೆ ಬಂದ ಅಕ್ಕನ ಬಂಗಾರ ಪಾದಗಳನ್ನು ತೊಳೆದಳು– ಇಲ್ಲಿಯ 'ಅರಮನೆ' ಮತ್ತು 'ಬಂಗಾರ ಪಾದ'ಗಳು ಆಶಯಗಳು. ಶಾಸ್ತ್ರ, ಕನಸು, ಕೆರೆಗೆ ಬಲಿಯಾಗುವದು ಇವೆಲ್ಲ ಸಾಮಾನ್ಯ ಆಶಯಗಳು.

೪. ಒಡ್ಡರ ಬೋಯಿ[೧೦] :

ಹಣಜಿಯ ಕೆರೆಯನ್ನು ಆ ಊರ ಗೌಡ ಕಟ್ಟಿಸಿದ. ಕೋಡಿ ನಿಲ್ಲಲಿಲ್ಲ. ಒಡ್ಡರ ಬೋಯಿಗಳನ್ನು ವಿಚಾರಿಸಿದಾಗ, ಕೆರೆಗೆ ಬಲಿ ಬೇಕಾಗಿದೆಯೆಂದು ಹೇಳವರು. ಅದು ಒಂದೊಂದು ವಾರಕ್ಕೆ ಒಬ್ಬೊಬ್ಬರನ್ನು ಬಲಿ ಕೇಳುತ್ತದೆ. ಕೊನೆಗೆ ಗೌಡನ ಸೊಸೆಯ ಬಗ್ಗೆ ಹೆಚ್ಚಿನ ಆಸೆ ತೋರಿಸುತ್ತದೆ. ಗೌಡ ಅವಳನ್ನು ಬಲಿಕೊಡಲು ನಿರ್ಧರಿಸಿದ

ಇಂದೆ ನಿಮ್ಮೂರಲ್ಲಿ
ಕೆರೆಕೋಡಿ ಹಬ್ಬವಂತೆ
ನಿಮ್ಮೋರು ಕರೆಯೋಕೆ ಬಂದಿದ್ರು

ಎಂದು ಹೇಳಿ ಅವಳನ್ನು ತೌರುಮನೆಗೆ ಕಳಿಸಲು ಪ್ರಯತ್ನಿಸುತ್ತಾನೆ. ಅವಳಾದರೋ !

ಕರೆಯೋಕೆ ಬಂದೋರು
ಮನೆಗ್ಯಾಕೆ ಬರಲಿಲ್ಲ

---

೧೦. ಕರಾಕೃ :— ಜಾನಪದ ಕಥನಕವನಗಳು.

ಎಂದು ಪ್ರಶ್ನಿಸುವಳು. ಅವರಿಗೆ ಬೇರೆ ಕೆಲಸವಿತ್ತೆಂದು ಹೇಳಿ ಅವಳನ್ನು ಒಪ್ಪಿಸುತ್ತಾನೆ. ತನ್ನನ್ನು ಬಲಿಕೊಡಲಿರುವ ವಿಷಯ ಅವಳಿಗೆ ಗೊತ್ತಾಗುತ್ತದೆ, ತೌರಿಗೆ ಹೋಗಿ ಎಲ್ಲರನ್ನು ಕಂಡು ಮಾತಾಡಿ ಅವಸರದಿಂದಲೆ ಹೊರಟು

ಕುಂಡ್ರಾಕೆ ಬಂದಿಲ್ಲ
ನಾ ನಿಲ್ಲಾಕ ಬಂದಿಲ್ಲ
ನಮ್ಮಾನ ಬಡ್ಡಿ ಮಗ
ಅವರು ಹೊಸಕೆರಿ ಕಟ್ಟಿಸ್ಯವ್ರೆ
ಹೊಸಕೆರೆ ಕಟ್ಟಿಸ್ಯವ್ರೆ
ನನ್ನ ಬಲಿಯುನ ಕೊಡುತಾರೆ

ಎಂದು ಹೇಳಿಬರುವಳು. ಮಾವನ ಪ್ರೇರಣೆಯಂತೆ ಕೆರೆಗೆ ಬಲಿಯಾಗುವಳು. ಕೆಟ್ಟ ಕನಸು ಕಂಡ ಗಂಡನು ಊರಿಗೆ ಬಂದು ಹೆಂಡತಿಯನ್ನು ಕಾಣದೆ ಕಳವಳಕ್ಕೀಡಾಗುವನು. ಹಿತ್ತಲವಲ್ಲಿಯ ಹಾವನ್ನು ಬಡೆದು ಅಡಿಗೆಮಾಡಿ ಅವನಿಗೆ ಉಣಿಸಲು ಪ್ರಯತ್ನಿಸುವರು.

ಶುಕ್ರವಾರ ಒಂದ್ಹೊತ್ತು
ಊಟ ಮಾಡಕ್ಕಿಲ್ಲ

ಎಂದು ಹೇಳಿ ಉಳಿದುಕೊಳ್ಳುವನು. ಆ ಅಡಿಗೆಯನ್ನು ಕಿರಿಯ ಸೊಸೆ ಊಟಮಾಡಿ ಮರಣಹೊಂದುವಳು. ತನ್ನ ಹೆಂಡತಿ ಕೆರೆಗೆಹಾರವಾಗಿರುವ ಸಂಗತಿ ತಿಳಿದು ಕೆರೆಯ ದಂಡೆಗೆ ಹೋಗುತ್ತಾನೆ.

ನನ್ನ ಹೆಂಡತಿ ಪತಿವ್ರತೆಯಾದರೆ
ನನ್ನ ಕಣ್ಣಿಗೆ ಕಾಣಬಾರದೆ

ಎಂದು ನುಡಿದಾಗ ಅವಳು ಪುನಃ ಜನ್ಮತಾಳಿ ಬರುವಳು.

ಹಾವಿನ ಅಡಿಗೆ ನೀಡಿ ಗೌಡನ ಮಗನನ್ನು ಕೊಲ್ಲಲು ಪ್ರಯತ್ನ ಮಾಡಿರುವದು, ಅದನ್ನು ಕಿರಿಯ ಸೊಸೆ ಸೇವಿಸಿ ಸಾಯುವದು ಮತ್ತು ಕೊನೆಗೆ ಬಲಿಯಾದವಳು ಪುನಃ ಜನ್ಮತಾಳಿ ಬರುವದು– ಇವೆಲ್ಲ ಇಲ್ಲಿಯ ಹೊಸ ಆಶಯಗಳು.

೫. ಹುಳಿಯಾರು ಕೆಂಚಮ್ಮ[೧೧]:

ಕೆಂಚಮ್ಮ ಬಸಿರಾಗಿ ಬಯಕೆಗಳನ್ನು ಅಪೇಕ್ಷಿಸುತ್ತಾಳೆ. ಎರಡು ತಿಂಗಳು ತುಂಬಿದಾಗ ಎಲೆದೋಟದೊಳಗಿರುವ ತಾವರೆ ಹೂವ ಘಮಿಸ್ಯಾಳು ಕೆಂಚವ್ವ ಎಲ್ಡಾಳು ಬಿಟ್ಟು ತರಿಸಯ್ಯಾ ಎಂದಾಗ ತರಿಸಿಕೊಡಲಾಗುತ್ತದೆ. ಇದರಂತೆಯೇ ಕಥೆ ಮುಂದುವರೆಯುತ್ತದೆ. ಮೂರು ತಿಂಗಳಾದಾಗ– ಸೂಜಿಮಲ್ಲಿಗೆ ಹೂವು, ನಾಲ್ಕು ತಿಂಗಳಾದಾಗ– ಎಳೆ ಹುಣಸೆ, ಐದು ತಿಂಗಳಾದಾಗ– ಕೆನೆಮೊಸರು, ಆರು ತಿಂಗಳಾದಾಗ–

೧೧. ಜೀ. ಶಂ. ಪರಮಶಿವಯ್ಯ: ಜಾನಪದ ಖಂಡಕಾವ್ಯಗಳು (ಪು. ೩೫–೪೬);

ಸಂಪಿಗೆ ಹೂವು, ಏಳು ತಿಂಗಳಾದಾಗ–ಕೆಮ್ಮಣ್ಣು, ಎಂಟು ತಿಂಗಳಾದಾಗ–ಮರಿ ಮಾವಿನ ಹಣ್ಣು, ಈ ರೀತಿ ಬಯಸುತ್ತಾಳೆ. ಒಂಬತ್ತು ತಿಂಗಳದಾಗ "ಬೇಗನೆ ಸೂಲಗಿತ್ತಿ ಕರಸವ್ವ" ಎನ್ನುತ್ತಾಳೆ. ನಾದಿನಿ ಬೊಮ್ಮವ್ವ ಸೂಲಗಿತ್ತಿಯ ಮನೆಗೆ ಹೋಗಿ ಕರೆಯುತ್ತಾಳೆ. ಆ ಸೂಲಗಿತ್ತಿ ಸಂಗವ್ವ 'ಅಂದಲ' ಬಯಸುತ್ತಾಳೆ. ತಕ್ಷಣವೇ ಬೊಮ್ಮವ್ವ ಬಡಿಗೇರಮನೆಗೆ ಹೋಗಿ 'ಅಂದಲ'ವನ್ನು ಹೊರುವಂತೆ ಹೇಳುತ್ತಾರೆ, ಬಡಿಗರು ಉಂಬಳಿಯನ್ನು ಅಪೇಕ್ಷಿಸುತ್ತಾರೆ.

"ನಾಗಳ ಹೊನ್ನ ಕೊಡುವೆ ನಾಗಳ ಮುತ್ತುಕೊಡುವೆ
ನಾಗಂಡುಗ ಗದ್ದೆ ಉಣಕೊಡುವೆ ಬಡಿಗೇರ
ಬೇಗನಂದುಲವ ಹೊರಿರಪ್ಪ"

ಎಂದು ಹೇಳುವಳು. ಅಂತೂ 'ಅಂದಲದಲ್ಲಿ' ಸಂಗವ್ವನನ್ನು ಕರೆದು ತಂದಳು.

ಶುಕ್ರವಾರ ದಿನ ಸೂರಜ ಹುಟ್ಟುವಾಗ
ಬಾಲ ಹುಟ್ಟುವನೆ ಗಳಿಗೇಲಿ–ಮಾವಯ್ಯ
ನಿನಬದುಕು ಬಾಳೆಲ್ಲ ತಡೆಯಲ್ಲ-ಮಾವಯ್ಯ
ಸಕ್ಕರೆ ತಿದ್ಧಿಸೊ ಸಭೆಗೆಲ್ಲ

ಎಂದು ಕೆಂಚಮ್ಮ ಹೇಳಿದಳು. ಬೊಮ್ಮವ್ವನನ್ನು ನೀರ ಮನೆಗೆ ಬರಗೊಡದೆ ತಾನೇ ನೀರೆರೆದುಕೊಂಡಳು. ನೆರೆಹೊರೆಯ ಗರತಿಯರೊಂದಿಗೆ ಹೋಳೆಮುಟ್ಟಲಿಕ್ಕೆ ಹುಳಿ–ಯಾರು ಕೆರೆಗೆ ಹೋಗುತ್ತಾಳೆ. ಪೂಜೆಮಾಡಿ ಮುಗಿಯುವಷ್ಟರಲ್ಲಿ ಏರಿಯ ಕಲ್ಲುಗಳು ಸಡಲಿದವು.

ಕಣ್ಣೀರು ಸೂಸ್ಯಾಡಿ ಅಳುಬ್ಯಾಡ
ಏರಿಯು ಕಟ್ಟಿಸುವೆ ಏರಿಯ ನಿಲ್ಲಿಸುವೆ

ಎಂದು ಮಾವ ಸಮಾಧಾನ ಹೇಳುತ್ತಾನೆ. ಅದಕ್ಕಾಗಿ ಅವಳನ್ನು ಬಲಿ ಕೊಡಬೇಕೆಂದು ನಿರ್ಧರಿಸಿದರೂ ಬಾಯಿಬಿಟ್ಟು ಹೇಳುವದಿಲ್ಲ. ಮನೆಗೆ ಬಂದು ಮಲಗಿರುವ ಗಂಡನ ಸಮೀಪ ಹೋಗುತ್ತಾಳೆ

ಬಾಲಯ್ಯ ಹುಟ್ಟಿ ಇಲ್ಲಿಗೆ ಮೂರು ತಿಂಗಳು
ಗ್ಯಾನವಾದೇನೆ ನನಮ್ಯಾಲೆ ಎಲೆಕೆಂಚಿ
ಮುತ್ತಿನ ಮಂಚಕೆ ದಯಮಾಡೆ

ಎಂದ ಗಂಡನಿಗೆ ತಾನು ಬಲಿಯಾಗಲಿರುವ ವಿಷಯ ತಿಳಿಸಿ. ತೌರೂರಾದ ಜೇನಿಕಲ್ಲಿಗೆ ಓಲೆ ಬರೆಯಲು ಕೇಳಿಕೊಳ್ಳುತ್ತಾಳೆ. ಅವರಿಬ್ಬರೂ "ಕೊಳ್ಳ ಕೊಳು ಕಟ್ಟಿಗಂಡು ಅಳುತಾರೆ." ಮತ್ತು

ತಡೆಯಲಾರದೆ ಗಂಡ ತೊಡಿಯ ಮೇಲೆ ಒರಗಿದರೆ
ತೊಡಿಯಾಗೆ ಅಲಗು ಮುರಿದಂತೆ

ಜೇನಿಕಲ್ಲಿಗೆ

ಈಗ ಬಂದರೆ ಕೆಂಚಮ್ಮ ಸಿಗುತಾಳೆ
ಗಳಿಗೇಲಿ ಬಂದರೆ ಕೈಮಿಂಚು ಎನುತೇಳಿ

ಓಲೆ ಬರೆಸುತ್ತಾಳೆ. ತೌರೂರವರೆಲ್ಲ 'ಕತ್ತಿ ಕಠಾರಿ' ಹಿಡಿದುಕೊಂಡು ಗಡಿಬಿಡಿಸಿ ಬರುತ್ತಾರೆ. ಬಂದವರನ್ನು ಕೆಂಚಮ್ಮ ಆದರಿಸಿ ಊಟಮಾಡಲು ಕೇಳಿಕೊಂಡಾಗ "ಧೂಳಿ ಕುಡಿದು ಬಂದೊ ಹಸಿವಿಲ್ಲ" ಎನ್ನುವರು. ಕೆಂಚಮ್ಮ ಬಲಿಯಾಗಲು ಹೊರಡುತ್ತಾಳೆ. ಅವಳಣ್ಣ ಚಿನ್ನದ ಕೋಲು ಹಿಡಿದುಕೊಂಡು ಮುಂದೆ ಮುಂದೆ ಇರುತ್ತಾನೆ. ಆಗ "ಅವರ್ಧ ಡೆದವ್ವನ ದುಃಖ ನಿಲುಬಾರ" ಮತ್ತು "ಗಿಡವೆಲ್ಲ ಶೋಕಗೈತಾವೆ". ಕೆರೆಯಲ್ಲಿ ಹೆಜ್ಜೆ ಮುಳುಗುವಷ್ಟು ನೀರಲ್ಲಿ ಇಳಿದಾದ ಮೇಲೆ ಕಾಲಲ್ಲಿಯ ಪಿಲ್ಲಿ ಬಿಚ್ಚಿ ಅತ್ತಿಗೆ ಕೊಟ್ಟು "ಮುಂದೆ ಬರುವಳಿಗೆ ಮಡಗವ್ವ" ಎಂದು ಹೇಳುತ್ತಾಳೆ. ಊರ ಮುಂದಿರುವ ಹುಣಸೆಯ ಮರಕ್ಕೆ ಬರಿದೊಟ್ಟಲನ್ನು ತಂದು ತೂಗುಹಾಕುವಂತೆ ಮತ್ತು ತನ್ನ ಚಿಕ್ಕಪ್ಪನ ಮಗಳಾದ ಮರಿಗೆಂಚಿಯೊಡನೆ ತನ್ನ ಗಂಡನ ಲಗ್ನಮಾಡುವಂತೆ ಹೇಳಿ ಕೆಂಚಮ್ಮ ಕೆರೆಗೆ ಬಲಿಯಾದಳು.

ಸೂಲಗಿತ್ತಿ 'ಅಂದಲ'ದಲ್ಲಿ ಬಂದುದು, ಬಡಿಗರಿಗೆ 'ಉಂಬಳಿ' ಕೊಟ್ಟುದು, ಕೆಂಚಮ್ಮನ ಅಣ್ಣ 'ಚಿನ್ನದ ಕೋಲು' ಹಿಡಿದಿರುವುದು– ಇವೆಲ್ಲ ಅಸಹಜ ಹೇಳಿಕೆಗಳಾಗಿರುವದರಿಂದ ಆಶಯಗಳಾಗಿವೆ. ಕೆಂಚಮ್ಮ ನೀರ ಮನೆಗೆ ಯಾರನ್ನೂ ಬರಗೊಡದೆ ತಾನೊಬ್ಬಳೇ ನೀರೆರೆದುಕೊಳ್ಳುತ್ತಾಳೆ, ಊರ ಮುಂದಿನ ಹುಣಸೆಯ ಮರಕ್ಕೆ ಬರಿದೊಟ್ಟಲು ತೂಗು ಹಾಕಲು ಹೇಳುತ್ತಾಳೆ. ಈ ವಿಚಿತ್ರ ಮೂಢನಂಬಿಕೆಗಳು ಕೂಡ ಆಶಯಗಳೆನಿಸಿವೆ.

೬. ಬಾವಿ ನೀರಿಗಾಗಿ ಸೊಸೆಯ ಬಲಿ[೧೨]:

'ಹೊಚಗೌಡ' ಎಂಬುವವನು ಹೊಸಬಾವಿ ಕಡಿದಿದ್ದ. ನೀರು ಬೀಳಲಿಲ್ಲ. ವಿಚಾರಿಸಲು ಭಟ್ಟರ ಹತ್ತಿರ ಹೋದ. ಪಂಚಾಂಗ ನೋಡಿಯಾದ ಮೇಲೆ ಭಟ್ಟರು ನಡುವಿನ ಸೊಸೆಯನ್ನು ಬಲಿಕೊಡುವಂತೆ ಹೇಳುತ್ತಾರೆ. ಗೌಡ ಚಿಂತೆಯಿಂದ ಮಲಗಿಕೊಂಡ. ಊಟಕ್ಕೆ ಕರೆದಾಗ ಹಸಿವಿಲ್ಲವೆಂದು ಹೇಳಿದ. ಒತ್ತಾಯಿಸಿದ ಮೇಲೆ ಹೆಂಡತಿಗೆ ವಿಷಯವನ್ನು ತಿಳಿಸಿದ. ಊಟಕ್ಕೆ ಕುಳಿತಾಗ ಬಲಿಯಾಗಲಿರುವ ಹೊನ್ನಮ್ಮನೆಂಬ ಸೊಸೆಗೆ 'ನಿನ್ನಾಹುತಿ ಕೊಡತೀರೆ' ಎಂದು ಹೇಳುತ್ತಾನೆ. ಅದಕ್ಕೆ ಅವಳು

ಮಾವನೆ ನೀ ಕೇಲು
ನಾನಮ್ಮನ ಮನೆಗ್ಹೋಗಿ
ಈಗ ಹೋಗಿ ಬರ್ತನಾ

---

೧೨. ಎಲ್. ಆರ್. ಹೆಗಡೆ; ತಿಮ್ಮಕ್ಕನ ಪದಗಳು (ಪು. ೧೧೪–೧೨೩)

ಎನ್ನುವಳು. ಮಾವ ಅತ್ತೆಯನ್ನು ಕೇಳಿ ಹೋಗು ಎನ್ನುವನು. ಅತ್ತೆ ಭಾವನನ್ನು ಕೇಳೆನ್ನುವಳು. ಭಾವನನ್ನು ಕೇಳಿದಾಗ ನಿನ್ನ ಗಂಡನನ್ನು ಕೇಳಿ ಹೋಗು ಎನ್ನುವನು. ಆದರೆ ಗಂಡ ದಂಡಿಗೆ ಹೋಗಿರುತ್ತಾನೆ. ಮಾಡುವದೇನು?

ಕೇಲಾಲೇಲತ್ತಿಗೆಯೇ
ನಾ, ಬಾಲೆಲೆ ಕಡಿದ್ಹೋತ
ನಾ, ಬಾಲೆಲೆ ಬಾಡ್ವತ್ಗೆ
ಇಲ್ಲಿಗೆ ಬರಿತೇನಿ

ಎಂದು ಹೇಳಿ ಹೋಗುತ್ತಾಳೆ. ಅಲ್ಲಿ ಇವಳ ಅತ್ತಿಗೆ ದುಃಖಕ್ಕೆ ಕಾರಣವನ್ನು ಕೇಳಿದಾಗ

ಕೇಲೆಲೆಲತ್ತುಗೆ
ಹೊಶಬಾವಿಲಂಬಲ್ಲಿ
ಹೊಚ್ಚುಬಾವಿಲಂಬಲ್ಲಿ
ನನ್ನಾಹುತಿ ಕೊಡತೀರು

ಎಂದು ನಿಜ ಸಂಗತಿಯನ್ನು ತಿಳಿಸುತ್ತಾಳೆ. ಅದನ್ನು ಕೇಳಿ ಅತ್ತಿಗೆ

ಏಲುಜನ ಅಣ್ಣದಿರು
ಏಲ ತುತ್ತ ಕೊಟ್ಟರೆ
ನಿನ್ನ ಜೀವನಾನವೇ ಕಲುದೀತು

ಆದ್ದರಿಂದ ಹೋಗಬೇಡೆಂದು ಹೇಳುತ್ತಾಳೆ. ಅವಳು ತನ್ನ ಕರ್ತವ್ಯ ಜ್ಞಾಪಿಸಿಕೊಂಡು ಹೊರಡುತ್ತಾಳೆ, ನಿನ್ನ ಜೀವಕ್ಕೆ ಮೋಸಾದರೆ ಅದು ನಮಗೆ ಹೇಗೆ ಗೊತ್ತಾಗುವದು, ಎಂದು ಅತ್ತಿಗೆ ಕೇಳಲಾಗಿ

ಜೀವಕೆ ಮೋಸಾದ್ರೆ
ಉಂಬು ಬಟ್ಲು ಕಂದು ತೀದು
ಬಾಗಿಲೊಂದು ನದ್ಮ್ಯ
ಹಾಲಾಗಿ ಹರಿತೀದೆ.

ಎಂದು ಹೇಳುವಳು. ಒಂದು ದಿನ ಚಕ್ಕಡಿಯ ಮೇಲೆ ಕುಳಿತು ಬಾವಿಯ ದಂಡೆಯ ಮೇಲೆ ಹಾಯ್ದು ಹೋಗುವಾಗ 'ದೂಡಾರು ಕಡೆಗೀಲ'. ಹೊನ್ನಮ್ಮ ಬಾವಿಯಲ್ಲಿ ಬಿದ್ದು ನೆಲ್ಲಿಯ ಹೂವಾಗಿ ತೇಲಾಡುತ್ತಾಳೆ. ದಂಡಿಗೆ ಹೋಗಿದ್ದ ಅವಳ ಏಳು ಜನ ಅಣ್ಣಂದಿರು ಮತ್ತು ಅವಳ ಗಂಡ ಬರುತ್ತಾರೆ. ಅವಳ ಹೇಳಿಕೆಯ ಪ್ರಕಾರ ಉಣ್ಣುವ ಬಟ್ಟಲು ಕಂದಿತ್ತು. "ಬಾಗಿಲೊಂದು ನದ್ಮ್ಯ ಹಾಲಾಗಿ ಹರಿಯಿತ್ತು." ಬಲಿಯಾಗಿರುವ ವಿಷಯ ತಿಳಿದು ಎಲ್ಲರೂ ಕೆರೆಯ ದಂಡೆಗೆ ಬರುತ್ತಾರೆ. ನೆಲ್ಲಿ ಹೂವನ್ನು ಕುರಿತು ಅಣ್ಣಂದಿರು

ನಮ ತಂಗಿಯಾದರೆ
ನೀ ನಮಕೈಗೆ ಬರಬೇಕು.

ಎಂದು ಹೇಳುತ್ತಾರೆ. ಅವಳಗಂಡ

ನನ ಮಡದಿಯಾದರೆ
ನೀ ನನಕೈಗೆ ಬರಬೇಕು.

ಎನ್ನುತ್ತಾನೆ. ಆ ಹೂವು ಯಾರ ಕೈಗೂ ಸಿಗುವದಿಲ್ಲ.

ಹೊನ್ನಮ್ಮ ತೌರೂರಿಗೆ ಹೋಗುವ ಮುಂಚೆ ಬಾಳೆಲೆಯನ್ನು ಕಡೆದು ಅದು ಬಾಡುವವರೊಳಗಾಗಿ ಬರುತ್ತೇನೆಂದು ಅತ್ತೆಗೆ ಹೇಳಿ ಹೋಗುವದು, ಉಣ್ಣುವ ಬಟ್ಟಲ ಕಂದಿದರೆ ಬಾಗಿಲಲ್ಲಿ ನದಿ ಹಾಲಾಗಿ ಹರಿದರೆ ತನಗೆ ಮೋಸವಾಗಿದೆಯೆಂದು ತಿಳಿದುಕೊಳ್ಳುವಂತೆ ಅತ್ತಿಗೆಗೆ ಹೇಳಿದುದು ಮತ್ತು ಕೆರೆಯಲ್ಲಿ ಬಿದ್ದಮೇಲೆ ಹೊನ್ನಮ್ಮ ನೆಲ್ಲಿಯ ಹೂವಾಗಿ ತೇಲಿರುವದು-ಇವು ಇಲ್ಲಿಯ ಆಶಯಗಳು.

೭. ಕುಣಿಗಲು ಕೆರೆ[೧೩]:

ಒಡ್ಡರುದಾಸ ಕುಣಿಗಲು ತಿಮ್ಮಯ್ಯಗೌಡರಿಗೆ ಭೆಟ್ಟಿಯಾಗಿ ಐದುನೂರು ರೂಪಾಯಿಗಳಿಗೆ ಒಂದು ಕೆರೆಯನ್ನು ಕಟ್ಟಲು ಒಪ್ಪಿಕೊಂಡನು. ತನ್ನವರೊಂದಿಗೆ ಒಂದು ಕೆರೆ ಕಡಿಯಲು ಪ್ರಾರಂಭಿಸಿದ. ನೀರು ಬೀಳಲೇ ಇಲ್ಲ. ಒಡ್ಡರ ದಾಸನಿಗೆ ದುಃಸ್ವಪ್ನ ಬೀಳುತ್ತದೆ. ಗೌಡನ ಮುಂದೆ ತಿಳಿಸಲು ಮನಸ್ಸಾಗಲಿಲ್ಲ. ಎರಡನೆಯ ಸ್ವಪ್ನ ಬಿದ್ದುದನ್ನು

ಒಂದುಹೇಳಬಾರ್ದ ಕನ್ಸುಬಿತ್ತು
ಅದು ಹೇಳಬಾರ್ದಂತ ಸ್ವಪ್ನ
ಹೇಳೋ ವಡ್ಡರದಾಸ
ಹೊನ್ನಾಲು ದೇವಿಯುನು
ಜಲವಿನ್ನು ಬತ್ತೈತಂತ
ಹಂಗಂತ ಸ್ವಪ್ನದಲ್ಲಿ

ಎಂದು ತಿಳಿಸಿದ. ಇದರಿಂದ ಸೊಸೆ ಹೊನ್ನಾಲು ದೇವಿಯನ್ನು ಬಲಿಕೊಡಬೇಕೆಂದು ಅರ್ಥವಾಯಿತು. ಗೌಡ ಚಡಪಡಿಸಿದ. ಈ ವಿಷಯವನ್ನು ಒಂದು ಸಲ ಹೊನ್ನಾಲು ದೇವಿಗೆ ಹೇಳಲು ಪ್ರಯತ್ನಿಸಿದ. ಹೇಳಲಾಗಲಿಲ್ಲ. ಅವಳು ಒತ್ತಾಯಿಸಿದ ಮೇಲೆ ಎರಡನೆಯ ಸಲ

ನಾ ಕೆರೆಹೊಂದ ಕಟ್ಸಿಸೀದೆ
ಜಲವೆ ಬರಾಲಿಲ್ಲ
ನಿನ್ ಅಪ್ಪಾತಿ ಕೇಳ್ತಂತೆ

ಎಂದು ತಿಳಿಸಿದ. ಹೊನ್ನಾಲುದೇವಿ ಅದಕ್ಕೆ ಒಪ್ಪಿದಳು. ಮಗುವಿಗೆ "ನೀ ಆ ಅಂತ ಅಳಬೇಡ" ಎಂದು ಹೇಳಿ ತೌರಿಗೆ ಹೋಗುವಳು. ಅಲ್ಲಿ ಎಲ್ಲರಿಗೂ ತಾನು ಕೆರೆಗೆ

---

೧೩. ಕರಾಕೃ : ಗುಡ್ಡಗಾಡಿನ ಹಾಡ್ಗತೆಗಳು. (ಪು ೭೪-೮೦).

ಬಲಿಯಾಗಲಿರುವ ವಿಷಯವನ್ನು ತಿಳಿಸುವಳು. ತಂಗಿ ಚಿಕ್ಕಹೊನ್ನಿಗೆ "ನಿಂ ಭಾವಾನ ಮದಿವ್ಯಾಗು" ಎಂದು ಹೇಳಿ

ನನ್ನ ಕಂದಾನು ಒಬ್ಬ
ತಬ್ಬಲಿ ಎಂದು ನೀನು
ನಿನ್ನ ಕಂದನೆಂದು ಅನ್ನ

ಪ್ರೀತಿಯಿಂದ ಸಾಕಿಕೊಳ್ಳುವಂತೆ ತಿಳಿಸುವಳು. ತಿರುಗಿ ಊರಿಗೆ ಬಂದು ಕಂದನಿಗೆ "ಇಂದೀಗೆ ತೀರ್‍ತೆಕಂದ ನನ್ನ ರುಣ..." ಎಂದು ಹೇಳಿ ಮುತ್ತೈದೆಯರೊಂದಿಗೆ ಕೆರೆಗೆ ಹೋಗುತ್ತಾಳೆ. ಪೂಜೆಮಾಡಿ ಮುಗಿದ ಮೇಲೆ ಕೆರೆಯಲ್ಲಿ ನೀರು ತುಂಬಿಬಂದು ಬಲಿಯಾದಳು. ಗಟ್ಟದಿಂದ ಬಂದ ಅವಳ ಗಂಡನಿಗೆ ಚಿಕ್ಹೊನ್ನಿ

ಒಂದು ಕೆರೆ ಭಾವಿ ಕಟ್ಸಿದರಂತೆ
ಜಲ ಬರಲಿಲ್ಲವಂತೆ
ಅಕ್ಕಾನ್ನಿ ಕೇಳ್ಯಂತೆ

ಎಂದು ನಡೆದ ವಿಷಯ ತಿಳಿಸುವಳು. ಅವನು ಮನೆಗೆ ಬಂದು ಅಳುತ್ತಿರುವ ಕಂದನನ್ನು ಕರೆದುಕೊಂಡು ಕೆರೆಯ ದಂಡೆಗೆ ಬಂದು

ಹೆಂಡತೀಯ ಕರೆದಾನು
ನಿನ್ನ ಮಗ್ನು ನಾನು ಬಂದೇವು
ಕರಕೊಳ್ಳೆ ನಮ್ನು ಕೆರ್‍ಗೆ

ಎಂದು ಹೇಳುವನು. ಹೊನ್ನಾಲುದೇವಿ ಕೆರೆಯಿಂದ ಬಂದು, ಗಂಡನಿಗೆ ಸಮಾಧಾನ ಹೇಳಿ ಮಗುವಿಗೆ ಮೊಲೆ ಕುಡಿಸುತ್ತಾಳೆ. ಗಂಡನು ಅವಳ ಜೊತೆಯಲ್ಲಿಯೇ ಕೆರೆಗೆ ಬರಲು ಇಚ್ಛಿಸುತ್ತಾನೆ.

ಗಂಡ ಮಕ್ಕಳ ಬಂದವ್ರೆ
ಒಲಕೊಳ್ಳೆ ಗಂಗವ್ವ
ಕೆರೆ ಎದ್ದು ಬಾಗಾತು
ಹಿಂದ್ಲಿಂದ ಮುಚ್ಚೀತ
ಕೂಡಿ ಮುಚ್ಚಿ ಹರಿದಾವು.

ಹಾಡಿನ ಕೊನೆಯಲ್ಲಿ ಬಂದಿರುವ ಘಟನೆಯೊಂದನ್ನು ಬಿಟ್ಟರೆ ಈ ಹಾಡಿನಲ್ಲಿ ಹೆಚ್ಚಿನದೇನೂ ಇಲ್ಲ. ಗಂಡನ ಕರೆಗೆ ಓಗೊಟ್ಟು ಬಂದ ಹೊನ್ನಾಲುದೇವಿ ಮತ್ತೆ ಗಂಡ ಮತ್ತು ಮಗನೊಂದಿಗೆ ಕೆರೆಯನ್ನು ಸೇರಿದಳೆಂಬುದು ಇಲ್ಲಿರುವ ಹೊಸ ಆಶಯ. ಉಳಿದವೆಲ್ಲ ಸಾಮಾನ್ಯ ಆಶಯಗಳೇ.

ಸಂಪ್ರದಾಯಗಳ ಮೇಲೆ ಗಾಢವಾದ ನಂಬಿಗೆಯನ್ನಿಟ್ಟಿರುವ ಜಾನಪದಜೀವನ ತನ್ನವೇ ಆದ ಜೀವನಮೌಲ್ಯಗಳನ್ನು ರೂಪಿಸಿಕೊಂಡಿದೆ. 'ಕೆರೆಗೆಹಾರ' ಅಂಥ

ಮೌಲ್ಯಗಳಲ್ಲಿ ಒಂದು. ಈ ಮೌಲ್ಯಗಳ ಮೇಲೆ ಅದಕ್ಕಿರುವ ಶ್ರದ್ಧೆ–ವಿಶ್ವಾಸಗಳ ಸ್ತರದ ಮೇಲೆಯೇ ಅದರ ಭಾವನಾತ್ಮಕ ಬದುಕು ನಿಂತಿದೆ. ಸಮಷ್ಟಿಯ ಹಿತಕ್ಕಾಗಿ 'ಕೆರೆಗೆ ಹಾರ'ವಾಗುವ ಆಶಯ ಜಾನಪದ ಸಂಸ್ಕೃತಿಯ ಒಂದು ಮುಖವನ್ನು ತಿಳಿಸುತ್ತದೆ. ಈ 'ಆಶಯ' ಎಂಬ ಪದ ನಮ್ಮ ಜಾನಪದ ಅಧ್ಯಯನ ಕ್ಷೇತ್ರದಲ್ಲಿ ಇತ್ತಿತ್ತಲಾಗಿ ಕಾಲಿಡುತ್ತದೆ. ಜಾನಪದ ಹಾಡು–ಕಥೆಗಳನ್ನು ಆಶಯಗಳ ಹಿನ್ನೆಲೆಯಲ್ಲಿ ಅಭ್ಯಾಸ ಮಾಡುವದರಿಂದ ನಮಗೆ ಜಾನಪದ ಪ್ರತಿಭೆಯ ವೈಭವ ಗೊತ್ತಾಗುತ್ತದೆ– ಆ ಜೀವನದ ಹೃದಯದ ಮಿಡಿತ ತೀರ ಸ್ಪಷ್ಟವಾಗಿ ನಮಗೆ ಕೇಳುತ್ತದೆ, ಅದರ ಅಂತರಂಗ ವೆಲ್ಲ ಗೋಚರಿಸುತ್ತದೆ. ಜಾಗತಿಕ ಜಾನಪದ ಸಾಹಿತ್ಯದಲ್ಲಿ ತುಂಬಿಕೊಂಡಿರುವ ಸಾಮಾನ್ಯ ಆಶಯಗಳು ದೇಶ, ಕಾಲ, ಭಾಷೆಗಳಿಂದ ಪ್ರತ್ಯೇಕಿಸಲ್ಪಟ್ಟಿರುವ ಮಾನವ ಜನಾಂಗಗಳ ಮೂಲ ಒಂದೇ ಎಂಬುದನ್ನು ತೋರಿಸಿಕೊಡುತ್ತವೆ.

ಪ್ರಸ್ತುತ ಹಾಡುಗಳು ಮೂಲದಲ್ಲಿ ಒಂದೇ 'ಆಶಯ'ವನ್ನಾಧರಿಸಿದ್ದರೂ ಕೆಲವೊಂದು ಭಿನ್ನವಾದ ಆಶಯಗಳನ್ನು ಒಳಗೊಂಡಿರುವುದನ್ನು ಇಲ್ಲಿಯವರೆಗೆ ವಿವೇಚಿಸ ಲಾಗಿದೆ. ಕಥನಕ್ರಿಯೆಯ ಹಿನ್ನೆಲೆಯಲ್ಲಿ ಇವುಗಳಲ್ಲಿರುವ ಭಿನ್ನಪಾಠಗಳನ್ನು, ಮಾರ್ಪಾ–ಡುಗಳನ್ನು, ಸಾಮಾನ್ಯ ಸಂಗತಿಗಳನ್ನು ಸಂಗ್ರಹವಾಗಿ ಹೀಗೆ ಹೇಳಬಹುದಾಗಿದೆ.

೧. ಕೆರೆ ಕಟ್ಟಲು ಕಾರಣ: ೧,೨,೪.೪,೫,೬, ಮತ್ತು ೭[೧೪]– ಹೇಳಿಲ್ಲ. ೩– ಕಾರಣವಿದೆ. ಯಾತ್ರಿಕರ ತೊಂದರೆಯನ್ನು ನಿವಾರಿಸಲು ದೇವಿ ಎಲ್ಲಮ್ಮ ಕೆರೆಕಟ್ಟಿಸು ವಂತೆ ಆದೇಶ ನೀಡುತ್ತಾಳೆ.

೨. ಬಲಿಗೆ ಕಾರಣ: ೧,೨,೫,೬, ಮತ್ತು ೭ರ ನೀರು ಬೀಳಲಿಲ್ಲ, ೩ ಮತ್ತು ೪– ಏರಿ ನಿಲ್ಲಲಿಲ್ಲ.

೩. ಬಲಿಯ ಕಾರಣ ತಿಳಿದ ರೀತಿ: ೧– ಹೊತ್ತಿಗೆಯಿಂದ, ೨– ದೇವರನ್ನು ಕೇಳಿಸಿದುದರಿಂದ, ೩– ಶಾಸ್ತ್ರ ಕೇಳಿಸಿ ನೋಡಿದುದರಿಂದ, ೪– ಒಡ್ಡರ ಬೋಯಿ ಹೇಳು ವನು, ೫– ಹೇಳಿಲ್ಲ, ೬– ಭಟ್ಟರು ಪಂಚಾಂಗ ನೋಡಿ ಹೇಳಿದರು, ೭– ಒಡ್ಡರ ದಾಸನಿಗೆ ಕನಸು ಬೀಳುವದು.

೪. ಬಲಿಯಾಗಲಿರುವ ವ್ಯಕ್ತಿಯ ಆಯ್ಕೆ: ೧– ಹಿರಿಯ ಸೊಸೆಯನ್ನು ಸೂಚಿಸಿ–ದ್ದರೂ, ಅವಳನ್ನು ಬಲಿ ಕೊಟ್ಟರೆ ಹಿರಿಯತನ ಮಾಡಲು ಯಾರೂ ಇಲ್ಲದಾಗು ವರೆಂದು ಯೋಚಿಸಿ ಕಿರಿಯ ಸೊಸೆ ಭಾಗೀರಥಿಯನ್ನು ಬಲಿ ಕೊಡುವ ನಿರ್ಧಾರ ಮಾಡಲಾಯಿತು. ೨– ಹಿರಿಯ ಸೊಸೆಯ ಸೂಚನೆ ಮತ್ತು ಹಿರಿಯತನದ ತೊಂದರೆ ಇವು ಮೊದಲನೆಯ ಕಥೆಯಲ್ಲಿಯಂತೆಯೇ ಇದ್ದರೂ ಹಿರಿಯ ಸೊಸೆಯನ್ನೇ ಬಲಿ ಕೊಡುವ ನಿರ್ಧಾರ ಮಾಡಿದರು. ೩–ಕೆರೆ ಗೌಡನ ಮಡದಿ, ಮಗಳು. ಸೊಸೆ ಇವರಲ್ಲಿ

---

೧೪. ಈ ಅಂಕೆಗಳು ಈ ಲೇಖನದ ಹಾಡುಗಳನ್ನು ಸೂಚಿಸುತ್ತವೆ.

ಒಬ್ಬರನ್ನು ಅಪೇಕ್ಷಿಸುತ್ತದೆ, ಸೊಸೆಯನ್ನೇ ಬಲಿ ಕೊಡಲು ಯೋಚಿಸಲಾಯಿತು. ೪–ಕೆರೆಯು ಬುಡಬುಡಕಿಯವರ ಹುಡುಗಿ. ಬಸಿರು ಹೆಂಗಸು. ಗೌಡನ ಹಿರಿಯ ಮಗ. ಕಿರಿಯ ಮಗ, ಕಿರಿಯ ಸೊಸೆ, ಹಿರಿಯ ಸೊಸೆ, ಹೆಂಡತಿ ಇವರನ್ನು ಕೇಳಿದಾಗ ಇಷ್ಟು ಜನರಲ್ಲಿ ಹಿರಿಯ ಸೊಸೆಯನ್ನು ಆಯ್ಕೆ ಮಾಡಲಾಗುತ್ತದೆ. ೫–೬, ಮತ್ತು ೭–ನೇರವಾಗಿ ಸೂಚಿಸಲಾಗಿದೆ.

೫. ಬಲಿಯಾಗುವವಳಿಗೆ ವಿಷಯ ತಿಳಿಯುವುದು : ೧, ೨, ೪. ಮತ್ತು ೫–ಸ್ಪಷ್ಟವಾಗಿ ಹೇಳಿಲ್ಲ. ಊಹೆಯಿಂದ ತಿಳಿಯುತ್ತದೆ. ೩–ಕೆಮ್ಮಣ್ಣು ತರಲು ಹೋದಾಗ ಕುರುಬಗೌಡ ಹೇಳುತ್ತಾನೆ. ೬ ಮತ್ತು ೭– ಮಾವನಾದ ಗೌಡನೇ ಹೇಳುತ್ತಾನೆ.

೬. ತೌರೂರಿಗೆ ಹೋಗುವ ಸಂಗತಿ : ೧– ಅತ್ತೆಯ ಅಪ್ಪಣೆಯ ಮೇರೆಗೆ ಹೋಗುವಳು. ೨–ಊರಲ್ಲಿಯೇ ತೌರುಮನೆಯಿದ್ದುದರಿಂದ ಕೆಮ್ಮಣ್ಣು ತರಲು ಹೋದಾಗ ಭೆಟ್ಟಿಯಾಗಿ ಬರುವಳು. ೩–ಮಾವ ಕಾಯ್ದ ಕಲ್ಲುಮೇಲೆ ಉಗುಳಿ, ಅದು ಒಣಗುವದರೊಳಗಾಗಿ ಬರಬೇಕೆಂದು ಹೇಳಿದ. ಅದಕ್ಕೆ ಒಪ್ಪಿ ತೌರುಮನೆಗೆ ಹೋದಳು. ೪–ಮಾವ ತಾನಾಗಿಯೇ ಕಳಿಸುತ್ತಾನೆ. ೫–ತೌರುಮನೆಗೆ ಕಾಗದ ಬರದು ಅವರನ್ನು ಇದ್ದಲ್ಲಿಗೆ ಕರೆಸಿಕೊಳ್ಳಲಾಗುವದು. ೬–ಬಾಳೆ ಎಲೆಯನ್ನು ಕಡಿದು ಅದು ಬಾಡುವದರೊಳಗಾಗಿ ಬರುವೆನೆಂದು ಅತ್ತಿಗೆ ಹೇಳಿ, ಅವಳ ಅಪ್ಪಣೆ ಪಡೆದು ತೌರೂರಿಗೆ ಹೋಗುವಳು. ೭–ಯಾರ ಅಪ್ಪಣೆ ಪಡೆದುಕೊಂಡು ಹೋದಳೆಂಬುದನ್ನು ಸ್ಪಷ್ಟವಾಗಿ ಹೇಳಿಲ್ಲ.

೭. ತೌರೂರಿನಲ್ಲಿ : ೧ ಮತ್ತು ೨–ತನ್ನ ಮನೆಯವರಿಗೆಲ್ಲ "ನಮ್ಮತ್ತಿ ನಮ್ಮಾವ ಬ್ಯಾರಿಡತಾರಂತ" ಎಂದು ಹೇಳಿ ಗೆಳತಿಗೆ ಮಾತ್ರ ತಾನು ಬಲಿಯಾಗಲಿರುವದನ್ನು ತಿಳಿಸುತ್ತಾಳೆ. (ಎರಡನೆಯ ಕಥೆಯಲ್ಲಿ ಗೆಳತಿಯ ಹೆಸರು 'ನಿಂಗವ್ವ'ನೆಂದಿದೆ). ೩–ತಂಗಿ ಚಿಕ್ಕಹೊನ್ನಿ ಸತ್ಕರಿಸುವಳು. ಅವಳಿಗೆ ಏಳು ಜನ ಅಣ್ಣಂದಿರು. ವಿಷಯವನ್ನು ನೇರವಾಗಿ ತಿಳಿಸಿ, ತಂಗಿಯನ್ನು ತನ್ನ ಗಂಡನಿಗೆ ಕೊಡಬೇಕೆಂದು ಹೇಳಿ ಬರುವಳು. ೪–ಎಲ್ಲರಿಗೂ ವಿಷಯ ತಿಳಿಸಿ ಅವರೊಂದಿಗೆ ಊಟಮಾಡಿಬರುವಳು. ೫–ತೌರಿಗೆ ಹೋಗುವದೇ ಇಲ್ಲ. ೬–ಅವಳ ಏಳು ಜನ ಅಣ್ಣಂದಿರು ದಂಡಿಗೆ ಹೋಗಿರುತ್ತಾರೆ. ಅತ್ತಿಗೆಯ ಮುಂದೆ ಬಲಿಯಾಗುವದನ್ನು ತಿಳಿಸಿ. ನನ್ನ ಜೀವಕ್ಕೆ ಮೋಸಾದರೆ ಉಣ್ಣುವ ಬಟ್ಟಲ ಬಾಡುತ್ತದೆ, ಬಾಗಿಲದಲ್ಲಿಯ ನದಿ ಹಾಲಾಗಿ ಹರಿಯುತ್ತದೆ– ಎಂದು ಹೇಳಿ ಬರುವಳು. ೭–ತಾನೇ ವಿಷಯವನ್ನು ತಿಳಿಸಿ ತನ್ನ ತಂಗಿಯನ್ನು ತನ್ನ ಗಂಡನಿಗೆ ಕೊಡುವಂತೆ ಹೇಳಿಬರುವಳು.

೮. ಬಟ್ಟಲದ ವಿಷಯ ಮತ್ತು ಬಲಿಯಾದ ರೀತಿ : ೧–ಬಂಗಾರದ ಬಟ್ಟಲನ್ನು ಮರೆತು ಬಂದಿರುತ್ತಾರೆ. ಅದನ್ನು ತರಲು ಭಾಗೀರಥಿಯನ್ನು ಕಳಿಸುವರು.

ತೆಗೆದುಕೊಂಡು ಬರಲು ಕೆರೆಯಲ್ಲಿ ಹೋದಾಗ ಕ್ರಮಕ್ರಮವಾಗಿ ನೀರು ಏರಿಬಂದು ಮುಳುಗಿ ಹೋದಳು. ೨–ಕೇವಲ ಬಟ್ಟಲವೆಂದಿದೆ. ಉಳಿದುದೆಲ್ಲ ೧ ನೆಯ ಕಥೆಯಲ್ಲಿಯಂತೆಯೇ. ೩–ಗೌಡ ಬಟ್ಟಲನ್ನು ತಾನೇ ಮುಚ್ಚಿಟ್ಟುಕೊಂಡು ತರಲು ಹೊನ್ನಮ್ಮನನ್ನು ಕಳಿಸುವನು. ಕೆರೆಯಲ್ಲಿ ನೀರು ತುಂಬಿಬಂದು ಬಲಿಯಾಗುತ್ತಾಳೆ. ೪,೫ ಮತ್ತು ೭–ಬಟ್ಟಲದ ಪ್ರಸ್ತಾಪವಿಲ್ಲ. ಪೂಜೆಯಾದಮೇಲೆ ಕೆರೆಯಲ್ಲಿ ನೀರು ಹೆಚ್ಚುತ್ತಾ ಬಂದು ಮುಳುಗಿದಳು. ೬–ಕೆರೆಯ ದಂಡೆಯ ಮೇಲೆ ಚಕ್ಕಡಿಯಲ್ಲಿ ಹಾಯ್ದು ಹೋಗುವಾಗ ಚಕ್ಕಡಿಯ ಕೀಲು ಕಳಚಿ, ಕೆರೆಯಲ್ಲಿ ಬೀಳುವಳು. ನೀರಲ್ಲಿ ಮುಳುಗಿ ನೆಲ್ಲಿಯ ಹೂವಾಗಿ ತೇಲುವಳು.

೯. ಗಂಡನಿಗೆ ವಿಷಯ ತಿಳಿದ ಬಗೆ: ೧–ದಂಡಿನಲ್ಲಿದ್ದವನು ದುಃಸ್ವಪ್ನ ಕಂಡು ಶೀಘ್ರವೇ ಮನೆಗೆ ಬರುತ್ತಾನೆ. ತನ್ನ ಮನೆಯವರಿಂದ ಮತ್ತು ಭಾಗೀರಥಿಯ ತೌರುಮನೆಯವರಿಂದ ತಿಳಿಯದ ನಿಜ ವಿಷಯ ಅವಳ ಗೆಳತಿಯಿಂದ ತಿಳಿಯುವದು. ೨–ಸ್ವಪ್ನದ ಪ್ರಸ್ತಾಪವಿಲ್ಲ. ಸಹಜವಾಗಿ ಬರುತ್ತಾನೆ. ಗೆಳತಿ ನಿಂಗವ್ವನಿಂದ ನಡೆದ ಸಂಗತಿ ತಿಳಿದುಕೊಳ್ಳುತ್ತಾನೆ. ೩–ಮಲ್ಲನಗೌಡ ಮಲೆನಾಡಿನಿಂದ ತಿರುಗಿಬಂದ ಮೇಲೆ ವಿಷಯ ತಿಳಿಯುವದು. ೪–ಸ್ವಪ್ನ ಕಂಡ ಮೇಲೆ ಊರಿಗೆ ಬಂದನು. (ಎಲ್ಲಿಂದ ಬಂದನೆಂಬುದು ಉಕ್ತವಾಗಿಲ್ಲ). ಮನೆಯವರಿಂದ ತಿಳಿದುಕೊಂಡ. ೫–ಗಂಡನ ಎದುರಿಗೇ ಬಲಿಯಾಗಿರುವದರಿಂದ ಅವನಿಗೆ ತಿಳಿಸುವ ಪ್ರಸಂಗವೇ ಬರುವದಿಲ್ಲ. ೬–ದಂಡಿನಿಂದ ಬರುತ್ತಾನೆ. ಹೊನ್ನಮ್ಮನ ಅತ್ತಿಗೆ ಬಲಿಯ ವಿಷಯ ತಿಳಿಸುತ್ತಾಳೆ. ೭–ಗಟ್ಟದಿಂದ ಬಂದವನಿಗೆ ಚಿಕ್ಕಹೊನ್ನಮ್ಮನಿಂದ ಗೊತ್ತಾಗುವದು.

೧೦. ಬಲಿಯ ವಿಷಯ ತಿಳಿದಾದ ಮೇಲೆ: ೧–ಗಂಡನು ಕೆರೆಯ ದಂಡೆಗೆ ಹೋಗಿ ದುಃಖಿಸಿ ತಾನೂ ಕೆರೆಯಲ್ಲಿ ಬಿದ್ದು ಪ್ರಾಣಕೊಟ್ಟನು. ೨–ಮೂರು ಸಲ ಕರೆದಾಗ ಓಗೊಟ್ಟು ಕಮಲದ ಹೂವಾಗಿ ಕಂಡಳು. ಆಮೇಲೆ ಗಂಡನು ತಾನೂ ಕೆರೆಯ ಪಾಲಾದ. ೩–ಏಳು ಜನ ಅಣ್ಣಂದಿರು ಹೊನ್ನಮ್ಮನ ಗಂಡನನ್ನು ಹೊಡೆಯುತ್ತಾರೆ. ಆ ಮೇಲೆ ಚಿಕ್ಕಹೊನ್ನಿಯ ಜೊತೆಯಲ್ಲಿ ಅದೇ ಕೆರೆಯ ಮೇಲೆ ಅವನ ಲಗ್ನವಾಗುತ್ತದೆ. ೪–ಗಂಡನಿಗೆ ಹಾವಿನ ಅಡಿಗೆ ನೀಡಿ ಕೊಲ್ಲಲು ಪ್ರಯತ್ನಿಸಲಾಗುತ್ತದೆ. ಅವನು ಉಪಾಯದಿಂದ ಪಾರಾದ. ಅದನ್ನು ಊಟ ಮಾಡಿದ ಕಿರಿಸೊಸೆ ಸತ್ತಳು. ಅವನು ಕೆರೆದಂಡೆಗೆ ಹೋಗಿ ನೀನು ನಿಜವಾದ ಪತಿವ್ರತೆಯಾದರೆ ತೋರಬೇಕೆಂದು ಕೇಳಿಕೊಂಡಾಗ ಅವಳು ಪುನಃ ಬದುಕಿ ಬಂದಳು. ೫–ಮರಿಗೆಂಚಿಯೊಡನೆ ಲಗ್ನವಾಗುವದು. ೬–ನಿಜವಾದ ಹೆಂಡತಿಯಾದರೆ ಕಾಣಿಸಿಕೊಳ್ಳಬೇಕೆಂದು ಗಂಡ ಕೇಳಿಕೊಂಡರೂ ಅವಳು ಕಾಣಲಿಲ್ಲ. ೭–ಗಂಡ ಅವಳನ್ನು ಕುರಿತು ಹಂಬಲಿಸಿದಾಗ ಕೆರೆಯಿಂದ ಮೇಲೆದ್ದು ಬಂದಳು. ಮತ್ತೆ ಗಂಡ ಮಗನೊಂದಿಗೆ ಕೆರೆ ಸೇರಿದಳು.

೧೧. ಹೆಸರುಗಳು :

i ಊರು– ೧–ಕಲ್ಲನಕೇರಿ. ೩–ಅಣಜಿ. ೪–ಹಣಜಿ. ೫–ಹುಳಿಯಾರು. ೭–ಕುಣಿಗಲು. ೨ ಮತ್ತು ೬ ಹೇಳಿಲ್ಲ.

ii ಗೌಡ– ೧–ಮಲ್ಲನಗೌಡ, ೩–ಕೆಂಚನಗೌಡ. ೬–ಹೊಜಗೌಡ. ೭–ತಿಮ್ಮಯ್ಯಗೌಡ ೨, ೪ ಮತ್ತು ೫ ಹೇಳಿಲ್ಲ.

iii ಸೊಸೆ– ೧–ಭಾಗೀರಥಿ. ೨–ಮಲಪುರಿ. ೩–ಹೊನ್ನಮ್ಮ. ೪–ಹೇಳಿಲ್ಲ (ಹಿರಿಸೊಸೆ ಅಂತಿದೆ). ೫–ಕೆಂಚಮ್ಮ. ೭–ಹೊನ್ನಾಲುದೇವಿ.

iv ಗಂಡ– ೧–ಮಾದೇವರಾಯ. ೨–ಮಾತೂರಾಯ. ೩–ಮಲ್ಲನಗೌಡ. ೪, ೫. ೬ ಮತ್ತು ೭–ಹೇಳಿಲ್ಲ.

ಪಯಣ

'ರವಿ'

ಬಟ್ಟೆ ಹಾಕಿಕೊಳ್ಳುತ್ತಿದ್ದೆ, ಬಾಗಿಲ ಮೇಲೆ ಬಡಿದ ಶಬ್ದವಾಯಿತು. Under wear ಮೇಲೆ ಪ್ಯಾಂಟ್ ಏರಿಸಿಕೊಂಡು 'Come in' ಎಂದೆ. ಬಾಗಿಲು ಸರಿಸಿ ಅವನು ಬಂದ. 'ಸರಿ ಕೂತುಕೋ' ಅಂದೆ. ಎಲ್ಲಿಗಾದ್ರೂ Engagement's ಆ' ಎಂದು ಕಣ್ಣರಳಿಸಿದ. 'ಏನೂ ಇಲ್ಲ ಸರ್ಕಲ್‌ವರೆಗೂ ಹೋಗುವದು, ವಾಲ್‌ಗಾಡಿ ಹಾಯೋದು ನೋಡಿ ಕಾಫಿ ಹೀರಿ ಬಂದ್ರಾಯ್ತು' ಎನ್ನುತ್ತಾ ಶರಟು ಹಾಕಿಕೊಂಡು ಅವನ ಕಡೆ ಬೆನ್ನು ಮಾಡಿ ಟಿಕ್ ಮಾಡಿಕೊಂಡು ಹಣಿಗೆ ಹಿಡಿದು ಕೂದಲು ಹಿಕ್ಕ ತೊಡಗಿದೆ. ಬಹಳ ಬೆಳೆದಿದ್ದ ಕೂದಲಾ ಬೇಗ ಒಂದು ಆಕಾರಕ್ಕೆ ಕೂರಲಿಲ್ಲ. ಕೂಡಲೆ ನನಗೆ ಪ್ರೊ. ನಾರಾಯಣರ ನೆನಪಾಯಿತು. ಅವರ ಕೂದಲಂತೂ ಒಳ್ಳೆ ಮುಳ್ಳುಹಂದಿಯ ಮುಳ್ಳಿನಂತೆ ನಿಂತಿರುತ್ತಿದ್ದವು. ಹೌದು, ಅವರು ಇತ್ತೀಚೆಗೆ ಡಾ. ನಾರಾಯಣ್ ಆಗಿದ್ದರು.

'ಇನ್ನೂ ಮುಗಿಯಲಿಲ್ಲವೇನೊ ?' ಎಂದ. 'ಸರಿ ಹೋಗೋಣ ಬಾ' ಎಂದು ಚಪ್ಪಲಿಯೊಳಗೆ ಕಾಲು ತೂರಿದಾಗ ಅವನು ಕುರ್ಚಿಯಿಂದ ಎದ್ದು ನಿಂತ. ಅವನು ಹೊರಕ್ಕೆ ಬಂದ ನಂತರ ರೂಮಿನ ಬಾಗಿಲು ಎಳೆದು ಬೀಗ ಹಾಕಿ ಒಮ್ಮೆ ಜಗ್ಗಿನೋಡಿ ಅವನೊಂದಿಗೆ ಹೆಜ್ಜೆ ಹಾಕಿದೆ.

ಪಟಾಳಿ ಪಂಜಯ್ಯನ ಕಾಂಪೌಂಡನ್ನು ದಾಟುತ್ತಿದ್ದಂತೆಯೇ Mrs. ದೇಶಪಾಂಡೆ ಹಾಗೊ ಅವರ ಮಗಳು ನಳಿನಾ ಎದುರಾದರು.

'ಬಜಾರಕೊಂಟೀರೇನೊ.... ಮನೀ ಕಡೆ ಬರ್ರೆಲಾ.... ಮೊನ್ನೆ ಸುರೇಶ ಪತ್ರ ಬರೆದಿದ್ದ ಮುಂದಿನ ತಿಂಗಳು ಬರ್‍ತೀನಿ –ಅಂತ' ಎಂದರು Mrs. ದೇಶಪಾಂಡೆ.

'ಒಳ್ಳೆಯದೇ ಆಯ್ತು, Shopping ಇಷ್ಟು ಲಗೂ ಮುಗಿಸಿದಿರಿ' ಎಂದೆ.

'ಇವಳೆ ಸಲುವಾಗಿ ಅಷ್ಟು ಸೀರಿ ಖರೀದಿ ಮಾಡೂದಿತ್ತು' ಎನ್ನುತ್ತ ತಮ್ಮ ಮಗಳ ಕಡೆ ನೋಡಿದ್ರು. ಅವಳೂ ನಗುತ್ತಾ 'ಸುರೇಶ ಬರೋವರ್‍ಗೂ ನಮ್ಮನೀಗೆ ಬರೋಲ್ಲ ಅಂತನೇನೋ' ಎಂದಳು.

ಹಾಗೇನಿಲ್ಲ, ನನಗೀಗ Corporataion ಗೆ Transfer ಆಗಿರೋದ್ರಿಂದ ದಿನವೂ ಅಲ್ಲಿಗೆ ಹೋಗಿ ಬರುವುದೇ ಜಾಸ್ತಿಯಾಗತ್ತೆ ಅಂದೆ.

'ಭಾನುವಾರ ಬಿಡುವುಮಾಡಿಕೊಂಡು ಬರ್ರೆಲಾ' ಎಂದರು Mrs. ದೇಶಪಾಂಡೆ.

'ಹೂಂ' ಎಂದು, ನನ್ನ ಪಕ್ಕದಲ್ಲೆ ನಿಂತಿದ್ದ ರವಿಯನ್ನು ಪರಿಚಯ ಮಾಡಿಕೊಟ್ಟೆ. ನಸುನಗದೆ 'ನಮಸ್ತೆ' ಎಂದಷ್ಟು ಕೈಜೋಡಿಸಿದ. ಅವರನ್ನು ಬೀಳ್ಕೊಟ್ಟು ಮುಂದೆ ನಡೆದೆವು. 'Special ಆಗಿ ಅಪ್ಪನ ಎದುರಿಗೇ ಕರಿತಾಳೆಲ್ಲೋ' ಎಂದ. 'ಸುಮ್ನೆ ಬಾರೋ ನಿನ್ನ ನಾಯಿಬುದ್ಧಿ ಬಿಡಬೇಡ' ಎಂದು ಗದರಿದೆ. ಹಲ್ಲುಕಿರಿದು ಸುಮ್ಮನಾದ.

ಸರ್ಕಲ್ ರೆಸ್ಟೋರೆಂಟಿನಲ್ಲಿ Special Room ನೊಳಗೆ ಕಣ್ಣಾಡಿಸುತ್ತಲೆ ಮೋಹನ್ 'ಹೆಲ್ಲೊ' ಎಂದ. ಮೋಹನನನ್ನು ಅವನಿಗೆ ಪರಿಚಯ ಮಾಡಿಸಿಕೊಟ್ಟು ಎದುರಿನ ಕುರ್ಚಿಯಲ್ಲಿ ಇಬ್ಬರೂ ಕುಳಿತೆವು. ಮೋಹನನ ಬಳಿ ರವಿಯನ್ನು ಕುರಿತು ಹೇಳತೊಡಗಿದ 'ನೋಡೊ ಇವನು ಯಾವಾಗಲೂ ಪಂಪ, ರನ್ನ,ಪುತಿ,ಉತ್ಸವ,ಭಾವ, ಅಭಿವ್ಯಕ್ತಿ ಮುಂತಾದ ಮಾತಂಗಳನ್ನು ಉರುಹಾಕಿ ಶಬ್ದ, ರಸ, ಅರ್ಥ ಕೇಶಿರಾಜ, ನಾರಾಣಪ್ಪ, ಮುದ್ದಣ ಅಂತ ಹುಡುಗರ ಎದುರು ಗಂಟೆಗಟ್ಟಲೆ ಕಂಠಶೋಷಣೆ ಮಾಡಿಕೋತಾ ಇದ್ದಾನೆ. ಜೀವನ ಅಂದರೆ Monotonus ಅಂತ ಅಂತಾನಲ್ಲ ಏನು ಹಾಗೆ ಅನಿಸಿದೆ ಅನ್ನೋದು ತಿಳೀತಿಲ್ಲ' ಎಂದೆ.

'ಓ...' ಎಂದು ನಸುನಗುತ್ತಾ ಮೋಹನ ಹೊಗೆ ಉಗುಳುತ್ತಾ ಹಿರಿದಾಗಿ ನಕ್ಕು, 'ನಾನು Life ನ ಯಾವಾಗ್ಲೂ Serious ಆಗಿ ತಗೊಂಡೇ ಇಲ್ಲ. ಹೇಗೆ ಬರುತ್ತೆ ಹಾಗೆ ಅನುಭವಿಸಿಕೊಂಡು ಹೋಗಿ ಬಿಡೋದು. ಅದಕ್ಕೆಲ್ಲಾ ತಲೆ ಕೆಡಿಸಿಕೊಂಡ್ರೆ Three X ರಮ್ ಕೂಡಾ ಕಿಕ್ ಕೊಡೊಲ್ಲ' ಎಂದು ತನ್ನ ಜೋಕಿಗೆ ತಾನೇ ನಕ್ಕ.

ಇವನು ನಗುತ್ತಾನೇನೋ ಎಂದುಕೊಂಡಿದ್ದೆ. ಹೊಸದಾಗಿ ಪರಿಚಯ ಆದವನ ಎದುರು ಇವನ ವಿಷಯ ಹೀಗೆ ಹೇಳಿದೆನೆಂದು ಸಿಟ್ಟಾಗುತ್ತಾನೇನೋ ಅಂದು ಕೊಂಡಿದ್ದೆ. ನಗಲೂ ಇಲ್ಲ, ಸಿಟ್ಟಾಗಲೂ ಇಲ್ಲ. ತುಟಿಯಲ್ಲಿ ನಕ್ಕಹಾಗೆ ಮಾಡಿ ಕಣ್ಣರಳಿಸಿ ಸುಮ್ಮನೆ ಕೂತಿದ್ದ. Boy ತಂದಿಟ್ಟ ಕಾಫಿ ಹೀರಿ ಹೊರಬಂದೆವು. 'ಹೊಳೆಯ ಕಡೆ ಹೋಗಿ ಬರೋಣ' ಎಂದ ಮೋಹನ. 'ಏನೋ' ನಿನ್ನ ಒಪ್ಪಿಗೆಯೋ ಎಂಬಂತೆ ಅವ-ನನ್ನು ಕೇಳಿದೆ. 'ನನ್ನ ಅಭ್ಯಂತರವೇನಿಲ್ಲ. ಎಲ್ಲಿಗಾದ್ರೂ ಹೋಗಬೇಕು ಹೋದ ರಾಯ್ತು' ಅಂದ. 'follow me' ಎಂದೆ ಒರಟಾಗಿ. ಮುಗುಳ್ನಕ್ಕು ಹಿಂಬಾಲಿಸಿದ

ಸಂಜೆಯ ಸಮಯ ಟಾರ್ ರಸ್ತೆಯ ಅಂಚಿನಲ್ಲಿ ಸಾಗಿದ್ದೆವು. ಊರಾಚೆ ನಡೆದಂತೆ Signals ಬೀಳುವುದು ಕಮ್ಮಿಯಾಯ್ತು. ಆಗಾಗ್ಗೆ ಭರ್ರೆಂದು ಬರುತ್ತಿದ್ದ ಬಾಂಬೆ ಲಾರಿಗಳಿಗೆ ದಾರಿಮಾಡಿಕೊಟ್ಟು ಪುನಃ ಟಾರ್ ರಸ್ತೆಯ ಅಂಚಿಗೆ ಬಂದು ಮುಂದೆ ಸಾಗುತ್ತಿದ್ದೆವು. ಪಕ್ಕದಲ್ಲಿ ಅಗ್ನಿಕುಂಡಗಳನ್ನು Long Jump ಮಾಡಿಕೊಂಡೇ ದಾಟ ಬೇಕಾಗುತ್ತಿತ್ತು. ಎದುರಿಗೆ ಎಷ್ಟೋ ಮಂದಿ ಬರುತ್ತಿದ್ದರು, ಹಾಗೆಯೇ ನಮ್ಮನ್ನು ದಾಟಿ ಮುಂದೆ ಸರಿಯುತ್ತಿದ್ದರು. ಒಮ್ಮೊಮ್ಮೆ ನೆಲವನ್ನು ನೋಡುತ್ತಾ ನಡೆಯು ವಲ್ಲಿ ಮಜಾ ಎನಿಸುತ್ತಿತ್ತು. ಕಪ್ಪು ಕಂದು ಬಣ್ಣದ ಹಲವು ಮಾದರಿಯ ಹೊಸ ಹಳೆಯ ಚಪ್ಪಲಿ, ಶೂಗಳನ್ನು ತೊಟ್ಟ ಪಾದಗಳು ಎದುರಾಗುತ್ತಿದ್ದವು ಮತ್ತೆ ಕಾಣೆ-

ಯಾಗುತ್ತಿದ್ದವು. ಎದುರಿಗೆ ಹೈಹೀಲ್ಡ್‌ಶೂನಲ್ಲಿ ಕೆಂಪು ಕಾಲುಗಳು ಕಂಡವು. ಕಣ್ಣುಗಳು ಮೆಲ್ಲಗೆ ಮೇಲೆ ದೃಷ್ಟಿಸಿದವು. ನೀಲಿ ಸೀರೆಯ ಮೇಲೆ ತಿಳಿಗುಲಾಬಿ ಬಣ್ಣದ Slewless ಬ್ಲೌಜ್, Vshape neck ಮೇಲೊಂದು ಮುತ್ತಿನ ಸರ ಕಂದಕಗಳಲ್ಲಿ ಹರಿವ ನದಿಯಂತೆ ಕಾಣುತ್ತಿತ್ತು ಎದೆ ಶಿಖರಗಳ ಮಧ್ಯೆ. ಕಿರುಬಾಯಿಗೆ ರಂಗೇ ಹೆಚ್ಚಾಗಿತ್ತು. ಕಣ್ಣುಗಳು ಹೊಳೆಯುತ್ತಿದ್ದವು. ಮೀನು ತಿನ್ನುವವಳಿರಬೇಕು ಅನ್ನಿಸಿತು. ಡಾ. ಗೋಖಲೆ ನನಗೆ ಮೀನು ತಿನ್ನಲು Advise ಮಾಡಿದ್ದು ನೆನಪಾಯಿತು. ಪಕ್ಕದಲ್ಲಿ ಒರಟು ಮುಖದ ಕುಳ್ಳ ಮನುಷ್ಯ ಹೊಟ್ಟೆ ಉರುಳಿಸಿಕೊಂಡು ನಡೆಯುತ್ತಿದ್ದ. 'Yes boss ಅನ್ನಲಿಕ್ಕೆ ಲಾಯಕ್ಕು' ಅಂದುಕೊಂಡು ಮೋಹನನ ಕಡೆ ಹೊರಳಿದೆ. ಅವನಾವರೋ ರಸ್ತೆ ಅಂಚಿನಲ್ಲಿದ್ದ 'ಕಾಫಿಕ್ಲಬ್'ನ ಎದುರು ಕಟ್ಟೆಗೆ ಹೊರೆ ಇಳಿಸಿ ಕೊಳಕು ಪಂಜೆಯ ಮಾಲಿಕನೊಂದಿಗೆ ಚಿಲ್ಲರೆ ಇಸಿದುಕೊಳ್ಳುವಾಗ ಸೆರಗಿಲ್ಲದ ಎದೆಯನ್ನೆ ಓಲಾಡಿಸುತ್ತ ಮುರುಕ ಮಾಡುತ್ತಿದ್ದ ಹೆಣ್ಣಿನಲ್ಲಿ ನಟ್ಟಿದ್ದ ದೃಷ್ಟಿಯನ್ನು 'General pathologist' ಎಂದ ಕೂಡಲೇ ಕಣ್ಣು ಹೊರಳಿಸಿ, 'ಜೀವನ ಇರೋದು ಅನುಭವಿಸುವುದಕ್ಕೆ. ಸೌಂದರ್ಯ ಇರೋದು ನೋಡುವುದಕ್ಕೆ, ನಿನ್ನ ಹಾಗೆ ಚಡ್ಡಿಯ ಮೇಲೆ ಚಡ್ಡಿ ತೊಟ್ಟು ಒದ್ದೆಮಾಡಿಕೊಳ್ಳೊದಕ್ಕಲ್ಲಾ. ಒಮ್ಮೆ ಲೌವ್ ಮಾಡಿನೋಡು. ಈ ಆಯುಸ್ಸು ಎದುಕ್ಕೂ ಸಾಲ್ದು ಅನಿಸುತ್ತೆ. Monotonus ಎಲ್ಲಾ ಕಿತ್ಕೋಗತ್ತೆ' ಅಂದ. ಇವನನ್ನೆ ಕುರಿತು ಹೊಸಬ ಟೀಕೆಮಾಡಿದರೆ ಏನಾದರೂ ಅಂತಾನೇನೋ ಎಂದು ಇವನ ಕಡೆ ಹೊರಳಿದರೆ, ಅವನಲ್ಲಿ ಏನೂ ವ್ಯತ್ಯಾಸ ಕಂಡುಬರಲಿಲ್ಲ!

ಮೂವರು ನಡೆಯುತ್ತಿದ್ದಂತೆಯೇ ನದಿಯ ದಡದ ಮೇಲೆ ಉಸುಕಿನ ಮೇಲೆ ಕುಳಿತುಕೊಳ್ಳಬೇಕೆಂದು ನಿಶ್ಚಯಿಸಿ ಸೇತುವೆಯ ಮೇಲೆ ಹಾಯ್ದು ನದಿಯ ಮತ್ತೊಂದು ದಡವನ್ನು ತಲುಪಿದೆವು. ಇನ್ನೂ ಸೇತುವೆಯ ಅಂಚಿನಲ್ಲಿದ್ದಾಗಲೆ ಎರಡು ಲಾರಿಗಳು ಒಂದರ ಹಿಂದೆ ಒಂದು ಸಾಗಿದಾಗ ಕಾಲಕೆಳಗಿನ ಸೇತುವೆ ನಡುಗಿತು. ಎಡಕ್ಕೆ ಹೊರಳಿ ದಿಣ್ಣೆಯನ್ನು ಇಳಿದು ಮರಳನ್ನು ತಲುಪಿದೆವು. ದೂರದಲ್ಲಿ ಕುಳಿತಿದ್ದ ಒಬ್ಬಿಬ್ಬರು ಎದ್ದು ಹೊರಡುವ ಆತುರ ತೋರುತ್ತಿದ್ದರು. ಕುಳಿತಲ್ಲಿಯೇ ಚಪ್ಪಲಿಯೊಳಗೆ ಹೊಕ್ಕಿದ್ದ ಮರಳನ್ನು ಕೊಡುವುತ್ತಿದ್ದುದು ಕಂಡುಬಂತು. ಮೋಹನ ಶೂ ಕೊಟ್ಟಿದ್ದ ನಾನೂ, ಇವನು ಚಪ್ಪಲಿ ತೊಟ್ಟಿದ್ದೆವು. ಬೆರಳಿನ ಸಂದಿಯಲ್ಲಿ ಮರಳು ಹೊಕ್ಕು ಮೆಲ್ಲಗೆ ಒಮ್ಮೊಮ್ಮೆ ಉರಿಯುತ್ತಿತ್ತು. ನಾವು ಕುಳಿತಿದ್ದ ಕಡೆ ನದಿ ಪೂರಾ ಬಂದಾಗ ಕೊರೆದ ನಾಲ್ಕಾರು ಕೊರಕಲುಗಳು ಇದ್ದವು. ನದಿಯ ಪಾರ್ಶ್ವದಲ್ಲಿ ಕುಳಿತಾಗ ತೀರ ಆಳದಲ್ಲಿ ಕುಳಿತಂತೆ ಅನಿಸುತ್ತಿತ್ತು. ತಗಳೋ 'Bristol' ಎಂದು ಸಿಗರೇಟು ಪ್ಯಾಕು ಒಡಿದು ಚಾಚಿದೆ ಅವನು ಕೈಹಾಕಿ ನೆವ ತೆಗೆದುಕೊಂಡ! ಅವನು ಸಿಗರೇಟು ಸೇದುತ್ತಿದ್ದುದು ನನಗೆ ಗೊತ್ತೇ ಇರಲಿಲ್ಲ. ಮೂವರೂ ಒಂದೇ ಕಡ್ಡಿಯಲ್ಲಿ ಹೊತ್ತಿಸಿಕೊಂಡು ಹೊಗೆ ಉಗಳತೊಡಗಿದೆವು. ಹೊಗೆ ಬಿಡುತ್ತಾ ನದಿಯನ್ನೇ ದಿಟ್ಟಿಸುತ್ತಿದ್ದ ಅವನು ಹೊಗೆಯನ್ನು ದೊಡ್ಡದಾಗಿ ಉಗುಳುತ್ತಾ ಮೋಹನ

ತನ್ನ Mysore tritp ಅನ್ನು ಕುರಿತು ಹೇಳತೊಡಗಿದ, ಅವನು ನಗುತ್ತಲೇ 'ಮೊನ್ನೆ ದಾಸ ಪ್ರಕಾಶದಲ್ಲಿ ಲೀಲಳಿಗೆ Party ಕೊಟ್ಟೆ ಕಣೋ. ಅಂತೂ ಅದೊಂದು ಜಿಗಣೆ; ಬಹಳ ದುಡ್ಡು ತಿಂದರೂ ಪರವಾಯಿಲ್ಲ; ಬಹಳ ಖುಷಿ ಕೊಡ್ತಾಳೆ' ಎಂದ. ಮೈಸೂರಿಗೆ O.D. ಹೋಗಿದ್ದು ಇದಕ್ಕೇನಾ ಎಂದೆ. 'ಹೌದೋ ಸ್ವಾಮಿಕಾರ್ಯ ಸ್ವಕಾರ್ಯ' ಎಂದು ಬಾಯಗಲಿಸಿ ನಕ್ಕ. ಸ್ವಚ್ಛವಾದ ಸಣ್ಣ ಹಲ್ಲುಗಳ ಮೇಲೆ ಕೆಂಪನೆಯ ಒಸಡು ಕಾಣುತ್ತಿತ್ತು. ಮರಳ ಮೇಲೆ ಒರಗಿದ. ನಾನೂ ಸಿಗರೇಟಿನ ಕೊನೆಯ 'ದಂ' ಎಳೆದು ಆಚೆಗೆಸೆದು ಮರಳ ಮೇಲೆ ಒರಗಿದೆ.

ತಲೆಗೆ ಕೈ ಕಟ್ಟಿಕೊಂಡು ಒರಗಿದ್ದ ನನಗೆ ಅವನು ಕುಳಿತು ನೀರನ್ನೇ ದೃಷ್ಟಿ ಸುತ್ತಿರುವುದು ಕಾಣುತ್ತಿತ್ತು. ಮೋಹನ ಲೀಲಳನ್ನು ನೆನೆಸಿಕೊಂಡಿರಬೇಕು; ಕಣ್ಣು ಮುಚ್ಚಿ ತುಟಿಯಲ್ಲೆ ನಗುತ್ತಿದ್ದ. ರವಿಯಂತೂ ಇತ್ತೀಚೆಗೆ ನನಗೊಂದು ಸಮಸ್ಯೆಯಾಗಿದ್ದ. ಮೊದಲಿಂದಲೂ ಮಿತಭಾಷಿಯಾದರೂ ಇತ್ತೀಚೆಗಂತೂ ತೀರಾ ವಿಮನಸ್ಕನಾಗಿದ್ದಂತೆ ಕಾಣುತ್ತಿತ್ತು. ಒಮ್ಮೊಮ್ಮೆ ಏನೇನೋ ಮಾತನಾಡಿ ಮರುಕ್ಷಣ 'Excuse me' ಎನ್ನುತ್ತಿದ್ದ 'ಕೊರಗಬೇಡ ಒಂದು ಮದುವೆಯಾಗಿ, Preparations ಕಡೆ ಗಮನಕೊಟ್ಟು ಉದ್ಯೋಗ ನಡೆಸು' ಎಂದರೆ, 'Mood ಏ ಇಲ್ಲ … ಜೀವನ ಅಂದ್ರೆ ನನಗಂತೂ Fool time passing ಅನ್ನಿಸಿದೆ. ಈ ಅದೆತನಕ್ಕೆ ತುಂಬಾ ಬೇಸರ ಬಂದಿದೆ. ನನ್ನ ಸ್ಥಿತಿ ಅರ್ಥವಾಗೊಲ್ಲ' ಎನ್ನುತ್ತಿದ್ದ. ನೋಡು ಒಂದು ಹೆಣ್ಣು ನಿನ್ನ ಸಂಗಾತಿಯಾದಳೆಂದ್ರೆ ನಿನಗೆ ಇದನ್ನೆಲ್ಲಾ ಯೋಚಿಸೋಕೊ ಟೈಂ ಸಿಕ್ಕೋಲ್ಲ boy ಸುಮ್ನೆ ಮದುವೆಯಯಾಗು ಎಂದರೆ 'ನೋಡು ಪ್ರೀತಿ ಅನ್ನೋದು ನಿಶೆ ಏರಿದವರ ಮಾತು. ಅದನ್ನೆಲ್ಲ ನನ್ನ ಹತ್ತಿರ ಹೇಳಬೇಡ' ಅನ್ನುತ್ತಿದ್ದ. ಮತ್ತೊಮ್ಮೆ 'ಯಾರೂ ಯಾರನ್ನೂ ಪ್ರೀತಿಸೋಲ್ಲ. ಇದೊಂದು ತಿಳಿದುಕೋ' ಎಂದಿದ್ದ.

ಇತ್ತೀಚಿಗೆ ಎಲ್ಲರೊಂದಿಗೆ ಬೆರತರೂ ಅಪರೂಪಕ್ಕೆ ಒಮ್ಮೆ ನಗುತ್ತಿದ್ದ. ಅದು ಹೇಗೆ ಕಾಲೇಜಿನಲ್ಲಿ Lecturer ಆಗಿ ಕೆಲಸ ಮಾಡುತ್ತಿದ್ದಾನೋ ನನಗಂತೂ. ಆಶ್ಚರ್ಯ ಅನಿಸುತಿತ್ತು. ಪ್ರಾಣಿ ಯಾರಿಗೂ ಕೆಡುಕುಮಾಡ ಹೋಗದಿದ್ದರೂ ಈಗ ತನಗೇ ತಾನು ಕೆಡುಕುಮಾಡಿಕೊಳ್ಳುತ್ತಿದ್ದಾನೆ ಅಂದುಕೊಂಡೆ.

ಸ್ವಲ್ಪ ಹೊತ್ತು ಕಳೆದಿರಬಹುದು. ಸುತ್ತಲೂ ಮೆಲ್ಲಗೆ ಕತ್ತಲಾವರಿಸುತ್ತಿತ್ತು ಅವನು ಎದ್ದು "Nature Call" ಎಂದು ಚಪ್ಪಲಿ ತೊಟ್ಟುಕೊಂಡ. ಇನ್ನು 10 ಅಥವಾ 15 ನಿಮಿಷದಲ್ಲೇ ಬರಬೇಕು ಇಲ್ಲದಿದ್ರೆ…ಎಂದೆ ಗಟ್ಟಿಯಾಗಿ; "If possible" ಅಂದ ನಸುನಗುತ್ತ.

'You Sentimental fool' ಎಂದೆ ಜೋರಾಗಿ. ಕೇಳಿಸದವನಂತೆ ಅವನು ಹೊರಟು ಹೋದ. ತಿರುವಿನಲ್ಲಿ ಕ್ರಮೇಣ ಮರೆಯಾದ. ಮೋಹನನ ಕಡೆ ಹೊರಳಿದೆ ತಣ್ಣಗೆ ಬೀಸುತ್ತಿದ್ದ ಗಾಳಿಗೆ ಮೈಯೊಡ್ಡಿ ಕಣ್ಮುಚ್ಚಿಕೊಂಡು ತುಟಿಯಲ್ಲಿ ನಗುತ್ತಿದ್ದ.

ಕ್ರಮೇಣ ಮಬ್ಬು ನಾವು ಕುಳಿತಿದ್ದ ಜಾಗವನ್ನು ಆವರಿಸತೊಡಗಿತು. ದೂರದಲ್ಲಿ ನಗರದ ದೀಪಗಳು ಕಾಣುತ್ತಿದ್ದವು. ಎಡಭಾಗದಲ್ಲಿ ದೂರಕ್ಕೆ ಕಾಣುತ್ತಿದ್ದ ಯಂತ್ರಪುರದ ದೀಪಗಳು ನೀರಿನಾಳಕ್ಕೆ ನೆಟ್ಟಂತೆ ನಿಂತಿದ್ದವು. ನದಿಯ ದಡದಲ್ಲೇ ಇದ್ದ Building ನ ದೀಪಗಳು ನೀರಿನಲ್ಲಿ ನರ್ತಿಸುತ್ತಿದ್ದವು. ಎದುರಿಗೆ ನೋಡಿದರೆ ದಡದ ಸ್ನಾನಘಟ್ಟ ಮೇಲೆ ಗುಡಿಯ ಗೋಪುರ ಕಪ್ಪಗೆ ಕಾಣುತ್ತಿತ್ತು. ಗೋಪುರದ ಮೇಲಿನ ದೀಪ ನೀರಿನಲ್ಲಿ ಕುಣಿಯುತ್ತಿತ್ತು. ಕೆಂಪು ಮರೆಯಾಗುತ್ತಿದ್ದ ಸಂಜೆಯ ಮೋಡಗಳು ಕುಡುಕರ ಕಣ್ಣಿನಂತೆ ಕಾಣುತ್ತಿದ್ದವು. ಆಗಾಗ್ಗೆ ಗುಂಪುಗುಂಪಾಗಿ ಕಾಗೆಗಳು ಯಂತ್ರಪುರದ ಬಳಿಯಲ್ಲಿದ್ದ ಆಲದಮರದ ಕಡೆ ಸಾಗುತ್ತಿದ್ದವು. ಸೇತುವೆ ಒಂದು ಬದಿಯಿಂದ Head light ಹೊತ್ತಿಸಿಕೊಂಡು ಬರುತ್ತಿದ್ದ ಟ್ರಕ್ ಸಿನಿಮಾದ Longsight ದೃಶ್ಯವನ್ನು ನೆನಪಿಗೆ ತರುತ್ತಿತ್ತು. ಸೇತುವೆ ಅಂಚಿನ ಮೇಲೆ ಕುಳಿತಿದ್ದ ಕೆಲವರು ಗೋಪುರದ ಮೇಲೆ ಕುಳಿತ ಕಾಗೆಗಳ ನೆನಪನ್ನು ತರುತ್ತಿದ್ದರು. ಕ್ರಮೇಣ ಕತ್ತಲು ದ್ವಿಗುಣಗೊಳ್ಳತೊಡಗಿತು.

ಸುಮಾರು ಹೊತ್ತು ಕಳೆಯಿತು. ರವಿ ಬರಲಿಲ್ಲ. ಮೋಹನ ಎದ್ದು ಕುಳಿತು ಮತ್ತೊಂದು ಸಿಗರೇಟು ಹಚ್ಚಿದ. ‘ಎಲ್ಲಯ್ಯಾ ನಿನ್ನ Friend’ ಎಂದ. ‘ಈಗ ಬರಬಹುದು’ ಎಂದೆ. ಮತ್ತೆ ಹತ್ತು ನಿಮಿಷ ಕಳೆದರೂ ಅವನು ಬರಲಿಲ್ಲ. Factoryಯ ಕೊಳವೆಯಿಂದ ಕೆಟ್ಟ ಗಾಳಿ ಬರತೊಡಗಿತು. ಮೋಹನ ಎದ್ದು ಮರಳನ್ನು ಕೊಡವಿಕೊಳ್ಳುತ್ತ ‘ನಾನಿನ್ನು ಪ್ರೊ. ಸಿಂಹರ ಮನೆಗೆ ಹೋಗಬೇಕು’ ಎಂದ. ಅವನು ಹೋದಕಡೆ ಹೊರಳಿ ನೋಡಿದೆ, ಕತ್ತಲಲ್ಲದೆ ಬೇರೇನೂ ಕಾಣಲಿಲ್ಲ. ನನಗೆ ಶಾರದಮ್ಮನವರಿಗೆ ಅವರ ಅಣ್ಣ ಕೊಡಲು ಹೇಳಿಕೊಟ್ಟಿದ್ದ ಪತ್ರದ ನೆನಪಾಯಿತು. ಅದನ್ನು ರೂಂ ನಲ್ಲಿ ಬಿಟ್ಟೆನೋ ಅಥವಾ ತಂದಿದೇನೋ ಎಂದು ಜೇಬಿಗೆ ಕೈಹಾಕಿ ನೋಡಿದೆ. ಜೇಬಿನಲ್ಲೇ ಇತ್ತು. ಅವರ ಮನೆಗೆ ನೇರವಾಗಿ ಹೋಗಬಹುದು ಈ ದಿನವೇ ಅಂದುಕೊಂಡು, ‘ಸೇತುವೆ ದಾಟುವವರೆಗೂ ನಿಧಾನವಾಗಿ ಹೋಗೋಣ ಅಷ್ಟರಲ್ಲಿ ಬಂದು ಸೇರಿಕೊಳ್ಳಬಹುದು’ ಎಂದೆ. ಮೋಹನ ‘ಸರಿ’ ಎಂದ. ಬೇಕೆಂದೇ ಹೆಜ್ಜೆ ಶಬ್ದಮಾಡುತ್ತಾ, ಸೀಟಿ ಹಾಕುತ್ತಾ ದಿಣ್ಣೆಯನ್ನು ಏರಿ ಸೇತುವೆಯನ್ನು ದಾಟಿದೆವು.

ಸರ್ಕಲ್‌ನ ಹತ್ತಿರ ಮೋಹನನನ್ನು ಬೀಳ್ಕೊಡಲೆಂದು ನಿಂತೆವು. ರವಿ ಇನ್ನೂ ಬರಲಿಲ್ಲ. ‘ಆಸಾಮಿ ಒಂದು ಥರಾ’ ಎಂದ ಮೋಹನ. ‘ಅದೇನೂ ಯೋಚನೆನೊ’ ಎಂದೆ. ‘ಒಂದು ಸಲ T. N. M. Lodge ಗೆ ಕಳಿಸು ಎಲ್ಲಾ ಸರಿಹೋಗತ್ತೆ’ ಎಂದು ಕಣ್ಣುಚಿಪುಟಿ ‘So See You’ ಎಂದು ಕೈಬೀಸಿ ಆಚೆಯ ರಸ್ತೆಯನ್ನು ಸೇರಿದ.

ಒಂದಕ್ಕೆ ಮತ್ತೊಮ್ಮೆ ಹೊರಳಿ ಕಣ್ಣು ಹಾಯಿಸಿದೆ. ರವಿ ಕಾಣಲಿಲ್ಲ. ನಾನು ಸೀದಾ ಶಾರದಮ್ಮನವರ ಮನೆಗೆ ಹೋಗಿ ಅವರ ಅಣ್ಣ ಕೊಟ್ಟಿದ್ದ ಕಾಗದವನ್ನು

ಕೊಟ್ಟೆ. ಲೋಕಣ್ಣನವರು ಇನ್ನೂ ಮನೆಗೆ ಬಂದಿರಲಿಲ್ಲ. ನನ್ನ ಮತ್ತು ಅಪ್ಪ, ಅಮ್ಮನ ಯೋಗಕ್ಷೇಮ ವಿಚಾರಿಸಿದರು. ಊಟ ತೀರಿಸಿಕೊಂಡೇ ಹೋಗಬೇಕೆಂದು ಬಲವಂತ ಮಾಡಿದ್ದಕ್ಕೆ, ಒಂಭತ್ತು ಗಂಟೆಯವರೆಗೂ ಅದೂ ಇದೂ ಮಾತನಾಡಿ, ಊಟ ಮುಗಿಸಿಕೊಂಡು, ಚಾಮರಾಜ ರಸ್ತೆಯಲ್ಲಿ ಶಾರದಮ್ಮನವರ ಮನೆಯ ಎಲೆ ಅಡಿಕೆ ಜಗಿಯುತ್ತ, ಸಿಗರೇಟು ಎಳೆದು ನಿಧಾನವಾಗಿ ರೂಂ ಗೆ ಬಂದೆ. ರೂಂ ಸೇರಿದಾಗ ಆಗಲೇ 10–30 ಆಗಿತ್ತು. ಮಂಚದ ಮೇಲೊರಗಿದಾಗ ನಾಳೆ ಕೇಸಿನ Draft ಹಾಕಬೇಕಿದ್ದುದು ನೆನಪಾಯಿತು. ಮೇಜಿನ ಮೇಲಿದ್ದ ಸುಧಾವನ್ನು ಹಿಡಿದು ಕಣ್ಣಾಡಿ ಸುತ್ತ ಸ್ವಲ್ಪ ಹೊತ್ತು ಕಳೆದು, ದೀಪ ಆರಿಸಿ ಮಲಗಿದೆ.

* * *

ಬೆಳಿಗ್ಗೆ ಎದ್ದಾಗ ಆಗಲೆ ಎಂಟೂ ಮೂವತ್ತಾಗಿತ್ತು. ಯಾಕೋ ಇನ್ನೂ ಮಲಗ ಬೇಕೆನ್ನಿಸಿತು. ಆದರೂ ಬಲವಂತದಿಂದ ಎದ್ದು ಹೊರಗೆ ಬಂದೆ. ಲಕ್ಷ್ಮೀಭವನದಲ್ಲಿ ಕಾಫಿ ಕುಡಿದು ಬಂದು ಸ್ನಾನಮಾಡಿ ಕನ್ನಡಿಯ ಮುಂದೆ ನಿಂತು ಕಂಕುಳಿಗೆ ಪೌಡರ್ ಸುರುವಿಕೊಳ್ಳುತ್ತಿದ್ದಂತೆಯೆ ಬಾಗಿಲಿನ ಮೇಲೆ ಸದ್ದಾಯಿತು. ‘Come in’ ಎಂದೆ. ಮೆಲ್ಲಗೆ ಕದ ಸರಿಸಿ ಸು. ಹದಿನೈದು ವರ್ಷದ ಹುಡುಗ ‘Morning Sir’ ನೀವೇನಾ S. Murthy? ಅಂದ. ‘ಹೌದು, ಏನಾಗಬೇಕಿತ್ತು ಬನ್ನಿ’ ಎಂದೆ. ಮೋಹನ್ ಅಗ್ರವಾಲ ನಮ್ಮ ಪಕ್ಕದ ಮನೆಯವರು ನಿಮಗೆ ಈ ಲೆಟರ್ ಕೊಟ್ಟಿದ್ದಾರೆ, ‘ಈಗಲೆ ಬರಬೇಕಂತೆ’ ಎಂದ. ‘ಬಾ ಕೂತುಕೊ’ ಬಂದೇಬಿಟ್ಟೆ ಎಂದು ಅವನನ್ನು ಕುಳಿತು ಕೊಳ್ಳಲು ಹೇಳಿದೆ. ಅವನು ಪತ್ರವನ್ನು ಮೇಜಿನ ಮೇಲಿಟ್ಟು ಕುಳಿತ. Pant ಕೈಲಿ ಹಿಡಿದುಕೊಂಡು ಹೋಗಿ ಬಚ್ಚಲಿನಲ್ಲಿ ಸೊಂಟಕ್ಕೆ ಸುತ್ತಿದ್ದ ಟವೆಲ್ ಕಳಚಿ Pant ಏರಿಸಿಕೊಂಡು ಬಂದು, ಪತ್ರ ಓದಿದೆ. ಪತ್ರ ತಂದವನ ಜೊತೆಗೆ ತಕ್ಷಣ ಮನೆಗೆ ಬರುವುದು ಎಂದಿತ್ತು.

ಬಾಗಿಲಿಗೆ ಬೀಗ ಹಾಕಿ ಆ ಹುಡುಗನೊಂದಿಗೆ ಮೋಹನನ ಮನೆಯ ಕಡೆ ಹೆಜ್ಜೆ ಹಾಕಿದೆ. ದಾರಿಯಲ್ಲಿ ನಾನು ಕೇಳಿದ ಪ್ರಶ್ನೆಗೆ ನೇರವಾದ ಸಂಕ್ಷಿಪ್ತ ಉತ್ತರಗಳನ್ನು ಕೊಟ್ಟ. ಅದರಿಂದ ಅವನ ಹೆಸರು ಮುರಳಿ ಎಂದೂ, ಅವನ ತಂದೆ Munsif Court ನಲ್ಲಿ Clerk ಆಗಿರುವದು ತಿಳಿಯಿತು. ಪಿ. ಯು. ಸಿ. ಮೊದಲನೆಯ ವರ್ಷದಲ್ಲಿ ಓದು ತ್ತಿದ್ದು ಸ್ನೇಹಿತ ರವಿಯ ವಿದ್ಯಾರ್ಥಿಯೆಂದೂ ತಿಳಿಯಿತು. ಮೋಹನನ ಮನೆ ತಲು ಪಿತು. ‘ನಾನಿನ್ನು ಬರ್‍ತೀನೆ ಸಾರ್’ ಎಂದು ಮುರಳಿ ಅವನ ಮನೆಗೆ ನಡೆದ. ಮೋಹನ ನಾನು ಬರುವದನ್ನೆ ಕಾಯುತ್ತಿದ್ದ.

‘ಸರಿ ಬೇಗ ಬಾ ಹೋಗೋಣ’ ಎಂದು ಎದ್ದ. ‘ಎಲ್ಲಿಗೆ?’ ಎಂದು ನಾನು ಕೇಳಿದರೆ ಕೇಳಿಸಲಿಲ್ಲವೇನೋ ಎಂಬಂತೆ ನಡೆದ. ಅವರ ಮನೆಯ ಕಾಂಪೌಂಡನ್ನು ದಾಟುತ್ತಿದ್ದಂತೆಯೆ ಬಂದ ರಿಕ್ಷಾ ಏರಿ ಹೊರಟೆವು. ‘ಸಜ್ಜನರಾವ್ ಪೋಲೀಸ್ Station ಗೆ’ ಎಂದ. ನನಗೇನೂ ಆಶ್ಚರ್ಯ ಎನಿಸಲಿಲ್ಲ. ಮೋಹನನೊಂದಿಗೆ ಆ ಠಾಣೆ

ಯಲ್ಲಿದ್ದ Inspector ನರಸಿಂಹನ್ ನನಗೂ ಪರಿಚಯವಿದ್ದರು. ಅವರ ಚಿಕ್ಕಪ್ಪ. ಅವರಾದುದರಿಂದ ನನಗೂ ಪರಿಚಯವಾಗಿದ್ದರು.

ಸ್ಟೇಷನ್‌ನಲ್ಲಿ Inspector ಹಾಗೂ ಮೋಹನನ ತಂದೆಯವರೂ ಇದ್ದರು. ನಾವು ಒಳಗೆ ಹೋಗುತ್ತಿದ್ದಂತೆಯೆ ಒಂದು ಕಾಗದವನ್ನು ನನ್ನ ಕೈಗಿತ್ತರು Inspector ನರಸಿಂಹನ್. ಅದು ರವಿಯ ಪತ್ರವಾಗಿತ್ತು.

ಪೋಲೀಸ್ ಇನ್‌ಸ್ಪೆಕ್ಟರವರಿಗೆ,

ನಾನು ಜೀವನದ ಅದೇ ತನಕ್ಕೆ ಬೇಸತ್ತು ನದಿಯಲ್ಲಿ ಬೆರೆತು ಹೋಗುತ್ತಿದ್ದೇನೆ' ನನ್ನ ಈ ಸ್ಥಿತಿಗೆ ನಾನೇ ಕಾರಣ. ಒಂದು ವೇಳೆ ಶವ ಸಿಕ್ಕರೆ ಊರಿಗೆ ತಲುಪಿಸಿ.

ತಾ. ೩೦–೯–೭೨ — ರವಿ

ಚಿ. ನಗರ — ಪ್ರಾಧ್ಯಾಪಕ

ಜೆ. ಎಂ. ಎಸ್. ಕಾಲೇಜು.

ಪತ್ರವನ್ನು ಕೆಳಗಿಡುತ್ತಿದ್ದಂತೆಯೇ ಒಬ್ಬ ಪೋಲೀಸ್ ರವಿಯ ಉಡುಪುಗಳು ಹಾಗೂ ಚಪ್ಪಲಿಗಳನ್ನು ತಂದು ಎದುರಿಗೆ ಇಟ್ಟ. ಬುಷ್‌ಕೋಟಿನ ಬಟ್ಟೆಯನ್ನು ನಾನೇ ಆಯ್ಕೆ ಮಾಡಿದ್ದೆ. ಆ ಬಟ್ಟೆ ಅವನ ಮುಖವನ್ನೆ ನೆನಪಿಗೆ ತಂದಿತು. ಅಲ್ಲಲ್ಲಿ ಹೊಲಿಗೆ ಬಿಟ್ಟಿದ್ದ ಆ ಅಂಗಿ ಹಾಗೂ ಬಾಟಮ್ ಸ್ವಲ್ಪ ಹರಿದಿದ್ದ ಪ್ಯಾಂಟ್‌ಗಳು ಹೇಳುತ್ತಿದ್ದವು, ಸವೆದ ಚಪ್ಪಲಿಗಳೊ ಸಾರುತ್ತಿದ್ದವು, ಸಾಕಷ್ಟು ದಿವಸ ಅವನು ಪಯಣ ಮಾಡಿರುವನೆಂದು.

ಏನೂ ಹೇಳಲು ತೋಚದೆ ಮೌನವಾಗಿ ನಿಂತೆ.

ಅಣ್ಣ-ತಂಗಿ
(ಸುವ್ವಿ ಹಾಡು)

ವೀರಣ್ಣ ರಾಜೂರ

ಗಿದ್ದಽನ ಶಾವೀಯು ಒಂದೊಬ್ಬಿಮಾಡ್ಯಾಳಽ
ಒಬ್ಬಿಗೆ ಒಬ್ಬಿ ನುರಿಯಾವಽ | ಸುವ್ವಿ.

ಒಬ್ಬಿಗೆ ಒಬ್ಬಿ ನುರಿಯಾವೊ ಹಿರಿಯಣ್ಣ
ಎಬ್ಬಿಸೊ ನಿನ್ನ ಮನಿಮಂಡದಿ | ಸು.

ಎಬಿಸಿದ್ರೆ ಎಬಿಸೇನು ಅರನಿದ್ದಿಯಾದೀತು
ಸರಿಯೊಬ್ಬಿ ಮಾಡಿ ಹಣಿತಂಗಿ | ಸು.

ಕುಟ್ಟಿದ್ರೆ ಕುಟ್ಟೇನು ಕಡಿನುಚ್ಚು ಹಿಡಿನುಚ್ಚು
ಎಬ್ಬಿಸೊ ಯಣ್ಣ ಮನಿಮಂಡದಿ | ಸು.

ಕುಟ್ಟಿದ್ರು ಕುಟ್ಟವ್ವ ಕುಟ್ಲಿಕ್ಕ ಬಿಡವ್ವ
ನಡಿ ತಂಗಿ ನಿನ್ನ ಒಗತನಕ | ಸು.

ಹತ್ತಾಕ ಎತ್ತಕೊಡು ಉಡಾಕ ಜವಳಿಕೊಡು
ಊರತ್ಯಽನ ನನ್ನ ಕಳುಹಣ್ಣ | ಸು.

ಹತ್ತಾಕ ಎತ್ತಿಲ್ಲ ಉಡಾಕ ಜವಳಿಲ್ಲ
ನಡಿಯವ್ವ ನಿನ್ನ ನೆಡಿಗಾಲಿಲ್ಲೆ | ಸು.

ತಂಗಿ ಹ್ವಾದ ಮರುದಿನ ಅಣ್ಣಽಗ ಉರಿಚಳಿ
ಅಣ್ಣಽನ ಹೇಣ್ತೀಗೆ ತೆಲಿಬ್ಯಾನಿಽ | ಸು.

ಅಣ್ಣಽನ ಹೇಣ್ತೀಗೆ ತೆಲಿಬ್ಯಾನಿಯೆದ್ವಾವ
ದೇವರ್ಽ ಕೇಳಾಕ ಹೊರಟಾರ | ಸು.

ದೇವ್ರಿಲ್ಲ ದಿಂಡ್ರಿಲ್ಲ ಮೊತ್ತೊಂದಿಲ್ಲ
ಮನಿಯನ್ನ ತಂಗಿ ಉಸುರಂದ | ಸು,

ಮನಿಯನ್ನ ತಂಗಿ ಉಸುರಂದು ಹೋಗ್ಯಾಳೆ
ಹತ್ತೈತ್ರೊ ನಿಮ್ಗ ಇದಿಮಾಯಿ | ಸು.

ಬಡಬಡ ಹ್ವಾದಾನಽ ಬಾಗಿಲಿಗೆ ನಿಂತಾನ
ತಂಗಿ ತಂಗೆಂದು ಕರದಾನಽ | ಸು.

ತಂಗಿ ತಂಗೆಂದು ಕರದಾನ ಹಿರಿಯಣ್ಣ
ಉಣ್ಣತೀನಣ್ಣಽ ಹೊರಗಿಽರು | ಸು.

ಉಣ್ಣಽತೀನಣ್ಣ ಹೊರಗಿರು ಆಡಿದ ಮಾತು
ನುಂಗಽತೀನಣ್ಣ ಇಸಮಾಡಿ | ಸು.

ಹೊಂಡವ್ವ ತಂಗಿ ಮದುವಿಗಿ
ಬಂದೀನಿ ನಿನ್ನ ಕರಿಲಾಕ । ಸು

ಅಂಗ್ಳ ಹುಡಗವ್ರಿಲ್ಲ ಗಂಗಾಳ ಬೆಳಗಾರಿಲ್ಲ
ಹ್ಯಾಂಗ ಬರಲಣ್ಣ ಮದುವೀಗೆ । ಸು

ಅಂಗ್ಳ ಹುಡಗಾಕ ಗಂಗಾಳ ಬೆಳಗಾಕ
ಗಂಗವ್ವ ನನ್ನ ಮನಿಮಗಳ । ಸು

ಗಂಗವ್ವ ನನ್ನ ಮನಿಮಗಳ ಕಳವೂವೆ
ಹೊಂಡವ್ವ ತಂಗಿ ಮದುವೀಗೆ । ಸು

ಹಾಲಽ ಕಾಸಾವ್ರಿಲ್ಲ ಬಾಲನ್ನ ತೂಗಾವ್ರಿಲ್ಲ
ಹ್ಯಾಂಗ ಬರಲಣ್ಣ ಮದುವೀಗೆ । ಸು

ಹಾಲಽನುಕಾಸಾಕ ಬಾಲಽನ ತೂಗಾಕ
ನೀಲವ್ವ ನನ್ನ ಮನಿಮಗಳ । ಸು

ನೀಲವ್ವ ನನ್ನ ಮನಿಮಗಳ ಕಳುಹೂವೆ
ಹೊಂಡವ್ವ ತಂಗಿ ಮದುವೀಗೆ । ಸು

ಉಕ್ಕುವ ಬಿಸಲಣ್ಣ ಕಚ್ಚುವ ಹಾವಣ್ಣ
ಹ್ಯಾಂಗ ಬರಲಣ್ಣ ಮದುವೀಗೆ । ಸು

ಬ್ಯಾಸೀಗಿ ಬಿಸಲಣ್ಣ ಕೂಸೀನ ತಾಯಣ್ಣ
ಹ್ಯಾಂಗ ಬರಲಣ್ಣ ಮದುವೀಗೆ । ಸು

ಕೂಸಿಽಗೆ ಪಲ್ಲಕ್ಕಿ ತರುವೆ ನಿನಗೆ ಮ್ಯಾಣೇವತರುವೆ
ಹೊಂಡವ್ವ ತಂಗಿ ಮದುವೀಗೆ | ಸು.

ಆರು ವರಹ ಕೊಟ್ಟು ಜವಳಿಽಯ ತರಿಸೀನಿ
ಉಡು ಬಾರವ್ವ ತಂಗಿ ಹಂದರದಾಗ | ಸು.

ನನಗೆ ಉಡಸಾದಕಿನ್ನ ಮಡದೀಗೆ ಉಡಿಸಿದ್ರ
ಹಾಡ್ಯಾಳಣ್ಣ ನಿನ್ನ ಹರಿಸ್ಯಾಳು । ಸು.
ಹಾಡಿಯಾಳು ನಿನ್ನ ಹರಿಸ್ಯಾಳು ಬೇಗ್ಹಿನ ಕಡಿಗೆ
ಬಾಯಣ್ಣನೆಂದು ಕರದಾಳು । ಸು.
ಮೂರು ವರಹ ಕೊಟ್ಟು ಕುಪ್ಪಸ ತಂದೀನಿ
ತೊಡಬಾರ ತಂಗಿ ಹಂದ್ರದಾಗ । ಸು.
ನನ್ಗ ತೊಡಸಾದಕಿನ್ನ ಮಡದ್ಹಿಗೆ ತೊಡಸಿದ್ರ
ಹಾಡ್ಯಾಳೋ ನಿನ್ನ ಹರಿಸ್ಯಾಳು । ಸು.
ಹಾಡ್ಯಾಳೋ ನಿನ್ನ ಹರಿಸ್ಯಾಳೊ ಬೇಗಿನಕಡೆ
ಬಾಯಣ್ಣನೆಂದು ಕರದಾಳೊ । ಸು.
ಹಟವನ್ನು ಹಿಡಿಬ್ಯಾಡ ಹಟಗಾಸಿನುಡಿಬ್ಯಾಡ
ನನತಪ್ಪ ಮನ್ನೀಸಿ ನಡಿ ತಂಗಿ । ಸು.
ಬಂದ್ಹಾರ ಬಂದೇನು ಅಂಗಳದಾಗ ನಿಂತೇನು
ಕಂದಗೈದಕ್ಕಿ ಒಗದೇನು । ಸು.
ಬಂದ್ಹಾರ ಬಂದೇನು ಹಂದರದಾಗ ನಿಂತೇನು
ಬಾಲಾಗ ಐದಕ್ಕಿ ಹಾಕೇನು । ಸು.
ನಿನಪುಣ್ಯದ ಪಾದ್ಹಾನ ನನ್ನ ಮನಿಯಾಗ ಹಾಕಿ
ಪಾಪದ ಕೊಳಿಯ ತೊಳಿಯವ್ವ । ಸು.
ಪಾಪದ ಕೊಳಿಯ ತೊಳಿಯವ್ವ ನನತಂಗಿ
ನಮ್ಮಮ್ಯಾಗಳ ಶಾಪ ಕಳಿಯವ್ವ । ಸು.
ಆಗ್ಹಲಿ ನಡಿಯಣ್ಣ ಬಾಗ್ಹಲ ಒಳಬರುವೆ
ಹುಟ್ಟೀದ ಮನಿಯ ಹರಸುವೆ । ಸು.
ಹುಟ್ಟೀದ ಮನಿಯ ಹರಸುವೆ ನನ್ನಣ್ಣ
ತವರ್ಹಿನ ಹೆಸರ ಮೆರಸೂವೆ । ಸು.*

---

* (ಹಾಡಿದವರು : ಗಂಗಮ್ಮ ಬಳಿಗಾರ. ಸಾ–ಬೆನಕನಾಳ).

ಶ್ರಾವಕ ಧರ್ಮ

ಬಿ. ಬಿ. ಮಹೀಶವಾಡಿ

ಶ್ರಾವಕನೆಂದರೆ ಸಾಮಾನ್ಯವಾಗಿ ಗೃಹಸ್ಥನೆಂದು ಹೇಳಬಹುದಾದರೂ, ವ್ರತಿಕನೆಂದು ಹೇಳಿದರೆ ಹೆಚ್ಚು ಒಪ್ಪುತ್ತದೆ. ಯಾಕಂದರೆ, ವ್ರತಹೀನ ಗೃಹಸ್ಥರೂ ಇರುವುದುಂಟು. ವ್ರತವು ಎರಡು ಪ್ರಕಾರ: ದೇಶವ್ರತ, ಸರ್ವವ್ರತ. ಅಂದರೆ ಅಣುವ್ರತ, ಮಹಾವ್ರತ. ಪಾಪಗಳನ್ನು ಏಕದೇಶದಿಂದ ತ್ಯಜಿಸುವದಕ್ಕೆ ಅಣುವ್ರತವೆಂದೂ, ಸರ್ವದೇಶದಿಂದ ತ್ಯಜಿಸುವುದಕ್ಕೆ ಮಹಾವ್ರತವೆಂದೂ ಹೇಳುತ್ತಾರೆ. ಶ್ರಾವಕನು ಅಣುವ್ರತಸ್ಥನು. ಯತಿ ಮಹಾವ್ರತಸ್ಥನು. ಶ್ರಾವಕನು ಸಂಸಾರಿಯಾಗಿದ್ದು ಗೃಹದಲ್ಲಿ ಇದ್ದುಕೊಂಡು ವ್ರತಧಾರಿಯಾಗಿ ಧರ್ಮವನ್ನು ಅನುಸರಿಸುತ್ತಾನೆ. ಯತಿ ಸಂಸಾರ ತ್ಯಾಗ ಮಾಡಿ ಗೃಹವನ್ನು ತ್ಯಜಿಸಿ ಸರ್ವವ್ರತಧಾರಿಯಾಗಿ ಧರ್ಮವನ್ನು ಅನುಸರಿಸುತ್ತಾನೆ. ಆದ್ದರಿಂದ ಧರ್ಮ ಶ್ರಾವಕರಿಗೆ ಯತಿಗಳಿಗೆ ಪ್ರತ್ಯೇಕವಾಗಿ ಹೇಳಲ್ಪಟ್ಟಿದೆ. ಶ್ರಾವಕರ ಧರ್ಮವನ್ನು ಸಾಗಾರ ಧರ್ಮವೆಂದೂ, ಯತಿಗಳ ಧರ್ಮವನ್ನು ಅನಗಾರ ಧರ್ಮವೆಂದೂ ಹೇಳುತ್ತಾರೆ.[೧] ಅದನ್ನೇ ಗೃಹಸ್ಥರಧರ್ಮ ಸನ್ಯಾಸಿಗಳ ಧರ್ಮವೆಂದೂ ಕರೆಯಬಹುದು. ಹೀಗಿದ್ದರೂ, ಶ್ರಾವಕ ಧರ್ಮ ಸನ್ಯಾಸಧರ್ಮದ ತಳಹದಿಯಾಗಿದೆ. ಸನ್ಯಾಸ ಧರ್ಮವೇ ಸರ್ವವಿಧದಲ್ಲಿ ಸಂಪೂರ್ಣ ಆದರ್ಶವಾದುದು. ಶ್ರಾವಕ ಸನ್ಯಾಸಿಯಾಗುವದೇ ಕೊನೆಯ ಆದರ್ಶ.[೨]

ದೇವ ಶಾಸ್ತ್ರ ಗುರುಣಾಂ ಚ ।
ಭಕ್ತಿರ್ದಾನಂ ದಯಾರ್ಚನಂ ॥
ಮದಾಷ್ಟ ವ್ಯಸನೈರ್ಹೀನ: ।
ಶ್ರಾವಕ: ಕಥಿತೋ ಬುಧೈ: ॥ [೩]

ದೇವ, ಶಾಸ್ತ್ರ, ಗುರುಗಳಲ್ಲಿ ಭಕ್ತಿಯುಳ್ಳವನನ್ನೂ, ದಾನ–ದಯೆ–ಪೂಜೆಗಳಲ್ಲಿ ಪ್ರೀತಿಯುಳ್ಳವನನ್ನೂ, ಅಷ್ಟಮದ–ಸಪ್ತವ್ಯಸನಗಳಲ್ಲಿ ಆಸಕ್ತಿ ಇಲ್ಲದವನನ್ನೂ ವಿದ್ವಾಂಸರು ಶ್ರಾವಕನೆಂದು ಕರೆಯುತ್ತಾರೆ.

---

೧. ಉಮಾಸ್ವಾಮಿ ವಿರಚಿತ 'ತತ್ವಾರ್ಥ ಸೂತ್ರಂ': ಪುಟ ೧೪೫.
೨. ಮಾಘಣಂಡಿಕೃತ ಶಾಸ್ತ್ರಸಾರ ಸಮುಚ್ಚಯ: ಚರಣಾನುಯೋಗ.
೩. ಪ್ರಶ್ನೋತ್ತರ ಮಾಣಿಕ್ಯಮಾಲೆ–ಸಂ: ಅಣ್ಣಪ್ಪ ಚೌಗುಲೆ.

ಸರ್ವಜ್ಞ ಪದಾಬ್ಜ ಸೇವನ ಮತಿಃ ಶಾಸ್ತ್ರಾಗಮೇ ಚಿಂತನಾ ।
ತತ್ವಾತತ್ವ ವಿಚಾರಣೇ ನಿಪುಣತಾ ಸತ್ಸಂಯಮೇ ಭಾವನಾ ॥
ಸಮ್ಯಕ್ತ್ವೇ ರಚನಾ ಅಘೋಪಶಮತಾ ಜೀವಾದಿಕೇ ರಕ್ಷಣಾ ।
ಸತ್ಸಾಗಾರ ಗುಣಾ ಜಿನೇಂದ್ರ ಕಥಿತಾ ಯೇಷಾಂ ಪ್ರಸಾದಾಚ್ಛಿವಮ್ ॥ [೪]

ಸರ್ವಜ್ಞ ಸ್ವರೂಪಿ ಜಿನೇಶ್ವರನ ಪಾದಕಮಲ ಸೇವಾಬುದ್ಧಿ, ಶಾಸ್ತ್ರಾಗಮಚಿಂತನೆ, ತತ್ವಾತತ್ವ ವಿಚಾರ ಕೌಶಲ್ಯ, ಸಂಯಮ, ಸಮ್ಯಕ್ತ್ವ, ಪಾಪನಾಶ, ಜೀವರಕ್ಷಣೆ ಮುಂತಾದ ಶಿವಸುಖದಾಯಕ ಸದ್ಗುಣಗಳು ಉತ್ತಮ ಶ್ರಾವಕನಲ್ಲಿ ಇರುತ್ತವೆಯೆಂದು ಜಿನೇಂದ್ರರು ಹೇಳುತ್ತಾರೆ.

ವಿನಾ ಗುರುಭ್ಯೋ ಗುಣವಾನ್ನರೋಪಿ ।
ಧರ್ಮಂ ನ ಜಾನಾತಿ ವಿಚಕ್ಷಣೋಪಿ ॥
ಆಕರ್ಣ ದೀರ್ಘೋಜ್ವಲ ಲೋಚನೋಪಿ ।
ದೀಪಂ ವಿನಾ ಪಶ್ಯತಿನಾಂಧಕಾರೇ ॥ [೫]

ಆಕರ್ಣ ಪರ್ಯಂತ ದೀರ್ಘವಾದ ಮತ್ತು ಉಜ್ವಲವಾದ ಕಣ್ಣುಗಳಿದ್ದರೂ, ಕತ್ತಲೆಯಲ್ಲಿ ದೀಪವಿಲ್ಲದೆ ಯಾವ ವಸ್ತುಗಳೂ ಕಾಣಲಾರವು. ಅದರಂತೆ, ಸದ್ಗುಣಿ ಮತ್ತು ಬುದ್ಧಿಶಾಲಿಯಾಗಿದ್ದರೂ, ಗುರುವಿಲ್ಲದೆ ಧರ್ಮ ತಿಳಿಯಲಾರದು.

ಶ್ರಾವಕನಿಗೆ ಸದ್ಗುರುವು ದೊರೆಯುವುದು, ಧರ್ಮ ಮಾರ್ಗದಲ್ಲಿ ನಡೆಯಲು ಸಕಲ ಅನುಕೂಲತೆಗಳು ಪ್ರಾಪ್ತವಾಗುವುದು ಪೂರ್ವಜನ್ಮದ ಪುಣ್ಯದ ಫಲದಿಂದ ಎಂದು ಹೇಳಲಾಗುತ್ತಿದೆ.

ಪಿರಿದುಂ ಮಾತಿನೊಳೇನು ಬಾಹ್ಯಜನಿತ ವ್ಯಾಪಾರಮಂ ಬಿಟ್ಟು ಸ- ।
ದ್ಗುರುವಿನ್ನಾಗಮವೆಂಬ ರನ್ನಸೊಡರಿಂ ಮಿಥ್ಯಾ ತಮೋಬಂಧ ಸಂ- ॥
ಹರಿತಾಂತರ್ಮುಖನಾಗಿ ನಿಶ್ಚಲಮನಂ ಸ್ವಾಧೀನ ಸೌಖ್ಯಾಮೃತಾ- ।
ಕರ ಮಗ್ನಂ ವರಶುದ್ಧ ದರ್ಶನನವಂ ಸಂಸಾರ ಪಾರಾಂಗತಂ ॥ [೬]

ಹೆಚ್ಚಾಗಿ ಹೇಳುವದರಲ್ಲಿ ಏನಿದೆ ? ಹೊರಜಗತ್ತಿನ ಸಂಬಂಧವನ್ನು ಬಿಟ್ಟು, ಸದ್ಗುರುವಿನಿಂದ, ಆಗಮವೆಂಬ ರತ್ನದೀಪದ ಸಹಾಯದಿಂದ. ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಿ, ಅಂತರ್ಮುಖಿಯಾಗಿ ನಿಶ್ಚಲಮನಸ್ಸಿನಿಂದ ಆತ್ಮಸುಖದ ಅಮೃತವನ್ನು ಸವಿಯುವದರಲ್ಲಿ ಮಗ್ನನಾದರೆ. ಸಂಸಾರವನ್ನು ದಾಟಿಸುವ ಶ್ರೇಷ್ಠ ಶುದ್ಧ ಸಮ್ಯಗ್ದರ್ಶನ ಪ್ರಾಪ್ತವಾಗುವುದು.

ಶ್ರಾವಕನಿಗೆ ಸಮ್ಯಕ್ತ್ವ ಪ್ರಾಪ್ತವಾದರೆ ಮುಗಿಯಿತು–ಸಕಲ ಸುಖಗಳೂ ದೊರೆತು, ಕೊನೆಗೆ ಸ್ವರ್ಗ–ಮೋಕ್ಷಾದಿಗಳೂ ಲಭಿಸುವದರಲ್ಲಿ ಸಂದೇಹವಿಲ್ಲ.

---

೪. ಪ್ರಶ್ನೋತ್ತರ ಮಾಣಿಕ್ಯಮಾಲೆ–ಸಂ : ಅಣ್ಣಪ್ಪ ಚೌಗುಲೆ
೫. ಪ್ರಶ್ನೋತ್ತರ ಮಾಣಿಕ್ಯಮಾಲೆ–ಅಣ್ಣಪ್ಪ ಚೌಗುಲೆ.
೬. ಶಾಸ್ತ್ರಸಾರಸಮುಚ್ಚಯ : ಪುಟ–೧೨೭, ಪದ್ಯ–೪೮

ಸಮ್ಯಕ್ತ್ವ ಪ್ರಾಪ್ತಿಗೆ ಕಾರಣವಾದ ಪಂಚಲಬ್ಧಿಗಳು ದೊರೆಯಬೇಕಾದರೆ ಕರ್ಮ ನಾಶವಾಗಬೇಕು. ಅದಕ್ಕೆ ತಪ ಅಗತ್ಯ. ತಪೋವಿಶೇಷದಿಂದ ಪಡೆಯುವ ಋದ್ಧಿ ವಿಶೇಷಕ್ಕೆ ಲಬ್ಧಿ ಎಂದು ಹೆಸರು.

ಲಬ್ಧಿಗಳಲ್ಲಿ-ಕ್ಷಯೋಪಶಮ ಲಬ್ಧಿ, ವಿಶೋಧಿಲಬ್ಧಿ, ದೇಶನಾ ಲಬ್ಧಿ, ಪ್ರಾಯೋಗ್ಯತಾ ಲಬ್ಧಿ, ಕರಣಲಬ್ಧಿ, ಎಂದು ಐದು ಲಬ್ಧಿಗಳುಂಟು.[೭]

ಹುಟ್ಟಿದಾಗಿನಿಂದ ಬೆಳೆಯುತ್ತಾ ಬಂದಹಾಗೆ ಜೀವನದಲ್ಲಿ ಕೆಲವರಿಗೆ ಏನೂ ಪರಿಶ್ರಮವಿಲ್ಲದೆಯೆ ಆಯತ್ತಾಗಿ ಅನುಕೂಲಗಳು ಲಭಿಸುವವು. ಅವೇ ಲಬ್ಧಿವಿಶೇಷಗಳು.

ಹುಟ್ಟುಗುರುಡ ಬೆಳಕು ಬೇಕಾದಷ್ಟು ಇದ್ದರೂ, ಯಾವ ಪದಾರ್ಥಗಳನ್ನೂ ಕಾಣಲು ಅಸಮರ್ಥನಾಗುತ್ತಾನೆ. ಅದರಂತೆ,ಪರಮ ಧರ್ಮೋಪದೇಶ.ಶಾಸ್ತ್ರಶ್ರವಣಾದಿಗಳು ಅಭವ್ಯ ಜೀವಿಗೆ ಬೇಕಾದಷ್ಟು ಲಭಿಸಿದರೂ, ಅವನಿಗೆ ಅವುಗಳಿಂದ ಪ್ರಯೋಜನವಾಗುವುದಿಲ್ಲ. ಅವನು ಸನ್ಮಾರ್ಗಗಾಮಿಯಾಗಲು ಸಮರ್ಥನಾಗುವುದಿಲ್ಲ. ಕಣ್ಣುಬೇನೆ ಬಂದವನಿಗೆ ವಸ್ತುಗಳು ಸರಿಯಾಗಿ ಕಾಣುವುದಿಲ್ಲ. ಬೇನೆ ಕಳೆದೊಡನೆ ಎಲ್ಲ ವಸ್ತುಗಳನ್ನು ಸ್ಪಷ್ಟವಾಗಿ ಕಾಣಬಲ್ಲನು. ಅದರಂತೆ, ದೂರಭವ್ಯಜೀವಿಗೆ ಕರ್ಮ ಕಳೆದ ಮೇಲೆ ಸನ್ಮಾರ್ಗದ ದಾರಿ ಕಾಣುತ್ತದೆ. ದೃಷ್ಟಿದೋಷವಿಲ್ಲದ ವ್ಯಕ್ತಿ ಜಗತ್ತಿನ ಎಲ್ಲ ವಸ್ತುಗಳನ್ನು ಅನಾಯಾಸವಾಗಿ ಸರಿಯಾಗಿ ನೋಡಲು ಹೆಚ್ಚು ಸಮಯ ಹಿಡಿಯುವುದಿಲ್ಲ. ಅದರಂತೆ ಆಸನ್ನಭವ್ಯ ಜೀವಿಗೆ ಧರ್ಮೋಪದೇಶ ಹೊಂದಿದ ಕೂಡಲೆ ತತ್ತ್ವ ವಿಚಾರ ತಿಳಿದು ಬಿಡುತ್ತದೆ.

ಸಮ್ಯಗ್ದರ್ಶನ ಎರಡು ವಿಧದಿಂದ ಹುಟ್ಟುತ್ತದೆ: ಸಹಜಸ್ವಭಾವದಿಂದ; ಮತ್ತು ಪರೋಪದೇಶದಿಂದ. ಯಾರ ಧರ್ಮೋಪದೇಶ ಇಲ್ಲದೆಯೆ ತಂತಾನೆ ಪೂರ್ವಭವದ ಪುಣ್ಯವಿಶೇಷದಿಂದ ಉತ್ಪನ್ನವಾಗುವ ಸಮ್ಯಗ್ದರ್ಶನಕ್ಕೆ **ನಿಸರ್ಗಜ** ಎಂದೂ, ಪರೋಪದೇಶ ಕಾರಣದಿಂದ ಉತ್ಪನ್ನವಾಗುವ ಸಮ್ಯಗ್ದರ್ಶನಕ್ಕೆ **ಅಧಿಗಮಜ**ವೆಂದೂ ಹೇಳುವರು.[೮]

ಸಮ್ಯಕ್ತ್ವದಲ್ಲಿ (೧) ವ್ಯವಹಾರ ಸಮ್ಯಕ್ತ್ವ (೨) ನಿಶ್ಚಯ ಸಮ್ಯಕ್ತ್ವ–ಎಂದು ಎರಡು ವಿಧವಾಗಿದೆ. ಉಪಶಮ, ವೇದಕ, ಕ್ಷಾಯಿಕ–ಎಂದು ಮೂರು ತೆರವಾಗಿ ಹೇಳುವುದೂ ಉಂಟು. ಅಲ್ಲದೆ, ಆಜ್ಞಾಸಮ್ಯಕ್ತ್ವ, ಮಾರ್ಗಸಮ್ಯಕ್ತ್ವ, ಉಪದೇಶ ಸಮ್ಯಕ್ತ್ವ, ಸೂತ್ರಸಮ್ಯಕ್ತ್ವ, ಬೀಜಸಮ್ಯಕ್ತ್ವ, ಸಂಕ್ಷೇಪಸಮ್ಯಕ್ತ್ವ, ವಿಸ್ತಾರಸಮ್ಯಕ್ತ್ವ ಅರ್ಥಸಮ್ಯಕ್ತ್ವ, ಅವಗಾಢಸಮ್ಯಕ್ತ್ವ, ಪರಮಾವಗಾಢ ಸಮ್ಯಕ್ತ್ವ ಎಂದು ಹತ್ತು ಬೇಧಗಳನ್ನೂ ಹೇಳುತ್ತಾರೆ.[೯]

---

೭. ಶಾಸ್ತ್ರಸಾರಸಮುಚ್ಚಯ : ಪುಟ–೧೧೯, ಪದ್ಯ ಸೂತ್ರ–೧

೮. ತತ್ವಾರ್ಥ ಸೂತ್ರ, ಪುಟ : ೨, ಸೂತ್ರ ೩.

೯. ಶಾ. ಸಾ. ಸ. –ಪುಟ : ೧೨೧–೧೨೨; ಸೂತ್ರಗಳು : ೩, ೪, ೫.

ಇದು ಪಾಪಾಸ್ರವ ಕಾರಣಂ, ಇದು ಪುಣ್ಯಾಸ್ರವ ನಿಮಿತ್ತಂ, ಇಂತಿದು ಮೋಕ್ಷ ಪ್ರದಂ-ಎಂದು ಜೀವ ಪರಿಣಾಮದ ತೆರನಂ ದಿಟದಿನರಿವ ಬಗೆ ಸಮ್ಯಕ್ತ್ವಂ.

ಜಿನ(ಶಾಸ್ತ್ರ)ವಚನ ರಸಾಮೃತದೊಳ್ ಮನದೆರಕಂ, ನಚ್ಚುಮೆಚ್ಚುನಲ ವೊಲಮ್ ಎಂಬ ಈ ವಿನುತ ಶ್ರದ್ಧಾನಾರ್ಥಮ್ ಅನೂನ ಸೌಖ್ಯಕ್ಕೆ ಬೀಜಮುಂ ತಾನುಸಿರ್ಗುಂ.

ಸಮ್ಯಕ್ತ್ವಮೇ ಪರಮ ಪದಂ, ಸಮ್ಯಕ್ತ್ವಮೇ ಸಕಲ ಸುಖದ ನಿಲಯಂ, ಮತ್ತಂ ಸಮ್ಯಕ್ತ್ವಮೇ ಮುಕ್ತಿಪಥಂ. ಸಮ್ಯಕ್ತ್ವದಿ ಕೂಡಿ ನೆಗಳ್ದ ತಪಮದು ಸಫಲಂ.[೧೦]

ಅದರಲ್ಲಿ ವೇದಕ ಸಮ್ಯಕ್ತ್ವಕ್ಕೆ ೨೫ ಕರ್ಮ ಮಲಗಳಿವೆ: ಲೋಕ ಮೂಢ ದೇವತಾ ಮೂಢ, ಪಾಷಂಡಿ ಮೂಢ-ಎಂದು **ಮೂರು** ಮೂಢತೆಗಳು. ವಿಜ್ಞಾನ, ಐಶ್ವರ್ಯ, ಆಜ್ಞಾ, ಕುಲ, ಬಲ, ತಪ, ರೂಪ, ಜಾತಿ-ಎಂದು **ಎಂಟು** ಮದಗಳು. ಮಿಥ್ಯಾದೈವ, ಮಿಥ್ಯಾಲಯ, ಮಿಥ್ಯಾಜ್ಞಾನಿ, ಮಿಥ್ಯಾಜ್ಞಾನ, ಮಿಥ್ಯಾತಪ, ಮಿಥ್ಯಾ ತಪಸ್ವಿ-ಎಂದು **ಆರು** ಅನಾಯತನ ಸೇವೆಗಳು. ಶಂಕೆ, ಕಾಂಕ್ಷೆ, ಚಿಕಿತ್ಸೆ, ಮೂಢ ದೃಷ್ಟಿತ್ವ, ಅನೂಪಗೂಹನ, ಅಸ್ಥಿತೀಕರಣ, ಅವಾತ್ಸಲ್ಯ, ಧರ್ಮ-ಅಪ್ರಭಾವನ ಎಂದು **ಎಂಟು** ದೋಷಗಳು. ಇವೆಲ್ಲ ಸೇರಿ ಆಗುವ ೨೫ ಮಲಗಳಿಂದ ಬಿಡುಗಡೆ ಹೊಂದ ಬೇಕು. ಈ ಪಾಪಗಳನ್ನು ಕಳೆಯಲು ನಿಃಶಂಕೆ, ನಿಃಕಾಂಕ್ಷೆ, ನಿರ್ವಿಚಿಕಿತ್ಸೆ, ಅಮೂಢ ದೃಷ್ಟಿತ್ವ, ಉಪಗೂಹನ, ಸ್ಥಿತೀಕರಣ, ವಾತ್ಸಲ್ಯ, ಧರ್ಮಪ್ರಭಾವನೆ-ಎಂಬ **ಎಂಟು** ಅಂಗಗಳಿಂದ ಕೂಡಿದ ಸುದೃಷ್ಟಿಯನ್ನು ಹೊಂದಬೇಕು. ಸಂವೇಗ, ನಿರ್ವೇಗ ನಿಂದಾ, ಗರ್ಹಣೆ, ಆಸ್ತಿಕ್ಯ, ಅರ್ಹದಾದಿ ಭಕ್ತಿ, ಪ್ರಾಣಿದಯಾ, ವಾತ್ಸಲ್ಯ-ಎಂಬ **ಎಂಟು** ಗುಣ ಗಳನ್ನು ಪಡೆಯಬೇಕು. ಅದಕ್ಕೆ ಮಾರ್ಗವಾವುದೆಂದರೆ-ಧರ್ಮಾನುರಾಗವೇ ಲಕ್ಷಣ ವಾಗಿ ಉಳ್ಳ ಸಂವೇಗ, ಸಂಸಾರ-ಶರೀರಗಳ ಮೇಲೆ ನಿರ್ವೇಗ, ಆತ್ಮನಿಂದೆ. ತಾನು ಮಾಡಿದ ದೋಷಗಳನ್ನು ಗುರುಗಳ ಹತ್ತಿರ ಆಲೋಚಿಸುವ ಲಕ್ಷಣವಾದ ಗರ್ಹಣ, ಉಪಶಮ, ಅರ್ಹತ್-ಆಚಾರ್ಯಾದಿಗಳಲ್ಲಿ ಭಕ್ತಿ, ಪ್ರಾಣಿಗಳಲ್ಲಿ ದಯೆ. ಜೀವಾದಿ ಪದಾರ್ಥಗಳು ಇರುವವೆಂದು ನಿಶ್ಚಯಿಸುವ ಆಸ್ತಿಕ್ಯ ಈ **ಎಂಟು** ಸಮ್ಯಕ್ತ್ವಗಳು ಇದ್ದರೆ, ತ್ರ್ಯಜ್ಞಾನ ಶುದ್ಧೀಕರಣವಾಗುತ್ತವೆ; ಮೂಢತನ ಹೋಗುತ್ತದೆ. ಜ್ಞಾನ-ಚಾರಿತ್ರ-ತಪ-ಉಪಶಾಂತಿಗಳು ಪೂಜ್ಯತೆಯನ್ನು ಪಡೆಯುತ್ತವೆ.-ಇವೇ ಮೋಕ್ಷ ಸೋಪಾನವನ್ನು ಏರುವ ಪ್ರಥಮ ಪಂಕ್ತಿಗಳು.[೧೧]

ಶಂಕಾ, ಕಾಂಕ್ಷಾ, ವಿಚಿಕಿತ್ಸಾ, ಮಿಥ್ಯಾದೃಷ್ಟಿಪ್ರಶಂಸಾ, ಮಿಥ್ಯಾದೃಷ್ಟಿಸ್ತವನ-ಮುಂತಾದವು ಸಮ್ಯಕ್ತ್ವಕ್ಕೆ ಅತಿಚಾರಗಳು. ಇವುಗಳನ್ನು ಮೀರಿ ಮುಂದೆ ಹೋಗಿ ಶ್ರಾವಕನು **ಏಕಾದಶನಿಲಯ**ಗಳನ್ನು ಅರಿತುಕೊಳ್ಳಬೇಕು.[೧೨]

---

೧೦. ಶಾ. ಸಾ. ಸ. -ಪುಟ : ೧೨೮-೧೩೦

೧೧. ಶಾ. ಸಾ. ಸ. ಪುಟ : ೧೩೯-೧೪೦.

೧೨. ಶಾ. ಸಾ. ಸ. ಪುಟ : ೧೪೦.

೧. **ದಾರ್ಶನಿಕ** : ಯಾವ ಶ್ರಾವಕನು ಐದು ಅಣುವ್ರತಗಳನ್ನೂ ಎಂಟು ಮೂಲಗುಣಗಳನ್ನೂ ಹೊಂದಿರುವನೋ, ಸಪ್ತವ್ಯಸನಗಳನ್ನು ಬಿಟ್ಟಿರುವನೋ, ನೀರು ಸೋಸಿ ಕುಡಿಯುವನೋ, ಸೂರ್ಯೋದಯ–ಸೂರ್ಯಾಸ್ತಗಳ ಮಧ್ಯದಲ್ಲಿ ಅನ್ನ ಪಾನಾದಿಗಳನ್ನು ಸೇವಿಸುವನೋ–ಅವನೇ ದಾರ್ಶನಿಕನೆಂದು ಕರೆಯಲ್ಪಡುತ್ತಾನೆ. ಇದು ಶ್ರಾವಕನ ಪ್ರಥಮ ನೆಲೆ.

೨. **ವ್ರತಿಕ** : ಐದು ಅಣುವ್ರತಗಳಲ್ಲದೆ, ಮೂರು ಗುಣವ್ರತಗಳನ್ನೂ ಮತ್ತು ನಾಲ್ಕು ಶಿಕ್ಷಾವ್ರತಗಳನ್ನು–ಅಂದರೆ.– ಸಪ್ತಶೀಲಗಳನ್ನು ವ್ರತಿಕನಾದವನು ಹೊಂದಿರ ಬೇಕಾಗುತ್ತದೆ.

(೩) **ಸಾಮಾಯಿಕ** : ವ್ರತಶೀಲಗಳೊಂದಿಗೆ ಮನಸ್ಸನ್ನು ಪರಿಶುದ್ಧ ವಸ್ತುಗಳ ಮೇಲೆಯೂ, ಪರಮಾತ್ಮನ ಮೇಲೆಯೂ ಕೇಂದ್ರೀಕರಿಸಿ, ಏಕಾಂತ ಸ್ಥಳದಲ್ಲಿ ಧ್ಯಾನನಿರತನಾಗಿ ಸಂಜೆ ಮುಂಜಾನೆ ವಿಶಿಷ್ಟ ಅವಧಿಯವರೆಗೆ ಆಚರಿಸುವ ಮೌನಚಿಂತನೆಗೆ ಸಾಮಾಯಿಕ ಎನ್ನುತ್ತಾರೆ. ಅದನ್ನು ಶ್ರಾವಕರು ಪ್ರತಿನಿತ್ಯ ಆಚರಿಸಬೇಕು.

(೪) **ಪ್ರೋಷದೋಪವಾಸಿ** : ಅಷ್ಟಮಿ ಚತುರ್ದಶಿ ತಿಥಿಗಳಲ್ಲಿ ಮನ–ವಚನ-ಕಾಯದೊಂದಿಗೆ ಸ್ಥಿರತ್ವವನ್ನು ಸಾಧಿಸುವುದಕ್ಕೆ ಉಪವಾಸ ಕೈಕೊಳ್ಳುವ ನಿಯಮಕ್ಕೆ ಪ್ರೋಷದೋಪವಾಸವೆನ್ನುತ್ತಾರೆ. ಅದನ್ನು ಆಚರಿಸುವ ಶ್ರಾವಕನಿಗೆ ಪ್ರೋಷದೋಪವಾಸಿ ಎನ್ನುತ್ತಾರೆ. ಪೂರ್ಣ ಉಪವಾಸ ಆಚರಿಸುವುದು ಸಾಧ್ಯವಿಲ್ಲದಿದ್ದರೆ, ನೀರು ಕುಡಿಯಬಹುದು, ಅಲ್ಪಾಹಾರ ಮಾಡಬಹುದು; ಅಥವಾ ಒಂದು ಹೊತ್ತು ಮಾತ್ರ ಉಣ್ಣಬಹುದು.

(೫) **ಸಚಿತ್ತ ವಿರತ** : ಕಂದ ಮೂಲಗಳನ್ನೂ, ಹಸಿರು ಕಾಯಿಪಲ್ಲೆಗಳನ್ನೂ ಮತ್ತು ಹೂವುಗಳನ್ನೂ ಉಪಯೋಗ ಮಾಡದೆ ಯಾವನು ಇರುತ್ತಾನೆಯೋ ಅವನಿಗೆ ಸಚಿತ್ತವಿರತನೆನ್ನುತ್ತಾರೆ. ಇದರಿಂದ ಸೂಕ್ಷ್ಮ ಜೀವಿಗಳನ್ನು ಹಿಂಸೆ ಮಾಡುವುದು ತಪ್ಪುತ್ತದೆ. ಐದನೆಯ ಪ್ರತಿಮಾಧಾರಿಯಾದ ಶ್ರಾವಕನು ಮಾತ್ರ ಈ ನಿಯಮವನ್ನು ನಡೆಸಲು ಸಮರ್ಥನಾಗುತ್ತಾನೆ.

(೬) **ದಿವಾ ಮೈಥುನತ್ಯಾಗಿ** : ಸ್ತ್ರೀಪುರುಷರು ಒತ್ತಟ್ಟಿಗೆ ಕಲೆತು ವ್ಯವಹರಿಸುವುದು ಕೂಡ 'ಮೈಥುನ'ವಾಗಿದೆ. ಹಗಲು ಸ್ತ್ರೀಪುರುಷರು ಅಂದರೆ, ದಂಪತಿಗಳು ಒತ್ತಟ್ಟಿಗೆ ಕಲೆತು ಕೆಲಸ ಮಾಡುವುದನ್ನು ಅಥವಾ ಸುಮ್ಮನೆ ಕುಳಿತು ಹರಟುವುದನ್ನು ಬಿಡಬೇಕು ಎನ್ನುವುದೆ ಈ ವ್ರತಧಾರಿಯ ಉದ್ದೇಶ. ಇದು ಸಂಯಮದ ಪಾಠವನ್ನು ಕಲಿಸುತ್ತದೆ. ಗಂಡ ಹೆಂಡರಲ್ಲಿ ಹಗಲು ಹೊತ್ತಿನಲ್ಲಿ ಕಾಮವಾಸನೆ ಹುಟ್ಟುವುದನ್ನು ಈ ವ್ರತವು ತಪ್ಪಿಸುತ್ತದೆ.

(೭) ಬ್ರಹ್ಮಚಾರಿ : ಈ ಹಿಂದಿನ ವ್ರತಗಳೆಲ್ಲ ನಡೆಯಿಸುತ್ತ ಬಂದ ಶ್ರಾವಕನು ಒಂದು ವಿಶಿಷ್ಟ ಹಂತಕ್ಕೆ ಬಂದು ಮುಟ್ಟಿದ ಮೇಲೆ, ಗಂಡ ಹೆಂಡಿರಿಬ್ಬರೂ ಪರಸ್ಪರ ಒಪ್ಪಿಗೆಯಿಂದ ಸಂಭೋಗತ್ಯಾಗಮಾಡಲು ಸಮರ್ಥರಾಗುತ್ತಾರೆ. ಆಗ ಮನೆಯಲ್ಲಿಯೇ ಇದ್ದುಕೊಂಡು ಮನ-ವಚನ-ಕಾಯದಿಂದ ಇಂದ್ರಿಯ ನಿಗ್ರಹ ಮಾಡಲು ಸಾಧ್ಯವಾಗುತ್ತದೆ. ಈ ಬ್ರಹ್ಮಚಾರಿಯನ್ನು 'ಸಪ್ತಮ ಪ್ರತಿಮಾಧಾರಿ' ಎಂದು ಕರೆದು ಗೌರವದಿಂದ ಕಾಣುವುದುಂಟು. ಶ್ರಾವಕನು ಈ ನೆಲೆಗೆ ಬಂದು ಮುಟ್ಟಿದರೆ ಒಂದು ಮಹತ್ವದ ಘಟ್ಟ ತಲುಪಿದಂತಾಗುತ್ತದೆ.

(೮) ಆರಂಭವಿರತಿ : ಜೀವನೋಪಾಯಕ್ಕಾಗಿ ನಡೆಯಿಸುತ್ತ ಬಂದಿರುವ ಒಕ್ಕಲುತನ, ವ್ಯಾಪಾರ ಮತ್ತು ನೌಕರಿ ಮುಂತಾದವುಗಳನ್ನು ಬಿಟ್ಟುಬಿಡಬೇಕಾದ ಸಮಯ ಸನ್ನಿಹಿತವಾದಾಗ ಶ್ರಾವಕನು ಈ ವ್ರತವನ್ನು ಆಚರಿಸುತ್ತಾನೆ. ಮನೆಯಲ್ಲಿ ಮಗನಾಗಲೀ, ಉಳಿದವರಾಗಲೀ ತನ್ನ ಕಾರ್ಯಭಾರವನ್ನು ನಡೆಯಿಸಿಕೊಂಡು ಹೋಗಲು, ಸಮರ್ಥರಾದಾಗ ಶ್ರಾವಕನಿಗೆ ನಿವೃತ್ತಿ ದೊರತು 'ಆರಂಭವಿರತಿ' ಎನಿಸಿಕೊಳ್ಳಲು ಸಾಧ್ಯವಾಗುತ್ತದೆ.

(೯) ಪರಿಗ್ರಹ ವಿರತ : ತನ್ನ ಎಲ್ಲ ವ್ಯವಹಾರಗಳನ್ನು ಮಕ್ಕಳಿಗೆ ಇಲ್ಲವೆ ಮನೆಯಲ್ಲಿ ಯಾರಾದರೂ ಕಾರಭಾರಮಾಡುವ ಸಾಮರ್ಥ್ಯಹೊಂದಿದರೆ ಅವರಿಗೆ ಅವನ್ನು ಒಪ್ಪಿಸಿಕೊಟ್ಟು, ಮನೆತನದ ಎಲ್ಲ ಬಂಧನಗಳನ್ನು ಬಿಡಿಸಿಕೊಳ್ಳಲು ಸಮರ್ಥನಾದವನೆ ಪರಿಗ್ರಹವಿರತ. ಕಮಲಪತ್ರದ ಜಲಬಿಂದುವಿನಂತೆ ಇದ್ದೂ ಇಲ್ಲದಂತೆ ಅಂಟಿಕೊಳ್ಳದೆ ಇರುವ ಗುಣಪ್ರಾಪ್ತವಾದಲ್ಲಿ ಈ ಪ್ರತಿಮೆ ಧರಿಸುವ ಯೋಗ್ಯತೆ ಬರುತ್ತದೆ. ಪರಿಗ್ರಹವಿರತನು ಅನಾಸಕ್ತನು. ಮನೆಯವರು ಸಲಹೆ ಕೇಳಿದರೆ ಮಾತ್ರ ಹೇಳಬಹುದು. ಮನೆಯಲ್ಲಿಯೇ ಇದ್ದರೂ ಮನೆಗೆ ಅಂಟಿಕೊಳ್ಳದ ಹಾಗೆ ಸ್ಥಿತಪ್ರಜ್ಞನಾಗಿರುವನು.

(೧೦) ಅನುಮತಿ ವಿರತ : ಮನೆಯವರ ಸಂಪರ್ಕವನ್ನು ಕಡಿದುಕೊಂಡು ಜಿನಮಂದಿರದಲ್ಲಿ ವಾಸಿಸಲು ಪ್ರಾರಂಭಿಸಿ ಮನೆಯವರು ಸಲಹೆ ಕೇಳಿದರೂ ಹೇಳದೆ ಅನುಮತಿ ವಿರತನಾಗಿ ಬಾಳುವ ಸಾಮರ್ಥ್ಯ ಉಳ್ಳವನೆ ಅನುಮತಿ ವಿರತ. ಸದಾ ಜಿನಮಂದಿರದಲ್ಲಿ ಇದ್ದು ಧ್ಯಾನ - ಅಧ್ಯಯನಗಳಲ್ಲಿ ನಿರತನಾಗಿರಬೇಕಾಗುತ್ತದೆ. ಮಧ್ಯಾಹ್ನದ ಪೂಜೆ, ಜಪ ಮುಗಿದ ಮೇಲೆ ಮನೆಯವರು ಬಂದು ಊಟಕ್ಕೆ ಕರೆದರೆ, ಹೋಗಿ ಊಟಮಾಡಿ ಬರಬಹುದು. ಅಲ್ಲಿ ಹೆಚ್ಚು ಹೊತ್ತು ನಿಲ್ಲದೆ ಬೇಗನೆ ಜಿನಮಂದಿರಕ್ಕೆ ಬಂದುಬಿಡಬೇಕು.

(೧೧) ಉದ್ದಿಷ್ಟಾಹಾರ ತ್ಯಾಗಿ : ತನಗೋಸ್ಕರ ಆಹಾರ ತಯಾರಿಸಲು ಹೇಳುವದಿಲ್ಲ. ಹಾಗೆ ತಯಾರಿಸಿದ್ದರೆ ಅದನ್ನು ಸ್ವೀಕರಿಸುವದಿಲ್ಲ. ಪಂಜೆ ಧರಿಸಿ ಮೈಮೇಲೆ ಪಂಜೆ ಹೊದ್ದು, ತನ್ನ ಗುರುವಿನ ಸೇವೆಯಲ್ಲಿಯೇ ತೊಡಗಿರುವದು. ಗುರು

ಆಹಾರ ಸ್ವೀಕರಿಸಿದಲ್ಲಿ ತಾನೂ ಸ್ವೀಕರಿಸುವುದು. ಧ್ಯಾನ ಅಧ್ಯಯನಗಳ ಜೊತೆಗೆ ಗುರು-ಮುನಿಗಳ ಸೇವೆ, ಸುಶ್ರೂಷೆಯಲ್ಲಿ ನಿರತನಾಗಿರುವುದು. ತನ್ನ ಉದ್ದಿಷ್ಟ ತ್ಯಾಗವನ್ನು ಹೊಂದಿದ ವ್ರತಿಕನೆ ಉದ್ದಿಷ್ಟಾಹಾರತ್ಯಾಗಿ ಅಥವಾ ಉದ್ದಿಷ್ಟತ್ಯಾಗಿ ಎನಿಸಿಕೊಳ್ಳುತ್ತಾನೆ. ಇದು ಶ್ರಾವಕನ ಕೊನೆಯ ನೆಲೆಯಾಗಿದೆ. ಸನ್ಯಾಸಿ ಧರ್ಮದ ಪೂರ್ವ ತಯಾರಿ ಇದರಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ.[೧೩]

ಈ ಏಕಾದಶ ನಿಲಯಗಳು ಶ್ರಾವಕನನ್ನು ಕ್ರಮದಿಂದ ತರಬೇತುಗೊಳಿಸಿ ಸನ್ಯಾಸ ಧರ್ಮ (ಅನಗಾರ ಧರ್ಮ)ವನ್ನು ಆಚರಿಸಲು ಸಮರ್ಥನನ್ನಾಗಿ ಮಾಡುವವು. ಈ ನಿಲಯಂಗಳನ್ನು ಯಶಸ್ವಿಯಾಗಿ ಮುಟ್ಟಿದವನು ಯತಿಧರ್ಮಾಚರಣೆಯಲ್ಲಿ ಮೆಲ್ಲನೆ ಕಾಲಿಡಲು ಸಿದ್ಧನಾಗುತ್ತಾನೆ. ಗುರುಗಳಿಂದ ಸನ್ಯಾಸದೀಕ್ಷೆ ಹೊಂದಿ ಕಾವಿ ಬಟ್ಟೆ ಧರಿಸಿ 'ಕ್ಷುಲ್ಲಕ ಸನ್ಯಾಸಿ' ವ್ರತಗಳನ್ನು ಆಚರಿಸಲು ತೊಡಗುತ್ತಾನೆ. ಅಲ್ಲಿ ಸಾಕಷ್ಟು ಪ್ರಗತಿಯನ್ನು ಹೊಂದಿದ ಮೇಲೆ 'ಐಲಕ ಸನ್ಯಾಸಿ'ಯಾಗುತ್ತಾನೆ. ಮತ್ತೂ ಮುಂದುವರಿದು "ದಿಗಂಬರ ಮುನಿ" ದೀಕ್ಷೆಯನ್ನು ಹೊಂದುತ್ತಾನೆ. ಅದು ಕಡೆಯ ಅವಸ್ಥೆ. ಅದರಲ್ಲಿಯೂ ವಿಶಿಷ್ಟ ಸಿದ್ಧಿಯನ್ನು ಹೊಂದಿ **"ಆಚಾರ್ಯ"** ಪದವಿಯನ್ನು ಹೊಂದಬಹುದು.

ಅಷ್ಟಮೂಲಗುಣಗಳು : ಮದ್ಯ, ಮಾಂಸ, ಮಧುತ್ಯಾಗ; ಮತ್ತು ಅತ್ತಿ, ಆಲ, ಬಸರಿ, ಅರಳಿ, ಗೋಳಿ—ಈ ಐದು ಹಾಲು ಮರಗಳ ಹಣ್ಣು ತ್ಯಾಗ. ಒಟ್ಟು ಈ ಎಂಟು ವಸ್ತುಗಳನ್ನು ಬಿಡುವುದು ಅತ್ಯಂತ ಮಹತ್ವದ್ದು. ಅನಂತ ಜೀವ ಹಿಂಸೆಯನ್ನು ತ್ಯಜಿಸಿದ ಪುಣ್ಯ ಲಭಿಸುವುದರಿಂದ ಈ ವಸ್ತುಗಳ ತ್ಯಾಗ ಅಹಿಂಸಾ ಪರಮೋಧರ್ಮದ ಅಷ್ಟ ಮೂಲ ಗುಣಗಳ ವ್ಯಾಪ್ತಿಗೆ ಕಾರಣೀಭೂತವಾಗುತ್ತದೆ. ಆದ್ದರಿಂದ ಇದು ಶ್ರಾವಕನ ಪ್ರಥಮ ಕರ್ತವ್ಯವಾಗಿದೆ.

ಪಂಚ ಅಣುವ್ರತಗಳು : ಅಹಿಂಸೆ, ಸತ್ಯ, ಅಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ-ಇವುಗಳನ್ನು ಸಾಧಿಸುವುದು ಶ್ರಾವಕ-ಸನ್ಯಾಸಿಗಳಿಬ್ಬರ ಕರ್ತವ್ಯವಾಗಿದ್ದರೂ, ಶ್ರಾವಕನು ಶಕ್ತ್ಯಾನುಸಾರವಾಗಿಯೂ, ಸನ್ಯಾಸಿ ಸಂಪೂರ್ಣವಾಗಿಯೂ ಇವುಗಳನ್ನು ಹಸ್ತಗತ ಮಾಡಿಕೊಳ್ಳಬೇಕು. ಆದ್ದರಿಂದಲೇ ಶ್ರಾವಕನಿಗೆ ಇವು ಅಣುವ್ರತಗಳಾಗಿಯೂ, ಸನ್ಯಾಸಿಗೆ ಮಹಾವ್ರತಗಳಾಗಿಯೂ ಪರಿಣಮಿಸುತ್ತವೆ.

ಗುಣವ್ರತತ್ರಯಗಳು : ದಿಗ್ವಿರತಿ, ದೇಶವಿರತಿ, ಅನರ್ಥದಂಡವಿರತಿ ಈ ಮೂರು ಗುಣಗಳ ಸಂಪಾದನೆಯೆ ಗುಣವ್ರತತ್ರಯಗಳ ಉದ್ದೇಶ. ನಿತ್ಯ ಜೀವನದ ಅನುಭವದಿಂದ, ಕೆಲವೊಂದು ದಿಕ್ಕಿನಲ್ಲಿ ಮತ್ತು ಕೆಲವೊಂದು ಪ್ರದೇಶದಲ್ಲಿ ಹೆಚ್ಚು ಸಂಚರಿಸಿದರೆ ಹೆಚ್ಚು ಹಿಂಸೆಗಳು ಸಂಭವಿಸುತ್ತವೆಯೆಂಬುವುದು ಗಮನಕ್ಕೆ ಬರುವುದು.

---

೧೩. 'ಸರ್ವಧರ್ಮ ಸಮ್ಮೇಳನ ರಜತಮಹೋತ್ಸವ' ಸಂಚಿಕೆಯಲ್ಲಿ—ಕೆ. ಎಸ್. ಧರಣೇಂದ್ರಯ್ಯನವರ ಲೇಖನ—ಪು: ೨೪—೨೬.

ಅಂಥ ದಿಕ್ಕು ಮತ್ತು ದೇಶ, ಪ್ರದೇಶಗಳಿಗೆ ಹೋಗದಿದ್ದರೆ ಹಿಂಸೆ ಸಂಭವಿಸುವುದಿಲ್ಲ. ದಿಗ್ ದೇಶ ಸಂಚಾರ ವಿರತನಾಗಿರುವ ವಿಶಿಷ್ಟ ನಿಯಮಗಳನ್ನು ಪಾಲಿಸುವುದಕ್ಕೆ ದಿಗ್ವಿರತಿ, ದೇಶವಿರತಿ ಎನ್ನುತ್ತಾರೆ. ಅನಾವಶ್ಯಕವಾಗಿ ಸಸ್ಯಾದಿಗಳನ್ನು ಹರಿಯುವುದು ಚಿವುಟುವುದು, ಸೂಕ್ಷ್ಮಪ್ರಾಣಿ ಕ್ರಿಮಿಕೀಟಕಾದಿಗಳನ್ನು ತುಳಿಯುವುದು ಕೊಲ್ಲುವುದು ಮುಂತಾದ ಹಿಂಸೆಯನ್ನು ತಡೆಯುವುದೇ ಅನರ್ಥದಂಡವಿರತಿ ವ್ರತ. ಸೂಕ್ಷ್ಮ ಭಾವಜೀವಿಗಳಾದ ಸದ್ಗುಣಿಗಳು ಆಚರಿಸಲು ಸಮರ್ಥರಾದುದರಿಂದ ಇವುಗಳಿಗೆ ಗುಣವ್ರತಗಳೆನ್ನುವರು.

ಚತುರ್ ಶಿಕ್ಷಾವ್ರತಗಳು : ಸಾಮಾಯಿಕ, ಪ್ರೋಷದೋಪವಾಸ, ಭೋಗೋಪಭೋಗಪರಿಮಾಣ, ವೈಯ್ಯಾವೃತ್ಯ-ಎಂಬ ನಾಲ್ಕು ವ್ರತಗಳು ಶಿಕ್ಷಾವ್ರತಗಳೆನಿಸಿವೆ. ಮೌನಚಿಂತನೆ, ಅಷ್ಟಮಿ-ಚತುರ್ದಶಿ ಮುಂತಾದ ಉಪವಾಸ ಕೈಕೊಳ್ಳುವುದು, ಭೋಗ ಉಪಭೋಗಗಳಲ್ಲಿ ಕ್ರಮದಿಂದ ಸಂಯಮವನ್ನು ಆಚರಿಸುವುದು, ಗುಣವಂತರ ಶರೀರ ಪೀಡೆ ನಿವಾರಣೆಗಾಗಿ ಮಾಡುವ ಕಾರ್ಯ-ಇವೇ ವ್ರತಾಚರಣೆಯ ರೀತಿಗಳಾಗಿವೆ. ಇದರಿಂದ ಸಾಧಕನಿಗೆ ಸದ್ಗತಿಯ ದಾರಿಯಲ್ಲಿ ಮುನ್ನಡೆಯುವ ಶಿಕ್ಷಣ ದೊರೆಯುವುದರಿಂದ ಇವುಗಳಿಗೆ ಶಿಕ್ಷಾವ್ರತಗಳೆಂದು ಕರೆದಿದ್ದಾರೆ.

ಸಪ್ತ ಶೀಲಗಳು : ಇವು ಪ್ರತ್ಯೇಕ ವ್ರತಗಳಲ್ಲ; ಗುಣವ್ರತ, ಶಿಕ್ಷಾವ್ರತಗಳನ್ನು ಸೇರಿಸಿದರೆ ಆಗುವ ಏಳುವ್ರತಗಳೇ ಸಪ್ತಶೀಲಗಳು.

ಸಪ್ತ ವ್ಯಸನಗಳು : ಜೂಜು, ಮಾಂಸ, ಮದ್ಯ, ವೇಶ್ಯೆ, ಬೇಟೆ, ಪರಧನ ಪರದಾರ-ಮುಂತಾದ ಏಳು ವಿಷಯಗಳಲ್ಲಿ ಆಸಕ್ತನಾಗಿರುವುದು ಮಹಾ ಪಾಪ., ಈ ಏಳು ವ್ಯಸನಗಳನ್ನು ತ್ಯಜಿಸಬೇಕು. ಶ್ರಾವಕನ ಪ್ರಥಮ ಮತ್ತು ದ್ವಿತೀಯ ನೆಲೆಗಳಲ್ಲಿಯೇ ವ್ರತಶೀಲ-ನಿರ್ವ್ಯಸನಗಳು ಬರುತ್ತವೆ.

ಮಿಥ್ಯಾಶಲ್ಯ, ಮಾಯಾಶಲ್ಯ, ನಿದಾನಶಲ್ಯಗಳು ಮಾನವನನ್ನು ಸದಾ ಚುಚ್ಚುತ್ತಲೇ ಇರುತ್ತವೆ. ಆ ನೋವಿನಿಂದ ಬಿಡುಗಡೆ ಹೊಂದದ ಹೊರತು ಸಮಾಧಾನ ಸಿಗದು. 'ಅತಿಚಾರದಿಂದಗಲ್ದು ವ್ರತಮೈದುಂ, ಶೀಲಮೇಳುಮಂ ತಾಳ್ದು. ಅಣುವ್ರತಿ ಶಲ್ಯತ್ರಯ ವರ್ಜಿತನಾದಂ ವ್ರತಿಕನೆಂಬ ಉಪಾಸಕನಕ್ಕುಂ.'

ಕೆಲವೊಂದು ಪ್ರಸಂಗಗಳಲ್ಲಿ ಮೌನ ಆಚರಣೆ ಕೈಕೊಳ್ಳಬೇಕು. ಹವನ, ಮೂತ್ರಣ, ಸ್ನಾನ, ಪರಮೇಷ್ಠಿಗಳ ಪೂಜೆ, ಭೋಜನ, ಸುರತ, ಸ್ತೋತ್ರ ಮುಂತಾದ ಏಳು ಪ್ರಸಂಗಗಳಲ್ಲಿ ಮಾತನಾಡುವುದನ್ನು ಬಿಡಬೇಕು. ಇಷ್ಟೇ ಅಲ್ಲ ಹುಬ್ಬು ಸನ್ನೆ, ಕಣ್ಣು ಸನ್ನೆ, ಹೂಂಕಾರ, ಕೈಸನ್ನೆ, ಬೆರಳು ಸನ್ನೆ ಸಹ ಮಾಡಬಾರದು. ಸಂಪೂರ್ಣ ಮೌನವನ್ನು ಆಚರಿಸಬೇಕು. ಶ್ರಾವಕನು ಈ ಮೌನಧಾರಣ ವ್ರತವನ್ನು ನಡೆಯಿಸುವುದು ಅವನ ಕರ್ತವ್ಯ.

ಉಣ್ಣುವಾಗ ಮಾಂಸ–ಕೀವು–ರಕ್ತ ಕಂಡರೆ ಅಥವಾ ಅವುಗಳ ಬಗ್ಗೆ ಕೇಳಿದರೆ, ಅಗಲಲ್ಲಿ ಸತ್ತ ಪ್ರಾಣಿ–ಕ್ರಿಮಿ–ಕೀಟಕಗಳು ಬಂದರೆ ಊಟವನ್ನು ತ್ಯಜಿಸಬೇಕು. ತಪ್ಪಿ ಉಂಡರೆ ವಾಂತಿ ಮಾಡಿಕೊಳ್ಳಬೇಕು. ಸ್ನಾನ ಮಾಡಿ ಜಿನಮಂದಿರಕ್ಕೆ ಹೋಗಿ ದೇವ ದರ್ಶನ ತೆಗೆದುಕೊಂಡು ಗುರುಗಳ ಬಳಿಯಲ್ಲಿ ಪ್ರಾಯಶ್ಚಿತ್ತ ಕೈಕೊಳ್ಳಬೇಕು. ಚಿಪ್ಪು, ಗುಲ್ಲಿ. ಕವಡಿ, ಕೂದಲು ಊಟದಲ್ಲಿ ಬಂದರೆ ಅದನ್ನು ಬಿಟ್ಟು ನೀರಿನಿಂದ ಬಾಯಿ ಮುಕ್ಕಳಿಸಿ ಬೇರೆ ಶುದ್ಧ ಆಹಾರವನ್ನು ಊಟ ಮಾಡಬಹುದು. ಹೇಸಿಕೆ ಎನಿಸಿದರೆ ಊಟ ಬಿಡಬಹುದು. ಈ ರೀತಿ ಊಟದ ಪ್ರಸಂಗದಲ್ಲಿ ವ್ಯತ್ಯಯ ಉಂಟಾಗಿ ಊಟ ಬಿಟ್ಟುಕೊಡುವದಕ್ಕೆ 'ಅಂತರಾಯ'ವೆನ್ನುತ್ತಾರೆ. ಅದನ್ನು ಶ್ರಾವಕನು ಅನುಸರಿಸಬೇಕಾಗುತ್ತದೆ.

ಚತುರ್ವಿಧ ಶ್ರಾವಕ ಧರ್ಮ : ದಾನ, ಪೂಜೆ, ಶೀಲ ಮತ್ತು ಉಪವಾಸ ಇವು ಶ್ರಾವಕನು ಕೈಕೊಳ್ಳುವ ನಾಲ್ಕು ಧರ್ಮಗಳು. ಆಹಾರ ದಾನ, ಔಷಧ ದಾನ, ಶಾಸ್ತ್ರದಾನ, ಮತ್ತು ಅಭಯದಾನ–ಇವು ಶ್ರೇಷ್ಠ ದಾನಗಳು. ದೇವ–ಗುರು–ಶಾಸ್ತ್ರಗಳ ಪೂಜೆಯೇ ನಿಜವಾದ ಪೂಜೆ. ತಾನು ಕೈಕೊಂಡ ವ್ರತಗಳನ್ನು ರಕ್ಷಿಸುವುದೇ ನಿಜವಾದ ಶೀಲ. ಅಷ್ಟಮಿ–ಚತುರ್ದಶಿಗಳಲ್ಲಿ ಉಪವಾಸ, ಅಲ್ಪೋಪಹಾರ, ಒಂದ್ಹೊತ್ತು ಊಟ, ಕೆಲವೊಂದು ವಸ್ತುಗಳನ್ನು ತಿನ್ನದಿರುವುದು ಮುಂತಾದುದೇ ಉಪವಾಸ.

ಆಶ್ರಮಗಳು : ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಭಿಕ್ಷುಕ (ಸನ್ಯಾಸಿ) ಎಂದು ನಾಲ್ಕು ಜೈನಾಶ್ರಮಗಳುಂಟು. ಅದರಲ್ಲಿ ಉಪನಯನ, ಅವಲಂಬನ, ಅದೀಕ್ಷಾ, ಗೂಢ, ನೈಷ್ಠಿಕವೆಂದು ಐದು ಬ್ರಹ್ಮಚರ್ಯ ಭೇದಗಳುಂಟು. ಕೊನೆಯದು ಸನ್ಯಾಸಿಗಳಿಗೂ, ಮೊದಲಿನ ಮೂರು ಗೃಹಸ್ಥರಿಗೂ ಹೇಳಿವೆ.

ಆರ್ಯ ಷಟ್ಕರ್ಮಗಳು : ಈಜ್ಯೆ. ವಾರ್ತೆ, ದತ್ತಿ, ಸ್ವಾಧ್ಯಾಯ, ಸಂಯಮ, ತಪ–ಈ ಆರು ಕರ್ಮಗಳನ್ನು ನಿತ್ಯವೂ ಶ್ರಾವಕನು ಕಾಯ್ದುಕೊಂಡು ಹೋಗಬೇಕು. ಈಜ್ಯೆ ಎಂದರೆ ಪೂಜೆ. ಅದು ದಶವಿಧವಾದುದು. ವಾರ್ತೆ ಎಂದರೆ ಉದ್ಯೋಗ. ಅದು ಷಡ್ವಿಧವಾದುದು. ಅಸಿ, ಮಷಿ, ಕೃಷಿ, ವಾಣಿಜ್ಯ. ಪಶುಪಾಲ್ಯ, ಶಿಲ್ಪಕರ್ಮವೆಂದು ಆರು ತರದ ಉದ್ಯೋಗಗಳಲ್ಲಿ ಯಾವುದಾದರೂ ಒಂದನ್ನು ಉದರನಿಮಿತ್ತವಾಗಿ ಕೈಕೊಳ್ಳಬಹುದು. ದತ್ತಿ ಎಂದರೆ ಅದು ಚತುರ್ವಿಧವಾದದ್ದು. ದಯಾದತ್ತಿ, ಪಾತ್ರದತ್ತಿ, ಸಮದತ್ತಿ, ಸಕಲದತ್ತಿ ಎಂದು ದ್ರವ್ಯವನ್ನು ನಾಲ್ಕು ರೀತಿಯಲ್ಲಿ ಹಂಚಿಬಿಡಲು ತನ್ನ ಯೋಗ್ಯತೆ ಶಕ್ತಿ ಸಮಯಗಳನ್ನು ಅನುಸರಿಸಿ ವರ್ತಿಸಬೇಕು. ಸ್ವಾಧ್ಯಾಯ ಎಂದರೆ–ತತ್ವಜ್ಞಾನ ಗ್ರಂಥಗಳನ್ನು ಓದುವುದು; ಓದಿಸುವುದು. ಪಂಚಾಣುವ್ರತ ಪ್ರವರ್ತನವೇ ಸಂಯಮ. ಅನಶನ, ಅವಮೋದರ್ಯ, ವೃತ್ತಿಪರಿಸಂಖ್ಯಾನ, ರಸಪರಿತ್ಯಾಗ, ವಿವಿಕ್ತಶಯ್ಯಾಸನ, ಕುಕ್ಕುಟಾಸನ ಮುಂತಾದವು ತಪಗಳೆನಿಸುತ್ತವೆ. ಈ ಆರ್ಯ ಷಟ್ಕರ್ಮಗಳನ್ನು

ಆಚರಿಸುವ ಶ್ರಾವಕರು ಜಾತಿ ಕ್ಷತ್ರಿಯರು, ತೀರ್ಥಕ್ಷತ್ರಿಯರು ಎಂದು ಎರಡು ವಿಧವಾಗಿರುವರು.[೧೪]

ಭಿಕ್ಷುಗಳಲ್ಲಿ–ಅನಾಗಾರರು, ಯತಿಗಳು, ಮುನಿಗಳು, ದೇವಋಷಿಗಳು ಎಂದು ನಾಲ್ಕು ಭೇದಗಳುಂಟು. ಅದರಲ್ಲಿ–ಉಪಶಮಶ್ರೇಣ್ಯಾರೋಹಣರು, ಕ್ಷಪಕ ಶ್ರೇಣ್ಯಾ-ರೋಹಣರು ಎಂದು ಎರಡು ತರದ ಯತಿಗಳುಂಟು. ಅವಧಿ ಜ್ಞಾನಿಗಳು, ಮನಃ ಪರ್ಯಯಜ್ಞಾನಿಗಳು, ಕೇವಲ ಜ್ಞಾನಿಗಳು–ಎಂದು ಮುನಿಗಳಲ್ಲಿ ಮೂರು ಪ್ರಕಾರ. ಅದರಂತೆ, – ರಾಜರ್ಷಿಗಳು, ಬ್ರಹ್ಮರ್ಷಿಗಳು, ದೇವರ್ಷಿಗಳು, ಪರಮ ಋಷಿಗಳೆಂದು ನಾಲ್ಕು ಪ್ರಕಾರದ ಋಷಿಗಳುಂಟು.

ದಾರ್ಶನಿಕನಿಂದ ಪ್ರಾರಂಭಿಸಿ ಉದ್ದಿಷ್ಟವಿರತನವರೆಗೆ ಬೆಳೆದ ಉಪಾಸಕ ಸ್ಥಾನಗಳು ೬೬ ಆಗುತ್ತವೆ. ಶ್ರಾವಕರಿಗೆ ಅವರು ಮಾಡುವ ಉದ್ಯೋಗಗಳಾದ ಅಸ್ಯಾದಿ ಷಟ್ಕರ್ಮಗಳಿಂದ ಹಿಂಸಾದೋಷಗಳು ಸಂಭವಿಸಿದರೆ, ಪಕ್ಷಚರಿಯೆ, ಸಾಧಕತ್ವ ಮುಂತಾದವುಗಳಿಂದ ಆ ದೋಷಗಳನ್ನು ಪರಿಹರಿಸಿ ಶುದ್ಧರಾಗಬಹುದು. ಸ್ವಚ್ಛಂದ ವೃತ್ತಿಯವರ ಹಾಗೆ ಧರ್ಮ ಅರ್ಥಗಳಿಂದ ಆಗುವ ಪ್ರಾಣಿ ಹಿಂಸೆಯನ್ನು ಇವರು ಮಾಡುವುದಿಲ್ಲ. ಪ್ರಮಾದದಿಂದ ಹಿಂಸೆ ಸಂಭವಿಸಿದರೆ, ಪ್ರಾಯಶ್ಚಿತ್ತಗಳಿಂದ ಶುದ್ಧರಾಗುತ್ತಾರೆ. ಪರಿತ್ಯಾಗ ಕರಣಗಳು ಹುಟ್ಟಿದೊಡನೆ ತಮ್ಮ ಮನೆಯನ್ನು, ಧನವನ್ನು, ಧರ್ಮವನ್ನು ಪುತ್ರರಿಗೆ ಇಲ್ಲವೆ ಗೋತ್ರಜರಿಗೆ ಒಪ್ಪಿಸಿ ಶ್ರಾವಕರು ಗೃಹತ್ಯಾಗ ಮಾಡುತ್ತಾರೆ.[೧೫]

ಸಲ್ಲೇಖನೆ:[೧೬] ಮರಣ ಕಾಲದಲ್ಲಿ ಸಲ್ಲೇಖನೆಯನ್ನು ಆಚರಿಸುವುದು ಆದರ್ಶವೆಂದು ತಿಳಿಯಲಾಗಿದೆ. ಇದು ಶ್ರಾವಕರಿಗೂ ಯತಿಗಳಿಗೂ ಇಬ್ಬರಿಗೂ ಹೇಳಲಾಗಿದೆ. ಸಲ್ಲೇಖನೆಯಲ್ಲಿ ಕಷಾಯ ಸಲ್ಲೇಖನೆ, ಶರೀರ ಸಲ್ಲೇಖನೆ ಎಂದು ಎರಡು ವಿಧವಾಗಿದೆ. ಅನಶನ ಮೊದಲಾದ ಬಾಹ್ಯ ತಪಗಳಿಂದ ಶರೀರವನ್ನು ಸೊರಗುವಂತೆ ಮಾಡುವುದು ಶರೀರ ಸಲ್ಲೇಖನ. ಪರಿಣಾಮ ಉತ್ಪತ್ತಿ ನಿಮಿತ್ತಗಳಾದ ಸಮಸ್ತ ವಸ್ತುಗಳನ್ನು ತೊರೆದು ಕಷಾಯಗಳನ್ನು ನಡುಗಿಸುವುದು ಕಷಾಯ ಸಲ್ಲೇಖನ. ಯಾವ ಪ್ರಸಂಗಗಳಲ್ಲಿ ಸಲ್ಲೇಖನೆ ನಡೆಸಬೇಕು ಎಂಬುವನ್ನು ಆಚಾರ್ಯ ಸಮಂತ ಭದ್ರರು ಸ್ಪಷ್ಟವಾಗಿ ಹೇಳಿದ್ದಾರೆ:

> ಉಪಸರ್ಗೇ ದುರ್ಭಿಕ್ಷೇ ಜರಸಿ ರುಜಾಯಾಂ ಚ ನಿಃಪ್ರತಿಕಾರೇ ।
> ಧರ್ಮಾಯ ತನುವಿಮೋಚನಮಾಹುಃ ಸಲ್ಲೇಖನಾಮಾರ್ಯಾಃ ॥

ಆಪತ್ತುಗಳು (ಉಪಸರ್ಗ), ಬರಗಾಲ, ಮುಪ್ಪು, ರೋಗ–ಇವು ಮೈಮೇಲೆ

---

೧೪. ಶಾ. ಸಾ. ಸೆ. – ಪು : ೧೫೩–೧ ೪

೧೫. ಶಾ. ಸಾ. ಸೆ.– ಪು : ೧೫೪–೧೫೬.

೧೬. ಶಾ. ಸಾ. ಸೆ.– ಪು : ೧೬೮–೧೭೪.

ಬಂದು ಇವುಗಳಿಂದ ಇನ್ನು ಬಿಡುಗಡೆಯೇ ಇಲ್ಲ, ಮರಣದ ಹೊರತು ಬೇರೆ ಗತಿಯೇ ಇಲ್ಲ–ಎನಿಸಿದಾಗ ಧರ್ಮಾನುಸರಣೆಯೊಂದಿಗೆ ಈ ದೇಹ ಬಿಡುವುದಕ್ಕೆ ಸಲ್ಲೇಖನ ವ್ರತವನ್ನು ಕೈಕೊಳ್ಳಬೇಕು. ಉಳಿದೆಡೆಯಲ್ಲಿ ಇದನ್ನು ಕೈಕೊಳ್ಳಬಾರದು.

ವಿಷವೇದನಾದಿಗಳಿಂದ, ರಕ್ತಕ್ಷಯ–ಭಯ–ಶಸ್ತ್ರಪ್ರಹರಣ–ಸಂಕ್ಲೇಶ -ಉಚ್ಛ್ವಾಸ ನಿರೋಧ–ಆಹಾರನಿರೋಧಗಳಿಂದ, ಜಲ–ಜ್ವಲನಗಳಿಂದ, ಮರಣ ಹೊಂದುವದಕ್ಕೆ ಕದಳಿಘಾತವೆಂದು ಹೇಳುತ್ತಾರೆ. ಘಾತವಿಲ್ಲದೆ ಆಯುಷ್ಯ ನಿಷೇಕಗಳನ್ನು ಕ್ರಮದಿಂದ ಉಂಡು ತಪಮಾಡುವದಕ್ಕೆ ಸ್ವಪಾರ ಮರಣವೆಂದು ಹೇಳುತ್ತಾರೆ

ಜೀವ ಗರ್ಭದಲ್ಲಿ ಬಂದು ನೆಲಸಿದಾಗಿನಿಂದ ಪ್ರತಿಕ್ಷಣ ನದೀ ನೀರಿನಂತೆ ಆಯುಷ್ಯವನ್ನು ಕಳೆದು ಹೊಂದುವ ಮರಣವನ್ನು ನಿತ್ಯಮರಣ ಅಥವಾ ಆವಿಚಿ ಮರಣ ವೆಂದು ಕರೆಯುತ್ತಾರೆ. ಜನ್ಮಾಂತರ ಪ್ರಾಪ್ತಿಯನ್ನು ಮಾಡುವದಕ್ಕೆ ತದ್ಭವ ಮರಣ ವೆಂದು ಕರೆಯುತ್ತಾರೆ.

ವಾತ ಪಿತ್ತ ಕ್ಲೇಶಾದಿಗಳಿಂದ ರೋಗಪೀಡಿತರಾಗಿದ್ದರೂ ಸಮ್ಯಕ್ತ್ವವನ್ನು ಬಿಡದೆ ಪಡೆಯುವ ಮರಣವನ್ನು ಸಮ್ಯಕ್ತ್ವ ಮರಣವೆಂದೂ, ನಿವೃತ್ತಿಪೂರ್ವೋಕ್ತವಾಗಿ ಶರೀರ ಭಾರವನನ್ನು ಇಳಿಸುವುದು ಸಮಾಧಿ ಮರಣವೆಂದೂ, ನಿವೃತ್ತಿಪೂರ್ವಕ ಸ್ವಾತ್ಮತತ್ವ ಭಾವನಾಪೂರ್ವಕ ಶರೀರವನ್ನು ಬಿಡುವುದು ಪಂಡಿತ ಮರಣವೆಂದೂ, ಧೈರ್ಯದಿಂದ ಉತ್ಸಾಹದಿಂದ ಭೇದಭಾವನಾಪೂರ್ವಕ ಶರೀರವನ್ನು ಬಿಡುವುದು ವೀರ್ಯಮರಣವೆಂದೂ ಮರಣಗಳಲ್ಲಿ ನಾಲ್ಕು ಭೇದಗಳನ್ನು ಕೆಲವರು ಹೇಳುವುದುಂಟು.

ಸ್ವಪರ ವೈಯ್ಯಾವೃತ್ಯ ಸಾಪೇಕ್ಷವಾದ ಭಕ್ತಪ್ರತ್ಯಾಖ್ಯಾನ ಮರಣ, ಪರಮ ವೈಯಾವೃತ್ಯ ನಿರಾಪೇಕ್ಷವಾದ ಇಂಗಿನಿ ಮರಣ. ಸ್ವಪರ ವೈಯಾವೃತ್ತಿ ನಿರಾಪೇಕ್ಷವಾದ ಪ್ರಾಯೋಪಗಮನಮರಣ-ಎಂದು ಮೂರು ತೆರದ ಮರಣಗಳನ್ನೂ ಹೇಳುತ್ತಾರೆ.

ಇನ್ನು ಕೆಲವರು ಮರಣಗಳಲ್ಲಿ–ಬಾಲಾಬಾಲಮರಣ, ಬಾಲಮರಣ, ಬಾಲ ಪಂಡಿತಮರಣ,ಪಂಡಿತಮರಣ.ಪಂಡಿತಪಂಡಿತ ಮರಣ ಎಂದು **ಐದು** ರೀತಿಗಳನ್ನು ವಿವರಿಸಿದ್ದುಂಟು. ಸಂಸಾರಿಗಳ ಮರಣ ಸಾಯುಮರ್ರಣವೆಂದೂ,ಅದರಲ್ಲಿ ಸಗುಣ ನಿರ್ಗುಣ ಭೇಧಗಳುಂಟೆಂದೂ ಆಗಮೋಕ್ತವಾಗಿ ಶ್ರಾವಕರು-ಯತಿಗಳು ಪಡೆಯುವ ಸಮಾಧಿ ಮರಣವನ್ನು ಸಗುಣಾಯುರ್ಮರಣವೆಂದೂ, ಸ್ವೈರ ಜೀವಿಗಳ ದುರ್ಮರಣವನ್ನು ನಿರ್ಗುಣಸಾಯುರ್ಮರಣವೆಂದೂ, ಕೇವಲ ಜ್ಞಾನಿಗಳ ಪರಿನಿರ್ವಾಣವನ್ನು ನಿರಾಯುರ್ಮರಣವೆಂದೂ ವಿಭಾಗಿಸಿದ್ದುಂಟು.

ಪಶ್ಚಿಮ ಸಲ್ಲೇಖನೆ: ಸರ್ವಪ್ರಯತ್ನದಿಂದ ಗುರುನಿರೂಪಿತ ಕ್ರಮದಿಂದ ಶರೀರವನ್ನು ಪಳಿಕೆಯುದ್ದ ತೊತ್ತನುಳಿಪಂತೆ ಉಳಿದು ಲೀಲೆಯಿಂದ ಗತ್ಯಂತರವನ್ನು ಹೊಂದುವ ಮರಣ ಭಕ್ತಪ್ರತ್ಯಾಖ್ಯಾನ ಮರಣವೆನಿಸುವುದು. ನಿಃಕ್ರಿಯಾ ಶುದ್ಧಾತ್ಮ ಭಾವನೆಯಲ್ಲಿ ಪರಿಣಾಮವನ್ನು ಅತಿ ಪ್ರಯತ್ನದಿಂದ ಕೂಡಂತ್ತ ಪರಮ ವೈಯಾವೃತ್ಯ

ನಿರಾಪೇಕ್ಷೆಯಿಂದ ಶರೀರಭಾರವನ್ನು ಇಳಿಸುವ ಮರಣ ಇಂಗಿನೀ ಮರಣವೆನಿಸುವುದು.
ಪ್ರಬಲವಾದ ಅಗ್ನಿಪ್ರಟಪಾಕದಿಂದ ಕಾಂತಿವೆತ್ತ ಕಾಂಚನದಂತೆ ಪರಮೋಪಶಾಂತ
ನಾಗುತ್ತ ನಿಜಪರಮಾತ್ಮಸ್ವರೂಪದೊಳು ಪರಿಣತಿಯನ್ನು ಅವಿಚಲವೃತ್ತಿಯಿಂದ
ಸಮ್ಯಕ್‌ಸನ್ಯಸನರೂಪ ವೀರಸನ್ಯಸನವನ್ನು ಸ್ವೀಕರಿಸಿ ಪರವೈಯ್ಯಾವೃತ್ಯನಿರಾ
ಪೇಕ್ಷೆಯಿಂದ ಶರೀರ ತ್ಯಾಗಮಾಡಿದ ಮರಣ ಪ್ರಾಯೋಪಗಮನಮರಣವೆನಿಸುವುದು.

ಸಲ್ಲೇಖನಗಳ ವಿವರ ತಿಳಿಯುವಾಗ ಅವುಗಳ ಅತೀಚಾರಗಳನ್ನು ಮರೆಯ
ಬಾರದು. ಜೀವಿತಾಶಂಸೆ, ಮರಣಾಶಂಸೆ, ಭಯ, ಮಿತ್ರಸ್ಮೃತಿ, ನಿದಾನವೆಂಬ ಪಂಚ
ಸಲ್ಲೇಖನಾತಿಚಾರಗಳನ್ನು ತಿಳಿದು ಅವುಗಳ ಬಾಧೆಯಾಗದಂತೆ ವರ್ತಿಸಬೇಕು, ಅಂತೂ
ಸಲ್ಲೇಖನವ್ರತ ಯಶಸ್ವಿಯಾಗಬೇಕು.

ಅಧ್ರುವ, ಅಶರಣ, ಏಕತ್ವ, ಅನ್ಯತ್ವ, ಸಂಸಾರ, ಲೋಕ, ಅಶುಚಿತ್ವ, ಆಸ್ರವ,
ಸಂವರ, ನಿರ್ಜರ, ಧರ್ಮ, ಬೋಧಿದುರ್ಲಭಗಳೆಂಬ ದ್ವಾದಶ ಅನುಪ್ರೇಕ್ಷೆಗಳನ್ನು
ಭಾವಿಸುತ್ತ, ಸಲ್ಲೇಖನಾಪೂರ್ವಕವಾಗಿ ಇಚ್ಛಾಮರಣಿಯಾಗಿ, ಮರಣವನ್ನು ಗೆದ್ದು
ಸ್ವರ್ಗಮೋಕ್ಷಾದಿಗಳನ್ನು ಸಂಪಾದಿಸಬೇಕು.

ಹೀಗೆ ಶ್ರಾವಕಧರ್ಮದ ತಿರುಳು ಶಾಸ್ತ್ರಗಳಲ್ಲಿ ಉಲ್ಲೇಖಿತವಾಗಿದೆ. ಯತಿ
ಧರ್ಮ ಯೋಗ್ಯತೆಯಿಂದ ಹಿರಿದಾದರೂ, ಶ್ರಾವಕಧರ್ಮ ಪ್ರಯೋಜನದೃಷ್ಟಿಯಿಂದ
ಅತ್ಯಂತ ಮಹತ್ವದ್ದು. ಶ್ರಾವಕರಿಲ್ಲದೆ ಸಮಾಜರಚನೆ, ಅದರ ಪರಂಪರೆ, ಸ್ಥಿರತೆ,
ಲೌಕಿಕ ಜೀವನದ ಬಂಧುರತೆ, ಸಾರ್ಥಕತೆ ಸಾಧ್ಯವಿಲ್ಲ. ಜಿನಮಂದಿರಗಳನ್ನು,
ಶಾಸ್ತ್ರಗಳನ್ನು, ಮುನಿಗಳನ್ನು ಶ್ರಾವಕರಲ್ಲದೆ ಇನ್ನಾರು ಸಂರಕ್ಷಿಸಬಲ್ಲರು ? ಮನೆ,
ಸಮಾಜ, ದೇಶಗಳ ಬಂಧನದಲ್ಲಿ ಅನ್ಯಾಯವಾಗದಂತೆ ಅಹಿಂಸಾತ್ಮಕವಾಗಿ ಸತ್ಯದ
ಬಲವನ್ನು ಬಿಡದೆ, ಅಸತ್ಯ-ಅನ್ಯಾಯಗಳ ವಿರುದ್ಧ ಸಂತತ ಹೋರಾಟ ನಡೆಸುತ್ತ,
ಹದವರಿತು ಕ್ರಮಾನುಶೀಲನಾಗಿ ಬದುಕುವ ಮತ್ತು ಬದುಕನ್ನು ತೋರಿಸುವ
ಪ್ರಚಂಡ ಸತ್ವಶಾಲಿ ಗುಣಗಳು ಶ್ರಾವಕನಿಗೆ ಮಾತ್ರ ಮೀಸಲಾಗಿವೆ. ಲೌಕಿಕ-ಪಾರ
ಲೌಕಿಕಗಳೆರಡನ್ನೂ ತೂಗಿಸಿಕೊಂಡು ಪರಮ ಉಪಕಾರಿಯಾಗಿದ್ದು, ಜೀವನ ಸಾರ್ಥಕ
ಗೊಳಿಸುವ ಶ್ರೇಷ್ಠ ಸಾಧನವೆ ಶ್ರಾವಕಧರ್ಮ. ಮರಣದಲ್ಲಿ ಮುನಿಗಳು ಸಾಧಿಸುವು
ದಾವನ್ನು ಶ್ರಾವಕನೂ ಸಾಧಿಸಬಲ್ಲ. ಮರಣಕ್ಕೆ ಎಲ್ಲರೂ ಸಮಾನರು. ಒಂದು
ದೃಷ್ಟಿಯಿಂದ ಶ್ರಾವಕನು ಗೃಹಸ್ಥ ಮುನಿಯೇ ಆಗಿರುತ್ತಾನೆ ಎಂದು ಹೇಳಬಹುದು.
ಮುನಿಧರ್ಮ ಎಲ್ಲರಿಗೂ ಸಾಧ್ಯವಿಲ್ಲ. ಶ್ರಾವಕ ಧರ್ಮ ಎಲ್ಲರಿಗೂ ಸಾಧ್ಯವಿದೆ.
ಕರ್ಮಾನುಗುಣವಾಗಿ ಮರಣ, ಸದ್ಗತಿ, ಸ್ವರ್ಗ, ಮೋಕ್ಷಾದಿಗಳು ಲಭಿಸುವವು. ಆದರೆ
ಪೌರುಷಕ್ಕೆ ಕೊನೆಯೆಲ್ಲಿ ? ಅನಂತವೀರ್ಯವೆ ಆತ್ಮನ ಸಹಜಗುಣ ತಾನೆ ? ಆದರಿಂದ
ಅನಂತದರ್ಶನ, ಅನಂತ ಜ್ಞಾನ, ಅನಂತಸುಖಗಳನ್ನು ಸಾಧಿಸಬಹುದು.

ಒಕ್ಕಲಿಗರ ಅನುಭವಗಳು

ಎಂ. ಎಂ. ಕಲಬುರ್ಗಿ

ಜೀವನೋಪಾಯಕ್ಕೆ ವ್ಯಕ್ತಿಗಳು ಅವಲಂಬಿಸಿರುವ ವೃತ್ತಿಗಳು ಅನೇಕ. ಈ ವೃತ್ತಿಗಳೊಂದಿಗೆ ವಾಂಶಿಕವಾಗಿ, ಪ್ರಾದೇಶಿಕವಾಗಿ ಬೆಳೆದ ಯಾವುದೇ ಜನಾಂಗ, ಅದಕ್ಕೆ ಸಂಬಂಧಪಟ್ಟ ಕೆಲವು ಪರಮಸತ್ಯಗಳನ್ನು ಕಂಡುಹಿಡಿಯುತ್ತದೆ. ಗಾದೆಮಾತುಗಳಂತೆ ಅವುಗಳ ಚಲಾವಣೆಯನ್ನು ಸಾರ್ವತ್ರಿಕಗೊಳಿಸುತ್ತದೆ. ಸಾವಿರ ವರುಷಗಳ, ಸಾವಿರ ಅನುಭವಗಳ ಘನೀಭೂತವೆನಿಸುವ ಇವುಗಳ ಸಂಗ್ರಹಕಾರ್ಯ ಜಾನಪದದ ಪ್ರಮುಖ ಅಧ್ಯಯನಗಳಲ್ಲಿ ಒಂದು. ಇಲ್ಲಿ ಸಂಗ್ರಹಿಸಿದುವು ಉತ್ತರ ಕರ್ನಾಟಕದ ಒಕ್ಕಲಿಗನ ಅನುಭವಗಳು.

೧. ಮಳಿ ಬಂದರ ಕೆಟ್ಟಿಲ್ಲ, ಮಗ ಉಂಡರ ಕೆಟ್ಟಿಲ್ಲ.

೨. ಮುಂಜಾನೆ ಬಂದ ಮಳಿಯಲ್ಲ, ಮಧ್ಯಾಹ್ನ ಬಂದ ಅಳಿಯನಲ್ಲ.

೩. ಅಶ್ವಿನಿ ಮಳಿಯಾದರ ಅಶನಕ್ಕ ನೆಲೆಯಿಲ್ಲ.

೪. ಭರಣಿ ಮಳಿಗಿ ಬಿತ್ತ ಬಿತ್ತಿ, ಆರಿದ್ರಾ ಮಳಿಗಿ ಹರಗಿ ಹೊಡವರ ಹೇಳಿದಷ್ಟು ಕಾಳು ಕೊಡತಾದ.

೫. ರೋಣಿ ಮಳಿ ಬಂದರ ಓಣೆಲ್ಲ ಜೋಳ.
(ರೋಣಿ ಮಳಿಗಿ ಜೋಳ ಬಿತ್ತಿದರ ಓಣಿತುಂಬ ಜೋಳ).

೬. ಮೃಗ ಮಿಂಚಬಾರದು, ಆರಿದ್ರ ಗದ್ದರಿಸಬಾರದು.

೭. ಮಿರಗ. ಕಳ್ಳಿ ಚಾಟಿಗಿ ಒರಗ.

೮. ಆದರ ಆರಿದ್ರ. ಆಗದಿದ್ರ ದರಿದ್ರ.

೯. ಆರದ್ರಿ ಮಳಿಯಾದರ ಆಸು ಹುಬ್ಬಿನ ತನಕ ನೀರು.
ಆಗದಿದ್ರ ಗುಬ್ಬಿಪುಚ್ಚ ತೊಯ್ಯಾದಿಲ್ಲ.

೧೦. ಆರಿದ್ರಿ ಮಳಿ ಆದಾಗ ಖರೆ (ಸತ್ಯ).
ಹಿರಿ ಸೊಸಿ ನಡದಾಗ ಖರೆ (ಸತ್ಯ).

೧೧. ಆರಿದ್ರಿ ಗದ್ದರಿಸಿದರ ಮುಂದೆ ಆರು ಮಳಿ ಇಲ್ಲ.

೧೨. ಆರಿದ್ರಿ ಮಳಿಯಲ್ಲಿ ಅರೆದು ನೆಟ್ಟರೂ ಬದಕತದ

೧೩. ಆರದ್ರಿ ಮಳಿಗಿ ಗಿಡ ಹಚ್ಚಿದರ, ಆರು ಕಾಯಿ ಹೆಚ್ಚು.

೧೪. ಆಶ್ಲೇಷ ಮಳಿ ಬಂದರ ಆಸರ ಮಾಡತದ.

೧೫. ಆದರ ಮಗಿ, ಆಗದಿದ್ದರ ಹೊಗಿ. (ಬಂದರ ಮಗಿ ಬರದಿದ್ದರ ಹೊಗಿ).

೧೬. ಬಂದರ ಹುಬ್ಬಿ, ಬರದಿದ್ದರ ಗುಬ್ಬಿ ಪುಚ್ಚ ತೊಯ್ಯುದಿಲ್ಲ.

೧೭. ಉತ್ತರಿ ಬಿತ್ತರಿ.

೧೮. ಉತ್ರಿಗಿ ಬಿತ್ತರಿ, ಶಿವರಾತ್ರಿಗಿ ಕಿತ್ತರಿ.

೧೯. ಉತ್ತರಿ, ತಾಳ ಕೆತ್ತರಿ.

೨೦. ಆದರ ಹಸ್ತಿ, ಆಗದಿದ್ರ ಹಲ್ಲ ಕಿಸ್ತಿ.

೨೧. ಚಿತ್ತಿ ಮಳಿ ಚಿತ್ತಬಂದಾಗ ಹೊಡಿತದ (ಅದಕಾಗಿ 'ಕುರುಡು ಚಿತ್ತಿ' ಎಂದು ಇದಕ್ಕೆ ಹೆಸರು).

೨೨. ಸ್ವಾತಿ ಮಳಿಯಾದವ್ಯಾಲ ಯಾತರ ಮಳಿ.

೨೩. ಸ್ವಾತಿ ಮಳಿ ಹೇತೇನೆಂದರೂ ಬಿಡೂದಿಲ್ಲ.

೨೪. ಸ್ವಾತಿ ಮಳಿಯಾದರ ಸಾಲಗಿ ಸವ್ವಾಖಂಡುಗ ಹೆಚ್ಚು ಬೆಳಿ.

೨೫. ಸ್ವಾತಿ ಮಳೆಯಾಗದಿದ್ದರ ಹೆತ್ತಾಗ ಹಿಟ್ಟಿಲ್ಲ.

೨೬. ವಿಶಾಖ ಮಳಿ ಬಂದರ ವಿಷ ತೊಳಿತಾರ.

೨೭. ಕುಡ್ಡಿ ಮಳಿ ಅಲ್ಲ, ಹೊನ್ನಿಕುಕ್ಕ ಬೆಳಿಯಲ್ಲ.

೨೮. ಮಳಿಯುಪಾ, ಆದ್ರ ಬೆಳಿಯುಪಾ.

೨೯. ಕಲಬುರಗಿ ದಿಕ್ಕಿಗಿ ಮಿಂಚಿದರ ಕರಕಟ್ಟುವರಾಗ ಮಳಿಬರತದ.

೩೦. ಮಳಿ ಹೋದ ಕಾಲಕ್ಕ ಕುಂಬಾರದಿಕ್ಕಿಗೆ (ನೈಋತ್ಯ) ಮಿಂಚಿದರ ಮಳಿ ನಿಶ್ಚಿತ.

೩೧. ಅತಿ ಮಳಿಯಾದಾಗ ಕುಂಬಾರದಿಕ್ಕಿಗೆ (ನೈಋತ್ಯ) ಮಿಂಚಿದರ ಮಳಿ ಅನಿಶ್ಚಿತ.

೩೨. ಅಸಲಿ ಮಳಿಗಿ ಶಿಶು ಬೆಟ್ಟಯೇರ್ತದ.

೩೩. ಹತ್ತಿ ಹೊಲದಾಗ ಮುತ್ತಿನ ಗಿಡ ಇದ್ದರೂ ಕಿತ್ತಿ ಒಗಿಬೇಕು.

೩೪. ಹತ್ತಿ ತೆರದು ಹೊಡಿ. ಜೋಳ ಮುರದ ಹೊಡಿ (ಎಡೆ ಹೊಡೆಯುವುದು)

೩೫. ನನ್ನ ನೀರಾಗ ನಿಂದರಸಿದರ ನಿನ್ನ ಊರಾಗ ನಿಂದರಸತೀನಿ (ಬಾಳೆ ಹೇಳುತ್ತದೆ)

೩೬. ಡೋಣಿ ಬೆಳೆದರ ಓಣೆಲ್ಲ ಜೋಳ.

೩೭. ಹತ್ತಿಗಿ ಹತ್ತು ಕುತ್ತ.

೩೮. ಬಡವರಿಗೆ ಬಾಳೆ, ಬಲ್ಲಿದವರಿಗೆ ಕಬ್ಬು.

೩೯. ಬಾಳೆಯನ್ನು ಆಳವಾಗಿ ಹೂಳು, ತೆಂಗನ್ನು ತೇಲಿಸಿ ಹಾಕು.

೪೦. ತೆಂಗು ಬಡತನದ ಹಿಂಗು.

೪೧. ನನ್ನ ಮುಳುಗಿಸು, ನಿನ್ನ ತೇಲಿಸುವೆ.
೪೨. ನನ್ನ ತೇಲಿಸು, ನಿನ್ನ ಮುಳುಗಿಸುವೆ } (ಬತ್ತ ಹೇಳುತ್ತದೆ).

೪೩. ಕವಳಿ (= ಬತ್ತ) ಹೊಡಿ ಹಿರ‍್ಯಾಗ ಹೊಳಿ ನುಂಗತೀನಿ ಅಂತಾದ.

೪೪. ಮೂರು ವರ್ಷ ಬೆಳೆಸಿದರ, ನೂರು ವರ್ಷ ಬದಕಸತದ (ಎಲೆಬಳ್ಳಿ)

೪೫. ಬಾಳೆ ಕೊಯ್ದು ಹಾಳಾಯ್ತು, ಎಲೆ ಕೊಯ್ಯದೆ ಹಾಳಾಯ್ತು.

೪೬. ಸೇಂಗಾ ಬಿತ್ತದವ ಮಂಗ್ಯಾ ಅಂತ.

೪೭. ಹಸಿ ಹಣ್ಣ ಮಾರಬೇಕು, ಬಿಸಿ ಬೆಲ್ಲ ಮಾರಬೇಕು.

೪೮. ಅಂಗೈ ಹಾಗೆ ಹೊಲ ಮಾಡಿದರ, ಮುಂಗೈ ತುಂಬ ತುಪ್ಪ.

೪೯. ಮಾಗಿಯಾದ ಹೊಲ ಬೀಗಿ ಬೆಳೆದೀತು.

೫೦. ಹದ ನೋಡಿ ಹರಗು, ಬೆದಿನೋಡಿ ಬಿತ್ತು.

೫೧. ಅಡ್ಡ ಹರಗಬೇಕು, ಉದ್ದ ಬಿತ್ತಬೇಕು.

೫೨. ಒತ್ತಿ ಬಿತ್ತಬೇಕು, ಹತ್ತಿ ಹರಗಬೇಕು.

೫೩. ಆಡವು ಕೆಟ್ಟು ಹೋಯಿತು, ಅಂಗಲ ಕೊಟ್ಟು ಹೋಯಿತು.

೫೪. ಗಂಟಿ ಭೂಮಿಗೆ ರಂಟೆಯೇ ಮದ್ದು.

೫೫. ಹಾಕೊ ಗೊಬ್ಬರ, ನೋಡು ಅಬ್ಬರ.

೫೬. ಊಟ ಹಾಕಿದ ಮನಿ ಕೆಡೂದಿಲ್ಲ, ಗೊಬ್ಬರ ಹಾಕಿದ ಹೊಲ ಕೆಡೂದಿಲ್ಲ.

೫೭. ಬೆಳಿಬಂದ ಹೊಲನೋಡು, ಮಾಲಿಬಂದ ಹೆಣ್ಣ ನೋಡು.

೫೮. ಎರಿ, ದೊರಿ.

೫೯. ಊರಿಗೆ ಕೆರಿಯಾದರೂ ಇರಬೇಕು, ಎರಿಯಾದರೂ ಇರಬೇಕು.

೬೦. ತ್ವಾಟ ಉಳ್ಳವಗ ಕಾಟ ಇಲ್ಲ.

೬೧. ಪಾಟಾ ಬಿಟ್ಟರೆ ತ್ವಾಟ
ತ್ವಾಟಾ ತ್ವಾಟಿ ಸುಲಿತಂತ
ಮುದ್ದಿ ತಿಂದು ಗದ್ದೆ ಗೆಯ್ಯಬೇಕು.

೬೨. ಎತ್ತ ಇಲ್ಲದ ಮನಿಗಿ ಎದಿ ಇಲ್ಲ.

೬೩. ಎತ್ತ ಎದಿನೋಡಿ ಖರಿದಿಸು, ಆಕಳ ಕುಂಡಿ ನೋಡಿ ಖರೀದಿಸು.

೬೪. ಹಳಿ ಎತ್ತ ಹೊಳ್ಯಾಗ ಹೂಡಿ ನೋಡು.

೬೫. ಕರಿ ಎತ್ತ ಅಲ್ಲ, ಕರ್ಲ ಹೊಲ ಅಲ್ಲ.

೬೬. ಕರಿ ಬಾಯಿ ಎತ್ತ ಇರಬಾರದು, ಕಾಡಿಗಣ್ಣಿನ ಸೊಸಿ ಇರಬಾರದು.

೬೭. ಕರಕಿ ಹೊಲ, ಕರಿಯೆತ್ತ, ಕಾಡಿಗೆಣ್ಣಿನ ಸೊಸಿ ಇದ್ದರ ಬಡತನ ತಪ್ಪದು.

೬೮. ಕರಕಿ ಹೊಲ, ನೆರಕಿ ಮನಿ, ಕಿರಿಕಿರಿ ಹೆಣ್ತಿ ಇದ್ದರ ಬಡತನ ತಪ್ಪದು.

೬೯. ಕರಕಿ ಹೊಲ ಇರಬಾರದು, ಬೆರಕಿ ಹೆಂಡತಿ ಇರಬಾರದು.

೭೦. ಬೀಳ ಹೊಲದ ಮಗ್ಗಲ ಹೊಲ ಮಾಡಬಾರದು, ಹಾಳ ಮನಿ ಮಗ್ಗಲ ಮನಿ ಮಾಡಬಾರದು.

೭೧. ಹೊಲ ಮಾಡಲಾರದೆ ಹೋಯ್ತು, ಮನಿ ನೋಡಲಾರದೆ ಹೋಯ್ತು

೭೨. ಪೋರೀನ ನಂಬಿ ಬ್ಯಾರ್ಯಾಗಬಾರದು, ಹೋರೀನ ನಂಬಿ ಹೊಲಮಾಡಬಾರದು.

೭೩. ಹುಡುಗ ಹೊಲ ಮಾಡಲಿಲ್ಲ, ಹುಡಗಿ ಮನಿಮಾಡಲಿಲ್ಲ.

೭೪. ಹೊತ್ತು ಮುಳಗಿ ಹೊಲಕ ಹೋಗಬ್ಯಾಡ, ಮಕ್ಕಳ ಕರಕೊಂಡು ಜಾತ್ರಿಗಿ ಹೋಗಬ್ಯಾಡ,

೭೫. ಕೊಂಡವಾಡಕ ಹಾಕು ದನ ಇರಬಾರದು, ದಂಡ ಕೊಡುವ ಮಗ ಇರಬಾರದು.

೭೬. ಹಳ್ಳದ ಹತ್ತರ ಹೊಲ ಇರಬೇಕು, ಮೆಳ್ಳಗಣ್ಣಿನ ಸೊಸಿ ಇರಬೇಕು.

೭೭. ಹಳ್ಯಾಗ ಹೊಲ ಇರಬೇಕು, ಪ್ಯಾಟ್ಯಾಗ ಮನಿ ಇರಬೇಕು.

೭೮. ಅಳಿಯ ಮಾವ ಎತ್ತು, ಬನ್ನಿ ನಗ, ಮೆಳ್ಳಗಣ್ಣಿನ ಸೊಸಿ, ಮನಿ ಮಗನ ಒಕ್ಕಲತನ ಇದ್ದರ ಬಡತನ ಇಲ್ಲ.

೭೯. ಹಸಿಯಾದಾಗ ಬಿತ್ತು. ಹಸಿವಾದಾಗ ಉಣ್ಣು, ಗಾಳಿಬಿಟ್ಟಾಗ ತೂರು.

೮೦. ಮಳಿ ಬರೂದಿಲ್ಲಂತ ಕಂಬಳಿ ಬಿಟ್ಟು ಹೋಗಬಾರದು,
ಕೆಸರಾಗ್ಯದಂತ ಮೆಟ್ಟ ಬಿಟ್ಟು ಹೋಗಬಾರದು,
ಹಸಿವಾಗೂದಿಲ್ಲಂತ ರೊಟ್ಟಿ ಬಿಟ್ಟು ಹೋಗಬಾರದು.

೮೧. ಬರಕ ಬಾರಿ ಕಾಯಿ, ಸುಕಾಲಕ ಉಣಚಿ ಕಾಯಿ.

೮೨. ಕಾವಲಿಯೊಳಗಿನ ಕಡ್ಡಿ ಖಂಡಗ ನೀರ ಕೆಡಸಿತು.

೮೩. ಮಂಡಲಕ ಇಟ್ಟಂಗಿ ಬಿದ್ದರ ಖಂಡಗಕ ಐದು ಚೀಲ ಕಡಮಿ.

೮೪. ಆಷಾಢ ಗಾಳಿ ಬೀಸಿಬೀಸಿ ಹೊಡ್ಯಾಗ ಹೇಸಿ ನನ್ನ ಜೀವ—
ಹೆಣ್ಣಾಗಬಾರದ ಅಂತಿದ್ದ (ಒಕ್ಕಲಿಗ)

೮೫. ಕಾರ ಹುಣ್ಣಿವಿ ಕರಕೊಂಡು ಬಂತು, ಉಗಾದಿ ಉಡಕೊಂಡು ಹೋಯ್ತು.

೮೬. ಎತ್ತು ಎರಿಗೆಳೆದರ ಕ್ವಾಣ ಕೆರಿಗೆಳೀತು.

೮೭. ಹನಿ ಹನಿ ಕೂಡಿದರ ಹಳ್ಳ, ತೆನಿ ತೆನಿ ಕೂಡಿದರ ರಾಶಿ.

೮೮. ಕೋಟಿ ವಿದ್ಯೆಗಳೊಳಗೆ ಮೇಟಿ ವಿದ್ಯೆಯೆ ಮೇಲು.

೮೯. ಹಾರುವ ಮಾಡುವುದು ಹೊಟ್ಟಿಗಿ. ಒಕ್ಕಲಿಗ ಮಾಡುವುದು ಕಟ್ಟಿಗಿ,
ಮುಸಲ ಮಾಡೂದು ಬಟ್ಟಿಗಿ,

೯೦. ಹಾರೂನ್ನ ಬಾಳ್ಯಾಗ ಬಿಡಬ್ಯಾಡ, ಒಕ್ಕಲಿಗನ್ನ ಜಾಲ್ಯಾಗ ಬಿಡಬ್ಯಾಡ
(ಮುಸಲನ್ನ ಕೋಳ್ಯಾಗ ಬಿಡಬ್ಯಾಡ).

೯೧. ಊರ ಮುಂದ ಗಳೆ ಹೂಡಿದರ ಒಬ್ಬ ಕಡದ ಅಂತಾನ, ಒಬ್ಬ ಬಳೆದ ಅಂತಾನ.

೯೨. ಒಕ್ಕಲಿಲ್ಲದ ಊರ, ಮಕ್ಕಳಿಲ್ಲದ ಮನಿ ವ್ಯರ್ಥ.

೯೩. ಮುಗದಾಣೆಲ್ಲದ ಎತ್ತು .... ಬೇಡತಂತ.

೯೪. ಅಳಿಯ ಬಂದ ಮರುದಿನ ಮಗಳ ಮಾರಿ ನೋಡು,
ಮಳಿ ಬಂದ ಮರುದಿನ ಬೆಳಿ ಮಾರಿ ನೋಡು.

೯೫. ದಿಂಡ ಆಡಿದ ಹೊಲ ಚಂದ................ ಆಡಿದ .... ಚಂದ.

೯೬. ಬಡದ ಸೀತೆನಿ ತಿನಬೇಕು, ಹಡದ ಹೆಣ್ಣ......................ಬೇಕು.

ಇವಲ್ಲದೆ 'ಚಿತ್ತಿ ಬೆದೆ' 'ಪುಷ್ಯನ ಮಳಿ' 'ಜಾಡನ ಒಕ್ಕಲುತನ' ಎಂಬ ರೂಢಿ ಮಾತುಗಳು ಹಳ್ಳಿಹಳ್ಳಿಗಳಲ್ಲಿ ಕೇಳಿಬರುತ್ತವೆ.

ಸಂ. ೯೩, ೯೫ ಮತ್ತು ೯೬ ರ ಬಿಟ್ಟ ಸ್ಥಳಗಳಲ್ಲಿ ತೀರ ಅಶ್ಲೀಲ ಪದಗಳಿವೆ. ಹಳ್ಳಿಯಲ್ಲಿ ಹುಟ್ಟಿದವರಿಗೆ ಅವು ಪರಿಚಿತ.

ಪಂಪಭಾರತ ಪಾಠಾಂತರಗಳು

(ದ್ವಿತೀಯ ಹಾಗೂ ತೃತೀಯ ಆಶ್ವಾಸಗಳು)

ಹೇಮಲತಾ ಪದಕಿ

೨–೭. ಈ ಪದ್ಯದಲ್ಲಿ ಕವಿ ಅರ್ಜುನನ ಬಾಲಕೇಳೀ ವರ್ಣನೆಯನ್ನು ಮಾಡಿದ್ದಾನೆ. "ಬೇಡದುದಂ ಬೇಡುವ, ಪುಡಿಯಾಡುವ ತೊದಳೊದವೆ ನುಡಿವ ನಗಿಸುವ ಬಾಲಕ್ರೀಡೆ ಮುರಾರಿಯ ಬಾಲಕ್ರೀಡೆಯನನುಕರಿಪುದಾದುದರಿಕೇಸರಿಯ." ದೀಪಿಕೆಯಲ್ಲಿ ಡಾ. ಡಿ. ಎಲ್. ಎನ್. ಅವರು 'ಬೇಡಿದುದಂ ಬೇಡುವ ಎಂಬ ಪಾಠವನ್ನು ಸ್ವೀಕರಿಸಿದ್ದಾರೆ. ಇದಕ್ಕೆ ಬಯಸಿದ್ದನ್ನೇ ಬಯಸುವ, ಕೇಳಿದ್ದನ್ನೇ ಕೇಳುವ ' ಎಂಬ ಅರ್ಥಕೊಟ್ಟಿದ್ದಾರೆ. ಬೇಡಿದುದನ್ನೇ ಬೇಡಿದರೆ ಅದರಲ್ಲಿ ಯಾವ ವೈಶಿಷ್ಟ್ಯವೂ ಕಂಡುಬರುವುದಿಲ್ಲ. ಬೇಡದುದನ್ನು, ಕೊಡಲಸಾಧ್ಯವಾದುದನ್ನು ಬೇಡಿದರೆ ಮಾತ್ರ ಅದು ಆ ಮಗುವಿನ ವೈಶಿಷ್ಟ್ಯವನ್ನು ತೋರಿಸುತ್ತದೆ. ಆದ್ದರಿಂದ ಇಲ್ಲಿ ಪಂ. ಭಾ. ದಲ್ಲಿ ಸ್ವೀಕರಿಸಿರುವ ಪಾಠವೇ ಉಚಿತವಾದುದು. ದೀಪಿಕೆಯ ಪಾಠ ಅಷ್ಟು ಉಚಿತವೆನಿಸುವುದಿಲ್ಲ.

೨–೨೨. ಸೊಕ್ಕಿದ ಮದಗಜದಂತಿರ್ಪ ಮಾದ್ರಿಯನ್ನು ಪಾಂಡುರಾಜ ಅಪ್ಪಿಕೊಂಡು ತಾಪಸನ ಶಾಪ ಕಾರಣದಿಂದ ಮರಣಕ್ಕೀಡಾಗುತ್ತಾನೆ. ಆಗ ಮಾದ್ರಿ "ರಾಜ ಚಿಹ್ನಸೂಚಕ ಶ್ವೇತಛತ್ರವುಳ್ಳವನನ್ನು ಚಂದ್ರಕುಲತಿಲಕನನ್ನು ಹೀಗೆ ಅನ್ಯಾಯದಿಂದ ಕಾಡಿನಲ್ಲಿ ತಂದಿಕ್ಕುವುದೇ ಎಂದು ಹಲಬುತ್ತಾಳೆ. ಪಂ. ಭಾ. ದಲ್ಲಿ ಮತ್ತು ದೀಪಿಕೆಯಲ್ಲಿ 'ತಂದಿಕ್ಕುವುದೇ ' ಎಂಬ ಪಾಠವನ್ನು ಸ್ವೀಕರಿಸಲಾಗಿದೆ. ಇದಕ್ಕೆ ಇರುವ ಭಿನ್ನ ಪಾಠ 'ಕೊಂದಿಕ್ಕುವುದೇ '(ಘ§) ವಿಧಿ ಪಾಂಡುರಾಜನನ್ನು ಅಡವಿಯಲ್ಲಿ ಕೇವಲ ತಂದಿಕ್ಕಲಿಲ್ಲ. ಕೊಂದಿಕ್ಕಿತು. ಮಹಾರಾಜ ವಿಧಿಯ ಕೈವಾಡದಿಂದ ಅನಾಥನಂತೆ ಅಡವಿಯಲ್ಲಿ ಬಿದ್ದು ಸಾಯಬೇಕಾಯಿತು. ಆದ್ದರಿಂದಲೇ ಮಾದ್ರಿ ಉನ್ನತ ಧವಳಚ್ಛತ್ರಚ್ಛನ್ನ......ಅನ್ಯಾಯದಿಂದೀ ಪಳುವಿನೊಳೆನ್ನರಸನನಿಂತು ಕೊಂದಿಕ್ಕುವುದೇ ' ಎಂದು ರೋದಿಸುತ್ತಾಳೆ. ಆದ್ದರಿಂದ ಅರ್ಥದೃಷ್ಟಿಯಿಂದ ಘ§ ಪ್ರತಿಯ ಪಾಠ ಉಚಿತವೆನಿಸುತ್ತದೆ. ಇದಕ್ಕೆ ಬೆಂಬಲವಾಗಿ ನಿಲ್ಲುವ ಇನ್ನೊಂದು ಅಂಶವೆಂದರೆ ಘ§ ಪ್ರತಿ ಪಂಪ ಭಾರತಕ್ಕೆ ನಿಕಟವರ್ತಿಯಾದ ಪ್ರತಿ ಎಂಬ ಸರ್ವಗ್ರಾಹ್ಯ ತಿಳುವಳಿಕೆ.

೨–೨೬ ವಚನ. ಈ ವಚನದಲ್ಲಿ ಪಾಂಡುರಾಜನೊಡನೆ ಮಾದ್ರಿ ಸಹಗಮನ ಮಾಡಿದ ವಿಷಯ ಬರುತ್ತದೆ. "ಎಂದು ತಪೋವನದ ಮುನಿಜನಮುಂ ವನದೇವತಾ

ಜನಮುಂ ತನ್ನಣ್ಮಂ ಪೊಗೞೆ ಮಾದ್ರಿ ಪಾಂಡುರಾಜನೊಡನೆ ದಾಹೋತ್ತರದಂತೆ (?) ಕಿರ್ಚಿಂಗೆ ಕುಲದೊಳಂ ಚಲದೊಳಮಾವ ಕುಂದುಂ ಕುಂದುಮಿಲ್ಲದೆ......" ದೀಪಿಕೆಯಲ್ಲಿ ಪಂ. ಭಾ. ದಲ್ಲಿಯು ಹಾಗೆಯೇ 'ದಾಹೋತ್ತರ'ದ ಮುಂದೆ ಪ್ರಶ್ನಾರ್ಥಕ ಚಿಹ್ನೆ ಹಾಕಿ ಅದರ ಬಗ್ಗೆ ಯಾವ ಚರ್ಚೆಯನ್ನೂ ಮಾಡಿಲ್ಲ ಡಾ. ಡಿ. ಎಲ್. ಎನ್. ಅವರು. ಈ ವಿಷಯವಾಗಿ ಶ್ರೀ ಹಂಪನಾ ಅವರು 'ದಾಹೋತ್ತರ ಮತ್ತು ಪಾರುಪ' ಎಂಬ ಲೇಖನದಲ್ಲಿ ದೀರ್ಘವಾಗಿ ಚರ್ಚಿಸಿದ್ದಾರೆ.[೧] ದಾಹೋತ್ತರ ಎಂಬ ಪದ ಕ. ಪ್ರತಿಯಂ ಪದ. ಖ. ಗ. ಘ ಪ್ರತಿಗಳಲ್ಲಿ ದಾಹೋತ್ತರ ಎಂಬ ಪದವಿದೆ. ದಾಹ+ಉತ್ತರ ಎಂಬ ಎರಡು ಪದಗಳಿಂದಾದ ಸಮಾಸ ಪದ ದಾಹೋತ್ತರ. 'ದಾಹ' ಸಂಸ್ಕೃತ ಪದ. ದಾಹ ಎಂದರೆ ಸುಡುವುದು, ಉರಿ, ಜ್ವಾಲೆ, ಬೆಂಕಿ, ಶಾಖ, ಹತ್ತಿಕೊಂಡು ಉರಿಯುವುದು, [Burning] ಎಂಬ ಅರ್ಥಗಳಿವೆ.[೨] ಆದರೂ ದಾಹ ಪದಕ್ಕೆ ಬಾಯಾರಿಕೆ ತೃಷ್ಣೆ ಎಂಬುದೇ ಸಾಮಾನ್ಯವಾದ ಅರ್ಥ. ಇನ್ನೂ ಈ ಪದದ ಉತ್ತರಾರ್ಥವಾದ 'ಉತ್ತರ' ಎಂಬ ಪದ. ಇದೂ ಸಂಸ್ಕೃತದ ಶಬ್ದವೇ ಹೊರತು ದೇಶೀಯವಲ್ಲ. ಈ ಪದಕ್ಕೂ ಹಲವು ಅರ್ಥಗಳಿವೆಯಾದರೂ ದಾಟು, ನೆಗೆ, ಹಾದುಹೋಗು, to be Crossed over[೩], ಅಯ್ದುವುದು, going, proceeding ಎಂಬ ಅರ್ಥಗಳು ಇರುವುದನ್ನು ಕಾಣಬಹುದು.[೪]

ಈ ಅರ್ಥಗಳನ್ನಿಟ್ಟುಕೊಂಡು 'ದಾಹೋತ್ತರ'ದ ಪ್ರಯೋಗವನ್ನು ಗಮನಿಸಿದರೆ ಅದು ಉಚಿತವಾದ ಸ್ಪಷ್ಟವಾದ ಪ್ರಯೋಗವೆಂದು ಕಂಡುಬರುತ್ತದೆ. "ಮಾದ್ರಿ ಪಾಂಡುರಾಜನ ಜೊತೆಯಲ್ಲಿ ಸಹಗಮನ ಮಾಡಿದುದನ್ನು ಕವಿ ವಿಶಿಷ್ಟವಾದ ರೀತಿಯಲ್ಲಿ ಹೇಳಿದ್ದಾನೆ. ಕೆಂಪಾದ ಜ್ವಾಲೆಗಳಿಂದ ಹತ್ತಿಕೊಂಡು ಉರಿಯುತ್ತಿದ್ದ ಚಿತೆಯನ್ನು ಮಾದ್ರಿ ತೀರ ಸಹಜವಾಗಿ ಅಸಾಧ್ಯವಾದುದಲ್ಲವೆಂಬಂತೆ ಸುಲಭವಾಗಿ ಪ್ರವೇಶಿಸಿದಳಂತೆ. ಆಕೆಗೆ ಸಾವಿನ ಅಂಜಿಕೆಯಿಲ್ಲ. ಏಕೆಂದರೆ ಈ ಸಹಗಮನ ತನ್ನ ಪಾಲಿಗೆ ಅಪೂರ್ವವಾಗಿ ದೊರಕಿದ ಸೌಭಾಗ್ಯವೆನ್ನಿಸಿದೆ; ಅಲ್ಲದೆ ಹೀಗೆ ಕಿಚ್ಚನ್ನು ಪ್ರವೇಶಿಸುವುದರಿಂದ ದಿವದೊಳ್ ತನ್ನ ಪತಿಯ ಮನೋರಥವನ್ನು ಪೆಱಪುವೆನೆಂಬ ಆತ್ಮಪ್ರತ್ಯಯ ಬೇರೆ ಇದೆ. ಆದುದರಿಂದ ದಾಹೋತ್ತರದಂತೆ ಅಂದರೆ ಬೆಂಕಿಯನ್ನು ದಾಟುವಂತೆ ಮಾದ್ರಿ ಕಿಚ್ಚನ್ನು ಪ್ರವೇಶಿಸಿದಳು."[೫] ಹೀಗೆ ಅರ್ಥ ಸ್ಪಷ್ಟವಾಗಿರುವಾಗ ದಾಹೋತ್ತರ ಪದದ ಮುಂದಿರುವ ಪ್ರಶ್ನಾರ್ಥಕ ಚಿಹ್ನೆ ಅವಶ್ಯವಿಲ್ಲೆನಿಸುತ್ತದೆ.

೧.) ಈ ಲೇಖನ ಬರೆಯಲು ನನಗೆ ಅವಶ್ಯ ಬೇಕಿದ್ದ ತಮ್ಮ ಪ್ರಕಟಿತ ಲೇಖನಗಳನ್ನು ಕಳಿಸಿದ ಪ್ರೊ. ಹಂಪ ನಾಗರಾಜಯ್ಯ ಅವರಿಗೆ ಋಣಿಯಾಗಿದ್ದೇನೆ.

೨. ಕಿಟೆಲ್ ಕೋಶ. ಪು. ೭೮೪

೩. ಸಂಸ್ಕೃತ–ಇಂಗ್ಲೀಷ್ ನಿಘಂಟು–ಆಪ್ಟೆ. ಪು. ೧೦೧.

೪. ಕಿಟೆಲ್ ಕೋಶ. ಪು. ೨೨೧

೫. 'ದಾಹೋತ್ತರ ಮತ್ತು ಪಾರುಪ'–ಹಂಪನಾ (ಗುರುದೇವ–೧೯೩೪)

ಈ ವಚನವಲ್ಲಿಯೇ ಬರುವ ಇನ್ನೊಂದು ಸಮಸ್ಯೆ 'ಕಿರ್ಚಿಂಗೆ' ಎಂಬ ಪದದ ಬಗ್ಗೆ ಈ ಪದವನ್ನು ದೀಪಿಕೆಯಲ್ಲಿಯೂ ಹಾಗೆಯೇ ಇಡಲಾಗಿದೆ. ಕಿರ್ಚಿಂಗೆ ಎಂಬ ಪಾಠವನ್ನಿಟ್ಟುಕೊಂಡರೆ ಆ ವಾಕ್ಯದಲ್ಲಿ ಕ್ರಿಯಾಪದವೇ ಇಲ್ಲದಂತಾಗಿ ಅರ್ಥ ಹೊರಡುವುದಿಲ್ಲ. ಇದಕ್ಕೆ ಭಿನ್ನ ಪಾಠ 'ಕಿರ್ಚಂ ಪುಗೆ' (ಪ) ಈ ಪಾಠ ಸ್ವೀಕರಿಸಿದರೆ ಅರ್ಥ ಸ್ಪಷ್ಟವಾಗಿ ವಾಕ್ಯರಚನೆಯೂ ದೋಷದಿಂದ ಮುಕ್ತವಾಗುತ್ತದೆ. ಆದ್ದರಿಂದ ಪಂ. ಭಾ.ದ, ದೀಪಿಕೆಯ ಪಾಠಕ್ಕಿಂತ ಪರಿಷತ್ತಿನ ಪಾಠವೇ ಹೆಚ್ಚು ಉಚಿತವೆನಿಸುತ್ತದೆ.

೨–೩೪. ಈ ಪದ್ಯದಲ್ಲಿ ಅರಿಕೇಸರಿಯ ವಿದ್ಯಾಭ್ಯಾಸದ ವರ್ಣನೆಯಿದೆ. ಶುದ್ಧ ವರ್ಣಗಳನ್ನು ಹೇಳುವ 'ಸುದ್ದಗೆಯ ಸೂತ್ರ' ಆತನಿಗೆ ಒಂದೇ ಬಾರಿಗೆ ಬಂದು ಬಿಟ್ಟಿತು. ಅದಕ್ಕಾಗಿ ವಿಶೇಷ ಪ್ರಯತ್ನ ಮಾಡುವ ಅವಶ್ಯಕತೆಯೇ ಉಂಟಾಗಲಿಲ್ಲ. ಅಷ್ಟು ಹರಿತವಾಗಿತ್ತು ಆತನ ಬುದ್ಧಿಮತ್ತೆ. 'ಸುದ್ದಗೆಯೆ ಸೂತ್ರ' ಎಂಬ ಪಾಠವನ್ನು ಪಂ. ಭಾ.ದಲ್ಲಿ ಇಟ್ಟುಕೊಳ್ಳಲಾಗಿದೆ. ಸರ್ವ ಪ್ರತಿಗಳಲ್ಲೂ ದೊರೆಯುವ ಇನ್ನೊಂದು ಪಾಠ 'ಸುದ್ದಗೆಯ ಸೂತ್ರ'. ದೀಪಿಕೆಯಲ್ಲಿ ಕೂಡ ಇದೇ ಪಾಠವನ್ನೇ ಸ್ವೀಕರಿಸಲಾಗಿದೆ. ಹೀಗಾಗಿ ಸರಿಯಾದ ಅರ್ಥಕೊಡುವ 'ಸುದ್ದಗೆಯ ಸೂತ್ರ' ಎಂಬ ಸರ್ವ ಪ್ರತಿಗಳ ಪಾಠವೇ ಸ್ವೀಕಾರಾರ್ಹವೆನಿಸುತ್ತದೆ.

೨–೩೪ ವಚನ. ಈ ವಚನದಲ್ಲಿ ಬರುವ 'ಪಾಳಕಾಪ್ಯ' ಎಂಬ ಪಾಠದ ಬಗ್ಗೆ ಶ್ರೀ ಹಂಪನಾ ಅವರು 'ಕನ್ನಡನುಡಿ' (೨೭–೮) ಯಲ್ಲಿ ವಿವೇಚಿಸಿದ್ದಾರೆ. ಅದನ್ನೇ ಇಲ್ಲಿ ಉದ್ಧರಿಸಲಾಗಿದೆ. "ಅರ್ಜುನನು ಸಕಲ ವಿದ್ಯಾ ಪಾರಂಗತನಾದನೆಂದು ಪಂಪ ಕವಿ ವಿಸ್ತಾರವಾಗಿ ವಿವರಿಸುತ್ತಾ 'ಗಜಾಗಮಜ್ಞ ರಾಜಪುತ್ರ ಗೌತಮ ವಾದ್ವಾಕಿ ಪಾಳಕಾಶ್ಯಪ ಸುಪತಿ ಶ್ರೀಹರ್ಷಾದಿ ಪುರಾಣಪುರುಷವಿರಚಿತತುಂಗಳಪ್ಪ ಹಸ್ತಿಶಾಸ್ತ್ರಂಗಳೊಳ್' ಪರಿಣತನಾದನಂತೆ. ಬಹಳ ಹಿಂದೆಯೇ ಗಜಶಾಸ್ತ್ರ, ಅಶ್ವಶಾಸ್ತ್ರ ವಿಚಾರದಲ್ಲಿ ಪುರಾತನಾಚಾರ್ಯರಿಂದ ಕೃತಿಗಳು ರಚಿತವಾದಂತೆ ತಿಳಿದುಬರುತ್ತದೆ. ಇವುಗಳ ಅಭ್ಯಾಸದಿಂದ ರಾಜನಾಗುವವನು ಶಸ್ತ್ರವಿದ್ಯಾಪಾರಂಗತನಾದಂತೆ ಶಾಸ್ತ್ರವಿದ್ಯಾಪಾರಂಗತನೂ ಆಗಬೇಕಿತ್ತು. ಕನ್ನಡದ ಹಿರಿಯ ವಿದ್ವಾಂಸರಾದ ಆಚಾರ್ಯ ಡಿ.ಎಲ್.ಎನ್. ಅವರು, ಸು. ೮ ತಾಳೆಗರಿಗಳಿಂದ ಸಶಾಸ್ತ್ರೀಯವಾಗಿ ಸಿದ್ಧಪಡಿಸಿರುವ ವಡ್ಡಾರಾಧನೆಯೆಂಬ ಗದ್ಯಗ್ರಂಥ ಕೆಲವು ವರ್ಷಗಳಷ್ಟಾದರೂ ಪಂಪಪೂರ್ವ ಕೃತಿಯೆಂದು ಭಾಷಾದೃಷ್ಟಿಯಿಂದ ಅಭಿಪ್ರಾಯಪಟ್ಟಿದ್ದಾರೆ. ಹಲವು ದೃಷ್ಟಿಯಿಂದ ವಿಶಿಷ್ಟವಾದ ಆ ಗದ್ಯಗ್ರಂಥವಲ್ಲಿ ಪು. ೪,೧೨೮,೧೮೩ ಮೊದಲಾದ ಕಡೆಗಳಲ್ಲಿ 'ಪಾಳ(ಲ)ಕಾಪ್ಯಂ' ಎಂದೇ ಇದೆ. ಪಂ. ಭಾ.ದ ೧೮೯೮ ರ ಮೊದಲ ಮುದ್ರಣದ ಪ್ರತಿಯಲ್ಲೂ 'ಪಾಳಕಾಪ್ಯ' ಎಂದಿದೆ. ವಡ್ಡಾರಾಧನೆಯ ಆಧಾರದಿಂದ ಪಂಪನ ಕಾವ್ಯದಲ್ಲೂ ಪಾಳಕಶ್ಯಪ ವೆನ್ನುವುದನ್ನು ಪಾಳಕಾಪ್ಯ ಎಂದು ತಿದ್ದುವುದು ಉಚಿತವಾಗಿ ಕಾಣಿಸುತ್ತದೆ. ಗಜಶಾಸ್ತ್ರವನ್ನು ಬರೆದ ಪಾಳಕಾಪ್ಯನ ಹೆಸರೇ ಕ್ರಮೇಣ ಗಜಶಾಸ್ತ್ರಕ್ಕೆ ಅನ್ವಯವಾಯಿತು. ಔಷಧಿಯನ್ನು ಹೊಸದಾಗಿ ಕಂಡುಹಿಡಿದ ವಿಜ್ಞಾನಿಯ ಹೆಸರನ್ನೇ ಆ ಔಷಧಿಗೆ ಇಡುವಂತೆ."

೨-೯೬. ಧೃತರಾಷ್ಟ್ರನ ಮಾತಿಗೆ ಒಪ್ಪಿಕೊಂಡು ಪಾಂಡವರೈವರೂ ಗಂಗಾನದಿಯ ದಕ್ಷಿಣ ತಟದಲ್ಲಿರುವ ವಾರಣಾವತಕ್ಕೆ ಹೊರಡುತ್ತಾರೆ.

ನಡಪಿಯುಮೋದಿಸಿಯು ಬ।
ಲ್ವಿಡಿಯಿಸಿಯುಂ ಕೆಚ್ಚುವಿರ್ದ ಕೂರ್ವೆಗಳಿರ್ದೆಯುಂ ॥

ನಡೆ ಪಾಂಡುಸುತರಗಲ್ಕೆಗೆ ।
ನಿಡುಸುಯ್ದುರ್ ದ್ರೋಣ, ಭೀಷ್ಮ ಕೃಪ ವಿದುರರ್ಕಳ್ ॥

ಈ ಪದ್ಯದಲ್ಲಿ ೩ ನೆಯ ಪಾದದಲ್ಲಿರುವ ನಡೆ ಎಂಬ ಪದಕ್ಕೆ ನಡ (ಕ), ನಡೆ (ಖ), ನೆಡ (ಗ), ನಡ (ಘ) ಎಂಬ ಪಾಠಾಂತರಗಳಿವೆ. ಸ್ವೀಕೃತ ಪಾಠ ಯಾವ ರೀತಿ ಯಿಂದಲೂ ತಪ್ಪಲ್ಲ. ಆದರೂ ಆಚಾರ್ಯ. ಡಿ. ಎಲ್. ಎನ್, ಅವರು ಅದನ್ನು 'ನಾಟೆ' ಎಂದು ಮಾಡಿಕೊಂಡಿದ್ದಾರೆ. ಇದರಿಂದ ಒಂದು ಮಾತ್ರೆ ಹೆಚ್ಚಾಗಿ ಛಂದಸ್ಸಿನ ದೋಷವುಂಟಾಗುತ್ತದೆ. ಆದ್ದರಿಂದ ಪಂ, ಭಾ.ದ ಸ್ವೀಕೃತಪಾಠ ಉಚಿತ ಹಾಗೂ ಡಿ. ಎಲ್, ಎನ್. ಅವರು ಸ್ವೀಕರಿಸಿದ ಪಾಠ ಅನುಚಿತವೆನಿಸುತ್ತದೆ.

೩.೯. ಅರಗಿನ ಮನೆಯಿಂದ ಪಾರಾಗಿ ಪಾಂಡವರು ತೆಂಕಮೊಗದೆ ಪಯಣಂಬೋಗುತ್ತಾರೆ. ದಾರಿಯಲ್ಲಿ ಅವರು ಅನುಭವಿಸಿದ ತೊಂದರೆಗಳನ್ನು ವರ್ಣಿಸ ಲಾಗಿದೆ. ಅರಮನೆಯಿಂದ ಎಂದೂ ಹೊರಗೆ ಬಂದರಿಯದ ಅವರ ಮೃದು ಪಾದಗಳಿಗೆ ದಾರಿಯಲ್ಲಿನ ಕಲ್ಲುಗಳು, ಮಣ್ಣಿನ ಹೆಂಟೆಗಳು ನಟ್ಟು ಅವರು ತುಂಬ ಕಷ್ಟವನ್ನು ಅನುಭವಿಸುತ್ತಾರೆ, ಈ ಸಂದರ್ಭದಲ್ಲಿ ಬಂದೊದಗುವ ಸಮಸ್ಯೆ 'ತಡಕುಂ ಪಿಟ್ಟೆಯುಮೊತ್ತೆ' ಎಂಬ ಭಾಗದಲ್ಲಿ ಈ ಎರಡೂ ಪದಗಳಿಗೆ ಸಂದರ್ಭಕ್ಕೆ ಸರಿ ಹೊಂದುವಂಥ ಯಾವ ಅರ್ಥವೂ ಇಲ್ಲ. ಇದಕ್ಕೆ ಗ, ಘ. ಪ್ರತಿಗಳಲ್ಲಿ ಪಾಠಾಂತರಗಳು ಸಿಗುತ್ತವೆ. 'ಕಡಕುಂ' (ಗ. ಘ), 'ಪೆಟ್ಟೆಯುಂ' (ಘ). ಈ ಪಾಠಗಳನ್ನೇ ದೀಪಿಕೆ ಯಲ್ಲಿಯೂ ಇಟ್ಟುಕೊಳ್ಳಲಾಗಿದೆ. ಕಡಕು ಎಂದರೆ ಸಣ್ಣ, ಚೂಪಾದ ಕಲ್ಲುಗಳು. ಪೆಟ್ಟೆ ಎಂದರೆ ಮಣ್ಣಿನ ಹೆಂಟೆ ಎಂದು ಅರ್ಥ. ಇವೆರಡೂ ಸಂದರ್ಭಕ್ಕೆ ತಕ್ಕ ಅರ್ಥ ಗಳನ್ನು ಕೊಡುವುದರಿಂದ ಗ. ಘ. ಪ್ರತಿಯ ಪಾಠಗಳು ಉಚಿತವೆನಿಸುತ್ತವೆ.

೩-೩೬. ದ್ರೌಪದಿಯ ಸ್ವಯಂವರದ ಸುದ್ದಿಯನ್ನು ಕೇಳಿ ಪಾಂಡವರು ತಾವೂ ಅದರಲ್ಲಿ ಭಾಗವಹಿಸಲು ಪಾಂಚಾಲದೇಶಕ್ಕೆ ಹೋಗುತ್ತಾರೆ. ಈ ಪದ್ಯದಲ್ಲಿ ಪಾಂಚಾಲದೇಶದ ವರ್ಣನೆಯಿದೆ. ಪಾಂಚಾಲದೇಶವೆಂಬ ಆ ಇಳಾಸ್ತ್ರೀಗೆ ಪುಣ್ಯಕರವಾದ ನದಿ, ನದ, ನಗರ, ಅರಣ್ಯಗಳು ಆಭರಣವಾಗಿದ್ದವು. ಅಂಥ ಆಭರಣ ಗಳಿಂದ ಆ ಸ್ತ್ರೀ ಶೋಭಿಸುತ್ತಿದ್ದಳು. ಪಂ. ಭಾ. ದಲ್ಲಿ 'ಪುಣ್ಯನದೀ ನದ ನಗಲಾವಣ್ಯ...' ಎಂದಿದೆ. ಲಾವಣ್ಯ ಎಂಬ ಪಾಠಕ್ಕೆ ಗ. ಮತ್ತು ಘ. ಪ್ರತಿಗಳಲ್ಲಿ ರಾವಣ್ಯ ಎಂಬ ಭಿನ್ನ ಪಾಠವಿದೆ. ರಾವಣ್ಯ ಎಂಬ ಪಾಠವನ್ನಿಟ್ಟುಕೊಂಡರೆ ಅರ್ಥ ವಾಗುವುದಿಲ್ಲ. ನದೀ, ನದ, ನಗ ಮುಂತಾದವುಗಳು ಆಭರಣಗಳು. ಆದರೆ ಲಾವಣ್ಯ

ಆಭರಣವಲ್ಲ. ಈ ಪಾಠವನ್ನೇ ಸ್ವೀಕರಿಸಿದರೆ ಅದೂ ಒಂದು ಆಭರಣವಾಗುತ್ತದೆ. ನದಿ, ನಗರ ಮುಂತಾದವುಗಳಿದ್ದಾಗ ಅರಣ್ಯವೊಂದಿಲ್ಲದ್ದು ಕೊರತೆಯೆನಿಸುವುದಿಲ್ಲವೇ? ದೀಪಿಕೆಯಲ್ಲಿ ಡಿ. ಎಲ್. ಎನ್. ಅವರು ಗ. ಮತ್ತು ಫ. ಪ್ರತಿಯ ಪಾಠವನ್ನೇ 'ರಾರಣ್ಯ' ಎಂದು ಪರಿಷ್ಕರಿಸಿಕೊಂಡಿದ್ದಾರೆ. ಅವರ ಪರಿಷ್ಕೃತ ಪಾಠ ಗ್ರಾಹ್ಯ, ಉಚಿತ, ಅರ್ಥಪೂರ್ಣವಾಗಿದೆ.

೩–೪೪. ಸಾಸಿರ ಪೊಂಗೆಯ್ದುಂ ಚಿಃ ।
ಕಾಸಟಮೆಂದೊಂದು ಲಕ್ಕಗೆಯ್ದುದಿದರ್ಕಂ

ಮಾಸೆರಮುಡಲೆಂದಧಿಕ ವಿ
ಳಾಸದಿನುಡಲಿಕ್ಕಿ ನೆಱೆಯೆ ಬಿಯಮಂ ನೆಱೆದಂ ॥

ಈ ಪದ್ಯದ ಅರ್ಥಮಾಡುವುದು ಸುಲಭಸಾಧ್ಯವಲ್ಲ. ದೀಪಿಕೆಯಲ್ಲಿ 'ಈ ಪದ್ಯದ ಅರ್ಥ ಭಾವಗಳು ಅಸ್ಪಷ್ಟವಾಗಿವೆ, ಕೆಲವು ಪಾಠದೋಷಗಳಿಂದ' ಎಂದು ಹೇಳಿ ಕೈಬಿಡಲಾಗಿದೆ. ಕಾಸಟ ಎಂದರೆ ಹತ್ತಿಯ ಬಟ್ಟೆ, ಮಾಸರ ಎಂದರೆ ಸುಂದರ. ಸೊಗಸು ಎಂಬ ಅರ್ಥಗಳನ್ನು ಡಿ. ಎಲ್. ಎನ್. ಅವರು ಕೊಟ್ಟಿದ್ದಾರೆ. ಆದರೆ ಪದ್ಯದ ಒಟ್ಟರ್ಥ ಕೊಡಲಾಗಿಲ್ಲ. ಇದರ ಅರ್ಥವನ್ನು ಹೀಗೆ ಮಾಡಬಹುದು–' ಸಾವಿರ ಹೊನ್ನು ಕೊಟ್ಟರೂ (ಖರ್ಚು ಮಾಡಿದರೂ) ಚಿ: ಹತ್ತಿಯ ಬಟ್ಟೆಯೆನಿಸಿ ಕೊಳ್ಳುತ್ತದೆ. ಆದ್ದರಿಂದ ಲಕ್ಷ ಹೊನ್ನು ವ್ಯಯಮಾಡಿ ದ್ರುಪದ ತನ್ನ ಬಿಯಮಂ ಮೆರೆದನು, ತನ್ನ ಅಂತಃಪುರದ ಸ್ತ್ರೀಯರು ಸುಂದರವಾದ, ಉತ್ತಮವಾದ ಬಟ್ಟೆಗಳನ್ನುಡಲಿಯೆಂದು'. ಇಲ್ಲಿ 'ಪೊಂಗೆಯ್ದು' ಎಂಬಲ್ಲಿ ಸ್ವಲ್ಪ ತೊಂದರೆ ಬರುತ್ತದೆ. ಗೆಯ್, ಕೆಯ್ ಪದಕ್ಕೆ ಕೊಡು ಎಂಬ ಅರ್ಥ ಸಿಗುವುದಿಲ್ಲ, ಮಾಡು ಎಂಬರ್ಥ ದೊರೆಯುತ್ತದೆ, ಡಿ. ಎಲ್. ಎನ್. ಅವರು ಇವನ್ನು 'ಪೊಂಗೆಯ್ದುದು' ಎಂದು ಮಾಡಿಕೊಂಡಿದ್ದಾರೆ. ಎಯ್ದುದು ಎಂದರೆ ಬರುವುದಿಲ್ಲ ಎಂದು ಅರ್ಥವಾಗಿ ಅವರು ಊಹಿಸಿದ ಅರ್ಥಕ್ಕೂ ಇಲ್ಲಿ ಕೊಟ್ಟ ಅರ್ಥಕ್ಕೂ ತುಂಬ ವ್ಯತ್ಯಾಸವುಂಟಾಗುತ್ತದೆ. ಇಲ್ಲಿ ಗೆಯ್ ಎಂಬ ಪದಕ್ಕೆ ಕೊಡು ಎಂಬ ಅರ್ಥವನ್ನು ಹಚ್ಚಲಾಗಿದೆ. ಬಹುಶ: ಇದು ದೂರಾನ್ವಯವಾಗುತ್ತದೆಯೋನೋ ? ಆದರೂ ಒಂದು ಪ್ರಯತ್ನ ಮಾಡಿ ನೋಡಲಾಗಿದೆಯಷ್ಟೇ.

೩–೪೪ ವಚನ. "ಅಂತು ಮೆಱೆದು ಕೂಸಂ ನೆಱೆಯೆ ಕೆಯ್ಗೆಯ್ಸಿಮೆಂದು ಮುನ್ನ[ಂ] ಕೆಯ್ಗೆ[ಯ್ಸುತಿರ್ದ] ತಱದ ಗುಱುಗೆಯರಪ್ಪಂತಃಪುರ ಪುರಂಧ್ರಿಯರಂ ಕರೆದು ಪೇೞ್ವುದುಮಂತೆಗೆಯ್ವೆಮೆಂದು"— ಈ ವಚನದಲ್ಲಿಯ 'ತಱದ ಗುಱುಗೆಯರಪ್ಪ' ಎಂಬ ಪಾಠಗಳಿಗೆ ದೀಪಿಕೆಯಲ್ಲಿ ಅರ್ಥದೊರೆಯುವುದಿಲ್ಲ. ತಱದ ಪದಕ್ಕೆ a manner, way ಎಂಬ ಅರ್ಥ ದೊರೆಯುತ್ತದೆ ಕಿಟೆಲ್ ಕೋಶದಲ್ಲಿ (ಪು. ೨೩೨). ಗುಱುಗೆ ಪದಕ್ಕೆ one who is an adept in a particular aspect, an expert

ಎಂಬ ಅರ್ಥ ಅದೇ ಕೋಶದಲ್ಲಿಯೇ ಸಿಗುತ್ತದೆ. (ಪು. ೫೯೨). ಈ ಎರಡೂ ಅರ್ಥಗಳು ಸಂದರ್ಭೋಚಿತವಾಗಿವೆ. ಅಲಂಕಾರ ಮಾಡುವ ಕೆಲಸದಲ್ಲಿ ನಿಷ್ಣಾತರಾದ, ಚತುರೆಯಾದ ಅಂತಃಪುರದ ಪುರಂಧ್ರಿಯರನ್ನು ದ್ರುಪದ ಕರೆದು ಚೆನ್ನಾಗಿ ಅಲಂಕಾರ ಮಾಡಿ ಎಂದು ಹೇಳುತ್ತಾನೆ. ಅವರು ಅಂತೆಗೆಯೆಮೆಂದು ಹೇಳುತ್ತಾರೆ.

೩–೨೦. ದ್ರೌಪದಿಯ ಸ್ವಯಂವರದ ನಂತರ ಸೋತ ರಾಜರು ಅರ್ಜುನನ ಮೇಲೇರಿ ಬರುತ್ತಾರೆ. ಅರ್ಜುನ ಅವರೆಲ್ಲರನ್ನೂ ಸೋಲಿಸುತ್ತಾನೆ. ಆ ವರ್ಣನೆ ಈ ಪದ್ಯದಲ್ಲಿದೆ. 'ಕೋಟ್ಗುದಿಗೊಂಡು' ಎಂಬ ಪಾಠವನ್ನು ಪಂ. ಭಾ.ದಲ್ಲಿ ಸ್ವೀಕರಿಸಲಾಗಿದೆ. ದೀಪಿಕೆಯಲ್ಲಿ ಡಿ.ಎಲ್.ಎನ್. ಅವರು ಇದನ್ನು 'ಕೋಳ್ಗುದಿಗೊಂಡು' ಎಂದು ಪರಿಷ್ಕರಿಸಿದ್ದಾರೆ ಊಹಾತ್ಮಕವಾಗಿ, "ಕೊಟ್ ಎಂದರೆ ಗಟ್ಟಿಯಾಗುವುದು, ಕೊಬ್ಬುವುದು, ಮಂದವಾಗುವುದು ಎಂದರ್ಥ. ಇದರಿಂದ ಕುದಿಯುವುದು ಎಂದರೆ ಯಾವ ಅರ್ಥವೂ ಆಗುವುದಿಲ್ಲ. ಕೊಳ್ ಎಂದರೆ ಹೊಡೆ, ತಗಲು ಎಂದರ್ಥ. ಈ ಧಾತುವಿನ ಭಾವನಾಮ ಕೋಳ್ ಎಂದರೆ ಹೊಡೆತ, ಪೆಟ್ಟು ಎಂದರ್ಥ. ಇದರಿಂದ ಕುದಿಗೊಂಡು ಎಂದರೆ ಬಾಣದ ಏಟಿನಿಂದ ವ್ಯಥಿತರಾಗಿ ಎಂದು ಸರಿಯಾಗಿ ಅರ್ಥವಾಗುತ್ತದೆ.[೬] ಆದ್ದರಿಂದ ಡಿ.ಎಲ್.ಎನ್. ಅವರು ಪರಿಷ್ಕರಿಸಿದ ಪಾಠ ಗ್ರಾಹ್ಯವೆನಿಸುತ್ತದೆ.

೩.೨೨. ಈ ಪದ್ಯದಲ್ಲಿ ದ್ರೌಪದಿಯ ದಾಸಿಯರು ಅವಳ ಲಜ್ಜೆಯನ್ನು ಹೋಗಲಾಡಿಸುವ ಪರಿಯನ್ನು ಅರ್ಜುನನಿಗೆ ಹೇಳಿದ ವಿಷಯ ಬರುತ್ತದೆ. ಇಲ್ಲಿ 'ಪರಿಜೆಯುಸಂಟು' ಎಂಬ ಪಾಠ ವಿಚಾರಯೋಗ್ಯವಾಗಿವೆ. ಡಿ. ಎಲ್. ಎನ್. ಅವರು ಇದರ ಬಗ್ಗೆ ವಿವೇಚಿಸುತ್ತ "ಇಲ್ಲಿ ಪರಿಚೆಯುಸಂಟು ಎಂಬ ಪದಗಳಿಗೆ ಅರ್ಥವಾಗುವುದಿಲ್ಲ. ಪರಿಜೆ ಇರಬೇಕೋ ಪರಿಚೆ ಇರಬೇಕೋ ? ಎರಡಕ್ಕೂ ಅರ್ಥ ದುರವಗಾಹವಾಗಿರುವುದರಿಂದ ನಿರ್ಣಯಿಸಲಾಗದು. ಪರಿಜು ಎಂದರೆ ಆಕಾರ, ರೂಪು ಎಂಬರ್ಥವಿದೆ. ಅದೇ ಶಬ್ದ ಇಲ್ಲಿರಬಹುದೇ ? ಆದಿ ಪುರಾಣ (೪–೪೧) ರಲ್ಲಿ ಪರಿಚೆ ಶಬ್ದದ ಪ್ರಯೋಗವಿದೆ. ಇದಕ್ಕೆ ಅರ್ಥ ಅಜ್ಞಾತವಿದೆ; ಪರಿಚೆ ಎಂದು ಸರಿಯಾದ ಪಾಠವಿರಬಹುದು ಎಂದು ಹೇಳಿ ಯಾವುದನ್ನೂ ನಿರ್ಣಯಿಸಿಲ್ಲ, ಪರಿಚೆ ಶಬ್ದಕ್ಕೆ ಡಿ. ಎಲ್. ಎಸ್. ಅವರು ಕೊಟ್ಟ ಎರಡು ಅರ್ಥಗಳೊಂದಿಗೆ ದೇಹ ಎಂಬ ಅರ್ಥವೂ ಇದೆ. ದ್ರೌಪದಿಯ ಕೆನ್ನೆಗಳನ್ನು ತೀವುವ. ಹಾರವನ್ನು ಹಿಡಿದು ನೋಡುವ ನೆವಗಳನ್ನು ಒಡ್ಡಲು ಅವರು ಅರ್ಜುನನಿಗೆ ಹೇಳುತ್ತಾರೆ. ಪರಿಜೆ ಎಂದರೆ ದೇಹವೆಂಬ ಅರ್ಥವಿರುವುದರಿಂದ ಪರಿಜೆಯುಸಂಟು ಎಂದರೆ ಅವಳ ದೇಹಸಾಮಿಪ್ಯವನ್ನು ಹೊಂದು ಎಂದು ಅರ್ಥೈಸಬಹುದು ಎನಿಸುತ್ತದೆ. ಅವಳ ಕೆನ್ನೆಗಳನ್ನು ತೀವುವ, ಹೂವನ್ನು ಸರಿಸುವ ನೆವಗಳಿಂದ ಆಕೆಯ ದೇಹವನ್ನು ಸಮೀಪಿಸಿ ಅವಳ ಲಜ್ಜೆ, ಭಯಗಳನ್ನು

೬. ಪಂಪಭಾರತ ದೀಪಿಕೆ –ಡಿ.ಎಲ್.ಎನ್.

ಹೋಗೆಲಾಡಿಸು ಎಂಬ ಒಟ್ಟರ್ಥ ಬರುತ್ತದೆ. ಆದ್ದರಿಂದ ಪರಿಜೆ ಎಂದರೆ ದೇಹ. ಈ ಅರ್ಥವೇ ಸಂದರ್ಭೋಚಿತವಾಗಿರುವುದರಿಂದ ಪಂ, ಭಾ. ದಲ್ಲಿ ಈಗ ಸ್ವೀಕರಿಸಿದ ಪಾಠ ಉಚಿತವಿದೆಯೆಂದು ತೋರುತ್ತದೆ.

೩–೮೧. ಈ ಪದ್ಯದಲ್ಲಿ ಚಂದ್ರೋದಯದ ವರ್ಣನೆ ಇದೆ. ಸೂರ್ಯನು ಮುಳುಗಿ ಸಂಜೆಗೆಂಪು ತೊಲಗಿದ ಮೇಲೆ ಮೂಡಿದ ಚಂದ್ರ ನೋಡುವ ಕಣ್ಣಿಗೆ 'ಪದಂಗಾಸಿದ ಪೊನ್ನ ಪುಂಜಿಯವೊಲ್' ಇತ್ತು ಎಂಬುದು ಪದ್ಯದ ಸ್ಥೂಲ ತಾತ್ಪರ್ಯ. ಇಲ್ಲಿ ಬರುವ 'ಪದಂಗಾಸಿದ ಪೊನ್ನಪುಂಜಿ' ಪದಗಳ ಸ್ವರೂಪದ ವಿವೇಚನೆಯನ್ನು ಆಚಾರ್ಯ ಡಿ. ಎಲ್. ಎನ್. ಅವರು 'ಪಟಂಗಾಸು' ಎಂಬ ಲೇಖನದಲ್ಲಿ ಮಾಡಿದ್ದಾರೆ. 'ಅಜಿತಪುರಾಣದ'ದ ಸೂರ್ಯೋದಯವನ್ನು ವರ್ಣಿಸುವ ಒಂದು ಪದ್ಯದಲ್ಲಿ ಬರುವ 'ಪಟಂಗಾಸಿನ ಪೊನ್ನ ಗಂಟೆಯ ವೊಲೊಪ್ಪಿದುದ್ಗತ...' ಎಂಬ ಪಾಠದ ಆಧಾರದಿಂದ ಇಲ್ಲಿಯ 'ಪಟಂಗಾಸಿನ ಪೊನ್ನ ಘಂಟೆಯವೊಲ್' ಎಂದಿರಬಹುದು ಎಂದು ಊಹಾತ್ಮಕವಾಗಿ ಪರಿಷ್ಕರಿಸಿದ್ದಾರೆ. ಇವರು ಊಹಿಸಿದ ಪಾಠ ಗ್ರಾಹ್ಯ ವೆನಿಸುತ್ತದೆ. "ಪಟಂಗಾಸು ಎಂದರೆ ಹಳೆಯ ಕಾಲದಲ್ಲಿ ವಾಡಿಕೆಯಲ್ಲಿದ್ದ ಒಂದು ಬಗೆಯ ನಾಣ್ಯ ಎಂಬರ್ಥವಿದೆ. ಪಟಂಗಾಸು ನಾಣ್ಯಕ್ಕೆ ಉಪಯೋಗಿಸುತ್ತಿದ್ದ ಚಿನ್ನ ಅತ್ಯಂತ ಚೊಕ್ಕವಾಗಿದ್ದಿತೆಂದು ತಿಳಿದುಬರುತ್ತದ. ಪಟಂಗಾಸಿನ ಪೊನ್ ಎಂದರೆ ಆ ನಾಣ್ಯಕ್ಕೆ ಉಪಯೋಗಿಸುತ್ತಿದ್ದ ಚಿನ್ನ, ಶುದ್ಧ ಚಿನ್ನ ಎಂಧರ್ಥ. ಇನ್ನು ಪಂಪನ ಪ್ರಯೋಗದಲ್ಲಿರುವ 'ಪಂಜಿಯವೊಲ್ ಎಂಬುದರ ವಿಚಾರ ಸಮೂಹ, ಮುದ್ದೆ ಇತ್ಯಾದಿ ಅರ್ಥಗಳನ್ನುಳ್ಳ ಸಂಸ್ಕೃತ ಶಬ್ದ 'ಪುಂಜ'ಕ್ಕೆ ಸಮಾಸದಲ್ಲಿ ಈ ಕಾರಾಂತತೆ ಯುಂಟಾಗುತ್ತದೆ. ಪುಂಜೀಕೃತ್ಯ, ಪುಂಜೀಭೂ ಎಂಬಂತೆ, ಪಂಪನ ಪ್ರಯೋಗ ದಲ್ಲಿರುವ 'ಪುಂಜಿ' ಸಮಾಸವೊಂದರ ಶಬ್ದವಾಗಿಲ್ಲ. ಅದ್ದರಿಂದ ಪುಂಜದವೊಲ್' ಎಂಬ ಪಾಠ ಅಲ್ಲಿರಬೇಕಿತ್ತು. ಹಾಗಿದ್ದರೂ ಸಮೂಹ, ರಾಶಿ ಇತ್ಯಾದಿ ಅರ್ಥಗಳನ್ನು ಅದಕ್ಕೆ ಮಾಡಿದರೆ ಪಟಂಗಾಸಿನ ಪೊನ್ನ ರಾಶಿ ಎಂದಾಗಿ ಅರ್ಥ ವಿಶದತೆಯುಂಟಾಗುವುದಿಲ್ಲ. ಪಂಪ ಭಾರತದ ಪ್ರತಿಕಾರರು ಯಾರೋ 'ಘಂಟೆ' ಎಂದು, ಮೂಲ ಪ್ರತಿಯಲ್ಲಿದ್ದಿರ ಬೇಕಾದ 'ಗಂಟೆಗೆ ಬದಲಾಗಿ ಬರೆದಿರಬೇಕೆಂದೂ ಅದನ್ನು ಅನಂತರದ ಪ್ರತಿಕಾರರು 'ಪುಂಜಿ' ಎಂದು ತಪ್ಪಾಗಿ ಓದಿಕೊಂಡು ಹಾಗೆಯೆ ಬರೆದಿರಬಹುದೆಂದು ಊಹಿಸ-ಬಹುದು. ಅದ್ದರಿಂದ 'ಪಟಂಗಾಸಿನ ಪೊನ್ನ ಗಂಟೆಯವೊಲ್' ಎಂಬ ಪಾಠವೇ ಇದ್ದಿರ ಬೇಕು.[೭]"

೩–೮೨. ಈ ಪದ್ಯದಲ್ಲಿ ದ್ರೌಪದಿ. ಅರ್ಜುನರ ಸಮಾಗಮವನ್ನು ವರ್ಣಿಸ ಲಾಗಿದೆ. ಈ ಸಂದರ್ಭದಲ್ಲಿ 'ನೋಟದೊಳಟ್ಟಜಂಬಡೆದು' ಎಂಬ ಪಾಠವನ್ನು ಪಂ. ಭಾ. ದಲ್ಲಿ ಸ್ವೀಕರಿಸಲಾಗಿದೆ. ಆದರೆ ಇದರ ಅರ್ಥ ಸಂದರ್ಭಕ್ಕೆ ಹೊಂದದೆ ತೀರ

---

೭. ಪಟಂಗಾಸು-ಪೀಠಿಕೆಗಳು ಲೇಖನಗಳು- ಡಿ. ಎಲ್. ನರಸಿಂಹಾಚಾರ್ಯ.

ವಿರುದ್ಧವಾಗುತ್ತದೆ. ಅೞ್ಕಜಂ ಎಂದರೆ ಅಸೂಯೆ, ದ್ವೇಷ ಎಂದರ್ಥ. ಕ, ಖ. ಗ, ಪತ್ರಿಕೆಗಳಲ್ಲಿ 'ಅೞ್ಕಱಂ' ಎಂಬ ಪಾಠವೇ ಇದೆ. ಈ ಪಾಠವನ್ನೇ ದೀಪಿಕೆಯಲ್ಲಿಯೂ ಸ್ವೀಕರಿಸಲಾಗಿದೆ. ಅೞ್ಕಱಂ ಎಂದರೆ ಪ್ರೀತಿ, ಪ್ರೇಮ ಆದ್ದರಿಂದ ದೀಪಿಕೆಯಲ್ಲಿ ಸ್ವೀಕರಿಸಲ್ಪಟ್ಟ ಪಾಠ, ಕ, ಖ, ಗ ಪ್ರತಿಗಳ ಪಾಠ ಉಚಿತವೆನಿಸುತ್ತದೆ. ●

(ಮುಂದುವರಿಯುವುದು).

ಅಯ್ಯಾವೊಳೆ ಐನೂರ್ವರು

ಚೆನ್ನಕ್ಕ ಎಲಿಗಾರ

ಒಂದು ದೇಶದ ಆರ್ಥಿಕ ವ್ಯವಸ್ಥೆ ಉತ್ತಮಗೊಳ್ಳಬೇಕಾದರೆ ಅದರ ಬೆನ್ನೆಲಬು ವ್ಯಾಪಾರ. ಇಂತಹ ಬೆನ್ನೆಲುಬಾಗಿದ್ದ ವ್ಯಾಪಾರಿತಂಡಗಳು ಭಾರತದ ಅನೇಕ ಕಡೆಗಳಲ್ಲಿ ಹರಡಿಕೊಂಡಿದ್ದು ಪ್ರಾಚೀನ ಕರ್ನಾಟಕ ಇದರಲ್ಲಿ ಅಗ್ರಸ್ಥಾನವನ್ನು ಪಡೆದಿದೆ.

ಕರ್ನಾಟಕದ ಶಾಸನಗಳಲ್ಲಿ ಕಂಡುಬರುವ 'ಅಯ್ಯಾವೊಳೆ ಐನೂರ್ವರು' ಎಂಬ ಪದ ವ್ಯಾಪಾರಿಸಂಘವೊಂದನ್ನು ಸೂಚಿಸುತ್ತದೆ.'[1] ಸುಮಾರು ೮ ನೆಯ ಶತಮಾನದಿಂದ ೧೬ ನೆಯ ಶತಮಾನದ ಪಶ್ಚಿಮಾರ್ಧದವರೆಗೆ ಈ ತಂಡದ ಉಲ್ಲೇಖ ಕಂಡುಬರುತ್ತದೆ. ಫ್ಲೀಟರ ಪ್ರಕಾರ ಈ ಅಂಶವನ್ನು ಉಲ್ಲೇಖಿಸುವ ಪ್ರಾಚೀನತಮ ಶಾಸನವೆಂದರೆ ೮ ನೆಯ ಶತಮಾನದ ಐಹೊಳೆಯಲ್ಲಿಯ ಲಾಡಖಾನ ದೇವಾಲಯದಲ್ಲಿದ್ದುದು.[2] ಆದರೆ ಇದು ಅಯ್ಯಾವೊಳೆ ಅಗ್ರಹಾರದ ಮಹಾಜನರ ಸೂಚನೆಯಾಗಿರಲೂ ಸಾಧ್ಯವಿದ್ದುದರಿಂದ ಅವರ ಹೇಳಿಕೆಯ ಬಗ್ಗೆ ಸಂದೇಹ ಉಳಿದುಕೊಳ್ಳುತ್ತದೆ.

ಉತ್ತರದಲ್ಲಿ ಕೊಲ್ಲಾಪುರದಿಂದ ದಕ್ಷಿಣದಲ್ಲಿ ಕೊಯಿಮತ್ತೂರು ತಿನ್ನವೆಲ್ಲಿಯವರೆಗೆ ಹರಡಿದ ಈ ಸಂಘದ[3] ಮೂಲಪಟ್ಟಣ ಅಯ್ಯಾವಟಿ,[4] ಅಯ್ಯಾವಳಿ.[5] ಅಯ್ವೊಳೆ,[6] ಆರ್ಯಾಪುರ,[7] ಅಯ್ಯಾಪೊಳಲ್,[8] ಅಯ್ಯಾಪೊಳಿಲ್,[9] ಅಯ್ಯಾವಳಿಯೂರ,[10] ಅಯ್ಯಾವಳಿಪುರ[11] ಎಂಬ ನಾಮಾಂತರಗಳಿಂದ ಗೋಚರಿಸುತ್ತದೆ. ಇದು ಯಾವುದೋ ಕಾಲದಲ್ಲಿ ಐನೂರು ಸದಸ್ಯರನ್ನೊಳಗೊಂಡು ಐಹೊಳೆಯಲ್ಲಿ ಅಸ್ತಿತ್ವಕ್ಕೆ ಬಂದಿರಬಹುದಾದ ಒಂದು ವ್ಯಾಪಾರಿಗಳಸಂಘ. ಇದರ ರೂಪರೇಷೆ ನಮಗೆ ತಿಳಿದು ಬಂದಿಲ್ಲ. ಈ ಸಂಘದ ಬಗ್ಗೆ ಬೇರೆಬೇರೆಯ ಗ್ರಾಮದಲ್ಲಿಯ ವರ್ತಕರಿಗೆ ತುಂಬ ಹೆಮ್ಮೆ. ಕಾರಣ, ಯಾವುದೇ ಊರಲ್ಲಿಯ ವರ್ತಕರು ತಾವು ಎಷ್ಟೇ ಜನರಿದ್ದರೂ ತಮ್ಮನ್ನು 'ಐಯಾವಳೆಯ ಐನೂರ್ವರು' ಅಂದರೆ ಅಯ್ಯಾವಳೆಯ ಐನೂರ್ವರ ಸಂಪ್ರದಾಯದವರು ಎಂದು ಕವಿಸಮಯ ರೀತಿಯಲ್ಲಿ ಕರೆದುಕೊಳ್ಳುತ್ತಾರೆ.

ಪ್ರಾಚೀನ ಕರ್ನಾಟಕದಲ್ಲಿ ಶಿವಮೊಗ್ಗ[12], ಹಾಸನ[13], ಚಿತ್ರದುರ್ಗ[14], ಬಳ್ಳಾರಿ[15], ಬಳ್ಳಿಗಾವೆ[16] ಇವು ಈ ಮೂಲಸಂಘದ ಹೆಸರು ಹೇಳುವ ತೀರ ಸುಪ್ರಸಿದ್ಧ ವ್ಯಾಪಾರಿಕೇಂದ್ರಗಳಾಗಿದ್ದವು.

'ಅಯ್ಯಾವಳೆ ಐನೂರ್ವರು' ಎಂಬಂತೆ 'ಬಣಜಿಗರಯ್ನೂರ್ವರ್[17]' 'ಗವಱೆಗಳೈನೂರ್ವರ್[18]' 'ಐನೂರ್ವರ್[19]' ಎಂಬ ಉಲ್ಲೇಖಗಳೂ ಅನೇಕ ಶಾಸನಗಳಲ್ಲಿ ಕಂಡುಬರುವುದುಂಟು. ಇವರ ವಿಷಯವಾಗಿ ಮುಮ್ಮುರಿದಂಡಂಗಳು, ಗವಱೆಗಳು, ಗಾತ್ರಿಗರು, ಬೀರರು, ಬೀರವಣಿಗರು, ಸೆಟ್ಟಿ, ಸೆಟ್ಟಿಗುತ್ತರು, ವೇಳೆಕಾರರು, ಅಂಕಕಾರರು, ಗಂದಿಗರು, ಗಾವುಂಡರು, ಗಾವುಂಡಸ್ವಾಮಿಗಳು[20] ಎಂಬ ಅನೇಕ ಉಲ್ಲೇಖಗಳು ಸಿಗುತ್ತವೆ. ಈ ಎಲ್ಲ ಪದಗಳ ನಿರ್ದಿಷ್ಟ ಅರ್ಥ ಹೇಳುವುದು ಇನ್ನೂ ಸಾಧ್ಯವಾಗಿಲ್ಲ. 'ಮುಮ್ಮುರಿದಂಡ' ಎಂಬುದು ಶಾಸನಗಳಲ್ಲಿ ಪದೇ ಪದೇ ಕಾಣಿಸಿಗುವ ಪದ. 'ಭಲ್ಲುಂಕಿದಂಡ ಹಸ್ತರು' ಎಂಬುದು ಈ ಐನೂರ್ವರ ಒಂದು ವಿಶೇಷಣ. ಇಲ್ಲಿಯ ಮುಮ್ಮುರಿದಂಡ, ಭಲ್ಲುಂಕಿದಂಡ ಇವು ಸಮಾನ ಪದಗಳೇ? ವಿಚಾರಿಸಬೇಕು. ಮುಮ್ಮುರಿ+ತಂಡ, ಮುಮ್ಮುರಿ+ದಂಡ ಇವುಗಳಲ್ಲಿ ಯಾವುದು ಸರಿಯೆಂದು ತೀರ್ಮಾನಿಸಬೇಕು.

ಮುಮ್ಮುರಿದಂಡ : ಕೇಶಿರಾಜನ ಪ್ರಕಾರ 'ಮುಮ್ಮುರಿ' ಎಂದರೆ 'ಕಾಯಿಸಿದ ಮರುಳು.'[21] ಅದರಂತೆ ಮೂರು ಸಲ ಮಣಿದುದೂ ಎಂದು ಇದಕ್ಕೆ ಇನ್ನೊಂದು ಅರ್ಥ. ಇವುಗಳನ್ನು ಇಲ್ಲಿಯ ಸಂದರ್ಭಕ್ಕೆ ಹೇಗೆ ಹೊಂದಿಸಬೇಕೋ ತಿಳಿಯದು. ಶೂರರೆಂದು ವರ್ಣಿತರಾದ ಈ ಮುಮ್ಮುರಿದಂಡಗಳು ಈ ವ್ಯಾಪಾರಿತಂಡದ ರಕ್ಷಣಾಪಡೆಯಾಗಿರಬೇಕು. ಯುದ್ಧದಲ್ಲಿ ಕಾಸಿದ ಮರಳು ಸುರಿಯುತ್ತಿದ್ದರೆಂದೋ, ಮೂರು ಸಲ ಮಣಿದ ದಂಡ ಹಿಡಿಯುತ್ತಿದ್ದರೆಂದೊ ಈ ಹೆಸರು ಬಂದಿರಬೇಕು.

ಗವಱೆಗಳು : ಬೇರೆ ವಾಹನಗಳನ್ನು ಬಳಸದೆ ವೃಷಭವನ್ನು ಮಾತ್ರ ವಾಹನ ಮಾಡಿಕೊಂಡು ವ್ಯಾಪಾರ ಮಾಡುತ್ತಿದ್ದ ವರ್ತಕತಂಡದವರು ಗವಱೆಗಳಾಗಿರಬಹುದು. ಗವಱೆ = ವೃಷಭ < ಬಸವ.

ಶಿವಭಕ್ತ ವೀರಾಗ್ರಣಿ । ಅಖಿಳ ದೇಸಿಗರ್ಗೆಲ್ಲಂ ॥
ಗವಱೆಗಳಾಭರಣ, ಭುವನದೊಳೆಂದು ತಾಯಿ ಭೂ ।
ಭುವನೋತ್ತಮನೆನಿಸಿ ಗವಱೆ ಮುದ್ದು ನೆಗಳ್ದಂ[22] ॥

ಎಂಬ ಶಾಸನೋಕ್ತ ಗವಱೆಗ ಮುದ್ದನ ವರ್ಣನೆಯಿಂದ ಈ ವರ್ಗದ ವ್ಯಕ್ತಿಗಳ ವ್ಯಕ್ತಿತ್ವವನ್ನು ಅರಿಯಬಹುದು.

ಗಾತ್ರಿಗರು : ತಮ್ಮ ಸರಕನ್ನು ತಲೆಯ ಮೇಲೆ ಹೊತ್ತುಮಾರುವ ಪಂಗಡಕ್ಕೆ ಸೇರಿದವರಾಗಿರಬಹುದು. ಗಾತ್ರ=ಶರೀರ.

ಬೀರವಣಿಗ : ಇವರಿಗೆ ವೀರವಣಿಕ, ಬೀರವಣಿಗ ಎಂಬ ಪದಗಳೂ ಬಳಕೆಯಾಗಿವೆ. ವ್ಯಾಪಾರನೈಪುಣ್ಯದ ಜೊತೆಗೆ ಶೌರ್ಯ ಸಾಹಸವನ್ನು ಗಳಿಸಿಕೊಂಡ ಸಮೂಹವಿದು. ಬಹು ಬೆಲೆಯುಳ್ಳ ಸರಕುಗಳನ್ನು ಸಾಗಿಸುತ್ತಿದ್ದ ಸಮಯದಲ್ಲಿ ಕಳ್ಳರ ಹಾವಳಿಯಿಂದಲೋ, ಪ್ರಾಣಭಯದಿಂದಲೋ, ಸೈನ್ಯವನ್ನು ಜೊತೆಯಲ್ಲಿ ಕರೆದುಕೊಂಡು ತಿರುಗುತ್ತಿದ್ದಿರಬಹುದು.

ವೀರವಣಿಗವೆಂಬುದು ವೀರಬಳೆಂಜುವಿನ ಮತ್ತೊಂದು ರೂಪ. ತಮ್ಮ ಧರ್ಮವನ್ನು ವೀರಬಣಂಜುಧರ್ಮವೆಂದು ಕರೆದುಕೊಂಡು, ತಾವೂ ಅದರ ಸಮುದ್ಧರಣರಾಗಿ, ಪ್ರತಿಪಾಲಿಪರಾಗಿ ನಾಡಿನತುಂಬ ಅದನ್ನು ವಿಸ್ತರಿಸುತ್ತಿದ್ದರು. ಬಹುಶಃ ಇದು ಮುಮ್ಮುರಿದಂಡಗಳಿಗೆ ಇರುವ ಇನ್ನೊಂದು ಹೆಸರಾಗಿರಬಹುದು. 'ಅಂಕಕಾರ' ಎಂಬುದೂ ಈ ವರ್ಗವನ್ನೇ ಸೂಚಿಸುತ್ತಿರಬಹುದು.

ಸೆಟ್ಟಿ, ಸೆಟ್ಟಿಗುತ್ತ: ಸಂಸ್ಕೃತ ಶ್ರೇಷ್ಠಿ ಪದದ ತಪ್ಪುವ ಸೆಟ್ಟಿ. ಈ ಸೆಟ್ಟಿಗಳ ಸಮೂಹ (=ಕುತ್ಸ)ವೇ ಸೆಟ್ಟಿಗುತ್ತ ಆಗಿರಬಹುದು.

ನೇಳಿಕಾರ: 'ವೇಲಾ' ಎಂದರೆ ಸಮುದ್ರತೀರ. ಹೀಗಾಗಿ ಇವರು ಸಮುದ್ರ ವ್ಯಾಪಾರಿಗಳಾಗಿರಬಹುದು.

ವಾಸುದೇವ ಖಂಡಳಿಮೂಳ[23] ಇವರ ವಂಶವಾಗಿದ್ದು, ಇವರು ಶ್ರೀ ವೀರನಾರಾಯಣ ಭಗವತಿ ಲಬುಧವರಪ್ರಸಾದರು[24], ಪರಮೇಶ್ವರಿಯ ಮಕ್ಕಳು[25] ಶ್ರೀ ಕಾಳಿಕಾದೇವಿ ಲಬ್ಧವರಪ್ರಸಾದರು[26], ಪಂಚಲೋಹಾಧಿಪತಿಗಳು[27], ಗವಜೇಶ್ವರ ದಿವ್ಯಚರಣಾಂಬುಜಾರಾಧಕರು[28] ಎಂಬ ಅನೇಕ ಹೆಸರುಗಳಿಂದ ತಮ್ಮನ್ನು ಕರೆದು ಕೊಳ್ಳುತ್ತಿದ್ದರು.

ಪ್ರತಿಯೊಂದು ಶಾಸನದಲ್ಲಿ 'ವೀರಬಳೆಂಜುಧರ್ಮ ಪ್ರತಿಪಾಳನ ವಿಶುದ್ಧ ಗುಡ್ಡಧ್ವಜ ವಿರಾಜಿತಾನೂನ' ಎಂಬ ವಾಕ್ಯಗಳು ಗುಡ್ಡಧ್ವಜವನ್ನು "ಈಶ್ವರ ಭಟ್ಟಾರಕನ ನೊಸಲಕಣ್ಣು ಚತುರ್ಭುಜಮುಮಂ ಬ್ರಹ್ಮರಟ್ಟಹಾಸಮುಮಂ ಭಗವತಿ ಗುನ್ಮಥಮುಮಪ್ಪ ತ್ರೈಳೋಕ್ಯವಾಕ್ಯವಪನಂಗಳ್ಮಂ ಸಾದಿಸುವ ಸಾಧಕನಂತೆ, ತ್ರೈಳೋಕ್ಯಮಂ ಸಾಧಿಸುವ ಗುಡ್ಡಶಾಸ್ತ್ರದವಯುವ ಲಕ್ಷಣಂಗಳನಱಿದು[30]" ಎಂಬ ವಾಕ್ಯಗಳು ಗುಡ್ಡಶಾಸ್ತ್ರದ ವಿಷಯ ತಿಳಿಸುತ್ತವೆ. ಈ ಗುಡ್ಡಶಾಸ್ತ್ರಕ್ಕೂ ಗುಡ್ಡ ಧ್ವಜಕ್ಕೂ ಯಾವ ಅಂತರವಿದೆಯೆಂಬುದು ತಿಳಿದುಬರುವುದಿಲ್ಲ. ಮತ್ತೊಂದು ಶಾಸನದಲ್ಲಿ "ಚಕ್ರಧರದತ್ತ ಚಕ್ರಧ್ವಜ ವಿರಾಜರುಂ*[31] ಎಂದು ಹೊಗಳಿರುವುದು ಕಂಡುಬರುವದುಂಟು. ಇದರಿಂದ ಇವರದು ಚಕ್ರಧ್ವಜವೋ ಗುಡ್ಡಧ್ವಜವೋ ಎಂಬ ಸಂಶಯವಿದೆ.

ಈ ವ್ಯಾಪಾರಿಗಳು ತಮ್ಮದೇ ಆದ ಒಂದು ಚಿಹ್ನವನ್ನು ಇಟ್ಟುಕೊಂಡಿದ್ದು, ಅದು ಮಹಿಷಾಸುರಮರ್ದಿನಿಯ ಚಿತ್ರವೆಂದು ಸತ್ಯಾಶ್ರಯ ಇಱಿವಬೆಡಂಗನ ಕಾಲದ ತಾಮ್ರಪಟಗಳ ಮೇಲೆ ಬರೆದ ಸಂಗತಿಯಿಂದ ತಿಳಿಯುತ್ತದೆ.[32]

ಈ ವ್ಯಾಪಾರಿಸಂಘದ ಮುಖ್ಯಸ್ಥನನ್ನು ಪಟ್ಟಣಸ್ವಾಮಿ ಎಂದು ಕರೆಯು ತ್ತಿದ್ದರು.[33] ಉದಾ: "ನಖರ ಮುಖಮಂಡನ, ಜಿನಪಾದಶೇಖರ...ಶ್ರೀಮತ್ಪಟ್ಟಣ ಸ್ವಾಮಿ ನೊಕ್ಕಯ್ಯ ಸೆಟ್ಟಿಯರು"[34] "ಶ್ರೀ ಮನ್ಮಹಾಪಟ್ಟಣ ರಾಜಧಾನಿ ಬಳ್ಳಿಗ್ರಾವಂ ಪಟ್ಟಣಸ್ವಾಮಿ ಹನುಮಂತಸೆಟ್ಟಿ, ಬಮ್ಮ ಸೆಟ್ಟಿಯರು"[35].

ಅಂದು ಆಡಳಿತದಲ್ಲಿದ್ದ ದೊರೆ ತನಗೆ ಸರಿಯೆಂದು ಕಂಡುಬಂದ ವ್ಯಕ್ತಿಗೆ ಸೆಟ್ಟಿಪಟ್ಟವನ್ನು ಕಟ್ಟುತ್ತಿದ್ದನು. ಪಲ್ಲವಾದಿತ್ಯ ರಾಜ್ಯವಾಳುತ್ತಿದ್ದಾಗ ಕರವಯ್ಯ ಎಂಬಾತನಿಗೆ "ಮುಮ್ಮಡಿ ಗವಱೆ ಪಲ್ಲವಾದಿತ್ಯ ನೊಳಂಬಸೆಟ್ಟಿ ಎಂಬ ಹೆಸರನ್ನು ಕೊಟ್ಟು ಪಟ್ಟವನ್ನು ಕಟ್ಟಿ, ಐಱ, ಕುದುರೆ, ಕೊಡೆ, ಆಳಪಣ್ಣುವಕ, ಕುಞ್ಚನ್ನಳಿಗೆ, ಕೇಬ್ಚಟ್ಟ, ಅಷ್ಟಣಿಗೆ, ಗದ್ದಿಗೆ ಮುಂತಾದ ರಾಜಚಿಹ್ನಗಳನ್ನು ಕೊಟ್ಟು...ನಕರಂ ಮಾಡಿ ವೈಶ್ಯಾವತ್ತಿಯಾಗೆ ಸೆಟ್ಟಿಗೆ ಕೊಟ್ಟಂ[36]" ಎಂಬುದನ್ನು ನೋಡಿದರೆ ರಾಜನಿಂದ ಸೆಟ್ಟಿಗೆ ಸಲ್ಲುವ ರಾಜಮರ್ಯಾದೆ ವಿದಿತವಾಗುತ್ತದೆ.

ನಖರುಗಳು, ಶ್ರೇಷ್ಠಿಗಳು ನಾಡಿನ ಸಮಸ್ತ ಪ್ರಮುಖ ವ್ಯಾಪಾರಿತಂಡಗಳೆಲ್ಲ ಕೂಡಿ ತಮಗೆ ಬೇಕಾದ ಪಟ್ಟಣಸ್ವಾಮಿಯನ್ನು ಆರಿಸಿಕೊಳ್ಳುವ ಹಕ್ಕು ಅವರಿಗಿದ್ದಿರ ಬಹುದು.

ಯಾವುದಾದರೂ ಮಹತ್ವದ ಕಾರ್ಯಪ್ರಸಂಗದಲ್ಲಿ ಅನೇಕ ಸೆಟ್ಟಿಪ್ರಮುಖರು ಸೇರುತ್ತಿದ್ದರು. ಈ ಮಾತಿಗೆ "ಬಲಿಪುರದ ಪಟ್ಟಣಸ್ವಾಮಿ... ನೀತಿಗಾಕರವೆನಿಸಿರ್ದ ಶ್ರೀಮದಯ್ಯಾವೊಳೆ ಚ[ಭ ?]ಲ್ಲುಂಕಿ ಪ್ರಮುಖಾನೇಕ ದಿಗ್ದೇಶಾವಾಸಿಗಳ್ ಉಭಯ ನಾನಾದೇಸಿಗಳ್ಮನವರ, ತೇಜೋರೂಪರಪ್ಪ ಸ್ಥಳಪುರುಷರ್, ಮಣಿಗಾಱ ಮಹದೇವಿ ಸೆಟ್ಟಿ, ಶಿವಪಾದಶೇಖರ ಮಾರಿಸೆಟ್ಟಿ ಮುಂತಾದ ಸಮಸ್ತ ವಣಿಗ್ಧರ್ಮಿಕರು ನಿಶ್ಚಯಿಸಿ ಬಳ್ಳಿಗಾವೆಯ ಬಣಂಜಿಗರಲ್ಲಿಯ ಅಪುತ್ರಿಕಮೃತಕಧನವೆಲ್ಲಂ ಶ್ರೀಮತ್ ಗವಱೇಶ್ವರದೇವರ ಮಾಟ... ದಿ ದೇವ ಕಾರ್ಯಕ್ಕೆ, ನಗರದಲ್ಲಿಯ ಪುತ್ರಿಕಧನ ವಪ್ಪುದು ನಗರೇಶ್ವರ ದೇವರ್ಗ್ಗೆ[37]" ಎಂಬ ಭಾಗವನ್ನು ನೋಡಬಹುದು.

ಅದರಂತೆ ಮಹಾನಾಡಾಗಿ ಕುಳ್ಳಿರ್ದು, ಐನೂರ್ವರು ನಕರಮಿರ್ದು, ಅಶೇಷ ನಗರಮಿರ್ದು, ಎಂಬ ಹೇಳಿಕೆಗಳು ಇದನ್ನೇ ಪ್ರಕಟಿಸುತ್ತವೆ.

ಹೀಗೆ ಸಭೆಸೇರಿ ನಿರ್ಣಯ ಸ್ವೀಕರಿಸಿ ದೇವಾಲಯ ಮೊದಲಾದವುಗಳಿಗೆ ವತ್ತಿ ಬಿಡುತ್ತಿದ್ದರು. ಇದು ತಮಗೆ ಬರಬೇಕಾದ ಸುಂಕವನ್ನು ದಾನವಾಗಿ ಕೊಟ್ಟುದೂ ಆಗಿರುತ್ತಿದ್ದಿತು. ಇದಕ್ಕೆ "ಬಾರಂಗಿಯ ಕೇದಾರೇಶ್ವರ ದೇವರ ನಿತ್ಯ ನಿವೇದ್ಯಕ್ಕಂ ಬಿಟ್ಟ ವತ್ತಿಪ್ರತ್ತಿಕ್ಕಂ ಅವ ಬಳಂಜಿಗರಿರ್ದ್ದು ಹೇರಿದಡಂ ಅಲ್ಲಿ ಒಕ್ಕಲುದೆಱೆ ಸುಂಕ ಮಡಿದಡೆ ತಾಣವುಂಗಂ ಸರ್ವಬಾಧಾ ಪರಿಹಾರ[38]" ಈ ಭಾಗ ನಿದರ್ಶನವೆನಿಸಿದೆ.

ತಮ್ಮ ಸಂಘದ ಸದಸ್ಯರ ಮೇಲೆ ಸರಕಾರದ ತೆರಿಗೆಗಳು ಭಾರವಾಗದಂತೆ ನೋಡಿಕೊಳ್ಳುವ ಕರ್ತವ್ಯ ಈ ಶ್ರೇಣಿಗಳದಾಗಿತ್ತು. ಕನ್ನರದೇವನ ಆಳಿಕೆಯ ಕಾಲದಲ್ಲಿ ಬಳಕೆಯಲ್ಲಿದ್ದ ಸುಂಕ, ಆದಿತ್ಯವರ್ಮನ ಕಾಲಕ್ಕೆ ಹೆಚ್ಚಾಗಲು ತೆಂಬುಲಿಗನಾಸಿರ್ವರು, ಅಯ್ಯೂರ್ವರು ಹೋಗಿ ಶ್ರೀ ಆಹವಮಲ್ಲದೇವರಿಗೆ ಬಿನ್ನವಿಸಿಕೊಂಡು ಕನ್ನರದೇವನ ಕಾಲದ ಸುಂಕವನ್ನೇ ಮರಳಿ ರೂಢಿಗೊಳಿಸುವಂತೆ ರಾಜನಿಗೆ ಅರಿಕೆಮಾಡಿಕೊಂಡು ಬಂದ ವಿಷಯ[39] ಒಂದು ಶಾಸನದಲ್ಲಿದೆ.

ವ್ಯಾಪಾರಿಯೊಬ್ಬ ಮಡಿದಾಗ ನಿರ್ಗತಿಕವಾದ ಅವನ ಕುಟುಂಬಕ್ಕೆ ಸಹಾಯ

ಮಾಡುತ್ತಿದ್ದರು. ಊರಿಗೆ ಬಂದ ಪರಊರಿನ ವ್ಯಾಪಾರಸ್ಥರಿಗೆ ಆಹಾರ ವಸತಿಗಳ ಅನುಕೂಲ ಮಾಡಿಕೊಡುತ್ತಿದ್ದರು. ಕೆಲವೊಂದು ಸಲ ನ್ಯಾಯಾಲಯದ ಕಾರ್ಯವನ್ನು ಮಾಡಿ ಸಮಾಜದಲ್ಲಿ ಶಾಂತಿ ಸಮಾಧಾನ ನೆಲೆನಿಲ್ಲುವಂತೆ ನೋಡಿಕೊಳ್ಳುವ ಹೊಣೆ ಇವರದಾಗಿತ್ತು. ಇದನ್ನೇ "ಸಮಯ ಧರ್ಮಕ್ಕಂ ಕೂಡಿದ ಸಂಘಾತಕ್ಕಂ ಮಾಡಿದ ವ್ಯವಸ್ಥೆಗಂ ತಪ್ಪುವರಲ್ಲರು[40]" ಎಂದು ಶಾಸನ ಕರೆದುದು.

ಇವರು ವ್ಯಾಪಾರಕ್ಕೆ ಮಾತ್ರ ಮಹತ್ವಕೊಡದೇ "ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ, ಶಟುಕರ್ಮ್ಮನಿಯತರು. ರುಗ್ಯಜುಸಾಮಾಥರ್ವಣ ಚತುರ್ವ್ವೇದ, ವೇದಾರ್ತ್ಥ ಪ್ರಮಾಣ ಪ್ರವೀಣರು, ತರ್ಕ್ಕ, ವ್ಯಾಕರಣ, ಛಂದಸ್ಸು, ನಿಘಂಟು, ಭರತವಾದಿಯಾದಿ ಅನೇಕ ಶಾಸ್ತ್ರಪ್ರಮಾಣ ಪ್ರವೀಣರು, ಅಷ್ಟಾದಶಪುರಾಣ, ಕಾವ್ಯ, ನಾಟಕ, ನಾನಾ ಕಳಾಚಮತುಕಾರಭಂಗೀಭಾಸಣ ಕವಿ ಗಮಕವಾದಿ ವಾಗ್ಮಿಹ್ರಿದಯಾಕ್ರಿಷ್ಟ ಮಂತ್ರಾಕ್ಷರರು, ವಿದ್ವಾಂಸ ಕದಂಬ ಹ್ರಿತುಪದು ಮಿನೀ ರಾಜಹಂಸರು, ಭಾರತಿ ಕರ್ಣಾವತಂಸರು,[41]" ಇತ್ಯಾದಿ ಕಲೆಗಳಲ್ಲಿ, ಸಾಹಿತ್ಯ ಕಲೆಗಳಲ್ಲಿ, ಸಾಹಿತ್ಯ ಪ್ರಕಾರಗಳಲ್ಲಿ ಪ್ರವೀಣರಾಗಿದ್ದರು.

ವ್ಯಾಪಾರ ವಿದ್ಯಾಭ್ಯಾಸದ ಜೊತೆಗೆ ಶೌರ್ಯವು ಇವರ ಹುಟ್ಟಿನೊಂದಿಗೆ ಮೈಗೂಡಿಕೊಂಡು ಬಂದಿತ್ತು. ಉದಾಹರಣೆಗೆ "ವಾದಿಕುಳ ಕೋಳಾಹಳರು, ಹರ ಹಾಸಕ್ಕಾಸಗಂಗಾಜಳ ಧವಳ ತರತ್ತರಂಗ ನೀಹಾರ ಹಾರ ತಾರಾ ತಾರಾಚಳ ತಾರಾಧೀಶದಿವಿಜ ಪುದ್ದಂಡ ಪುಂಡರೀಕ ದುಗ್ಧಾರ್ಣ್ನವ ಡಿಂಡೀರ ಪಿಂಡ ಪಾಂಡು ರಹಿಮವದಚಳ ವಿಚಕಿಳ ಪಾಂಚಜನ್ಯೋಪಮಾನ ನಿರ್ಮ್ಮಳಕೀರ್ತಿ ಪತಾಕರು. ಪ್ರದ್ದಂಡ ಸಮಯ ಕದಳೀ ಕೋದಂಡನ ಕುಠಾರರು, ಪರಸಮಯ ಗಜಕೇಸರಿಗಳು ಅರಾತಿಬಟ ಕಂಜಕುಂಜರರು, ಶರಣಾಗತ ವಜ್ರಪಂಜರರು, ತಮ್ಮೊಳೇಕಹಸ್ತರು. ಏಕೈಕವೀರರು, ಲೋಕೈಕಮಾನ್ಯರು ನುಡಿದಂತೆ ಗಂಡರು, ಕದನ ಪ್ರಚಂಡರು, ಆಹೆತ್ತುಂಯೆಡೆವಱಿಯದೆ ಸೋಲದರು, ಛಲದಲು ದುರ್ಯೋಧನರು. ತ್ಯಾಗದಲು ಕರ್ಣ್ನನಂನರು, ಭೋಗದೊಲು ಇಂದ್ರನಂನರು. ಗುಂಪಿನಲು ಮಹಾಸಮುದ್ರಮಂ ಪೋಲುವರು, ದುಷ್ಟ ಚತುಷ್ಟಿಯರಲಟೆ ಹೊಟೆ ನಿಟೆಲು ಗೊನಾಳಿಯುಂ ಮುಱಿದು ತೇದು ಬೂದಿ ಕೊಂಬರು. ಜವನ ಮೀಸೆಯನೊಲದುಯ್ಯಲಾಡುವರು. ಅರಳಿಯ ಹೊತವಳಿಯ ತಿಗುಡ ರಕ್ಕಸನ ದಂಡೆಯು, ಬೆಳದಿಂಗಳ ನೊರೆಯು, ಹೆಬ್ಬುಲಿಯ ಗಿಂಣು ಆಸಱೆಯ ಗೊಸನೆಯೆಂಬಿದಿ ಬೆಚಡಮಂ ಪಿಡಿದು ತರುವ ವಿನೋದಿಗಳು"[42] ಈ ಮಾತನ್ನು ನೋಡಬಹುದು.

ಲಕ್ಷ್ಮೀಪುತ್ರರಾದ ಇವರು "ಹರಿಹರ ಹಿರಣ್ಯಗರ್ಭ ಪಾದಾಂಭೋಜ ಚಂಚರೀಕರು, ಶ್ವೇತಛತ್ರ ಚಾಮರಾದ್ಯನೇಕ ರಾಜ್ಯಲಕ್ಷಣಾಲಕ್ಷಿತರು. ರಾಜಗ್ರೀಹ ಪೂಜಿತರು. ಕನಕ ಕಂಚುಳಿಕೆ ಕಾಮದೇವರು, ಜೇಳಾಭರಣಭೂಷಿತರು. ಶ್ರೀಮತು ಕನಕದೇವನ ಕರುಮಾಡದಲು ಹೊಂನಂಬ ತೆತ್ತಿಸಿದ ಅಗಣಿತ ಪ್ರತಾಪಲಂಕೇಶ್ವರರು.

ಶ್ರೀವೀರಲಕ್ಷ್ಮೀ ನಂದನವನಾಭಿವೃದ್ಧಿವಸಂತರು, ಪಮುಹಿಪಾವಾಹಕ ಚೇನಾಭರಣರು.[43] ಆನೆಯೇ ಭೇರಿಯಾಗೆ, ಭೇರಿಯೇ ಮದ್ದಳೆಯಾಗೆ, ಬೆಳುಗೊಡೆಗಳೇ ನೆಳಲಾಗೆ, ಮಹಾಸಮುದ್ರವೇ ನೀರ್ಗ್ಗಾರಿಗೆಯಾಗೆ, ಇಂದ್ರನೇಕರ ಗವಳನಾಗೆ, ವರುಣನೇಗಳೆ ವಿಡವನಾಗೆ, ಧನವನೇ ಭಂಡಾರಿಗನಾಗೆ, ನವಗ್ರಹಂಗಳೇ ಕಂಕಣವಾಗೆ, ರಾಹುವೇ ತೊಂಗಲಾಗೆ, ಕೇತುವೇ ಸುರಿಗೆಯಾಗೆ, ಕುಳಿಕನೇ ಮೊನೆಯಾಗೆ, ಚಂದ್ರಾದಿತ್ಯರ್ಕಳೆ ಬೆಂಬಲವಾಗೆ, ಮೂವತ್ತುಮೂದೇವರ್ಕಳೇ ನೋಟಕರ್ಕಳಾಗೆ, ಕ್ಷಮೆಯೆಂಬ ಬಾಳಂ ಕೀರ್ತ್ತು, ಕ್ರೋಧಶತ್ರುವೆಂಬ ಹಗೆವನಿಱಿದು ಕಾದಿಗೆಲ್ದ ಭಟರಿಯ ಮಕ್ಕಳ್. ಡಮರುಗ ಪರೆ ನಿರ್ಘೋಷಣರುಮಪ್ಪ ಅಯ್ಯಾವಳೆಯ ಐನೂರ್ವರ ಸ್ವಾಮಿಗಳು[43]" ಎಂಬ ಕೀರ್ತಿಗೆ ಭಾಜನರಾಗಿದ್ದರು.

ಇವರು "ನುಡಿದಂತೆ ನಡೆವರು, ಶರಣಾಗತ ವಜ್ರ ಪಂಜರರು, ನಿರ್ಮ್ಮಳ ತೇಜರು." ತಮಗೆ ವಿರುದ್ಧವಾಗಿ ವರ್ತಿಸಿದವರನ್ನು "ಆನೆಯನ್ತೆಯಟ್ಟಿಕೊಲವರು, ಪಸುವಿನಂತೆ ಇಱಿದು ಕೊಲುವರು. ಹಾವಿನಂತೆ ವಿಷವೆ ಕೊಲುವರು, ಸಿಂಹದಂತೆ ಸೀವರ್ದ್ದು ಕೊಲುವರು. ಹೋಹಮಾರಿಯ ಚೆಲ್ಲವಾಡುವರು. ಬಹಮಾರಿಯ—ನಿದಿರ್ಗ್ಗೊಳ್ಳುವರು, ಹಟ್ಟಿರ್ದ್ದ ಹುಲಿಯ ಕೆಣಕುವರು. ಹರಿವ ಚಣ್ಡಿಯ ಕಾಲಂ ಕಾವರು, ಕೇಸರಂ ಕಿಚ್ಚಿಡುವರು, ಸಿಡಿಲಂ ಪಿಡಿದು ತೋರ್ಪ್ಪರು."[44] ಈ ರೀತಿಯ ಧೈರ್ಯ ಸಾಹಸವನ್ನೊಳಗೊಂಡ ಇವರ ಪಂಗಡ ರಾಜರಿಗೆ ಸಮೀಪವರ್ತಿಯಾಗಿ, ಸಹಾಯಕ ತಂಡವಾಗಿರುವುದರಲ್ಲಿ ಯಾವ ಸಂಶಯವಿಲ್ಲ. ಇವರು "ಚತುಸ್ಸಮಯ ಷಡುದರ್ಶನ, ವಿಶಿಷ್ಟ, ವಿವಗ್ಧ, ಪಂಡಿತಮುನಿಜನಂಗಳ್ಗೆ ನಿತ್ಯಂ ಬೆಸಕೆಯ್ಯುತ್ತ ಅವರು ಪರಿಸಿದ ಪರಮಾಶೀರ್ವಾದ ಶತಸಹಸ್ರ ವಚನಗಳಂ ತಲೆಯೊಳಾಂತು ಕೈಕೊಳ್ಳುತ್ತ"[45] ವಿನಯಪೂರಿತರಾಗಿ ಸಮಾಜದಲ್ಲಿ ಮನ್ನಣೆ ಪಡೆದವರೂ ಆಗಿದ್ದರು.

ಈ ವ್ಯಾಪಾರಿತಂಡದವರಲ್ಲಿ ಶೈವರಿರಬಹುದು, ಜೈನರಿರಬಹುದು, ಬೌದ್ಧರಿರಬಹುದು. ಇವರು ಯಾವುದೇ ಧರ್ಮವನ್ನವಲಂಬಿಸಿದ್ದರೂ ವೀರಬಣಂಜು ವೃತ್ತಿಯನ್ನು ನಾಡಿನ ತುಂಬ ವಿಸ್ತರಿಸುತ್ತಿದ್ದರು.

ಇವರದು ವೈಶ್ಯಾನ್ವಯ,[46] ಪೊಯ್ಸಳ ರಾಜಶ್ರೇಷ್ಠಿಗಳಾಗಿದ್ದ ಪೊಯ್ಸಳಸೆಟ್ಟಿ ಮತ್ತು ನೇಮಿಸೆಟ್ಟಿಯರು ಜೈನಧರ್ಮಕ್ಕೆ ಆಶ್ರಯದಾತರಾಗಿದ್ದರು.[47] ಸಿದ್ದಿಗೆಸೆಟ್ಟಿ ಎಂಬ ಮಹಾವಡ್ಡವ್ಯವಹಾರಿಯನ್ನು "ಜಿನಧರ್ಮ್ಮ ಹರ್ಮ್ಯತೋರಣ"ನೆಂದು ಒಂದು ಶಾಸನ ಹೊಗಳಿ ಆತನು ಮಹಾಮಾಂಡಳಿಕ ವೀರಗಂಗರಸರ ಆಪ್ತ ಸ್ನೇಹಿತನಾಗಿದ್ದನೆಂದು[48] ವರ್ಣಿಸುತ್ತದೆ. ವರ್ತಕರೆಲ್ಲ ಸೇರಿ ಕಟ್ಟಿಸಿದ 'ನಖರಜಿನಾಲಯ' ವೆಂಬ ಹೆಸರು ಶಾಸನದಲ್ಲಿದೆ.[49] ಇನ್ನು ಸಿರಿಗಾವಾಸನೆಂದು ಹೆಸರಾದ ಪಟ್ಟಣಸ್ವಾಮಿ ನೊಕ್ಕಯ ಎಂಬ ಶ್ರೀಮಂತ 'ಜಿನಪಾದಶೇಖರ'ನಾಗಿದ್ದ ಉಲ್ಲೇಖ ಬರುತ್ತದೆ.[50] ಜೈನಧರ್ಮದ ಆಚರಣೆಯುಳ್ಳಿದ್ದ ವಡ್ಡವ್ಯವಹಾರಿ ಬೊಪ್ಪಗಾವುಂಡ ಮತ್ತು ಅವನ ಸುಪುತ್ರರೀರ್ವರೂ ಜಿನೇಂದ್ರ ಪಾದಾರಾಧಕರಾಗಿದ್ದು ಒಂದು ದಿವಸ ಶಿವಧರ್ಮದ

ಕಥೆಯುನ್ನು ಕೇಳಿ ಸಿದ್ದೇಶ್ವರ ದೇವರಂಗಭೋಗಕ್ಕೆ ನೀವೇದ್ಯಕ್ಕೆ ದಾನ ಕೊಟ್ಟದ್ದನ್ನು ಒಂದು ಶಾಸನ ಹೇಳುತ್ತದೆ.[51] ಅದರಂತೆ ಅಷ್ಟಾದಶ ಪಟ್ಟಣಾಧಿಷ್ಠಿತನಾದ ಸಾಮನ್ತ ಮಾರ್ತಂಡಯ್ಯ. ತಮ್ಮ ಮುತ್ತಯ್ಯ ಮಾಡಿಸಿದ ಬಸದಿಯನ್ನು ಪಡಿಸಲಿಸಿ ನಾಟಕ ಶಾಲೆಯನ್ನು ನಿರ್ಮಾಣಮಾಡಿಸಿ ತನ್ನ ಕೀರ್ತಿಯನ್ನು ಅಮರವಾಗಿರಿಸಿ ಕೊಂಡ.[52]

ವೀರಬಳಂಜುಧರ್ಮ ಪರಿಪಾಲಕನಾಗಿದ್ದ ಕಲ್ಲಮಯ್ಯ ಜನಪತಿ ಸುಂಕದಧಿ-ಷ್ಠಾಯಕ, ದಂಡನಾಯಕನಾಗಿದ್ದು

" ಒಡಲು ಧನಮುಂ ಭಾವಿಸೆ ।
ಕೆಡಲಿರ್ದ್ದವು ಕಿಡದ ಕಸವರ ಧರ್ಮ್ಮವುದ ।
ಪಡೆವೆಂ ಬೆಚ್ಚರಮೆಂದಡೆ ।
ವುಡುಗದೆ ತದ್ಧರ್ಮ್ಮ ಕಾರ್ಯ ತತ್ಪರನಾಗಿ ।।[53]

ತನ್ನ ಸುಂಕದಧಿಕಾರವನ್ನು ಪೂರೈಸಿಕೊಂಡು ಹೋಗುತ್ತಿದ್ದ.

ಇನ್ನು ಶೈವಮಾರ್ಗಾವಲಂಬಿಗಳಾದವರಲ್ಲಿ ಪ್ರಮುಖರು "ಸತ್ಯ ಶೌಚಾಚಾರ ಮಹೇಶ್ವರ ಸಮಯಸಮುದ್ಧರಣರಾದ ವಡ್ಡವ್ಯವಹಾರಿ ಚಾವುಣ್ಡಿಸೆಟ್ಟಿಯರು ಮಾಚಿಸೆಟ್ಟಿಯರು ಅಮೃತೇಶ್ವರ ದೇವಾಲಯಕ್ಕೆ ಕಳಸ ನಿರ್ಮಾಣಮಾಡಿ ಮಠವನ್ನು ಕಟ್ಟಿಸಿ ಸರಸ್ವತಿದೇವಿಯ ಪ್ರತಿಷ್ಠೆ"[54]ಯನ್ನು ಮಾಡಿ ದಾನಬಿಟ್ಟರು.

ಶಿವಭಕ್ತ, ತಂಬುಲಿಗಾಗ್ರಗಣ್ಯ, ವೀರಾಗ್ರಣಿ, ಗವಱೆಗಳಾಭರಣ, ತಾಯಿ ಭೂಭುವನೋತ್ತಮನೆನಿಸಿ ಮೆಱೆದ ಗವಱೆ ಮುದ್ದನ[55] ಹೆಸರು ಪ್ರಸಿದ್ಧವಾದುದು. ಅದರಂತೆ ಬಳ್ಳಿಗಾವೆಯ ಪಟ್ಟಣಸ್ವಾಮಿ ಮಾಳಿಸೆಟ್ಟಿ ಮೇಚಿಸೆಟ್ಟಿಯರು 'ಈಶ್ವರ ಪದ ಭಕ್ತರಾಱುಸಮಯಂಗಳ ಸೀಮೆಯಾಗಿದ್ದು' ಶಿವಪಾದಶೇಖರ ಮಾರಿಸೆಟ್ಟಿ ಮುಂತಾದವರು ಕೂಡಿ ಬಳ್ಳಿಗಾವೆಯ ಬಣಂಜಿಗರಲ್ಲಿಯ ಅಪುತ್ರಿಕ ಮೃತಕಧನವನ್ನು ಗವಱೇಶ್ವರ ದೇವರಿಗೆ ಮತ್ತು ಪುತ್ರಿಕಧನವನ್ನು ನಗರೇಶ್ವರ ದೇವರಿಗೆ ದಾನ ಬಿಟ್ಟಿದ್ದನ್ನು ಕಾಣಬಹುದು.[56] ಈ ಐನೂರ್ವರನ್ನು 'ಹರಿಪಾದಭೃಂಗರು' ಎಂದು ಕೆಲವು ಶಾಸನಗಳು ವರ್ಣಿಸಿವೆ[57].

ಗಣಾವತಾರಿ ಹೊಸಬೊಮ್ಮಿಸೆಟ್ಟಿಯ ಹೆಸರು ಉಲ್ಲೇಖನೀಯ[58]. ರಾಜ ಮಲ್ಲನೃಪನ ಅನುಮತದಂತೆ "ತತ್ಪುರದ ಮೂಲಸ್ತಂಭವಾಗಿ ನೆಲಸಿದ ಮುಮ್ಮುರಿ ದಂಡಂಗಳು ಗವಱೇಶ್ವರದೇವರ ಸುಪ್ರತಿಷ್ಠೆಯಂ ಸಂತೋಷದಿಂ ತದೀಶ್ವರನ್ ತಾರಸಗೇಂದ್ರಮನರ್ಥಿಯಿಂದೆ ಮೂರುತೇಱನಾಗಿ ನಿರ್ಮಿಸಿದನೋ ಮುದದಿಂ ನೆಲಸಿಟ್ಟನಕ್ಕುಮೆಂಬನ್ನೆಸೆಯಲು ತ್ರಿಕೂಟಮನೆ ಮಾಡಿಸಿದಪ್ಪುರಮಾನುರಾಗದಿಂ" ಅಂತಹ ತ್ರಿಕೂಟದ ಪ್ರಥಮಸ್ಥಳದ ಗವಱೇಶ್ವರದೇವಾಲಯ. ಮತ್ತೊಂದು ಕೂಟ ದೊಳು ಶ್ರೀ ಮಲ್ಲಿಕಾರ್ಜುನದೇವರ ಸುಪ್ರತಿಷ್ಠೆಯನ್ನು ಮಾಡಿದ ವಡ್ಡವ್ಯವಹಾರಿ

ಮಲ್ಲಿಸೆಟ್ಟಿ. "ವಿನುತ ಶಿವಾವಸಥಮನುತ್ತರಾಭಿ ಮುಖದಿನ್ದೆಸೆಯಲ್ ತ್ರಿಕೂಟಿ, ಪರಶರಣೆಂಬ ಭಕ್ತರ ಕರುಣವೇ ಶರಣೆಂಬ ಶಿವನ ಡಿಂಗರವೆಂಬ ಹಿರಿಯಣ್ಣ ಸಾವಿ ದೇವನು ಪರಮಾಜ್ಞೆಯನು ತಾಳಿದ ಮುದ್ದರಸ ಕರಮರ್ತ್ಥಿಯಿಂದೆ ಮುದ್ದೇಶ್ವರ ದೇವರ ಸುಪ್ರತಿಷ್ಠೆಯಂ ಮಾಡಿ ಮನೋಹರಮಪ್ಪ ಶಿವಾಲಯಮಂ ರಚಿಸಿದ ದಕ್ಷಿಣಾಭಿಮುಖದಿನ್ದೆಸೆಯಲ್[59] ಇಂತಹ ತ್ರಿಕೂಟ ದೇವಸ್ಥಾನವನ್ನು ಮಹಾ ಮಂಡಳೇಶ್ವರ ರಾಚಮಲ್ಲದೇವರಸರ ಸನ್ನಿಧಿಯಲ್ಲಿ ಪಟ್ಟಣದ ಸಮಸ್ತ ಮುಮ್ಮುರಿ ದಂಡಂಗಳೂ, ಉಭಯ ನಾನಾದೇಸಿಗಳೂ ಕೂಡಿ ಈ ಕಾರ್ಯ ಮಾಡಿದ್ದನ್ನು ಕಾಣಬಹುದು. ಬೌದ್ಧ ಧರ್ಮಕ್ಕೂ ಇವರು ಮನ್ನಣೆ ನೀಡಿದ್ದನ್ನು ನೋಡಬಹುದು.

ಪ್ರಧಾನಿಗಳಾದ ರೂಪಭಟ್ಟಯ್ಯಂಗಳು ವಡ್ಡರಾವುಳವನ್ನು ೧೮ ಅಗ್ರಹಾರ ಗಳನ್ನು ಪ್ರತಿಪಾಳನ ಮಾಡುತ್ತಿರುವಾಗ, ಬಳ್ಳಿಗಾವೆಯ 'ಶ್ರೀ ಮತುಜಯನ್ತಿ ಪ್ರಬೌದ್ಧವಿಹಾರ' ವನ್ನು ತವಗೆಯುಂ ತಮ್ಮ ಮಾಡಿಸಿದ ತಾರಾಭಗವತಿಯ ಶ್ರೀ ಕೇಶವದೇವರ, ಲೋಕೇಶ್ವರದೇವ, ಬೌದ್ಧದೇವರ ಅಲ್ಲಿಯ ಸಮಸ್ತ ಪರಿವಾರ ದೇವರ ಅರ್ಚನ ಪೂಜಾ ನಿಮಿತ್ತವಾಗಿ ಯೋಗಿನಿಯರ ಕುಸಳಿಯರ ಸನ್ಯಾಸಿಗಳ ಆಹಾರದಾನಕ್ಕೆ ದತ್ತಿ ಬಿಟ್ಟಿದ್ದು ಕಂಡುಬರುತ್ತದೆ[60].

ಡಂಬಳದಲ್ಲಿ ಸಂಗವಸೆಟ್ಟಿಯರು ಮಾಡಿಸಿದ ಬೌದ್ಧವಿಹಾರಕ್ಕೆ ಒಂದೊಂದು ಗಾಣದಲು ಒಂದೊಂದು ಸೊಂಟಿಗೆ ಎಣ್ಣೆಯನ್ನು ದಾನಮಾಡಿದ್ದು ಕಂಡು ಬರುತ್ತದೆ[61].

ಸಮಾಜದ ಪ್ರಮುಖ ಕಾರ್ಯಗಳಾದ ದತ್ತಿ, ದಾನ, ಉತ್ಸವ, ಜೀರ್ಣೋದ್ಧಾರ ಪ್ರಸಂಗಗಳಲ್ಲಿ ಊರ ಪ್ರಮುಖರೊಂದಿಗೆ ಈ ಐನೂರ್ವರ ಸನ್ನಿಧಿ ಅವಶ್ಯ ವಾಗಿದ್ದಿತು.

"ಸ್ವಸ್ತಿ ಸಮಸ್ತಪ್ರಶಸ್ತಿಸಹಿತಂ ಶ್ರೀ ಮದಯ್ಯಾಪೊಳೆಯಯ್ನೂರ್ವರ್ ಸ್ವಾಮಿಗಳಿಗೆ ಸಾಷ್ಟಾಂಗವೆಱಗಿ ಪೊಡವಟ್ಟು ಇಕ್ಕಂ ಹಸುಂಬೆಯಂ ನಿಡುಸಸಿಯಂ ಕುಡುಸೆಟ್ಟಿ ಶ್ರೀಮದಯ್ಯಾಪೊಳೆಯಯ್ನೂರ್ವಸ್ವಾಮಿಗಳ್ಗೆ ತಳಿಗೆ ತಂಬೂಲಮಂ ಹೊಯಿ ಜಯಮಂಗಳ[62]" ಎಂಬಲ್ಲಿ ಇವರಿಗೆ ಸಲ್ಲುತ್ತಿದ್ದ ಪ್ರಥಮ ಗೌರವ ಸೂಚಿಸಲಾಗಿದೆ. ಅದರಂತೆ ರಾಚಮಲ್ಲನ ಒಂದು ಶಾಸನ "ತತ್ಪರದ ಮೂಲಸ್ತಂಭ ಸ್ವರೂಪ"[63]ರೆಂದು ಹೇಳುವ ಮಾತು ಇವರ ಹಿರಿಮೆಯನ್ನು ಅರ್ಥಮಾಡಿ ಕೊಡುತ್ತದೆ.

ಇವರು ಸಮಾಜದಲ್ಲಿ ಹಾಕಿಕೊಟ್ಟ ಕಟ್ಟಳೆ ನಿರ್ಬಂಧನೆಗಳನ್ನು ನೋಡಿದರೆ ಯಾವ ಒಬ್ಬ ರಾಜನ ಸುವ್ಯವಸ್ಥಿತ ಆಡಳಿತಕ್ಕೂ ಇದು ಕಡಿಮೆ ಇಲ್ಲದಂತೆ ತೋರು ತ್ತದೆ. ಈ ಪಂಗಡದಲ್ಲಿದ್ದ "ಯಾವನಾನೊರ್ವ್ವನು ರಾಜಗಾಮಿತ್ವವ ಮಾಡಿದಡೆ, ಚೋರಗಾಮಿತ್ವವ ಮಾಡಿದಡೆ,ದುರ್ಜನತ್ವವ ಮಾಡಿದಡೆ, ಪುರುಷದ್ವೇಷವ ಮಾಡಿದಡೆ,

ವಿಕರ್ಮ್ಮಯಕರ್ತೃಬ್ಯಗತ್ಯಗಮನವುಂ ಮಾಡಿದವನು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಈ ನಾಲ್ಕು ಜಾತಿಯೊಳು ಯಾವವನೆ ಕೊಂದಡಂ ಜಾತಿ ವಿಜಾತಿಯಾತಿ ಯೆಂದು ಹಿಡೆ ಹಿಡಿದು ಎಳೆಯುತಿನುಡಿವವನುಯಷ್ಟಾಂಗದ್ರೋಹನುಂ ಯುಯುಷ್ಣೂರ್ವ ರಿಗೆಯು, ಏಳುವರೆ ಹನ್ನೊಂದುವರೆಗೆಯೂ, ನಾಲ್ಕು ನಾಡಿಗೂ, ಹದಿನೆಂಟುಸಮಯ ಕೆಯೂ, ಕೂಡೆ ದ್ರೋಹಿ ನಾಡಾಳ ಕೈಯಂ ಸಾಯ ಸಾಲುವನು, ಯುವಗೆಯುಟ್ಟಿ ಸಾಊಿಸಲಿಲ್ಲ. ಮೆಟ್ಟಿ ಬೈಸಲಿಲ್ಲ.ಇಊದವನೆ ಜೀರವಣಿಗ. ಸಮುದ್ರಮುದಯಿಹಂಗೆ ಮಾಡುತಯಿರಲು ಅಯ್ಯಾವಳೆಯುಷ್ಣೂರ್ವ್ವರು ಕೊಟ್ಟ ಕೆಲಸ[64]". ಈ ರೀತಿಯಾಗಿ ಕಟ್ಟು ನಿರ್ಭಂದನೆಗೊಳಗಾದ ಈ ವ್ಯಾಪಾರಿತಂಡ ಒಂದುಸಾವಿರವರ್ಷದ ಗಡುವಿ ನಲ್ಲಿ ಕನ್ನಡನಾಡಿನ ಒಳಹೊರಗೆ ತನ್ನ ಕೀರ್ತಿಪತಾಕೆ ಹಾರಿಸಿದ್ದು ಆಶ್ಚರಿಯೇನಲ್ಲ.

ಇವರ ವ್ಯಾಪಾರ ಪಾದಮಾರ್ಗ, ಜಲಮಾರ್ಗಗಳಲ್ಲಿಯೂ ನಡೆಯುತ್ತಿದ್ದು ೧೧೮೨ ರ ಕಾಲಕ್ಕೆ ಗೋವೆಯ ಕದಂಬರು ಹಡಗುಗಳನ್ನು ಕಟ್ಟಿ ಸಮುದ್ರದಲ್ಲಿ ಸಂಚ- ರಿಸಿ ಪರದೇಸಿಯರೊಡನೆ ವ್ಯಾಪಾರ ಮಾಡುತ್ತಿದ್ದರು.[55] ಪ್ರಾಚೀನ ಕರ್ನಾಟಕ ಚೀನ ಗ್ರೀಸ, ರೋಮ ಮುಂತಾದ ಪ್ರಮುಖ ರಾಷ್ಟ್ರಗಳೊಡನೆ ವ್ಯಾಪಾರಿಸಂಪರ್ಕ ಇಟ್ಟು ಕೊಂಡಿತ್ತು. ಶಾಸನಗಳಲ್ಲಿ ಪಾರಸ[66] ಮತ್ತು ತುರುಷ್ಕದ[67] ಹೆಸರು ಕಂಡುಬರು ತ್ತವೆ. ತೇರದಾಳದ ವರ್ತಕರು ಕತ್ತೆ, ಕೋಣ, ಬಂಡಿ, ಹಡುಗುಗಳಲ್ಲಿ ಮಾಣಿಕ್ಯ ಮುಂತಾದುವನ್ನು ಹೇರಿ 'ಜಳಸ್ಥಳಯಾತ್ರೆ' ಮಾಡುತ್ತಿದ್ದರೆಂದು ಒಂದು ಶಾಸನ ಹೇಳುತ್ತದೆ.[೬೮] ಕ್ರಿ.ಪೂ. ೨ನೆಯ ಶತಕದಲ್ಲಿ ಆಳುತ್ತಿದ್ದ ಚೀನಾ ಚಕ್ರವರ್ತಿ ಹನ್-ವ-ತಿ ಎಂಬವನ ನಾಣ್ಯ,[೬೯] ಕ್ರಿ.ಶ. ೧೪ರಲ್ಲಿ ಮಡಿದ ರೋಮನ್ ಚಕ್ರವರ್ತಿ ಅಗಸ್ಟಸ್‌ನ್ ಕೆಲವು ನಾಣ್ಯಗಳು ಚಿತ್ರದುರ್ಗದಲ್ಲಿ ದೊರಕಿದುದರಿಂದ[70] ಕ್ರಿ.ಪೂ. ದಲ್ಲಿ ಕರ್ನಾಟಕ ಪರದೇಶದೊಡನೆ ವ್ಯಾಪಾರ ಮಾಡುತ್ತಿದ್ದುದು ಕಂಡುಬರುತ್ತದೆ.

ಚೇರ, ಚೋಳ, ಪಾಂಡ್ಯ, ಮಲೆಯ, ಮಗಧ, ಕೌಶಳ. ಸೌರಾಷ್ಟ್ರ, ಧನುಷ್ಟ್ರ. ಕುರುಂಭ, ಕಾಂಭೋಜ, ಗೌಲ್ಲಲ್ಲಾಳ, ಬರ್ವರ, ಪಾರಸ, ನೇಪಾಳ. ಏಕಪಾದ. ಲಂಬ ಕರ್ಣ್ನ, ಸ್ತ್ರೀರಾಜ್ಯ, ಪೋಳಾಮುಖವೆಂಬ ನಾನಾದೇಶಗಳೊಡನೆ ಇವರ ವ್ಯಾಪಾರ ನಡೆ ಯುತ್ತಿದ್ದು[71] ಸ್ವದೇಶ ಪರದೇಶ, ಸ್ವಸ್ಥಾನಪರಸ್ಥಾನ, ಧರ್ಮ್ಮ ಅಧರ್ಮ್ಮ ನಿರ್ಣ್ಣಯ ಸೂಕ್ಷ್ಮವಿಚಾರಪರರು ಇವರಾಗಿದ್ದರು.[72]

ಸ್ವರ್ಗ್ಗಾಪವರ್ಗ್ಗದುರ್ಗ್ಗಮಾರ್ಗ್ಗ ಸಾಧನಾನುಷ್ಠಾನ ಪರಾಯಣರು. ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ. ದ್ರೋಣಾಮುಖ, ಸಂವಾಹನವೆಂಬ ದಿಗು ದಂತಿ ಪಟ್ಟಣಂಗಳಂ ಪಾದಮಾರ್ಗ್ಗ ಜಲಮಾರ್ಗ್ಗದೊಳು ಷಟ್ಖಂಡಮಂಡಳಂಗಳಂ ಪೊಕ್ಕು, ಸುಂಕಚಿಪ್ಪಂವಯುಮಂ ಕಿಡಿಸಿ ಚಕ್ರವರ್ತಿಯ ಸುವರ್ಣ್ನಭಂಡಾರಮುಮಂ. ಮಾಣಿಕ್ಯಭಂಡಾರಮುಮಂ. ಪಟ್ಟಸಭಂಡಾರಮುಂ ತೆಕ್ಕನೇ ತೀವಿ ವಿಕ್ಕುವಱೊಳು ಭಯ ಭೈಶಜ್ಯ ಶಾಸ್ತ್ರದಾನಕ್ಕಂ ನಿತ್ಯ ಬೆಸಕೆಯ್ಯುತ್ತಂ[73] ಎಂಬುವನ್ನು ಅರಿಯಬಹುದು. ಇದರಿಂದ ಇವರ ವ್ಯಾಪ್ತಿ ಜಾಣ್ಮೆ ಕಂಡುಬರುತ್ತವೆ.

ಇವರು ಸಾಮುಗ್ರಿಯನ್ನು ಊರಿಂದ ಊರಿಗೆ ಸಾಗಿಸುವ ಸಾಧನ ಹಸುಂಬೆ ಚೀಲ. ಈ ಹಸುಂಬೆಯ ವರ್ಣನೆ ಒಂದು ಶಾಸನದಲ್ಲಿ ಹೀಗೆ ಬರುತ್ತದೆ. "ಪೃಥ್ವಿಯೆ ಹಸುಂಬೆಯಾಗೆ, ಅಷ್ಟಲೋಕಪಾಳಕರೇ ಗೋಂಟಾಗೆ, ವಾಸುಗಿಯೇ ಬಳಸಾಗೆ, ಫಣಿಕುಳಂಗಳೇ ದಾರವಾಗೆ, ಬೊಕ್ಕಣವೊಳ ವಸುಂಬೆಯಾಗೆ, ಚಕ್ರವೇ ಬೆಳವಾಗೆ, ಕೂರಸಿಯೇ ಮರಸುರಿಗೆಯಾಗೆ, ಹಸುಂಬೆಯೊಳಮೂಲ್ಯ ವಸ್ತುಗಳೇ ವಸ್ತುಗಳಾಗೆ"[74] ಈ ಹಸುಂಬೆಯ ವರ್ಣನೆಯನ್ನು ನೋಡಿದರೆ ಇದರ ಬೇರೆಬೇರೆ ಭಾಗಗಳು ವಿಶ್ವವನ್ನು ಹಸುಂಬೆಯ ಚೀಲವಾಗಿ ಮಾರ್ಪಡಿಸಿದ ಚಿತ್ರ ಸುಂದರವಾಗಿದೆ.

ಇವರ ವ್ಯಾಪಾರಿ ಸರಕುಗಳು ವೈವಿಧ್ಯದಿಂದ ಕೂಡಿಕೊಂಡಿದ್ದವು. ಅತಿ ಸಣ್ಣ ಬೆಲೆಯ ಕೊತ್ತಂಬರಿಯನ್ನು ಹಿಡಿದು ಬಹುಮೌಲ್ಯದ ಮುತ್ತುರತ್ನಗಳವರೆಗೆ ವ್ಯಾಪಾರಮಾಡುತ್ತಿದ್ದರು. ಇವರ ವ್ಯಾಪಾರಿಸರಕುಗಳ ಒಂದು ಪಟ್ಟಿಯನ್ನೇ ಕೊಡುವದಾದರೆ ಭದ್ರಹಸ್ತಿ, ಜಾತ್ಯಶ್ವ, ಇಂದ್ರನೀಲ, ಚಂದ್ರಕಾಂತ, ಮುತ್ತು, ಮಾಣಿಕ್ಯ, ವಜ್ರ, ವೈಡೂರ್ಯ, ಗೋಮೇಧಿಕ, ಪುಷ್ಯರಾಗ, ಪದ್ಮರಾಗ, ಪವಳ, ಮರಕತ, ಕೇತನ ಮುಂತಾದ ಮೌಲ್ಯಯುಕ್ತ ರತ್ನಾಭರಣಗಳು, ಲವಂಗ, ಅಗರು, ಚಂದನ, ಕರ್ಪೂರ, ಕಸ್ತೂರಿ, ಕುಂಕುಮ, ಮಲೆ, ಗಜಾದಿ ಸುಗಂಧ ದ್ರವ್ಯಗಳನ್ನು, ಮೆಳಸು, ಜೀರಗೆ, ಸಾಸವಿ, ಕೊತ್ತುಂಬರಿ, ಸಕ್ಕರೆ, ಇಂಗು. ಸುಂಠಿ, ಹಿಪ್ಪಲಿ, ಯಾಲಕ್ಕಿ, ಯಲ್ಲವರಿಸಿನ, ನಾರು, ಬೇರು ಮುಂತಾದ ವಸ್ತುಗಳನ್ನು ಮಾರುತ್ತಿದ್ದರು.

ಕಿತ್ತಳೆ, ತೆಂಗು, ಬಾಳೆ, ಮುಂತಾದ ಫಲಗಳನ್ನು ಗೋದಿ, ಬತ್ತ, ಅಡಿಕೆ, ಎಳ್ಳು, ಎಣ್ಣೆ, ಬೆಲ್ಲ, ಹೆಸರು, ಉಪ್ಪು ಮುಂತಾದ ದಿನಬಳಕೆಯ ವಸ್ತುಗಳನ್ನು, ಹತ್ತಿಯ, ಜರತಾರಿಯ ರೇಷ್ಮೆಬಟ್ಟೆಗಳನ್ನು, ಹಲಗೆ, ಬಿದಿರು, ಲೋಹ, ವಿಗ್ರಹಗಳನ್ನು, ಬರಹದ ಸಾಮುಗ್ರಿಗಳಾದ ಬಳಪ ಮತ್ತು ಓಲೆಗರಿಗಳನ್ನು ಇವರು ವ್ಯಾಪಾರಮಾಡುತ್ತಿದ್ದುದುಂಟು.[75] ಈ ರೀತಿಯ ಆಮದು ರಪ್ತುಗಳನ್ನು ನೋಡಿದರೆ ಇವರ ವ್ಯಾಪಾರ ಸುಸಜ್ಜಿತವೂ ವಿಶಾಲವೂ ಆಗಿದ್ದಿತೆನಿಸುತ್ತದೆ.

ಒಂದು ಕಾಲದಲ್ಲಿ ಪ್ರಸಿದ್ಧಿಪಡೆದು ಅಳಿದುಹೋದ ಅಯ್ಯಾವೊಳೆಯನ್ನು ಮುಂದೆ ನೆನಪಿಗೆತರುವ ಅನೇಕ ವ್ಯಾಪಾರಿಕೇಂದ್ರಗಳನ್ನು ದಕ್ಷಿಣದ ಅಯ್ಯಾವೊಳೆಗಳೆಂದು ಕರೆದದ್ದನ್ನು ಕಾಣಬಹುದು,

ಚಿತ್ರದುರ್ಗದ ಕೊಡಗನೂರು ದಕ್ಷಿಣದ ಅಯ್ಯಾವೊಳೆಯೆಂದು ಹೆಸರಾಗಿತ್ತು.[76] ಕೋಟೀಶ್ವರ[77], ನೀರಗುಂದ[78]. ಅಲೂರ[79], ಕುರವತ್ತಿ[80], ಕಂರಗೋಡ[81], ಬಳ್ಳಾರಿ[82], ಅರಸಿಕೆರೆ[83], ಹಿರಿಯಕೆರೂರ[84], ಅನಂತಪುರ.[85] ಅಲಂಬೂರು[86], ಕರ್ನೂಲ[87], ಕೊಯಿಮುತ್ತೂರು[88] ಇವೆಲ್ಲ ಒಂದಾನೊಂದು ಕಾಲದಲ್ಲಿ ವೈಭವಯುಕ್ತವಾದ ವ್ಯಾಪಾರಿಪಟ್ಟಣವೆಂದು ಪ್ರಸಿದ್ಧಿಪಡೆದ ಅಯ್ಯಾವೊಳೆಯನ್ನು ಮತ್ತೆ ಮತ್ತೆ ನೆನಪಿಗೆತರುವ ವ್ಯಾಪಾರಿಕೇಂದ್ರಗಳಾಗಿದ್ದವು.

ಶ್ರೀಮದನಾದಿಪಟ್ಟಣಗಳೆಂದು ಹೆಸರು ಪಡೆದ ಮುಳಗುಂದ ಮತ್ತು ಬಳ್ಳಿಗಾವೆಯ ವ್ಯಾಪಾರಿಗಳು ಚೇರಿ, ಜೋಳ, ಮಗಧ, ಪಾಂಡ್ಯ, ಸೌರಾಷ್ಟ್ರ ಮುಂತಾದ ದೇಶಗಳೊಡನೆ ವ್ಯಾಪಾರ ಮಾಡುತ್ತಿದ್ದರು.[89]

ಮುಳಗುಂದದಲ್ಲಿ ಮುನ್ನೂರು ಸೆಟ್ಟಿಗಾವುಂಡಗಳೂ ನೂರಿಪ್ಪತ್ತು ಮಹಾಜನರೂ, ಐವತ್ತೆರಡು ಸಾಲಿಗರೂ, ನೂರಿಪ್ಪತ್ತೆರಡು ತೆಲ್ಲಿಗರೂ, ಐವತ್ತೆಂಟು ಮಾಲೆಕಾರರೂ ಪಂಚಮಠಸ್ಥಾನಗಳಿದ್ದುದಕ್ಕೆ ಉಲ್ಲೇಖವಿದೆ[90].

ಲಕ್ಕುಂಡಿ ಪ್ರಸಿದ್ಧ ವ್ಯಾಪಾರಿಕೇಂದ್ರವಾಗಿದ್ದ 'ಮಹಾಗ್ರಾಮ'ವಾಗಿತ್ತು, ಇಂದ್ರನ ಅಮರಾವತಿಯಂತೆ ಸಂಪತ್ತಿನಿಂದ ಈ ನಾಡು ತುಳುಕುತ್ತಿತ್ತು[91].

'ಪಟ್ಟಣಗಳ ತವರ್ಮನೆ' ಎಂದು ಹೆಸರಾದ ಬಳ್ಳಿಗಾವೆ 'ಶ್ರೀಮದನಾದಿ ಪಟ್ಟಣ'ವೆಂದು ಕರೆಯಿಸಿಕೊಂಡ ದೊಡ್ಡ ವ್ಯಾಪಾರಿಕೇಂದ್ರವಾಗಿತ್ತಲ್ಲದೇ ವಿದ್ಯಾಭ್ಯಾಸ ಅನೇಕ ಸಾಂಸ್ಕೃತಿಕ ಸಾಮಾಜಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಅಲ್ಲಿಯ ವರ್ತಕರು ಕ್ಷಣಿಕಜೀವನವನ್ನು ನಡೆಸದೇ ನಶಿಸಿಹೋಗುವ ಸಂಪತ್ತನ್ನು ಸಂಪಾದಿಸದೇ ಲೌಕಿಕ ಮತ್ತು ಪಾರಲೌಕಿಕಗಳಿಗೆ ಯೋಗ್ಯವಾದ ಶಾಶ್ವತಪದವಿಯನ್ನು ಸಂಪಾದಿಸುತ್ತಿದ್ದರು, ಬಳ್ಳಿಗಾವೆಯ ಒಂದು ಶಾಸನದಿಂದ ಆ ಪಟ್ಟಣದ 'ಪುರಗಳು' ಲಕ್ಷ್ಮಿಯ ಮೂರುಕಣ್ಣುಗಳಿದ್ದಂತೆ ಅಥವಾ ಆಕೆಯ ಕೊರಳ ಮೂರು ಮುತ್ತಿನ ಸರಗಳಿದ್ದಂತೆ[92] ಎಂದು ಹೊಗಳುತ್ತದೆ.

ಭರತಖಂಡದಲ್ಲಿ ಕುಂತಳ 'ಆಭರಣಪ್ರಾಯ'ವಾದರೆ ಆ ದೇಶಕ್ಕೆ ಎರಡಱುನೂಱು ಎಂಬುದು 'ಲಲಾಮ'ವೆಂದೂ ಅದರಲ್ಲಿ ಪುಲಿಗೆರೆ ಎಂಬ ಜನಪದ 'ನವಪದವಿಮುಕುರ'ವೆಂದೂ ಹೇಳುವ ಶಾಸನದಲ್ಲಿ ಆ ಪುಲಿಗೆರೆ ಅಥವಾ ಇಂದಿನ ಲಕ್ಷ್ಮೇಶ್ವರ "ಶ್ರೀ ಪುಂಜಂ ದೇವತಾ ನಿವಾಸ ವಿಳಾಸ ವ್ಯಾಪಾರ ಕೃತವಾದ"[94] ಮಹಾಪಟ್ಟಣವಾಗಿತ್ತೆಂದು ಒಂದು ಶಾಸನ ಹೇಳುತ್ತದೆ.

ಈ ರೀತಿಯಾಗಿ ಅಯ್ಯಾವೊಳೆ ಐನೂರ್ವರು ತಮ್ಮ ವ್ಯಾಪಾರಿಸಂಘಗಳನ್ನು ಸ್ಥಾಪಿಸಿ ಕನ್ನಡನಾಡಿನ ಮೂಲೆಮೂಲೆಗೆ ವೀರಬಣಂಜುಧರ್ಮವನ್ನು ಪ್ರಚಾರಗೊಳಿಸಿ ಸುಮಾರು ೮೦೦ ವರ್ಷಗಳ ಕಾಲ ಅನವರತ ತಮ್ಮ ಕಾರ್ಯವನ್ನು ಎಸಗಿ ಕನ್ನಡನಾಡಿನ ಆರ್ಥಿಕ ವಿಷಯಕ್ಕೆ ಬೆನ್ನುಹುರಿಯಾಗಿ ಬಾಳಿ ೧೬೮೦ ರ ಕಾಲದಿಂದ ಈಚೆಗೆ ಮರೆಯಾಗಿ ಹೋದುದನ್ನು ಕಾಣಬಹುದು[94].

ಅಡಿಟಿಪ್ಪಣಿಗಳು :

1 Ec. X Mb. 247
2 IA. VIII P. 287
3 Appadorai–Economic condition in South India. P. 391
4 Ec. X Mb. 247
5 IA. VIII P. 287
6 IA. X P. 185
7 IA. VIII P. 287
8 ARSIE 1918. Copper Plates 17 of 1910.
9 97 of 1915 ARSIE 1916. P. II P. 21
10 Ec. IV 45
11 402 of 1915 ARSIE
12 Ec. VII Sk 94
13 Ec. V Ari 13
14 Ec. XI Da. P. 105
15 223 of 1918 ARSIE
16 Ec. VII Sk. 100 P. 188
17 S.I.I IX i. 141. 1079 A.D.
18 SII i. 165
19 IA. VI P. 138
20 Ec. VII Sk. 118
21 ಶಬ್ದಮಣಿದರ್ಪಣ, ಪು. 283
22 BKI. I. 133
23 Ec. VII. Sk. Sk. 118
24 IA. X. P. 185
25 Ec. IV.
26 Ec. VII Sk. 133
27 Ec. VII Sk. 133
28 SII. IX–i P. 138
29 Ec. VII Sk. 118
30 Ec. VII Sk. 118
31 SII IX–i 297
32 Ec. IV.
33 Ec. VII Sk. 94
34 Ec. VII Sk. 94
35 Ec. VII Sk. 94
36 SII. IX–i 41 C.
37 Ec. VII. Sk. P. 225
38 Ec. VIII. Sk. P. 328
39 SII IX–i 76
40 Ec. VII. Sk. 118
41 Ec. VIII Sb. 268
42 Ec. VIII Sb. 268
43 Ec. VIII Sb. 268; Ec. VII Sk. 118
44 Ec. VII Sk. 118
45 Ec. VII Sk. 118
46 Ec. VII Sk. 19
47 Ec. II 134 C.
48 Ec. VII Sk. 99
49 Ec. XII Tp. 101
50 Ec. VIII Nr. 57
51 Ec. VII Sk. 46
52 BKI.I P. 78
53 SII IX–i P. 314
54 BKI I. Y. S; P. 201
55 BKI I. 133
56 Ec. VII Sk 119
57 Ec. VII Sk 119
58 ಶಾಸೆನಗಳಲ್ಲಿ ಶಿವಶರಣರು ಪು. ೧೦೭
59 SII IX–i 297
60 Ec. VII Sk 170
61 BKI I 144
62 Ec. VII Sk. 118
63 SII IX i P. 297
64 Ec. VIII Sb 268
65 Ec. VII Sk. 197 C

66 Ec. VII Sk 118
67 Ec. VII Sk 197
68 IA. XIV P. 15
69 R.Narasimhachar 'Karnatak Country' Q. J. O. M. S. X. P. 251
70 Ec. VII Sk. 118
71 Ec. VIII Sb 268
72 Ec. VII Sk 118
73 Ec. VII Sk. 118
74 Ec. VII Sk. 118
75 Ec. XI Da. 149
76 Ec. VIII Sb. 268
77 Ec. XI Hol.
78 Ec. IV Ch. 45
79 216 of 1918 ARSIE
80 216 of 1918 ARSIE
81 223 of 1918
82 Ec. V Ars. 77
83 Ec. V Ak. 77
84 818 of 1917 Ant.
85 Ec. XII Ti. 43
86 180 of 1905 ARSIE
87 18 of 1910 ARSIE
88 BKI I. 11. 198 ARSIE Ec. VII Sk. 92
89 BKI I 198
90 BKI I 202 C.
91 EC. VII Sk. 92
92 EI XIII P. 329
93 Economic Condition in South India—Appadorai

ಗ್ರಂಥಋಣ

೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ— ಡಾ. ಚಿದಾನಂದ ಮೂರ್ತಿ
೨. Appadorai— Economic Conditions in South India p. 391
೩. ಶಾಸನ ಸಾಹಿತ್ಯ ಸಂಚಯ— ಮೋವುಂಡಿ ಮಲ್ಲಾರಿ, ಅಣ್ಣಿಗೇರಿ
೪. ಶಾಸನಗಳಲ್ಲಿ ಶಿವಶರಣರು— ಡಾ. ಕಲಬುರ್ಗಿ ಎಮ್. ಎಸ್.

ಒರೆಗಲ್ಲು

ಪುತ್ತೂರು :

ದಕ್ಷಿಣ ದೇಶದಲ್ಲಿ 'ಪುತ್ತೂರು' ಎಂಬ ಊರುಗಳು ಅನೇಕ ಇವೆ. ತಮಿಳು ನಾಡು ಮತ್ತು ಆಂಧ್ರದಲ್ಲಿ ಪ್ರಸಿದ್ಧವಾದ ಕೆಲ ಊರುಗಳು ಈ ಹೆಸರು ಗೊತ್ತಿವೆ. ಕನ್ನಡ ನಾಡಿನಲ್ಲೇ ದಕ್ಷಿಣ ಕನ್ನಡದಲ್ಲಿ ಒಂದಕ್ಕಿಂತ ಹೆಚ್ಚು ಪುತ್ತೂರುಗಳು ಇವೆ. ಇವೂ ಅಲ್ಲದೆ ಆ ಜಿಲ್ಲೆಯಲ್ಲಿ ಪುತ್ತಿಗೆ (ತುಳುವಿನಲ್ಲಿ 'ಪುತ್ತೈ')ಗಳು ಬೇರೆ ಇವೆ. ಆದರೆ 'ಪುತ್ತೂರು' ಎಂದರೇನು ?

ಮೊದಲು ಹೊಳೆಯುವ ಸಂಭಾವ್ಯತೆಯೆಂದರೆ (ಪುತ್ತದ = ಹುತ್ತವುಳ್ಳ ಅಥವಾ ಅದರ ಸಮೀಪದ) ಊರು ಎನ್ನುವುದು. ಹೆಗ್ಗುರುತುಗಳನ್ನಾಧರಿಸಿ ಊರಿಗೆ ಹೆಸರು ಬೀಳುವುದು ಅಸಾಮಾನ್ಯವಲ್ಲ. ಆದರೆ ಹುತ್ತ (White-ant hill) ಕ್ಕೆ ಹಳಗನ್ನಡದಲ್ಲಿ ಮತ್ತು ಕೆಲ ಮಧ್ಯದ್ರಾವಿಡ ಭಾಷೆಗಳಲ್ಲಿ 'ಪುತ್ತ' ಶಬ್ದವಿದ್ದರೂ ತಮಿಳಿನಲ್ಲಿ ಅದಕ್ಕೆ 'ಪುಱ್ಱು'. 'ಪುಱ್ಱಂ' ಎಂದೂ ತೆಲುಗಿನಲ್ಲಿ 'ಪುಟ್ಟ' ಎಂದೂ ಜ್ಞಾತಿಪದಗಳಿವೆ. ಕನ್ನಡ ನಾಡಿನಲ್ಲಿ ಪುತ್ತೂರುಗಳು ಹೆಚ್ಚಾಗಿರುವುದು ತುಳು ಭಾಷಾ ಪ್ರದೇಶಗಳಲ್ಲಿ. ತುಳುವಿನಲ್ಲಿ ಹುತ್ತಕ್ಕೆ 'ಪುಂಚ' ಜ್ಞಾತಿಪದ. ಅಲ್ಲಿ ಹುತ್ತವನ್ನು ಹೆಗ್ಗುರುತಾಗಿ ಉಳ್ಳ ಊರು 'ಪುಂಚತ್ತೂರು' ಆದೀತೇ ಹೊರತು ಪುತ್ತೂರಲ್ಲ.

'ಪುತ್ತೂರಿ'ನ ಮೂಲವನ್ನು ಶೋಧಿಸಲು ಹೊರಡುವಾಗ 'ಮುತ್ತೂರಿ'ನ ನೆನಪು ಬರುತ್ತದೆ. ಮುತ್ತೂರಿಗೂ ಮುತ್ತಿಗೂ (pearl) ಏನೂ ಸಂಬಂಧ ವಿಲ್ಲೆಂಬುದು ಸ್ಪಷ್ಟವಾಗಿದೆ. ಅದು 'ಮುತ್ತ' ಊರು = ಹಳೆಯ ಊರು. 'ಮುತ್' ಮುನ್, ಮುದಿ, ಮುದು, ಮುತ್ತಜ್ಜ, ಮುತ್ತಯ್ಯ, ಮುದಲ್, ಮೊದಲ್ ಇವೆಲ್ಲವೂ ಹಳೇ, ಒಂದಿನ, ಪ್ರಾಚೀನ ಎಂಬರ್ಥವನ್ನು ಸೂಚಿಸುವವಾಗಿವೆ.

ನನಗೆ ತೋರುವಂತೆ ಮುತ್ತೂರು ಹಳೆಯೂರಾಗಿರುವಂತೆ ಪುತ್ತೂರು ಹೊಸೂರಾಗಿದೆ. ಅದನ್ನು ಪುತ್ತ+ಊರು ಎಂದು ಛೇದಿಸಬೇಕು. ಹಳಗನ್ನಡದಲ್ಲಿ 'ಪೊಸ', ಹೊಸಗನ್ನಡದಲ್ಲಿ 'ಹೊಸ' ಎನಿಸುವ ಪದ ಇತರ ದ್ರಾವಿಡ ಭಾಷೆಗಳಲ್ಲಿ (ತುಳು ಹೊರತು) ಸಕಾರದ ಬದಲು ತದಕಾರಯುಕ್ತವಾಗಿದೆ. ಈ ವಿಷಯದಲ್ಲಿ ನನ್ನ

ಪತ್ರಕ್ಕೆ ಉತ್ತರವಾಗಿ ಡಾ. ಎಂ. ಚಿದಾನಂದಮೂರ್ತಿಯವರು ದ್ರಾವಿಡ ಜ್ಞಾತಿ ಪದಗಳನ್ನು ಈ ಕೆಳಗಿನಂತೆ ತೋರಿಸಿದರು :

ತಮಿಳು : ಪುದು = new or wonderful

ಪುದಿನಂ
ಪುದುಮೈ } = newness

ಪುತ್ತಪ್ಪುದಿಯ = brand new

ಪುತ್ತನ್ = new person or thing

ಕೋತ : ಪುದ್ = new

ತೋದ : ಪುತ್ = new

ಕೊಡಗು : ಪುದುಮೆ = wonder

ಪುತ್ತೆರಿ = rice harvest festival (ಕನ್ನಡ, ಹುತ್ತರಿ)

ತುಳು : ಪೊಸ = new

ಪುದು–ಬಾರ್ = new paddy

ಪುದ್ದಾರ್ = harvest festival

ಇವೆಲ್ಲವುಗಳಲ್ಲಿಯೂ ' ಪುತ್ ' ಮೂಲ ಪ್ರಕೃತಿ ಇರುವುದನ್ನು ಗುರುತಿಸಬಹುದು.

' ಮುತ್ ' ಎಂಬ ಮೂಲ ಪ್ರಕೃತಿಯಿಂದ ಮುತ್ತ, ಮುದಿಯ ಮೊದಲಾದವುಗಳು ಹುಟ್ಟಿದಂತೆ ' ಪುತ್ ' ಪ್ರಕೃತಿಯಿಂದ ಪುತ್ತ. ಪುದಿಯ ಮೊದಲಾದವು ಹುಟ್ಟಿರಬೇಕು. ಪುತ್ತ + ಊರ್ ಈ ಪ್ರಕಾರ ಹೊಸೂರೇ ಇರಬೇಕು. ಆದರೆ ' ಮುತ್ ' ಮೂಲ ಪ್ರಕೃತಿಯಿಂದ ಹುಟ್ಟಿದ ಮುತ್ತಯ್ಯ, ಮುತ್ತ ಮೊದಲಾದವುಗಳು ಮುತ್ತೂರಿನ ನಿಜಾರ್ಥವನ್ನು ಸಂಕೇತಿಸಲು ಉಪಯೋಗದಲ್ಲಿ ಉಳಿದುಕೊಂಡಂತೆ ' ಪುತ್ ' ಪ್ರಕೃತಿಯಿಂದ ಹುಟ್ಟಿದ ' ಪುತ್ತ' ಬಳಕೆಯಲ್ಲಿ ಉಳಿದುಕೊಳ್ಳದೆ ಬಹಳ ಹಿಂದೆಯೇ ಲುಪ್ತವಾದದ್ದರಿಂದ ಪುತ್ತೂರಿನಲ್ಲಿರುವ ' ಹೊಸ'ತನ ಚಟ್ಟನೆ ಹೊಳೆಯದಂತಾಗಿದೆ, ಆದರೂ ತಮಿಳು ' ಪುತ್ತನ್' ಕೊಡಗು ' ಪುತ್ತೆರಿ'ಗಳಲ್ಲಿ ಅದರ ಸೂಚನೆ ಉಳಿದಿದೆ. ಪುತ್ತೆರಿ ಎಂಬಲ್ಲಿ ಪುತ್ತ + ಅರಿ = ಹೊಸ ಅಕ್ಕಿ ಎಂಬರ್ಥವಿದೆ.

' ಮುತ್ ' ಮತ್ತು ' ಪುತ್ ' ಇವೆರಡೂ ಮೂಲ ಪ್ರಕೃತಿಗಳ ನೇರವಾದ ಬಳಕೆ ಬಹಳ ಹಿಂದೆಯೇ ನಿಂತು ಹೋದ ಹಾಗೆ ಕಾಣುತ್ತದೆ. ಆದರೂ ಮುದಿಯಾದ ಎಂಬರ್ಥದಲ್ಲಿ 'ಮುತ್ತ'ದ ಬಳಕೆ ಕಾವ್ಯಗಳಲ್ಲಿ ಸಿಗುತ್ತದೆ. (ಉದಾ: ರಾಮಾಶ್ವಮೇಧದ ಪ್ರಾರಂಭದಲ್ಲಿ ' ಮತ್ತಂ ಮತ್ತಂ ಮುತ್ತ ಪೊಟ್ಟನಂತೆ '). ' ಪುತ್ತ' ಮಾತ್ರ

ಪುತ್ತೂರಿನಲ್ಲಿ ಮಾತ್ರವೇ ಉಳಿದುಕೊಂಡಿದೆಯೋ ಏನೋ. ಡಾ. ಚಿದಾನಂದ ಮೂರ್ತಿಯವರು ಹೀಗೆಯೇ ಲುಪ್ತವಾದ, ಸ್ಥಳವಾಚಿಗಳಲ್ಲಿ ಮಾತ್ರ ಉಳಿದ, ಹೊಸ ಎಂಬರ್ಥದ, 'ಕೊಟಿತ' (ಕೊಟಿತೂರು) ಎಂಬ ಶಬ್ದವನ್ನು ಹುಡುಕಿ ತೋರಿ ಸಿದ್ದಾರೆ. (ಸಾಕ್ಷಿ, ೧೯).

ಪಿ. ವೆಂಕಟರಮಣಾಚಾರ್ಯ

ಸೂತ್ರಧಾರಿ ಸಾವಿಮೋಜ :

ಉಣಕಲ್ಲಿನ ಚಂದ್ರಮೌಳೇಶ್ವರ ದೇವಸ್ಥಾನವು ಕಲ್ಯಾಣಿ ಚಾಲುಕ್ಯರ ದೇವಸ್ಥಾನ ಗಳಲ್ಲಿ ವಿಶಿಷ್ಟ ಶೈಲಿಯದಾಗಿದ್ದು, ಇದರ ತಲವಿನ್ಯಾಸವು ವಾಸ್ತುಶಿಲ್ಪದ ವಿದ್ವಾಂಸರ ಆಸಕ್ತಿಯನ್ನು ಕೆರಳಿಸುವಂತಾಗಿದೆ. ಗರ್ಭಗೃಹವು ನಾಲ್ಕು ದಿಕ್ಕುಗಳಲ್ಲೂ ದ್ವಾರ ಗಳನ್ನು ಹೊಂದಿದ್ದು, ಚತುರ್ಮುಖ ಲಿಂಗವನ್ನು ಹೊಂದಿದ್ದಿತು. ಆದರೆ ಈಗ ಚತುರ್ಮುಖಲಿಂಗವು ದೇವಸ್ಥಾನದ ಇನ್ನೊಂದುಭಾಗದಲ್ಲಿದ್ದು ಗರ್ಭಗೃಹದಲ್ಲಿ ಅತಿ ದೊಡ್ಡಪ್ರಮಾಣದ ಲಿಂಗವೊಂದಿದೆ. ಗರ್ಭಗುಡಿಯ ದ್ವಾರಗಳೂ ಮತ್ತು ಗುಡಿಯ ಹೊರಗೋಡೆಗಳೂ ಉಬ್ಬುಚಿತ್ರಗಳಿಂದ ಅಲಂಕೃತವಾಗಿವೆ. ದ್ವಾರದ ಇಬ್ಬದಿಯಲ್ಲಿ ಸುಂದರವಾದ ಜಾಲಾಂಧ್ರಗಳಿವೆ. ಈ ಗುಡಿಯನ್ನು ಯಾವಾಗ ಕಟ್ಟಿಸಿದರೆಂಬುದಕ್ಕೆ ಶಾಸನಾಧಾರಗಳಿಲ್ಲ. ಆದರೆ ಇದನ್ನು ಕಟ್ಟಿದ ಸೂತ್ರಧಾರಿಯ ಹೆಸರನ್ನು ಗುಡಿ ಯೊಳಗಿನ ಚಿಕ್ಕಶಾಸನವೊಂದು ಹೆಸರಿಸುತ್ತದೆ. ಈ ಶಾಸನವನ್ನು ಉತ್ತರದ್ವಾರದ ಪಕ್ಕಕ್ಕಿರುವ ಕೂಡ್ಯಸ್ತಂಭದ ಮೇಲೆ ಕೆತ್ತಲಾಗಿದೆ. ಈ ಶಾಸನವಿನ್ನೂ ಬೆಳಕು ಕಂಡಿಲ್ಲ. ಶಾಸನ ಈ ರೀತಿ ಇದೆ— "ಶ್ರೀ ಸಾವಿಮೋಜ ಸೂತ್ರಧಾರಿ ಮಾಡಿದ ಕಂಭ." ಕೂಡ್ಯಸ್ತಂಭದ ಮೇಲೆ ಕೆತ್ತಿರುವ ಈ ಶಾಸನದಿಂದ ಸಾವಿಮೋಜನೇ ಈ ದೇವಾ ಲಯದ ಸೂತ್ರಧಾರಿಯೂ ಆಗಿರಬಹುದೆಂದು ಊಹಿಸಲು ಸಾಧ್ಯವಾಗಿದೆ. ಈತನು ವಾಸ್ತುಶಿಲ್ಪದಲ್ಲಿ ಕುಶಲನಾಗಿದ್ದನೆನ್ನುವುದಕ್ಕೆ ಈ ದೇವಾಲಯದ ವಿನ್ಯಾಸ ವೈಖರಿಗಳೇ ಸಾಕ್ಷಿ. ಕಲ್ಯಾಣಿ ಚಾಲುಕ್ಯರ ಸ್ಥಪತಿ, ಸೂತ್ರಧಾರಿ, ರೂವಾರಿಗಳ ಬಗ್ಗೆ ಸಾಕಷ್ಟು ಮಾಹಿತಿ ಇರದಿರುವುದು ಸರ್ವವಿದಿತ. ಸಾವಿಮೋಜನು ಚಂದ್ರಮೌಳೇಶ್ವರ ದೇವಾಲಯದ ಸೂತ್ರಧಾರಿಯಾಗಿದ್ದನೆನ್ನುವುದು ಈ ಕಾರಣ ಮಹತ್ವದ ವಿಷಯ ವಾಗಿದೆ.

ಎಸ್. ಶೆಟ್ಟರ್

ಗ್ರಂಥಾವಲೋಕನ

ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ : ವಿವಿಧ ಲೇಖಕರು; ಪ್ರಧಾನ ಸಂಪಾದಕರು: ಡಾ. ಜಿ. ಎಸ್. ಶಿವರುದ್ರಪ್ಪ, ಪ್ರಕಾಶಕರು: ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರ ವಿಶ್ವವಿದ್ಯಾಲಯ ಬೆಂಗಳೂರು-೧. ಬೆಲೆ: ರೂ. ೪-೫೦ ಪುಟ: ೧೬೬.

೧೯೨೦ ರಿಂದ ೧೯೭೮ ರ ಕಾಲಾವಧಿಯಲ್ಲಿ ಬಂದ ಕನ್ನಡಸಾಹಿತ್ಯದ ಬೇರೆ ಬೇರೆ ಪ್ರಕಾರಗಳಾದ ಕಾವ್ಯ, ನಾಟಕ, ಸಣ್ಣಕತೆ, ಕಾದಂಬರಿಗಳಲ್ಲಿ ಅಭಿವ್ಯಕ್ತಗೊಂಡ ಸಾಮಾಜಿಕಮೌಲ್ಯಗಳನ್ನು ಸ್ವಾತಂತ್ರ್ಯದ ಪೂರ್ವ ಮತ್ತು ನಂತರ ಎಂದು ವಿಭಾಗಿಸಿ ಈ ಗ್ರಂಥದಲ್ಲಿ ಸಮೀಕ್ಷಿಸಲಾಗಿದೆ. ಆಯಾ ಕ್ಷೇತ್ರಗಳಲ್ಲಿ ಪರಿಣತರಾದವರ ಲೇಖನಗಳು ಇಲ್ಲಿದ್ದು, ಅವೆಲ್ಲ ಅಭ್ಯಾಸಪೂರ್ಣ ಹಾಗೂ ತೂಕವುಳ್ಳವುಗಳಾಗಿರುವುದು ಸ್ವಾಭಾವಿಕ ವಾಗಿದೆ.

ಸ್ವಾತಂತ್ರ್ಯಪೂರ್ವದ (೧೯೨೦-೧೯೪೭) ಕನ್ನಡ ಕವಿತೆಗಳಲ್ಲಿ 'ಸಾಮಾಜಿಕ ಮೌಲ್ಯ'ಗಳನ್ನು ಗುರುತಿಸಲೆತ್ನಿಸಿದ ಎಂ. ವಿ. ಸೀತಾರಾಮಯ್ಯನವರು ಕಾವ್ಯಧರ್ಮದಲ್ಲಿ ಸಮಾಜಧರ್ಮವು ಹೇಗೆ ವ್ಯಕ್ತವಾಗುವದೆಂಬುದನ್ನು ದೀರ್ಘವಾಗಿ ಸಮಾಲೋಚಿಸಿ "......ಸೌಂದರ್ಯದರ್ಶನದ ವ್ಯಾಪಕತೆಯಲ್ಲಿ ಸಕಲ ಮೌಲ್ಯಗಳೂ ಅಂತರ್ಗತ, ಸಾಮಾಜಿಕ ಮೌಲ್ಯವೂ ಕೂಡಾ" ಎಂಬುದನ್ನು ಖಾತ್ರಿಮಾಡಿಕೊಂಡು ಮುಖ್ಯ ಉದ್ದೇಶದ ಕಡೆಗೆ ಸಾಗುತ್ತಾರೆ. ಇಲ್ಲಿಯ ವರೆಗಿನ ಅವರ ಚರ್ಚೆ ಸೈದ್ಧಾಂತಿಕವಾಗಿದ್ದರೆ, ಮುಂದಿನದು ಪ್ರಾಯೋಗಿಕವಾಗಿದೆ. ನವೋದಯಕಾವ್ಯದಲ್ಲಿ ವ್ಯಕ್ತವಾಗಿರುವ ಸಾಮಾಜಿಕಮೌಲ್ಯಗಳನ್ನು ಸೋದಾಹರಣವಾಗಿ ಅವರು ವಿವರಿಸಿದ್ದಾರೆ. ಕೊನೆಯಲ್ಲಿ ತಮ್ಮ ಲೇಖನಕ್ಕೆ ಸಮಾರೋಪವೆನ್ನುವಂತೆ ಆರು ಮಹತ್ವದ ಅಂಶವನ್ನು ನಮ್ಮೆದುರಿ ಗಿಟ್ಟಿದ್ದಾರೆ. ಈ ಆರು ಅಂಶಗಳಲ್ಲಿ ಒಂದೆರಡು ಅನುಮಾನಾಸ್ಪದವಾಗಿವೆ. "ಗೇಯಗುಣ ಸಾಮಾಜಿಕಮೌಲ್ಯಕ್ಕೆ ಪೋಷಕ" ಎಂಬೊಂದು ಹೇಳಿಕೆ ಅಲ್ಲಿದೆ. ನವೋದಯಕಾವ್ಯದ ತಂತ್ರದಲ್ಲಿ ಗೇಯಗುಣವು ಒಂದು ಮಹತ್ವದ ಅಂಶ. ಯಾವ ವಸ್ತುವನ್ನೂ ಗೇಯ ವಾಗಿಯೇ ಅಭಿವ್ಯಕ್ತಗೊಳಿಸುವುದು ಆ ಕಾವ್ಯದ ಮೂಲಗುಣ. ಹೀಗಿರುವಾಗ ಅದು ಸಾಮಾಜಿಕಮೌಲ್ಯಕ್ಕೆ ಪೋಷಕ ಎಂದು ಪ್ರತ್ಯೇಕಿಸಿ ಹೇಳುವದರಲ್ಲಿ ವಿಶೇಷವಾದ ದ್ದೇನಿದೆ? ಹಾಗೆ ನೋಡಿದರೆ ಈ ಗೇಯಗುಣವು ಅನೇಕವೇಳೆ ಸಾಮಾಜಿಕ ಜೀವನದ ಅಭಿವ್ಯಕ್ತಿಗೆ ತೊಡಕಾಗಿರುವದುಂಟು. ಸಮಕಾಲೀನ ಜೀವನದ ಎಲ್ಲ ಸಂಕೀರ್ಣ

ಭಾವಗಳನ್ನು ಅಭಿವ್ಯಕ್ತಗೊಳಿಸುವಲ್ಲಿ ಗೇಯಗುಣವು ತೊಡಕಾಗುವದೆಂಬ ಕಾರಣದಿಂದಲೇ ನವ್ಯಕವಿಗಳು ಅದರ ಬಂಧನವನ್ನು ತೊಡೆದುಹಾಕಲು ಮುಂದಾದರು. ಇವನ್ನೆಲ್ಲ ಗಮನಿಸಿದಾಗ ಎಂ. ವಿ. ಸೀತಾರಾಮಯ್ಯನವರ ಈ ನಿರ್ಣಯಕೋಕ್ತಿ ಅನಾವಶ್ಯಕವಾದದ್ದೆನಿಸುತ್ತದೆ. ಅವರ ಇನ್ನೊಂದು ಹೇಳಿಕೆಯಾದ "ಕಾವ್ಯರಸ ಸೃಷ್ಟಿಯಿಂದ ಎಷ್ಟು ಉತ್ತಮವಾಗಿರಲಿ, ಪರಿಣಾಮ ದೃಷ್ಟಿಯಿಂದ ಹಿತಕರವಲ್ಲದಿದ್ದರೆ ಅವಕ್ಕೆ ಸಾಮಾಜಿಕಮೌಲ್ಯ ಇಲ್ಲ" ಎಂಬುದನ್ನು ಇದ್ದಕ್ಕಿದ್ದಂತೆ ಒಪ್ಪಿಕೊಳ್ಳುವುದು ಕಠಿಣವಾಗುತ್ತದೆ. ರಸಸೃಷ್ಟಿಯಿಂದ ಉತ್ತಮವಾದದ್ದು, ಪರಿಣಾಮ ದೃಷ್ಟಿಯಿಂದ ಹಿತಕರವಲ್ಲದ್ದಾಗಿ ಹೇಗಿರುತ್ತದೋ? ಒಂದು ಕಾವ್ಯದ ನಿಜವಾದ ಪರಿಣಾಮವು ಅದರ ಉತ್ತಮವಾದ ರಸಸೃಷ್ಟಿಯಲ್ಲಿಯೇ ಇರುವಂತಹದು. ಹೀಗಿದ್ದು ಅವೆರಡರಲ್ಲಿ ವಿರೋಧ ಕಲ್ಪಿಸುವದು ಕಠಿಣವಾಗುತ್ತದೆ. ಅಷ್ಟಲ್ಲದೆ ಈ ಹೇಳಿಕೆಗೆ ಕೊಟ್ಟ ಉದಾಹರಣೆಗಳು ಸಮರ್ಥನೀಯವಾಗಿ ಕಂಡುಬರುವದಿಲ್ಲ. ಇಂಥ ಒಂದೆರಡು ಚರ್ಚಾಸ್ಪದವಾದ ವಿಚಾರಗಳನ್ನು ಬಿಟ್ಟರೆ ಇಡೀ ಲೇಖನ ಅಭ್ಯಸನೀಯವಾಗಿದೆ.

ಸ್ವಾತಂತ್ರ್ಯಾನಂತರದ (೧೯೪೭–೧೯೬೮) ಕಾವ್ಯದಲ್ಲಿ ಹಿರಿಯ ತಲೆಮಾರಿನ, ಮಧ್ಯಂತರಕಾಲದ ಹಾಗೂ ಹೊಸಪೀಳಿಗೆಯ ಕೃಷಿಯಿದ್ದು, ಅವರೆಲ್ಲರ ಸಂವೇದನೆಗಳಲ್ಲಿ ವ್ಯತ್ಯಾಸಗಳಿರುವುದು ಸಹಜ. ಜಿ. ಎಸ್. ಸಿದ್ಧಲಿಂಗಯ್ಯನವರು ಈ ಎಲ್ಲ ಬಗೆಯ ಕಾವ್ಯಮನೋಧರ್ಮವನ್ನು ಸುವ್ಯವಸ್ಥಿತವಾಗಿ ಪರಿಶೀಲಿಸಿದ್ದಾರೆ. ಸ್ವಾತಂತ್ರ್ಯ ಸಂಭ್ರಮ ನಾಲ್ಕುದಿನ ಕಾವ್ಯದ ವಸ್ತುವಾಗಿದ್ದು, ಮುಂದೆ ಜಾತಿಯ, ಭಾಷೆಯ, ಆರ್ಥಿಕ ಮೊದಲಾದ ವಿಷಮತೆಗಳು ಹೆಚ್ಚುತ್ತಲೇ ನಡೆದದ್ದನ್ನು; ಅಧಿಕಾರಿಗಳಲ್ಲಿ, ಮುಂದಾಳುಗಳಲ್ಲಿ ಹೊಣೆಗೇಡಿತನ, ಲಾಭಬಡಕತನ ದಿನದಿನಕ್ಕೆ ಬೆಳೆಯುತ್ತಿರುವುದನ್ನು ಈ ಕಾಲದ ಕವಿಗಳು ಹೇಗೆ ಗಮನಿಸಿದ್ದಾರೆಂಬುದನ್ನು ಜಿ. ಎಸ್. ಸಿ. ಕಣ್ಣಲ್ಲಿ ಕಣ್ಣಿಟ್ಟು ನೋಡಿದ್ದಾರೆ. ಇವರ ಲೇಖನ ವಿಶ್ಲೇಷಣೆ, ವಿಮರ್ಶೆಗಳಿಂದ ಕೂಡಿದ್ದು ಪ್ರಗತಿಶೀಲ ಧೋರಣೆ, ನವ್ಯಪ್ರಜ್ಞೆಗಳ ಅಭಿವ್ಯಕ್ತಿಯ ವೈಶಿಷ್ಟ್ಯವನ್ನು ಅರ್ಥಪೂರ್ಣವಾಗಿ ವಿವೇಚಿಸುತ್ತದೆ. ಆದರೆ ಅವರು ಲೇಖನಕ್ಕೆ ಪೋಷಕವಾಗಲು ಕೊಟ್ಟ ಪರಿಶಿಷ್ಟದ ಪಟ್ಟಿ ಚೊಕ್ಕಟವಾಗಿಲ್ಲ. ಉದಾ: 'ಅಮೃತ ಬಿಂದು' ಚೆನ್ನವೀರ ಕಣವಿಯವರ ಕವನಸಂಕಲನವೆಂದು ಪರಿಶಿಷ್ಟದ ಆರಂಭದಲ್ಲಿಯೇ ಕಾಣಿಸಿಕೊಳ್ಳುತ್ತದೆ. ಇದು ಕಣವಿಯವರ ಸ್ವತಂತ್ರಕವನಸಂಕಲನವೂ ಅಲ್ಲ, ಆ ಹೆಸರಿನಿಂದ ಅವರು ಕವನ ಸಂಕಲನವೊಂದನ್ನು ಸಂಪಾದಿಸಿಯೂ ಇಲ್ಲ. ಪರಿಶಿಷ್ಟವು ಒಂದು ಸಪ್ರಮಾಣ ಸೂಚಿಪತ್ರಿಕೆಯಾಗಬೇಕೇ ಹೊರತು, ಅವ್ಯವಸ್ಥಿತ ಪಟ್ಟಿಯಾಗಬಾರದೆಂಬ ಕಾರಣದಿಂದ ಈ ವಿಷಯವನ್ನು ಇಲ್ಲಿ ಎತ್ತಿ ಹೇಳಬೇಕಾಯಿತು.

ಸ್ವಾತಂತ್ರ್ಯಪೂರ್ವದ ಕನ್ನಡ ನಾಟಕಗಳ ಸ್ಥಿತಿ–ಗತಿಗಳನ್ನು, ನಾಟಕಕಾರರು ಪೌರಾಣಿಕ, ಐತಿಹಾಸಿಕ ದೃಷ್ಟಿಕೋನದಿಂದ ಹೊರಳಿ ಸಾಮಾಜಿಕಪ್ರಜ್ಞೆಯ ಕಡೆಗೆ ತಿರುಗಿದುದನ್ನು ಎಚ್. ಕೆ. ರಂಗನಾಥರವರು ಗಮನಿಸಿದ್ದಾರೆ. ಕೈಲಾಸಂ, ಶ್ರೀರಂಗ

ಮೊದಲಾದವರ ನಾಟಕಸೃಷ್ಟಿಯ ವೈಶಿಷ್ಟ್ಯ, ವೈವಿಧ್ಯಗಳನ್ನು ಉದಾಹರಣೆಯೊಂದಿಗೆ ಚರ್ಚಿಸಿದ್ದಾರೆ. ಈ ನಾಟಕಕಾರರ ಸಾಮಾಜಿಕಜೀವನದ ಅಭಿವ್ಯಕ್ತಿ ಎಷ್ಟೇ ಪರಿಣಾಮಕಾರಿಯಾಗಿದ್ದರೂ, ಅವರ ನಾಟಕಗಳು ಶಾಲೆ–ಕಾಲೇಜುಗಳ ಸ್ನೇಹ ಸಮ್ಮೇಲನಗಳ ಇಲ್ಲವೆ ಹವ್ಯಾಸಿಕಲಾವಿದರ ಆಸ್ಥೆಯ ಪ್ರಯೋಗಗಳಾಗಿ ಉಳಿದವು. ಈ ನಾಟಕಗಳು ಎಷ್ಟರಮಟ್ಟಿಗೆ ಜನಜೀವನದ ಹತ್ತಿರಕ್ಕೆ ಬಂದವು ? ಎಂಬುದು ಪ್ರಜ್ಞಾವಂತರನ್ನು ಕಾಡುತ್ತಿರುವ ಪ್ರಶ್ನೆ. ಈ ವಿಷಯದ ಕಡೆಗೂ ರಂಗನಾಥರು ಗಮನಹರಿಸಿದ್ದರೆ ಒಳಿತಾಗುತಿತ್ತು ಎನ್ನಿಸುತ್ತದೆ.

೧೯೪೭–೭೪ರ ಅವಧಿಯಲ್ಲಿಯ ನಾಟಕಗಳ ದೃಷ್ಟಿಕೋನವನ್ನು ಬಿ. ಚಂದ್ರಶೇಖರ ಅವರು ಶ್ರೀರಂಗ, ನವರತ್ನರಾವ್, ಪರ್ವತವಾಣಿ ಇವರಿಂದ ಪ್ರಾರಂಭಿಸಿ ಕಾರ್ನಾಡ, ಲಂಕೇಶರವರೆಗೆ ಹಬ್ಬಿಕೊಂಡ ನಾಟಕಗಳ ನಾಡೀಪರೀಕ್ಷೆ ಮಾಡಿದ್ದಾರೆ. ರಾಜಕೀಯದ ಏರು–ಪೇರುಗಳು. ದಾಂಪತ್ಯದ ತೊಡಕುಗಳು, ಲೈಂಗಿಕಸಮಸ್ಯೆಗಳು. ಜನತೆಯ ಅಪ್ರಾಮಾಣಿಕತೆ, ಸ್ವಾರ್ಥ, ಕಪಟಾಚಾರ ಮುಂತಾದವುಗಳನ್ನು ಚಿತ್ರಿಸುವಲ್ಲಿ ಈ ನಾಟಕಗಳು ಸಾಧಿಸಿದ್ದೇನು ? ಎಂಬುದನ್ನು ವಿವರಿಸಿದ್ದಾರೆ. ಎಲ್ಲ ವಿವರಣೆಯ ನಂತರ "ನಮ್ಮ ಈಗಿನ ನಾಟಕಕಾರನ ದೃಷ್ಟಿ ಸ್ಥಳೀಯ ಮಿತಿಯನ್ನು ಮೀರಿ ಸಾರ್ವಲೌಕಿಕ ವಿಚಾರಗಳ ಮೇಲೆ ಹರಿದಿದೆ" ಎಂದು ತೀರ್ಮಾನಿಸಿದ್ದಾರೆ. ಈ ತೀರ್ಮಾನವು ಅಭಿಮಾನಜನ್ಯವಾದದ್ದೆನಿಸುತ್ತದೆ. ಯಾಕೆಂದರೆ ಈಚೆಗಿನ ನಾಟಕಗಳು ಪ್ರಾದೇಶಿಕ ಭಾಷೆ, ಜೀವನಾನುಭವಗಳನ್ನು ಹೆಚ್ಚಾಗಿ ಅಳವಡಿಸಿಕೊಳ್ಳಲು ಯತ್ನಿಸುತ್ತಿವೆ. ಕೆಲವು ಜೀವನಮೌಲ್ಯವು ಸ್ಥಳೀಯವೆನಿಸಿದರೂ ಸಾರ್ವತ್ರಿಕವಾದವುಗಳಿರುತ್ತವೆ. ಅಂಥ ಮೌಲ್ಯಗಳನ್ನು ಇಂದಿನ ನಾಟಕಕಾರರೇ ಅಭಿವ್ಯಕ್ತಗೊಳಿಸುತ್ತಾರೆಂಬುದಾಗಲಿ. ಅವರ ದೃಷ್ಟಿ ವ್ಯಾಪಕವಾದುದೆಂದಾಗಲಿ ಸಾಧಿಸುವದು ಸರಿಯಲ್ಲ. ಈ ಹಿಂದಿನ ನಾಟಕಗಳಲ್ಲಿ ಅಷ್ಟೇ ಏಕೆ ನಮ್ಮ ಪ್ರಾಚೀನಕಾವ್ಯಗಳಲ್ಲಿ ಸಾರ್ವಲೌಕಿಕವಾದ ವಿಚಾರಗಳು ಬೇಕಾದಷ್ಟಿವೆ. ಅಂದಿನ ಲೇಖಕರಿಗೂ ಇಂದಿನವರಿಗೂ ಇರುವ ಭಿನ್ನತೆಯೆಂದರೆ ಜಾಗತಿಕ ಮಾನವೀಯ ಸಮಸ್ಯೆಗಳೊಂದಿಗೆ ಸ್ಥಳೀಯ ಸಮಸ್ಯೆಗಳನ್ನು ತಳಕುಹಾಕಿ ಇಡೀ ವಸ್ತುವಿಗೆ ಒಂದು ವಿಶೇಷ ಅರ್ಥವನ್ನು ತಂದುಕೊಡುವದು, ಇದು ವಿಮರ್ಶಕರು ಗಮನಿಸಬೇಕಾದ ಅಂಶ.

ಸಣ್ಣಕತೆಗಳಲ್ಲಿ (೧೯೨೧–೧೯೪೭) ಸಾಮಾಜಿಕಮೌಲ್ಯಗಳನ್ನು ಅರಿಸಲು ಹೊರಟ ಕೆ. ಎಂ. ರಾಜಗೋಪಾಲರು ಹೆಚ್ಚಾಗಿ ಮಾಸ್ತಿಯವರ ಕಥಾಸೃಷ್ಟಿಯ ಸುತ್ತ ಪ್ರದಕ್ಷಿಣೆಹಾಕುತ್ತಿರುವದು ಕಂಡುಬರುತ್ತದೆ. ರಾಜಗೋಪಾಲರು ಸಾಮಾಜಿಕ ಮೌಲ್ಯಗಳನ್ನು ಅರಸುವದಕ್ಕಿಂತ ಹೆಚ್ಚಾಗಿ ಸಣ್ಣಕತೆಯ ಬೆಳವಣಿಗೆ, ಕತೆಗಾರರ ವೈಶಿಷ್ಟ್ಯ ಮುಂತಾದವುಗಳನ್ನು ಗುರುತಿಸುವದರ ಕಡೆಗೆ ಗಮನಕೊಟ್ಟಿದ್ದಾರೆ. ಹೀಗಾಗಿ ಅವರು ಪ್ರಬಂಧದ ಉದ್ದೇಶವನ್ನು ಮರೆತು ಬಿಡುತ್ತಾರೆ.

ಪಿ. ಲಂಕೇಶರು ಸ್ವಾತಂತ್ರ್ಯನಂತರದ ಕಥಾಸೃಷ್ಟಿಯಲ್ಲಿಯ ಬೇರೆ ಬೇರೆ

ತಿರುವುಗಳನ್ನು ಗಮನಿಸಿ, ಎರಡು ವಿಭಾಗವಾಗಿ ವಿಂಗಡಿಸಿ ಅಲ್ಲಲ್ಲಿಯ ಸಾಮಾಜಿಕ ಮೌಲ್ಯಗಳನ್ನು ತೋರಿಸಲುಪಕ್ರಮಿಸುತ್ತಾರೆ. ಲೇಖನ ಬೆಳೆದಂತೆ ಮೌಲ್ಯಗಳ ಶೋಧ ಬದಿಗೆ ಸರಿದು, ಪ್ರಗತಿಶೀಲ ಮತ್ತು ನವ್ಯಕತೆಗಾರರ ಕಥಾಸೃಷ್ಟಿಯಲ್ಲಿಯ ವೈಶಿಷ್ಟ್ಯಗಳನ್ನು ಎತ್ತಿತೋರಿಸುವವರ ಕಡೆಗೆ ಲಕ್ಷ್ಯಪೂರೈಸಿದ್ದು ಕಂಡುಬರುತ್ತದೆ. ಒಬ್ಬ ಕತೆಗಾರನನ್ನು ಇನ್ನೊಬ್ಬ ಕತೆಗಾರನೊಂದಿಗೆ ತೂಗಿ ನೋಡುವ, ಅವರವರ ಸ್ಥಾನಗಳನ್ನು ನಿರ್ದೇಶಿಸುವ ಹವಣಿಕೆಯೂ ಇಲ್ಲಿ ನಡೆದಿದ್ದುದನ್ನು ಕಾಣಬಹುದು. ಈ ಕಾರಣಗಳಿಂದಾಗಿ ಸಾಮಾಜಿಕಮೌಲ್ಯಗಳ ಪರಿಗಣನೆ ಮರೆಯಾಗಿಬಿಟ್ಟಿದೆ. ಲೇಖನ ಓದಿ ಮುಗಿಸಿದಮೇಲೆ ತ್ರಿವೇಣಿ, ಕಟ್ಟೀಮನಿ ಈ ತಲೆಮಾರಿನ ಕೆಲವು ಕತೆಗಾರರ, ಟಿ ಜಿ. ರಾಘವ, ಸದಾಶಿವ ಮೊದಲಾದ ಹೊಸತಲೆಮಾರಿನವರ ಕಥಾ ತಂತ್ರ ಎಂತಹದೆಂಬುದು ಮಾತ್ರ ನೆನಪಿನಲ್ಲಿ ಉಳಿಯುತ್ತದೆ.

ಎಸ್. ಅನಂತನಾರಾಯಣರು ಸಂಶೋಧಕ ಹಾಗೂ ವೈಚಾರಿಕ ನಿಲುವಿನಲ್ಲಿ ನಿಂತು ಸ್ವಾತಂತ್ರ್ಯಪೂರ್ವದ ಕಾದಂಬರಿಗಳಲ್ಲಿಯ ಮೌಲ್ಯಗಳನ್ನು ಗುರುತಿಸುತ್ತಾರೆ. ಅವರ ಹಲವು ವಿಚಾರಗಳು ಕಾದಂಬರಿಗಳ ಅಭ್ಯಾಸಕ್ಕೆ ಸಹಾಯಕಾರಿಯಾಗಿವೆಯಾದರೂ ಕುವೆಂಪು, ಕಾರಂತ, ಮಿರ್ಜಿ ಈ ಮೂವರ ಕಾದಂಬರಿಗಳ ಚರ್ಚೆಯಲ್ಲಿಯೇ ಹೆಚ್ಚು ಸಮಯವನ್ನು ವ್ಯಯಮಾಡುತ್ತಾರೆ.

ಸ್ವಾತಂತ್ರ್ಯೋತ್ತರ ಕಾದಂಬರಿಗಳಲ್ಲಿ ಪ್ರಾತಿನಿಧಿಕವೆನಿಸುವ ಅಥವಾ ವಿಶಿಷ್ಟ ಸಂವೇದನೆಯಿಂದ ಕೂಡಿದ ಹದಿಮೂರು ಕಾದಂಬರಿಗಳನ್ನು ಟಿ. ಆರ್. ಶಾಮಣ್ಣನವರು ಪರಿಶೀಲನೆಗೆ ಒಳಪಡಿಸಿದ್ದಾರೆ. ಇವರು ತಾವು ಆರಿಸಿಕೊಂಡ ಕಾದಂಬರಿಕಾರರ ದೃಷ್ಟಿ–ಧೋರಣೆಗಳನ್ನು. ರಚನಾವಿಧಾನಗಳನ್ನು ಚರ್ಚಿಸುವದರಲ್ಲಿ ತನ್ಮಯರಾಗಿದ್ದಾರೆ. ಯಾವ ಯಾವ ಜೀವನಮೌಲ್ಯಗಳನ್ನು ಯಾರು ಯಾರು ಎಷ್ಟೆಷ್ಟು ಅಭಿವ್ಯಕ್ತಗೊಳಿಸಲು ಸಮರ್ಥರಾಗಿದ್ದಾರೆ ಎಂಬುದನ್ನು ಅನುಚಾನವಾಗಿ ಚರ್ಚಿಸಿದ್ದಾರೆ ಅಷ್ಟೆ.

ಈ ಎಲ್ಲ ಚರ್ಚೆಗಳ ಮೇಲೆ ಡಾ. ಕಾರಂತರ ಅನುಭವಪೂರ್ಣ ಸಮಾರೋಪವಿದೆ. ಅವರು ಇಲ್ಲಿಯ ತನಕ ನಡೆದ ಚರ್ಚೆಗಳನ್ನು ಕೇಳಿದವರಿಗೆ ಇಲ್ಲಿ ನಡೆದಿರುವ ಚರ್ಚೆ ಒಟ್ಟು ಕಾದಂಬರಿಗಳನ್ನು ಕುರಿತು ಚರ್ಚೆಯೇ ? ಅಥವಾ ಇಂದಿನ ಕಾದಂಬರಿಗಳಲ್ಲಿ 'ಮೂಡಿ ಬಂದಿರುವ ಸಾಮಾಜಿಕಮೌಲ್ಯಗಳು' ಎಂಬ ವಿಷಯದ ಚರ್ಚೆಯೇ ಎಂಬ ಭ್ರಮೆ ಹುಟ್ಟುತ್ತದೆ... ಯಾವ ತಂತ್ರ ಯಾವ ಕಾಲಕ್ಕೆ ತಕ್ಕುದು ಎಂಬ ಚರ್ಚೆಗೆ ಹೊರಟಿದ್ದೇವೆ. ನಮ್ಮ ಕಾಲಕ್ಕೆ ಬಂದಿರುವ ಕಾದಂಬರಿಗಳಲ್ಲಿ ಯಾವ ಮೌಲ್ಯಗಳನ್ನು ಪ್ರತಿಪಾದಿಸಿದ್ದಾರೆ ಎಂಬುದನ್ನು ಮರೆತಿದ್ದೇವೆ ಎಂದಿದ್ದಾರೆ. ವಿಚಾರಸಂಕಿರಣದ ತಮ್ಮ ಲೇಖನಗಳನ್ನು ಪುಸ್ತಕಕ್ಕೆ ಅಳವಡಿಸಲು ಕೊಡುವ ಮುನ್ನ ಇಲ್ಲಿಯ ಎಲ್ಲ ಲೇಖಕರು ಡಾ. ಕಾರಂತರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡು ಮಾರ್ಪಡಿಸಿಕೊಳ್ಳಬಹುದಾಗಿತ್ತು. ಯಾರೂ ಹಾಗೆ ಮಾಡಿದಂತೆ ಕಂಡುಬರುವದಿಲ್ಲ. ತಂತ್ರ, ಅಭಿವ್ಯಕ್ತಿಗಳ ಪದರುಗಳನ್ನು ಬಿಚ್ಚಿನೋಡುವಲ್ಲಿಯೇ ತಮ್ಮ ಶಕ್ತಿಯನ್ನು ವ್ಯಯಮಾಡುವ

ಬಹುಜನ ವಿಮರ್ಶಕರು ವಸ್ತು–ವಿಷಯಕ್ಕೆ ಅಷ್ಟಕ್ಕಷ್ಟೆ ಗಮನ ಕೊಡುವದು ಸಮಂ-ಜಸವಾಗಿ ತೋರುವದಿಲ್ಲ. ವಿಚಾರಸಂಕಿರಣದಲ್ಲಿ ಭಾಗವಹಿಸುವವರು ಮುಖ್ಯ ಉದ್ದೇಶವನ್ನೇ ಮೊಟಕಾಗಿಸಿದರೆ ಸಂಯೋಜಕರ ಪರಿಶ್ರಮ ಫಲಕಾರಿಯಾಗದಿರುವ ಸಂಭವವಿಲ್ಲದಿಲ್ಲ. ಇಲ್ಲಿಯ ಸಣ್ಣಕತೆ ಹಾಗೂ ಕಾದಂಬರಿಗಳ ಚರ್ಚೆ ಹಾಗಾಗಿರುವದು ಕಂಡು ಬರುತ್ತದೆ.

ಆಧುನಿಕಸಾಹಿತ್ಯದ ಬೇರೆ ಬೇರೆ ಪ್ರಕಾರಗಳನ್ನು ವಿಶ್ಲೇಷಿಸುವ, ವಿವೇಚಿಸುವ ಕಾರ್ಯ ಇಲ್ಲಿ ನಡೆದಿದ್ದು, ಹಲವು ಸಾಹಿತ್ಯವಿಮರ್ಶೆಯ ಮಹತ್ವದ ಅಂಶಗಳು ಗ್ರಂಥದುದ್ದಕ್ಕೂ ಪ್ರಕಟಗೊಂಡಿವೆ. ಆದರಿಂದಾಗಿ ಹೊಸಗನ್ನಡ ಸಾಹಿತ್ಯಾಭ್ಯಾಸಿಗಳಿಗೆ ಇದೊಂದು ಪ್ರಮಾಣಗ್ರಂಥವಾಗಿ ನೆರವು ನೀಡಬಲ್ಲುದು ಎನಿಸುತ್ತದೆ.

—ಗುರುಲಿಂಗ ಕಾಪಸೆ

ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು : ಡಾ. ರಂ. ಶ್ರೀ ಮುಗಳಿ. ಪ್ರಕಾಶಕರು : ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಬೆಲೆ : ರೂ. ೩, ಪುಟ : ೧೨೦.

ಈ ಗ್ರಂಥವು ವ್ಯಾಸಂಗವಿಸ್ತರಣೆಯ ನೈಮಿತ್ತಿಕ ಸಂದರ್ಭದಲ್ಲಿಯೇ ಹುಟ್ಟಿ ಬಂದ ವೈಚಾರಿಕ ಕಾಣಿಕೆ. ಸಾಹಿತ್ಯದ ಮೌಲ್ಯಮಾಪನೆಯ. ರಸಾಸ್ವಾದನೆಯ ಸರ್ವ ಸಮ್ಮತವೂ ಸರ್ವಸಮಾವೇಶಕವೂ ಆದ ತತ್ವ–ತಾತ್ಪರ್ಯ ಕನ್ನಡದಲ್ಲಿ ಅದ್ಯಾ ಪತ್ತಾಗಿ ಕ್ರೋಢೀಕೃತವಾಗಿ ಬಂದದ್ದು ಇದೊಂದೇ ಕೃತಿ-ಎಂದರೆ ತಪ್ಪಾಗಲಾರದು. ಜೀವಾವಧಿ ಸಾಹಿತ್ಯೋಪಾಸನೆಯ ಮಾಗಿದಫಲವಿದು. ಕವಿಯು ಪಂಡಿತನಾದರೆ. ಸಾಹಿತಿಯು ಜನಪ್ರಿಯ ಪ್ರಾಚಾರ್ಯನಾದರೆ ಅವನ ಶೈಲಿಯಲ್ಲಿ ಶಕ್ತಿ–ಶೋಭೆಗಳ ಅನುಗುಣ್ಯ ಹೇಗೆ ಮುಪ್ಪುರಿಗೊಳ್ಳುವದೆಂಬುದಕ್ಕೆ ಈ ಗ್ರಂಥವು ಉತ್ತಮ ಉದಾ ಹರಣೆ, ಈ ಕೈಪಿಡಿಯಂಥ ಕೃತಿ ಕೈಗೆ ಬಂದಾಗಲೆ ನಾನು ಡಾ. ಮುಗಳಿಯವರಿಗೆ ಬರೆದಿದ್ದೆ. "Lucidity thy name is Mngoli !" ಆದರೆ ಅದಕ್ಕೆ ಈ ಸಹೃದಯ ಪಂಡಿತಮಿತ್ರರ ಮಾರುತ್ತರ ಬಂದಿತು. "ನಿಮ್ಮ erypic-praise ಬೇಡ. ಸರಿಯಾದ ಸಮೀಕ್ಷೆ ಬರಲಿ !" ಈ ಚಿಕ್ಕಗ್ರಂಥವು ಸಾಹಿತ್ಯದ ವಿದ್ಯಾರ್ಥಿ ಗಳಿಗೂ ಜಿಜ್ಞಾಸುಗಳಿಗೂ ತುಂಬ ಪ್ರಯೋಜನಕಾರಿ.

ಕನ್ನಡದಲ್ಲಿ ವಿಮರ್ಶಾಶಾಸ್ತ್ರದ ಬಗೆಗೆ ಗ್ರಂಥರಾಶಿಯೆ ನಿರ್ಮಾಣವಾಗಬೇಕು. ಅನುಷಂಗಿಕವಾಗಿಯೇ ಪ್ರಾಸಂಗಿಕವಾಗಿಯೇ ಕವಿ–ಕಾವ್ಯ–ಮಹೋನ್ನತಿಗಳ ಒಂದಲ್ಲ ಒಂದು ಮುಖ, ಮಗ್ಗಲು ಎತ್ತಿಕೊಂಡ ಸಾಕೂತವಾದ ಸಾಕಲ್ಯವಿಲ್ಲದ ವಿಮರ್ಶೆ ವಿಪುಲವಾಗಿ ಬರುತ್ತಿರುತ್ತದೆ. ಅನೇಕ ಮುನ್ನುಡಿ–ಹಿನ್ನುಡಿಗಳಲ್ಲಿ ವೃತ್ತಪತ್ರಿಕೆಯ ಸಮಾಲೋಚನೆಗಲ್ಲಿ ಸಂಭಾವನಾಗ್ರಂಥಗಳಲ್ಲಿ ವ್ಯಕ್ತಿನಿಷ್ಠ ಕೃತಿನಿಷ್ಠ ವಿಮರ್ಶೆ

ಧಾರಾಳವಾಗಿ ಪ್ರಕಟವಾಗಿದೆ. ಆದರೆ ವಿಮರ್ಶೆಯನ್ನು ಒಂದು ಶಾಸ್ತ್ರವಾಗಿ, ಸೂತ್ರ-ಸಂಹಿತೆಯಾಗಿ ಪ್ರತ್ಯೇಕವಾಗಿ ವಿವೇಚಿಸಿದ ಗ್ರಂಥಗಳು ನಮ್ಮಲ್ಲಿ ಇನ್ನೂ ಕಡಿಮೆಯೇ. ಮೇಲೆ ಹೇಳಿದ ಲೇಖನ ಪ್ರಪಂಚದಲ್ಲಿ ಅಲ್ಲಲ್ಲಿ ಇಂಥ ತತ್ತ್ವ–ಸೂತ್ರಗಳ ನಿರ್ದೇಶ ಉಲ್ಲೇಖ ಊಹಾಪೋಹ ಬಂದದ್ದುಂಟು. ಆದರೆ ಒಟ್ಟಾಗಿ ಈ ವಿಮರ್ಶಾ ತತ್ತ್ವ–ತಂತ್ರಗಳ ಬಗೆಗೆ ಪ್ರಸ್ತಾಪನೆ ಪ್ರತಿಪಾದನೆ ವಿರಳವೇ.

ವಿಷಯವ್ಯಾಪ್ತಿಯ ದೃಷ್ಟಿಯಿಂದ ಈ ಪ್ರಯತ್ನಕ್ಕೆ ಇನ್ನೂ ವಿಸ್ತರಣೆ ಬೇಕಿತ್ತು. ಎಂದು ಅನಿಸಿದರೂ ಬಹುಶಃ ಕನ್ನಡದಲ್ಲಿ ಇದು ಮೊದಲನೆಯ ಪ್ರಯತ್ನವೆಂದು ತೋರುತ್ತದೆ. ನೃಪತುಂಗನ ಕವಿರಾಜಮಾರ್ಗದಿಂದ ತೀ ನಂ. ಶ್ರೀಯವರ "ಭಾರತೀಯ ಕಾವ್ಯಮೀಮಾಂಸೆಯವರೆಗೆ ಕನ್ನಡದಲ್ಲಿ ರೀತಿಲಕ್ಷಣಗ್ರಂಥಗಳಲ್ಲದೆ ಪಾಶ್ಚಾತ್ಯ ವಿಮರ್ಶನವಿಚಕ್ಷ್ಯ ದಿಗ್ದಂತಿಗಳಾದ ಡಬ್ಲ್ಯೂ. ಎಚ್. ಹಡ್ಸನ್, ಐ, ಏ, ರಿಚರ್ಡ್ಸ್, ಟಿ. ಎಸ್. ಈಲಿಯಟ್, ಡೆವ್ಹಿಡ ಹೂವರ್. ಸ್ಕಾಟ್ ಜೇಮ್ಸ್, ಎಲ್ ಅಬರಕೋಂಬಿ, ರೇನೆವೆಲ್ಲೆರ್, ಅಸ್ಟಿನ್‌ವಾರನ್, ಮೆಲ್ಟನ್ ರೀಡರ, ಮಿಲಿಯಂ ರೈಟರ, ಎಂ. ಜಿ. ಭಾಟೆ, ಡಬ್ಲೂ ಬಾಸಿಲ್‌ವೂರ್ಸಫೋಲ್ಡ, ಎ. ಸಿ. ಬ್ರಾಡ್ಲೆ, ಡಿಕ್ವಿನ್ಸಿ. ಅರವಿಂದ ಘೋಷ ಮತ್ತು ಅಗ್ನಿಪುರಾಣ, ಬೇಂದ್ರೆ, ವಿ. ಸೀ., ಗೋಕಾಕ ಇವೆಲ್ಲ ಮೂಲಗಳಿಂದ ಲೇಖಕರು ಅಭಿಪ್ರಾಯಗಳ ಸೂಕ್ತಪರಿಚಯ ಮಾಡಿಕೊಟ್ಟ ರೀತಿ ಅವರು ಕುರಿತೋದಿದ ವ್ಯಾಸಂಗವಿಸ್ತಾರದೊಂದಿಗೆ ಈ ವಿಷಯದ ವ್ಯಾಪ್ತಿ–ವೈಶಾಲ್ಯಕ್ಕೂ ಪರಿಚಾಯಕವಾಗಿದೆ.

ಒಬ್ಬ ಕವಿಯನ್ನೋ ಒಂದು ಕೃತಿಯನ್ನೋ ವಾಙ್ಮಯ ಪ್ರಕಾರವನ್ನೋ ವಿಮರ್ಶೆಗೆ ಆಯ್ದು ಒಳಪಡಿಸದೆ, ವಿಮರ್ಶೆಯ ಕಲೆಯನ್ನೂ ಶಾಸ್ತ್ರವನ್ನೂ ಕೇಳುವ ನಿಯಮಗಳ ನೆಲೆಬೆಲೆಗಳನ್ನು ಬಿಡಿಯಾಗಿಯೂ ಇಡಿಯಾಗಿಯೂ ನಿಡಿದಾಗಿಯೂ ನೋಡಿ ಸಂಗ್ರಹಿಸಿ ನೀಡುವಲ್ಲಿ ಈ ಕೃತಿಯು ಕೃತಕೃತ್ಯವಾಗಿದೆ. ಸಾಹಿತ್ಯದ ವ್ಯಾಖ್ಯೆಯೊಂದಿಗೆ ಇದರ ಆರಂಭ; ಅದರ ತ್ರಿಗುಣಾತ್ಮಕ ಸ್ವರೂಪದೊಂದಿಗೆ ಇದರ ಮುಗಿತಾಯ.

ತೀರ ವ್ಯಾಪಕ ಅರ್ಥದಲ್ಲಿ ಮನುಷ್ಯನ ಅಭಿವ್ಯಕ್ತಿ ಎಲ್ಲ ಸಾಹಿತ್ಯ. ಇಲ್ಲಿ ಅಭಿವ್ಯಕ್ತಿಯೆಂದರೆ ಸ್ವಂತವಾಗಿ ಪಡೆದ ಅನುಭವದ ಜ್ಞಾನದ ನಿರೂಪಣೆ ಎಂಬರ್ಥ. ಅಕ್ಷರರೂಪದಲ್ಲಿ ಅದು ಇಳಿದಾಗ ವ್ಯಾಪ್ತಿ ಕಡಿಮೆ. ರಸಾನುಭವ. ಸುಂದರ ಅಭಿವ್ಯಕ್ತಿ ಎಂಬ ಅರ್ಥದಲ್ಲಿ ಅದು ಇನ್ನೂ ಕಡಿಮೆ. ಹೀಗೆ ಅಕ್ಷರರೂಪದಲ್ಲಿರುವ ರಸಾನುಭವದ ಸುಂದರವಾದ ಅಭಿವ್ಯಕ್ತಿ ಎಂಬುದು ಸಾಹಿತ್ಯ. ಇದು ಡಾ. ಮುಗಳಿಯವರ ವ್ಯಾಖ್ಯೆ. (ಆದರೆ ಸಾಹಿತ್ಯದಲ್ಲಿ ಏನೇನು 'ಸಹಿತ'ವಾಗಿದೆ ?) ಈ ಸಾಹಿತ್ಯ ಸೃಜನಶೀಲ, ನಿರ್ಮಿತಿಪ್ರಧಾನ. ಸೃಷ್ಟಿ-ದೃಷ್ಟಿಗಳ ಸಂಗಮ. ರಸಪ್ರಜ್ಞೆಯಲ್ಲಿ ನೆಲೆನಿಲ್ಲುವ ಲೇಖಕನ ವ್ಯಕ್ತಿತ್ವದ ಸಾಕ್ಷೀಭಾವ, ಸ್ನೇಹಭಾವ. ಸೌಂದರ್ಯಭಾವಗಳ ಮಟ್ಟದಲ್ಲಿ ಅದರ ಘನತೆ, ಹಾಗೆಯೇ ಕೊನೆಯಲ್ಲಿ ಅಗ್ನಿಪುರಾಣದಿಂದ ಎತ್ತಿಕೊಂಡ ವ್ಯಾಖ್ಯೆಯಿಂದ ಸಾಹಿತ್ಯದ ಮೂರು ಗುಣಗಳು ಚೈತನ್ಯ ಚಮತ್ಕಾರ ಮತ್ತು ರಸ.

ಇದಕ್ಕೆ ಮೂಲ ಲೇಖಕನ ಪ್ರಾಮಾಣಿಕತೆ.

ಈ ಗ್ರಂಥಕ್ಕೆ ಮೂರು ಪ್ರಕರಣಗಳು. ವಿಷಯದ ವಿವೇಚನೆ ಇಷ್ಟು ಸುಶ್ಲಿಷ್ಟವಾಗಿ ಬೇರೆ ಯಾವ ಗ್ರಂಥದಲ್ಲಿಯೂ ವಿಶ್ಲೇಷಣೆ ಪಡೆದಿಲ್ಲ.

ಒಂದನೆಯ ಪ್ರಕರಣದಲ್ಲಿ ಸಾಹಿತ್ಯದ ವಿಮರ್ಶೆಯ ಸೂತ್ರಗಳ ಸಾಧ್ಯತೆಯನ್ನು ಹೇಳಿದ್ದಾಗಿದೆ. ಜತೆಗೆ ಅವುಗಳ ತರ್ಕಬದ್ಧತೆಯ ಅಸಾಧ್ಯತೆಯನ್ನೂ ಸೂಚಿಸಲಾಗಿದೆ. ವಿಮರ್ಶಕನ ಮನೋಧರ್ಮವನ್ನು ರೂಪಿಸುವಾಗ "ಕವಿಯೆ ಕವಿಯನ್ನು ಅರಿವ"ನೆಂಬ ವೈಯಕ್ತಿಕ ರಸಾನುಭವದ ತತ್ವವನ್ನು ನಿರ್ದೇಶಿಸಿ ರುಚಿಭೇದ ಮತ್ತು ವಿಮರ್ಶೆಗಳನ್ನು ಚರ್ಚಿಸಿದ್ದಾರೆ.

ಕವಿಯು ತನ್ಮಯ. ವಿಮರ್ಶಕ ತಟಸ್ಥ. ಆದರೆ ಕವಿ ತನ್ನ ಕಲಾಪ್ರಜ್ಞೆಯ ಮಟ್ಟಿಗೆ ಕಲಾಕೃತಿಯ ಕುರಿತು ತಟಸ್ಥನೇ. ಈ ತಾಟಸ್ಥ್ಯವೆ ಇತರರ ಕಲಾಕೃತಿಯನ್ನು ಅರಿಯಲು ಮೆಚ್ಚಲು ಕವಿಗೆ ಅನುಗೋಲು. ಅಂತೆಯೇ ಕವಿ ಕವಿಗೆ ವಿಮರ್ಶಕನಾಗಬಲ್ಲ. ಆದರೆ ಈ ಅರ್ಥದಲ್ಲಿ ಕವಿಯ ವಿಮರ್ಶಕತ್ವ ಬಹಳ ಪರಿಮಿತ, ಈ ಬಗೆಗೆ ಡಾಕ್ಟರರು ವಿಶೇಷ ವಿಚಿಕಿತ್ಸೆ ಮಾಡಿದೆಂತಿಲ್ಲ.

ಎರಡನೆಯ ಪ್ರಕರಣದಲ್ಲಿ ವಿಮರ್ಶೆಯ ರೀತಿಗಳನ್ನು ಉದಾಹರಿಸಲಾಗಿದೆ. ವಿವರಣ. ಗುಣಗ್ರಹಣ, ಉನ್ಮೀಲನಾತ್ಮಕ, ತುಲನಾತ್ಮಕ, ನ್ಯಾಯಪರ; ಅನುಮಾನಪ್ರಧಾನ (ಶಾಸ್ತ್ರೀಯ) ಮತ್ತು ಕಲೆ ಹಾಗೂ ವಿಚಾರಗಳ ಮೌಲ್ಯನಿರ್ಣಯದ ರೀತಿಗಳಿವು. ಡಾ. ಮುಗಳಿಯವರ ಮತದಂತೆ, ರಸಗ್ರಹಣ, ಉನ್ಮೀಲನ ಗುಣದೋಷ ಪರೀಕ್ಷಣ ಮತ್ತು ಮೌಲ್ಯನಿರ್ಣಯ ಇವು ವಿಮರ್ಶೆಯ ನಾಲ್ಕು ಪ್ರಮುಖ ಅಂಗಗಳು. ವಿಮರ್ಶೆಯ ಮಾರ್ಗದರ್ಶಕಸೂತ್ರಗಳನ್ನು ಲೇಖಕರು ಈ ಪ್ರಕರಣದ ಕೊನೆಯಲ್ಲಿಯೇ ಸಾದರಪಡಿಸಿದ್ದಾರೆ. ಆದರೆ ಇಲ್ಲಿ ಒಂದು ಪ್ರಶ್ನೆ. ಅಂಗಗಳೆಂದಾಗ ಈ ನಾಲ್ಕೂ ಪ್ರತಿಯೊಂದು ವಿಮರ್ಶನ ಕ್ರಿಯೆಯಲ್ಲಿ ಒಂದೇ ಸಮಯಕ್ಕೆ ಅಡಕವಾಗಿರುವವೇ ಅಥವಾ ಒಂದಲ್ಲ ಒಂದು ವ್ಯಕ್ತವಾಗಿದ್ದು ಒಟ್ಟಾರೆ ವಿಮರ್ಶೆ ಈ ನಾಲ್ಕು ರೂಪಕ್ಕಾಗಿರಬಲ್ಲದೇ ?

ಮೂರನೆ ಪ್ರಕರಣದಲ್ಲಿ ವಿಮರ್ಶೆಯಲ್ಲಿಯ ತಾರತಮ್ಯ ಮತ್ತು ನಿರ್ಣಯದ ಪ್ರಸ್ತಾಪ ಬಂದಿದೆ. ಈ ಕುರಿತು ಸಂಸ್ಕೃತಿ ಮತ್ತು ತದಿತರ ಕೃತಿಯ ತರತಮವನ್ನೂ ನಿರ್ಣಯಿಸುವಲ್ಲಿ ಪ್ರಾಚೀನ ಅರ್ವಾಚೀನ ಭೂಮಿಕೆಗಳನ್ನು ವಿವರಿಸಲಾಗಿದೆ. ಎಬರಕೊಂಬಿ, ಗುರು ಅರವಿಂದರ ಮಹೋನ್ನತಕಾವ್ಯ ಕಲ್ಪನೆ ವಿಚಾರಧಾರೆಗಳೊಂದಿಗೆ ಹಿಂದೆ ಹೇಳಿದ ಅಗ್ನಿಪುರಾಣೋಕ್ತ ಕಾವ್ಯಲಕ್ಷಣಗಳನ್ನು ಉದಾಹರಿಸಿ ಗ್ರಂಥವನ್ನು ಸಮಾರೋಪಗೊಳಿಸಲಾಗದೆ.

ವಿಮರ್ಶೆಯ ರೂಪ, ವಿಧಾನಗಳ ಬಗೆಗೆ ಹೀಗೆ ಪಾಶ್ಚಾತ್ಯ ಪೌರ್ವಾತ್ಯ ವಿದ್ವಾಂಸರ ಅಧಿಕಾರವಾಣಿಯ ಅನೇಕ ಅವತರಣಿಕೆಗಳನ್ನು ಕ್ರೋಡೀಕರಿಸಿಕೊಟ್ಟು ತನ್ನ ಪ್ರತಿಪಾದನೆಯನ್ನು ಧೃಢೀಕರಿಸಿಕೊಂಡು ಡಾ. ಮುಗಳಿಯವರು ಈ ಚಿಕ್ಕ

ಗ್ರಂಥವಲ್ಲಿ ಅವೆಲ್ಲವುಗಳ ಸಮನ್ವಯವನ್ನು ಸುಶ್ಲಿಷ್ಟವಾಗಿ ಅಕ್ಲಿಷ್ಟವಾಗಿ ನಿರೂಪಿಸಿದ್ದಾರೆ. ಇಂದೊಂದು ಅತ್ಯಂತ ಉಪಯುಕ್ತವೂ ಉದ್ಬೋಧಕವೂ ಆದ ವಿಮರ್ಶಾಶಾಸ್ತ್ರದ ವಿಷಯಪ್ರವೇಶಿಕೆ; ಅಜ್ಞರಿಗೆ ದೀಪಿಕೆ, ತಜ್ಞರಿಗೆ ಜ್ಞಾಪಿಕೆ, ವಿಶೇಜ್ಞರಿಗೆ ಸಲ್ಲಾಪಿಕೆ. ಇಷ್ಟು ಸಣ್ಣಪರಿಮಿತಿಯಲ್ಲಿ ಇಷ್ಟು ಗಹನವಾದ ವಿಷಯಪ್ರಪಂಚ-ವನ್ನು ಇಷ್ಟು ಸಾಲವತ್ತಾಗಿ ಏನೂ ಒತ್ತು ಒತ್ತಾಗದಂತೆ ಸರಾಗವಾಗಿ ವಿವೇಚಿಸಿದ ಡಾ. ಮುಗಳಿಯವರ ಭಾವಯಿತ್ರಿಪ್ರತಿಭೆ ತನ್ನ ಅಚ್ಚುಕಟ್ಟಾದ ಶೌರ್ಯಕೌಶಲ್ಯವನ್ನು ಶ್ಲಾಘನೀಯವಾಗಿ ಪ್ರಕಟಿಸಿದೆ. ಈ ಕ್ಷೇತ್ರದಲ್ಲಿಯ ಒಂದು ದೊಡ್ಡ ಕೊರತೆಯನ್ನು ಡಾ. ಮುಗಳಿ ತುಂಬಿಕೊಟ್ಟು ಮಹದುಪಕಾರಮಾಡಿದ್ದಾರೆ.

ಗೌರೀಶ ಕಾಯ್ಕಿಣಿ

ಬಯಕೆ ಬಯಲು (ಕವನ ಸಂಕಲನ): ಲೇ: ಎಸ್. ಎಸ್. ಹಿರೇಮಠ.
ಪ್ರ: ಸಿರಿಗನ್ನಡ ಪ್ರಕಾಶನ, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.
ಬೆಲೆ: ಮೂರು ರೂಪಾಯಿ; ಪುಟ: ೬೪.

'ಉಪ್ಪು ಕಡಲನು ನೆಕ್ಕಿ ಹಾಲು ಸಕ್ಕರೆಯಾಗಿ ಲೀನವಾಗು'ವ ಛಲ ಹೊತ್ತು ತಮ್ಮ ಮೊದಲ ಕವನ ಸಂಕಲನವನ್ನು ಸಿರಿಗನ್ನಡ ಪ್ರಕಾಶನದ ಒಂಬತ್ತನೆಯ ಎಸಳಾಗಿಸಿರುವ ಹಿರೇಮಠರು ಭರವಸೆಯ ಬಯಕೆಯನ್ನು ಮೂಡಿಸುತ್ತ ನಿಂತಿದ್ದಾರೆ. ಬಯಲಿನಲ್ಲಿ. ಬುದ್ಧಿ-ಭಾವಗಳ ದ್ವಂದ್ವದಲ್ಲಿ ಪದಗಳ ಹದವಾದ ಬಳಕೆಯಲ್ಲಿ, ಪ್ರತಿಮೆಗಳನ್ನುಪಯೋಗಿಸಿ ಅವುಗಳನ್ನು ಜಾಳುಗೊಳಿಸದೇ ಬೆಳೆಸಿಕೊಂಡು ಹೋಗುವಲ್ಲಿ ಈ ಕವಿಯದು ಮೆಚ್ಚಿಕೊಳ್ಳುವ ಹೆಚ್ಚುಗಾರಿಕೆ.

ನನಗೆ ನಿನಗ
ಎಂದಿನದೊ—
ಸಂಬಂಧ
ಸೋಸಿ ಬಂದಿಲ್ಲಿ
ಸೆಲಿ ಒಡದು,
ಹೃದಯದೊರತ್ಯಾಗ ಚಿಮ್ಮಿತು.

ಎನ್ನುವ ಕವಿ

— ಈ —
ತುಂಬಿದ ವಿಶಾಲ ಬಯಲಿನ್ಯಾಗ
ಹಾದಿ ನೋಡಿಕೊಂತ ಹೊಂಟೇವು
ಚಲ್ಲಾಪಿಲ್ಲಿ,
ನೀವಿಟ್ಟ ಹೆಜ್ಜಿ ನಿಮದಾಗಿರತದ,
ಅದು,

ಎಂಬ ಪ್ರಜ್ಞೆ ತಾನೂ ಇಟ್ಟುಕೊಂಡೇ ಸಾಗಿದ್ದಾನೆ.

ನನ್ನನ್ನು ನಾನು ಕೊಂದು
ಸುಟ್ಟ ಬೂದಿಯನೆಲ್ಲ,
ಭೂಮಿಯಾಚೆಗೆ ಹುಗಿದು
ಯಾರೂ ಕಾಣದ ಹಾಗೆ
ಬಂದು ಮಲಗುತ್ತೇನೆ.

ಎಂದು ಭ್ರಮ ನಿರಸನ ಮಾಡಿಕೊಳ್ಳುವ ಕವಿ ಮುಂದೆ ತನ್ನಲ್ಲೇ ತಾನು ಹುಡುಕಾಟ ನಡೆಸಿ ತನ್ನತನ ಕಂಡುಕೊಂಡು ಜೊತೆಗೆ ಕವಿಯ 'ಆತ್ಮ'ದ ಚಿರಂತನತೆಯನ್ನು—

ನಾನಾರೊ ?
ನನ್ನ ಹೆಸರೇನೋ ?
ದೇಶವಾವುದೋ ?
ಕಾಲ ಕುಲವನರಿಯೆ,

ಎಂಬಲ್ಲಿ ಪ್ರತಿಪಾದಿಸುತ್ತಾನೆ.

ಕಿಟಕಿ ಕನ್ನಡಿಯಾಚೆ
ಹಾರುವ ಹಕ್ಕಿಯ ಹಿಂದೆ
ನೆರಳನ್ನು ಹಾಸಿ
ಮಲಗುವ ಮುದಿ ನೇಸರು

ಕಲ್ಪಿಸಿದ ಕವಿ ಚೇತನ

ನಾಸದೀ ಸೂಕ್ತ
ರೇಡಿಯೊ ಗೂಗೆ ಕೂಗು
ಕುರುವಿನ
ಕುಂಕುಮದಲ್ಲಿ ಕೈತೊಳೆದ
ಬೋಧಿ-ಭೂತಕೊಲೆ.

ಹೀಗೆ ಬೆಳೆಯುತ್ತ ಹೋಗಿ

ಹೊಗೆ ಹಾವಿನ
ಸುಷುಮ್ನಾ-ಹಳಿ ಮಿಂಚಿನ,
ಚಿಕ್ಕೆ ಕಂಬನಿ
ಮುತ್ತು
ಬುರುಗು

ಕಾಣುವಲ್ಲಿ ಪೂರ್ಣತೆ ಪಡೆಯುತ್ತದೆ.

ಶಿರೋನಾಮೆ ರಹಿತವಾದ ಬಿಡಿ ಕವನಗಳು ಮೂವತ್ನಾಲ್ಕಿವೆ ಸಂಗ್ರಹದಲ್ಲಿ. ಅವುಗಳನ್ನೆಲ್ಲ ಬಿಡಿಯಾಗಿ ನೋಡುವುದಕ್ಕಿಂತ 'ಇಡಿ'ಯಾಗಿ ಕಾಣುವಲ್ಲೇ ಸೊಗಸಿದೆ. ಬಿತ್ತರದ ಬಯಲಿನಲ್ಲಿ ನೆಲ-ಮುಗಿಲಿಗೆ ಏಕಾಗಿ 'ಗೊಮ್ಮಟ'ವಾಗಿದೆ ಕವಿಯ ಬಯಕೆ.

'ನವ್ಯತೆ' ನವೀನವೆನ್ನುವ ರೀತಿಯಲ್ಲಿ ಇಲ್ಲಿ ಬಳಕೆಯಾಗಿದೆ. ಶರಣರ ಅನುಭಾವ ಸಾಹಿತ್ಯದ ಪರಿಭಾಷೆ ಕವಿಯ ಕರ್ಮಶಾಲೆಯಲ್ಲಿ ನೂತನ ಆವಿಷ್ಕಾರ ಪಡೆದಿದೆ. ಪರಂಪರೆಯ ಪ್ರಜ್ಞೆಯಲ್ಲಿ ಕವಿ ಹೊಡಮರಳಿ ಎದ್ದಿದ್ದಾನೆ. ಪ್ರಾದೇಶಿಕ ಭಾಷಾ ಪ್ರಯೋಗ, ಕನ್ನಡ ನುಡಿಗಟ್ಟು, ಜಾಣ್ನುಡಿ, ಪಡೆನುಡಿ ಗಾದೆಮಾತುಗಳನ್ನು ಕವಿ ಹವವಾಗಿ, ಹಿತವಾಗಿ, ಮಿತವಾಗಿ ಉಪಯೋಗಿಸುತ್ತ ತೀರ ಹತ್ತಿರವೂ ಅಲ್ಲ, ದೂರವೂ ಅಲ್ಲ ಎನ್ನುವಂತೆ ನಿಲ್ಲುತ್ತಾನೆ. ಸ್ವಾನುಭವಕ್ಕೆ ಸ್ವರ ಮೇಳವಿಸುತ್ತಾನೆ. ಕಲ್ಪನೆಗೆ ನೆಲದ ನೆಲೆಗಟ್ಟು ತೋರುತ್ತಾನೆ.

ಕಾಲ, ದೇಶ, ಪರಿಮಿತಿ, ಪರಿಸರದೊಳಗಿದ್ದೂ ಅವನ್ನೆಲ್ಲ ದಾಟಿ ನಿಲ್ಲುವ, ಕಾಲಕ್ಕೇ ಸವಾಲು ಹಾಕುವ ಧಾರ್ಷ್ಟ್ಯವನ್ನೂ ತೋರುತ್ತಾನೆ. ಕವಿ ಸೋಲೊಪ್ಪದ, ಸಾವೊಪ್ಪದ ದಿವ್ಯ ಚೇತನವೆನ್ನುವದನ್ನು ಇಲ್ಲಿ ಸಾರುತ್ತಾನೆ.

ನೆಟ್ಟ ಕಾಲನ್ನು ಕೀಳಲಾರೆ
ಕೋಣನೇರಿದವನೇ,
ನಾನೇಕಾಕಿ ಈ ಗಿಡದೆಡೆ
ಅಧೋಲೋಕದೆಡೆ
ಚಾಚಿದ ಕೈಯಲ್ಲಿ
ಉಪನಿಷತ್ತುಗಳ ಧೂಳ ಜಾಡಿಸಿ
ಪೆಚ್ಚು ಮುಖಕ್ಕೆ
ವಿಕಟಾಕಾರ ತಾಳಿ ಹೇಳೇನು
ನಿನಗೊದ್ದು ಬಿದ್ದೇನು

ಎಂಬ ದಿಟ್ಟತನ ತೋರುತ್ತಾನೆ.

ಬಿಸಿಲಿನ ಕೆಳಗ ಬದುಕಿದೇವು
ಸಂತೆಯೊಳಗ ಒತ್ತಿಕೊಂಡ ನಿಂತ
ನೋಡತೇನು
ಕೇಳತೇನು
ಮುಟ್ಟತೇನು
ಮೂಸತೇನು

ಎನ್ನುವಲ್ಲಿ ಕವಿ ಜೀವನದ 'ಸಂಕೀರ್ಣ'ತೆಯನ್ನು ಗುರುತಿಸಿದ್ದಾನೆ. ಆ ಸಂಕೀರ್ಣತೆಯಲ್ಲೂ

ನಾ ಎಷ್ಟೆಂದರೂ
ನಾನs ಅಲ್ಲ?
ಇನ್ಯಾರಿದ್ದಾರೆ ನನಗ?
ನಾನs ನಾನs ನಾನs

ಎಂದು 'ತನ್ನತನ' ಗುರುತಿಸಿ ಮುನ್ನಡೆದಿದ್ದಾನೆ. ಇದು ಬೆಳೆಯುವ 'ಸಿರಿ'ಗೆ ಶುಭ ಸೂಚನೆ.

ನವ್ಯತೆ ಎಂದರೆ ಪಶ್ಚಿಮದ ಗಾಳಿ ಅದೇ ವಾಸನೆ. ಬಯಕೆ, ಗುರಿ ಎನ್ನುವುದು ಹೋಗಿ ಪರಂಪರೆಯ ಪ್ರಜ್ಞೆ ತಿರುಗಿ ಒಡಮೂಡುತ್ತಿರುವ ಈ ತಿರುವಿನ ದಾರಿಯಲ್ಲಿ ಅಗತ್ಯವಾದ ಅರಿವನ್ನಿಟ್ಟುಕೊಂಡು ಸಾಗುತ್ತಿರುವ ಈ ಕವಿಗೆ ನಾನು ತೆರೆದ ಮನದಿಂದ ಸ್ವಾಗತಿಸುತ್ತೇನೆ. ಇವರ ಬಯಕೆ ಬಯಲಾಗಲಿ ' ಬಯಕೆ–ಬಯಲಾ 'ಗುವಲ್ಲಿ ಬದುಕಿನ ಸಾರ್ಥಕತೆಯನ್ನು ಕಂಡುಕೊಂಡ ಹಿರಿಯರ, ಅನುಭಾವಿಗಳ ಹೆದ್ದಾರಿಯನ್ನೇ ತುಳಿದು ಸಾಗುತ್ತಿರುವ ಈ ಅನುಭೂತಿ ಸಾಮಾನ್ಯವಲ್ಲ. ' ಶೂನ್ಯಸಂಪಾದನೆ'ಯನ್ನೇ ಅಂತಿಮ ಗುರಿಯನ್ನಾಗಿಸಿಕೊಂಡ ಶರಣರ ಶಿವಮಾರ್ಗ ಇವರೆದುರಿಗಿರುವಾಗ 'ಸತ್ಯಂ ಶಿವಂ ಸುಂದರಂ ' ಆಗದೇ ಇನ್ನೇನಾದೀತು ?

ಒಪ್ಪಿಯೋ, ಅಪ್ಪಿತಪ್ಪಿಯೋ ಆಗಿರುವ ಅಡಿಗರ ಅಚ್ಚಳಿಯದ ಪ್ರಭಾವ ಮೆಚ್ಚಿಕೆಯನ್ನೇ ಮೂಡಿಸೀತು. ಬೆಳೆಯುವ ಕವಿಗೆ ಸಹಜವೆನ್ನಬಹುದಾದ ಇದು ದೋಷವೆನ್ನಿಸದೆ ಗುಣವೇ ಅನ್ನಿಸಿದರೂ ಆಶ್ಚರ್ಯವಲ್ಲ. (' ಮಧುರ ಚೆನ್ನ'ರ 'ನನ್ನ ನಲ್ಲ'ದ ನಂತರ ಅಂತಹದೇ ಸಾರ್ಥಕ ಕೃತಿಯೋದಿದ ಸಮಾಧಾನ ನನಗಾಗುತ್ತಿವೆ.)

ಒತ್ತಡದ ಕಗ್ಗಂಟನೊಡೆದು
ಹೊಕ್ಕು ರಸಹೀರಿ
ಈಸಿ ಬರಲಾರೆ......
ತುಂಗೆಯಲಿ ಸುಳಿ ಬಹಳವೆಂದವರ
ಹುರುಳಿಲ್ಲದ ಮಾತು

ಎನ್ನುವ ಕವಿ ಪ್ರಭಾವ ಮೀರಿ ಬೆಳೆವ ಬಯಕೆ ತಳೆದಿದ್ದಾನೆ.

ಕೊಚ್ಚಿ ಎದುರು ಈಸಿ
ಬೀಸಿದ ಬಲೆಯಲ್ಲಿ
ಸಿಕ್ಕ ಮೀನ
ಜೀವಂತ ಬಿಡುವಾಸೆ

ಹೊತ್ತು ನಿಂತಿರುವ ಕವಿ ಅಭಿನಂದನಾರ್ಹನೆ ಹೌದು.

ಕಲಾವಿದ ಎಸ್. ಶಿವಪೂಜಿಮಠರ ಕುಂಚದಿಂದ ಮೂಡಿಬಂದ ' ಶಿವ ' ಹೆಂಡ–ಹೆಣ್ಣಿನ ಹಿನ್ನೆಲೆಯ ಸಂಕೀರ್ಣತೆಯನ್ನೊಳಗೊಂಡು ಪ್ರಕೃತಿ– ಪುರುಷಾವಿರ್ಭಾವವೆನಿ–ಸಿದ್ದಾನೆ. ಸಾರ್ಥಕ ಕಲ್ಪನೆ.

ಡಾ. ಆರ್. ಸಿ. ಹಿರೇಮಠರು 'ಶುಭಾಸ್ತೆ ಪಂಥಾನಃ' ಎಂದಿದ್ದಾರೆ. ' ಸಿರಿಗನ್ನಡ ಪ್ರಕಾಶನ 'ದ ಡಾ. ಕಲಬುರ್ಗಿ, ಡಾ. ಕುಳ್ಳಿ ಕವಿಗೆ, ಕೃತಿಗೆ ಪ್ರಚೋದನೆ ನೀಡಿದ್ದಾರೆ. ಸಿರಿಗನ್ನಡದ ಹೆಮ್ಮೆಯ ತುರಾಯಿಗೆ ' ಬಯಕೆ-ಬಯಲು ' ಇನ್ನೊಂದು ಕುಚ್ಚು. ಸಹೃದಯ ಕನ್ನಡಿಗರು ತೆರೆವ ಬಾಹುಗಳಿಂದ ಇದಿರುಗೊಳ್ಳುತ್ತಾರೆ ಈ ಕೃತಿಯನ್ನು.

—ಹೇಮು

ಸಾದರ ಸ್ವೀಕಾರ

೧. ಪಿತನ ಸಂದೇಶ :

ಲೇ: ಕಂದ ಜಲಜ; ಪ್ರ. ಜಗದಾನಿ ಪ್ರಕಾಶನ. ಕಡಲಬಾಳು ಕಾಂಪೌಂಡ್, ರಾಣೀಪೇಟೆ, ಹೊಸಪೇಟೆ (ಬಳ್ಳಾರಿ: ಜಿಲ್ಲಾ); ಪುಟ: Lxvi+೧೦೪; ಬೆಲೆ: ಐದು ರೂಪಾಯಿ; ೧೯೭೩.

೨. ಜೈನ ಸಂಸ್ಕೃತಿಯ ಹಬ್ಬಗಳು :

ಲೇ: ಎಸ್. ಪಿ. ಪಾಟೀಲ; ಪ್ರ. ವಿವೇಕೋದಯ ಗ್ರಂಥಮಾಲೆ, ಗುಡಿಬಂಡೆ; ಪುಟ: ivx+೫೦; ಬೆಲೆ: ಒಂದು ರೂಪಾಯಿ; ೧೯೭೩.

೩. ಹಾಲಕೆರೆಯ ಶ್ರೀ ಅನ್ನದಾನ ಮಹಾಸ್ವಾಮಿದ್ವಯರು :

ಲೇ: ಡಾ ಬಿ. ವ್ಹಿ. ಶಿರೂರ; ಪ್ರ. ಶ್ರೀ ಅನ್ನದಾನ ಪ್ರಕಾಶನ, ನರೇಗಲ್ಲ; ಪುಟ:೨೪; ಬೆಲೆ: ಐವತ್ತು ಪೈಸೆ; ೧೯೭೩.

೪. ಮುಟ್ಟಿಲ ಮುರಕಿ :

ಲೇ: ಕಣವಿ ಮಹಾದೇವ; ಪ್ರ. ಕಣವಿ ಮಹಾದೇವ, ಭಂಡಾರಿ ಆರ್ಟ್ಸ ಕಾಲೇಜ, ಗುಳೇದಗುಡ್ಡ (ವಿಜಾಪುರ: ಜಿ.); ಪುಟ: ೪೮; ಬೆಲೆ: ಎರಡೂವರೆ ರೂಪಾಯಿ; ೧೯೭೩.

೫. ಬಯಕೆ ಬಯಲು :

ಲೇ: ಎಸ್. ಎಸ್. ಹಿರೇಮಠ; ಪ್ರ. ಸಿರಿಗನ್ನಡ ಪ್ರಕಾಶನ, ಕನ್ನಡ ಅಧ್ಯಯನ ಪೀಠ, ಕ. ವಿ. ಧಾರವಾಡ; ಪುಟ: ೯+೬೫; ಬೆಲೆ: ಮೂರು ರೂಪಾಯಿ, ೧೯೭೩.

೬. ಸದ್ಭಕ್ತ ಚಾರಿತ್ರ್ಯ (ವೀರಶೈವ ಧರ್ಮದ ಪ್ರಾಮಾಣಿಕ ಕೈಪಿಡಿ) :

ಸಂ: ಪಿ. ಎಮ್. ಗಿರಿರಾಜು; ಪ್ರ. ಸಜ್ಜನ ಸಾಹಿತ್ಯ. ೪೪೭, ಸಂತೇಪೇಟೆ (ಹಳೆಯ) ಮೈಸೂರು-೫೭೦೦೦೧; ಪುಟ: ೨೪+೧೭೬; ಬೆಲೆ: ಐದು ರೂಪಾಯಿ; ೧೯೭೩.

೭. ಮಧುಕರ :

ಲೇ: ಶಿವಗಂಗಾತನುಜ; ಪ್ರ. ಕರ್ನಾಟಕ ಕವಿಬಳಗ, ಲಕ್ಷ್ಮೇಶ್ವರ (ಧಾರವಾಡ: ಜಿ.); ಪುಟ: ೧೮; ಬೆಲೆ: ಒಂದು ರೂಪಾಯಿ ಇಪ್ಪತ್ತೈದು ಪೈಸೆ; ೧೯೭೩.

೮. ಲೇ ವಿಶಾಲೀ............ :

ಲೇ: ಸಾಹಿತ್ಯಾನಂದ; ಪ್ರ. ನಿವೇದಿತ ಪ್ರಕಾಶನ, ನಂ. ೨೮೫೧, ಸುಬ್ರಹ್ಮಣ್ಯನಗರ, ಬೆಂಗಳೂರು-೫೬೦೦೨೧; ಪುಟ: ೬೩; ಬೆಲೆ: ಮೂರು ರೂಪಾಯಿ; ೧೯೭೩.

೯. **ಕಲಾಸಂಗಮ** (ಜಾನಪದ ಕಲಾ ವಿಶೇಷ ಪುರವಣಿ) :
ಸಂ : ಕೆ. ಎಸ್. ಎಚ್. ಶ್ರೀನಿವಾಸ ಉಡುಪ ಪ್ರ. ನವಚೇತನ ಯುವಜನ ಸಂಘ. ಸಾಗರ (ಶಿವಮೊಗ್ಗ : ಜಿ.); ಪುಟ : ४೯; ಬೆಲೆ : ಒಂದು ರೂಪಾಯಿ; ೧೯೭೩.

೧೦. **ರಾಷ್ಟ್ರೋತ್ಥಾನ ವಾರ್ತಾ** (ಡಿಸೆಂಬರ ಸಂಚಿಕೆ) :
ರಾಷ್ಟ್ರೋತ್ಥಾನ ಸಾಹಿತ್ಯ ಕೆಂಪೇಗೌಡ ನಗರ ಬೆಂಗಳೂರು-೧೯.

೧೧. **ಜೀವನ ವಿಕಾಸ** (ಡಿಸೆಂಬರ ಹಾಗೂ ಜನೆವರಿ ಸಂಚಿಕೆಗಳು) :
ಶ್ರೀ ಎಸ್. ಪಿ. ಸತೀಶ, ಶಿಕ್ಷಣ ಇಲಾಖೆಯ ಜಾಯಿಂಟ್ ಡೈರೆಕ್ಟರ್, ಕಲಬುರ್ಗಿ.

ಸಂಪಾದಕೀಯ

ಇದು 'ಭಾರತಿ'ಯ ೬ನೆಯ ವರ್ಷದ ೩ನೆಯ ಸಂಚಿಕೆ. ವಿದ್ವತ್ತಿನ ಸ್ತರದಲ್ಲಿ ಪ್ರಕಟವಾಗುತ್ತಿರುವ ಇಂಥ ಪತ್ರಿಕೆಗಳನ್ನು ನಡೆಸುವುದು ತೀರ ತೊಂದರೆದಾಯಕ. ಆದರೆ ನಮ್ಮ ಲೇಖಕರ ಮತ್ತು ವಾಚಕರ ನಿರಂತರ ಬೆಂಬಲದಿಂದಾಗಿ 'ಭಾರತಿ' ಗೆಲುವಿನಿಂದ ಮುನ್ನಡೆದಿದೆ. ಈ ಮುನ್ನಡೆಗೆ ಕಾರಣರಾದ ಸಮಸ್ತರಿಗೆ 'ಭಾರತಿ' ಕೃತಜ್ಞತೆಗಳನ್ನ ರ್ಪಿಸುತ್ತದೆ.

೧. ಅಧ್ಯಯನಪೀಠದ ಗ್ರಂಥಗಳ ಪ್ರಕಾಶನ

ಕನ್ನಡ ಅಧ್ಯಯನಪೀಠ ಅಲ್ಪಾವಧಿಯಲ್ಲಿ ಕ್ರಮಿಸಿದ ದೀರ್ಘವಾದ ಮಾರ್ಗ, ವೇಗಪೂರ್ಣ ನಡಿಗೆ ಬಹುಜನರ ಗಮನಕ್ಕೆ ಬಂದಂತಿಲ್ಲ. ೨೫ ವರ್ಷಗಳ ಹಿಂದೆ ಒಬ್ಬ ವಿದ್ಯಾರ್ಥಿಯಿಂದ ಪ್ರಾರಂಭವಾದ ಈ ವಿಭಾಗ ಈಗ ೨೫೦ ವಿದ್ಯಾರ್ಥಿಗಳನ್ನು, ೮ ಶಿಕ್ಷಣ ಶಾಖೆಗಳನ್ನು ಒಳಗೊಂಡಿದೆ. ಅದರಲ್ಲಿಯೂ ಕಳೆದ ೧೦ ವರ್ಷಗಳ ಅವಧಿಯಲ್ಲಿ ೬೦ ಪುಸ್ತಕಗಳ ಪ್ರಕಟನೆ ಒಂದು ಪವಾಡವೆನಿಸಿದೆ. ಈ ಮಾಲೆಗೆ ಸಂಬಂಧಪಟ್ಟ ೮ ಗ್ರಂಥಗಳ ಪ್ರಕಟನೆಯನ್ನು ನಮ್ಮ ರಾಜ್ಯದ ನೂತನ ವಿದ್ಯಾಸಚಿವರಾದ ಮಾನ್ಯ ಶ್ರೀ ಮಲ್ಲಿಕಾರ್ಜುನಸ್ವಾಮಿಯವರು ದಿ. ೧೧-೧-೧೯೭೪ ರಂದು ನೆರವೇರಿಸಿದರು. ವಿದ್ಯಾಪ್ರೇಮಿಗಳೂ, ಶಿಕ್ಷಣಸಂಸ್ಥೆಗಳ ಸಂಸ್ಥಾಪಕರೂ ಆದ ಮಾನ್ಯ ಮಂತ್ರಿಗಳ ಅಮೃತ ಹಸ್ತದಿಂದ ಬಿಡುಗಡೆಗೊಂಡ ಈ ಕೃತಿಗಳು ಕನ್ನಡದ ಕಣಜಕ್ಕೆ ವಿಶಿಷ್ಟ ಕೊಡುಗೆಗಳಾಗಿವೆ. ಅಧ್ಯಯನಪೀಠ ಇಂಥ ಅನೇಕ ಕೃತಿಗಳನ್ನು ಬೆಳಕಿಗೆ ತಂದು ಕನ್ನಡದ ಬೆಳಕನ್ನು ಇನ್ನೂ ಹೆಚ್ಚಿಸಲೆಂದು 'ಭಾರತಿ' ಹಾರೈಸುತ್ತದೆ.

೨. ಶ್ರೀ ಡಿ.ವಿ.ಜಿ, ಕಾರ್ನಾಡ ಅವರಿಗೆ ರಾಷ್ಟ್ರೀಯ ಗೌರವ

ರಾಷ್ಟ್ರಮಟ್ಟದ ಸೇವೆ ಸಲ್ಲಿಸಿದ ವ್ಯಕ್ತಿಗಳಿಗೆ ನಮ್ಮ ಕೇಂದ್ರ ಸರಕಾರ ಪ್ರತಿವರ್ಷ ಘನ ಗೌರವಗಳನ್ನು ನೀಡಿ ಸನ್ಮಾನಿಸುತ್ತದೆ. ಈ ವರ್ಷ ಶ್ರೀ ಡಿ. ವಿ. ಜಿ. ಯವರು 'ಪದ್ಮಭೂಷಣ', ಕಾರ್ನಾಡ ಅವರು 'ಪದ್ಮಶ್ರೀ' ಗೌರವ ಗಳಿಸಿ ಕರ್ನಾಟಕದ ಸಾಹಿತ್ಯ ಮತ್ತು ಕಲಾಕ್ಷೇತ್ರಗಳಿಗೆ ಹೆಸರು ತಂದಿದ್ದಾರೆ.

ಕನ್ನಡವನ್ನುದ್ಧರಿಸಿದ ಪುಣ್ಯಪುರುಷರಲ್ಲಿ ಡಿ. ವಿ. ಜಿ. ಯವರು ಅಗ್ರಮಾನ್ಯರು. ಅವರ ಕಲಶಕೃತಿಯಾದ 'ಮಂಕುತಿಮ್ಮನ ಕಗ್ಗ' ಸಮಕಾಲೀನ ಭಾರತೀಯ ಸಾಹಿತ್ಯದಲ್ಲಿ ಒಂದು ವೈಶಿಷ್ಟ್ಯಪೂರ್ಣ ಕೃತಿ. ಇದಲ್ಲದೆ ಇನ್ನೂ ಅನೇಕ ಗದ್ಯ ಪದ್ಯ ಗ್ರಂಥಗಳನ್ನು ರಚಿಸಿ ಕನ್ನಡದ ಭಾವನಾತ್ಮಕ ಮತ್ತು ವೈಚಾರಿಕ ಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ.

ಹೊಸಗನ್ನಡ ಸಾಹಿತ್ಯದಲ್ಲಿ ಡಿ. ವಿ. ಜಿ. ಯವರ ಗದ್ಯಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಕನ್ನಡದ ಈ ಭೀಷ್ಮನಿಗೆ ಸಂದ ಈ ಗೌರವದ ಸಂತೋಷದಲ್ಲಿ 'ಭಾರತಿ' ಪಾಲುಗಾರಳಾಗಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಾಳೆ.

ನಾಟಕಸಾಹಿತ್ಯ ರಚನೆ, ರಂಗಭೂಮಿ ಪ್ರಯೋಗಗಳ ಮೂಲಕ ಕಣ್ಣುಮುಚ್ಚಿ ಕಣ್ಣು ತೆರೆಯುವಷ್ಟರಲ್ಲಿ ಅನೇಕ ಗೌರವ ಗಳಿಸಿದವರು, ಶ್ರೀ ಗಿರೀಶ ಕಾರ್ನಾಡ. ಇವರು ರಚಿಸಿದ ನಾಟಕ, ತೆರೆಗೆ ತಂದ ಚಲನಚಿತ್ರ ಎರಡು–ಮೂರು; ಆದರೆ ಗಳಿಸಿದ ಗೌರವ ಹತ್ತಾರು. ವಯಸ್ಸಿಗೆ ಮೀರಿದ ಈ ಗೌರವಗಳು ಅವರ ವಯಸ್ಸಿಗೆ ಮೀರಿದ ಶಕ್ತಿಯ ದ್ಯೋತಕವೆನಿಸಿವೆ. ಸದ್ದು–ಗದ್ದಲವಿಲ್ಲದೆ ಪ್ರಯೋಗಮತಿಯಾಗಿ ಮುಂದುವರಿಯುತ್ತಿರುವ ಗಿರೀಶರಂಥವರು ಕನ್ನಡಕ್ಕೆ ಒಂದು ದೊಡ್ಡ ಹೆಮ್ಮೆ. ಇವರಿಗೆ ಈ ಪ್ರಸಂಗದಲ್ಲಿ ಅಭಿವಂದಿಸಿ ಅನೇಕ ಗೌರವಗಳು ದೊರೆಯಲೆಂದು 'ಭಾರತಿ' ಹಾರೈಸುತ್ತದೆ.

೩. ವಿ. ಸೀ. ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಸನ್ಮಾನ

ಕೇಂದ್ರ ಸಾಹಿತ್ಯ ಅಕಾಡೆಮಿ ಭಾರತೀಯ ಪ್ರಾಂತಭಾಷೆಗಳ ಮಹತ್ವಪೂರ್ಣ ಕೃತಿಗಳಿಗೆ ಪ್ರತಿವರ್ಷ ೫೦೦೦ ರೂಪಾಯಿ ಮೊತ್ತದ ಹಣನೀಡಿ ಗೌರವಿಸುತ್ತಲಿದೆ. ಈ ವರ್ಷ ತಮ್ಮ 'ಅರಲು–ಬರಲು' ಕವನ ಸಂಕಲನದ ಮೂಲಕ ಈ ಗೌರವವನ್ನು ವಿ. ಸೀ. ನಮ್ಮ ನಾಡಿಗೆ ತಂದಿದ್ದಾರೆ. ವಿ. ಸೀ. ಎಂದು ನಾಡಿನಲ್ಲಿ ಪ್ರಸಿದ್ಧಿ ಪಡೆದ ವಿ. ಸೀತಾರಾಮಯ್ಯನವರು ಹಿರಿಯ ತಲೆಮಾರಿನ ಪ್ರಾಧ್ಯಾಪಕರು, ಸಾಹಿತಿಗಳು, ವಾಗ್ಮಿಗಳು. ಅವರ ಬದುಕಿನಷ್ಟೇ ಬರಹವೂ ಕೂಡ ಸ್ವಚ್ಛ, ಸ್ಪಷ್ಟ ಮತ್ತು ಶಿಸ್ತು. 'ನಮ್ಮ ಮನೆಯಂಗಳದಿ ಬೆಳೆದೊಂದು ಹೂ'ವಾದ ಇವರಿಗೆ ಈ ಸಂದರ್ಭದಲ್ಲಿ 'ಭಾರತಿ' ಹೃತ್ಪೂರ್ವಕ ಅಭಿವಂದನೆಗಳನ್ನು ಸಲ್ಲಿಸುತ್ತದೆ.

೪. ರಾಜ್ಯ ಸಾಹಿತ್ಯ ಅಕಾಡೆಮಿ ಗೌರವ

ಪ್ರತಿವರ್ಷ ಕನ್ನಡದ ಹಿರಿಯ ಸಾಹಿತಿಗಳನ್ನು ಗೌರವಿಸುವುದರ ಮೂಲಕ ರಾಜ್ಯ ಸಾಹಿತ್ಯ ಅಕಾಡೆಮಿ ಸತ್ಪರಂಪರೆಯೊಂದನ್ನು ಪ್ರಾರಂಭಿಸಿದಂತಾಗಿದೆ. ಈ ವರ್ಷ ಈ ಗೌರವಕ್ಕೆ ಪಾತ್ರರಾದವರು ಪ್ರೊ. ದೇ. ಜ. ಗೌ. ಪ್ರೊ. ಎಂ. ವಿ. ಸೀತಾರಾಮಯ್ಯ, ಡಾ. ಕೆ. ಕೃಷ್ಣಮೂರ್ತಿ ಮತ್ತು ಶ್ರೀ ಕೃಷ್ಣಮೂರ್ತಿ ಪುರಾಣಿಕ.

ಪ್ರೊ. ದೇ. ಜ. ಗೌ ಕನ್ನಡದ ಕಟ್ಟಾಳು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಇವರು ಸಲ್ಲಿಸಿದ ಸೇವೆಯಿಂದಾಗಿ ಕನ್ನಡಕ್ಕೆ ಎತ್ತರದ ಸ್ಥಾನ ಲಭಿಸಿದೆ. ಸ್ವತಂತ್ರ ರಚನೆ, ಅನುವಾದಗಳ ಮೂಲಕ ಕನ್ನಡದ ಕಣಜವನ್ನು ತುಂಬಿದ, ಕನ್ನಡದ ರಕ್ಷಣೆಗಾಗಿ ಶ್ರದ್ಧೆಯ ಶಿಷ್ಯ ಸೈನ್ಯವನ್ನು ಸಿದ್ಧಗೊಳಿಸಿದ ಕೀರ್ತಿ ಇವರದು.

ಎಂ. ವಿ. ಸೀತಾರಾಮಯ್ಯನವರು ಕನ್ನಡದ ಹಿರಿಯಪ್ರಾಧ್ಯಾಪಕರು, ಕವಿಗಳು,

ಸಂಪಾದಕರು. 'ಕವಿರಾಜ ಮಾರ್ಗ' ಮತ್ತು 'ಉದಯಾದಿತ್ಯಾಲಂಕಾರ'ಗಳ ಸಂಪಾದನೆಯಿಂದ ಬಹುದೊಡ್ಡ ಹೆಸರು ಗಳಿಸಿದ ಇವರು 'ರಾಘವ' ಎಂಬ ಕಾವ್ಯ ನಾಮದಿಂದ ಕೆಲವು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಕರ್ನಾಟಕದಲ್ಲಿ ಅನೇಕ ಶಿಷ್ಯ-ಸಂತಾನವನ್ನು ಪಡೆದ ಘನತೆ ಇವರದಾಗಿದೆ.

ಡಾ. ಕೆ. ಕೃಷ್ಣಮೂರ್ತಿಯವರು ಅಕ್ಷರಶಃ ವಿದ್ವಾಂಸರು ಮತ್ತು ಪ್ರಾಧ್ಯಾಪಕರು. ಸಂಸ್ಕೃತ ಅಲಂಕಾರ ಸಾಹಿತ್ಯದ ಅನೇಕ ಕೃತಿಗಳನ್ನು ಭಾಷಾಂತರಿಸಿ ಕನ್ನಡದ ಕಣಜವನ್ನು ತುಂಬುವುದರ ಮೂಲಕ ಕನ್ನಡಕ್ಕೆ ಅಪಾರ ಸೇವೆಯನ್ನು ಸಲ್ಲಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದ ಪ್ರಾಧ್ಯಾಪಕರಾದ ಇವರಿಂದಾಗಿ ಆ ವಿಭಾಗಕ್ಕೆ ಒಂದು ಅರ್ಥ ಪ್ರಾಪ್ತವಾಗಿದೆ.

ಶ್ರೀ ಕೃಷ್ಣಮೂರ್ತಿ ಪುರಾಣಿಕರು ಪ್ರಗತಿಶೀಲ ಧೋರಣೆಯ ಹಿರಿಯ ಕಾದಂಬರಿಕಾರರಲ್ಲಿ ಒಬ್ಬರು. ಮಾಧ್ಯಮಿಕ ಶಾಲೆಯಂಥ ಅನುಕೂಲವಲ್ಲದ ಪರಿಸರ ದಲ್ಲಿದ್ದೂ ಅವರು ಮಾಡಿದ ಸಾಹಿತ್ಯಸೇವೆ ಶಿಕ್ಷಕವರ್ಗಕ್ಕೂ ಆದರ್ಶವಾಗಿದೆ. ನೂರು ಸಂಖ್ಯೆಯಲ್ಲಿ ಕೃತಿ ರಚಿಸಿದ ನಮ್ಮ 'ಕಾದಂಬರಿ' ಸಾಹಿತ್ಯವನ್ನು ಹುಲುಸುಗೊಳಿಸಿದ ಕೀರ್ತಿವಂತ ಕಾದಂಬರಿಕಾರರಿರುವರು.

ಈ ನಾಲ್ವರಿಗೆ 'ಭಾರತಿ' ಹೃತ್ಪೂರ್ವಕ ಅಭಿವಂದನೆಗಳನ್ನು ಸಲ್ಲಿಸುತ್ತದೆ.

ಈ ಸಂಚಿಕೆಯ ಲೇಖಕರು

೧. **ಪ್ರೊ. ಚೆನ್ನಣ್ಣ ವಾಲೀಕಾರ :**
ಎಲ್. ವ್ಹಿ. ಡಿ. ಕಾಲೇಜು, ರಾಯಚೂರು.

೨. **ಡಾ. ವಿ. ಶಿವಾನಂದ :**
ಕನ್ನಡ ಅಧ್ಯಾಪಕರು, ಜೆ. ಟಿ. ಕಾಲೇಜು, ಗದಗ.

೩. **ಶ್ರೀ ಶ್ರೀನಿವಾಸ ರಾಯಸಂ :**
C/o. ಎಸ್. ಮೋಹನರಾವ್, ಮ. ನಂ. z-೨-೨೭, ಗಜಗಾರಪೇಟೆ, ರಾಯಚೂರು.

೪. **ಡಾ. ಬುದ್ದಣ್ಣ ಹಿಂಗಮಿರೆ :**
ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜು, ಧಾರವಾಡ.

೫. **ಪ್ರೊ. ವಿಲ್ಯಂ ಮಾಡ್ತಾ :**
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕ.ವಿ.ವಿ., ಧಾರವಾಡ.

೬. **ಪ್ರೊ. ಜಿ. ಕೃಷ್ಣರಾವ್ :**
ಕನ್ನಡ ಅಧ್ಯಾಪಕರು, ಎಲ್.ವ್ಹಿ.ಡಿ. ಕಾಲೇಜು, ರಾಯಚೂರು.

೭. **ಪ್ರೊ. ಎಸ್. ರಾಜಶೇಖರ :**
ಇತಿಹಾಸ ಪ್ರಾಧ್ಯಾಪಕರು, ಕ.ವಿ.ವಿ., ಧಾರವಾಡ.

೮. **ಪ್ರೊ. ಎಚ್. ವ್ಹಿ. ನಾಗೇಶ್ :**
ರೀಡರರು, ಸಮಾಜಶಾಸ್ತ್ರ ವಿಭಾಗ, ಬನಶಂಕರಿ ಆರ್ಟ್ಸ ಕಾಲೇಜು, ಧಾರವಾಡ.

೯. **ಡಾ. ಆರ್. ಎಸ್. ಗುರವ :**
ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನಪೀಠ, ಕ.ವಿ.ವಿ., ಧಾರವಾಡ.

೧೦. **ಪ್ರೊ. ಸಿ. ಆರ್. ಯರವಿನತೆಲಿಮಠ :**
ಇಂಗ್ಲೀಷ ಪ್ರಾಧ್ಯಾಪಕರು, ಕ.ವಿ.ವಿ., ಧಾರವಾಡ.

೧೧. **ಪ್ರೊ. ಬಸವರಾಜ ಮಲಶೆಟ್ಟಿ :**
ಕನ್ನಡ ಅಧ್ಯಾಪಕರು, ವಿಜಯನಗರ ಕಾಲೇಜು, ಹೊಸಪೇಟೆ.

೧೨. **'ರವಿ' (ಸಿ. ಯಂ. ಸೋಮಶೇಖರ) :**
ಕನ್ನಡ ಅಧ್ಯಾಪಕರು, ಸರಕಾರಿ ಕಾಲೇಜು, ಚಿಕ್ಕಮಗಳೂರು.

೧೩. ಶ್ರೀ ವೀರಣ್ಣ ರಾಜೂರ :

ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನಪೀಠ ಕ.ವಿ.ವಿ. ಧಾರವಾಡ.

೧೪. ಪ್ರೊ. ಬಿ. ಬಿ. ಮಹೀಶವಾಡಿ :

ಪ್ರಾಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ.ವಿ.ವಿ., ಧಾರವಾಡ.

೧೫. ಡಾ. ಎಂ. ಎಂ. ಕಲಬುರ್ಗಿ :

ರೀಡರರು, ಕನ್ನಡ ಅಧ್ಯಯನಪೀಠ, ಕ.ವಿ.ವಿ., ಧಾರವಾಡ.

೧೬. ಕು. ಹೇಮಲತಾ ಪದಕಿ :

ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನಪೀಠ, ಕ.ವಿ.ವಿ., ಧಾರವಾಡ.

೧೭. ಕು. ಚೆನ್ನಕ್ಕ ಎಲಿಗಾರ :

ಕನ್ನಡ ಅಧ್ಯಾಪಕರು, ಅಂಜುಮನ್ ಜ್ಯೂನಿಯರ ಕಾಲೇಜು, ಧಾರವಾಡ.

೧೮. ಶ್ರೀ ಪಿ. ವ್ಹಿ. ಆಚಾರ :

ಉಪ ಸಂಪಾದಕರು, 'ಕಸ್ತೂರಿ', ಹುಬ್ಬಳ್ಳಿ.

೧೯. ಡಾ. ಎಸ್. ಶೆಟ್ಟರ್ :

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕ.ವಿ.ವಿ., ಧಾರವಾಡ.

೨೦. ಪ್ರೊ. ಗುರುಲಿಂಗ ಕಾಪಸೆ :

ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜು, ಧಾರವಾಡ.

೨೧. ಶ್ರೀ ಗೌರೀಶ ಕಾಯ್ಕಿಣಿ :

ನಿವೃತ್ತ ಹೈಸ್ಕೂಲ ಶಿಕ್ಷಕರು, ಗೋಕರ್ಣ.

೨೨. ಹೇಮ (ಸಿ. ಪಿ. ಹೇಮಗಿರಿಮಠ) :

ಕನ್ನಡ ಅಧ್ಯಾಪಕರು, ನೆಹರೂ ಕಾಲೇಜು, ಹುಬ್ಬಳ್ಳಿ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಸಾರಾಂಗ

ವ್ಯಾಸಂಗವಿಸ್ತರಣ ಹಾಗು ಪ್ರಕಟನ ವಿಭಾಗ

ಇತ್ತೀಚಿನ ಪ್ರಕಟನೆಗಳು

ಉಪನ್ಯಾಸ ಗ್ರಂಥಮಾಲೆ: ಪ್ರತಿಯೊಂದರ ಬೆಲೆ ೨೫ ಪೈಸೆ

ಕನ್ನಡರಾಜ್ಯರಮಾರಮಣ ಕೃಷ್ಣದೇವರಾಯ —ಡಿ. ಟಿ. ಜೋಶಿ

ಸ್ತ್ರೀ ನಡೆದು ಬಂದ ದಾರಿ —ಸರೋಜಿನಿ ಬಿ. ಶಿಂತ್ರಿ

ಸರೋಜಿನಿ ನಾಯ್ಡು —ಎಲ್. ಸಿ. ಪಾಟೀಲ

ಹಳ್ಳಿಗಳ ಆರ್ಥಿಕ ಅಭಿವೃದ್ಧಿ —ಎಸ್. ಜಿ. ಕುಲಕರ್ಣಿ

ಯೋಜನೆಗಳಿಂದ ಕಲಿತ ಪಾಠಗಳು —ಡಿ. ವೆಂಕಟರಾವ

ಭಾರತದ ವಾಣಿಜ್ಯಾಭಿವೃದ್ಧಿ —ಸಿ. ಎಂ. ಕೊಟ್ಟೂರಸೆಟ್ಟಿ

ಲಕ್ಷ್ಮೀಶ —ವಿ. ಡಿ. ಬೇಂದ್ರೆ

ಮಾತು —ಜಿ. ಕೃಷ್ಣರಾವ

ಶಿಕ್ಷಣವೇತ್ತ ಡಾ॥ ಜಾನ್ ಡ್ಯೂಯಿ —ಟಿ. ಕೆ. ಹಿರೇಗಂಗೆ

ಜನಪದ ಸಾಹಿತ್ಯಮಾಲೆ

ಗುಮ್ಮನ ಪದಗಳು (ಉತ್ತಮ ಪ್ರತಿ) ರೂ. ೫-೦೦

ಸಂ: ಎಲ್. ಆರ್. ಹೆಗಡೆ (ಸಾದಾ ಪ್ರತಿ) ರೂ. ೩-೦೦

ಕನ್ನಡ ಕಾವ್ಯಮಾಲೆ:

ಮೋಹನ ತರಂಗಿಣಿ

ಸಂ: ಆರ್. ಸಿ. ಹಿರೇಮಠ

ಮಲ್ಲಿನಾಥ ಪುರಾಣ

ಸಂ: ಬಿ. ಬಿ. ಹೆಂಡಿ

ಐರಾವತ ನೋಂಪಿ

ಸಂ: ಕೆ. ಜಿ. ಶಾಸ್ತ್ರಿ

ವಚನ ಸಾಹಿತ್ಯ

ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ ರೂ. ೧೦-೦೦

ಸಂ: ಆರ್. ಸಿ. ಹಿರೇಮಠ

ಇತರ ಪ್ರಕಟನೆಗಳು :

ಅಮೃತ ಬಿಂದುಗಳು ರೂ. ೨-೦೦

ಸಂ: ಆರ್. ಸಿ. ಹಿರೇಮಠ

ಕೆ. ಕೃಷ್ಣಮೂರ್ತಿ

ಎಂ. ಕೆ. ನಾಯಕ

ಕಮೀಶನ್ನಿನ ವಿವರ :

ವಿಶ್ವವಿದ್ಯಾಲಯದ ಪ್ರಕಟನೆಗಳನ್ನು ಕೊಳ್ಳುವವರಿಗೆ ಈ ಕೆಳಗಿನಂತೆ ಕಮೀಶನ್ ಕೊಡಲಾಗುತ್ತದೆ.

ಪಠ್ಯಪುಸ್ತಕಗಳು (ಪರೀಕ್ಷೆಗಳಿಗೆ ಗೊತ್ತುಪಡಿಸಿದವು ಮಾತ್ರ) :

೨೫ ಪ್ರತಿಗಳನ್ನು ಅಥವಾ ಅದಕ್ಕೂ ಹೆಚ್ಚಿಗೆ ಕೊಳ್ಳುವವರಿಗೆ :

೧೦೦ ಕ್ಕೆ ೧೫ ರಂತೆ

ರೂ. ೨೦೦೦/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ :

೧೦೦ ಕ್ಕೆ ೨೦ ರಂತೆ

ಇತರ ಎಲ್ಲ ಪ್ರಕಟನೆಗಳು (ಪಠ್ಯಪುಸ್ತಕ ನಿರ್ದೇಶನಾಲಯದ ಪ್ರಕಟನೆಗಳು ಹಾಗು ನಿಯತಕಾಲಿಕೆಗಳನ್ನು ಒಳಗೊಂಡು) :

೧೦೦ ರೂ.ಗಳಿಂದ ೫,೦೦೦ ರೂ. ವರೆಗಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ

೧೦೦ ಕ್ಕೆ ೨೫ ರಂತೆ

೫,೦೦೦ ರೂ ಗಳಿಗೆ ಮೇಲ್ಪಟ್ಟ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ :

೧೦೦ಕ್ಕೆ ೩೩ ⅓ ರಂತೆ

ಒಂದು ವರ್ಷದ ಅವಧಿಯಲ್ಲಿ (ಎಪ್ರಿಲ್ ೧ ರಿಂದ ಮಾರ್ಚ ೩೧ ರ ವರೆಗೆ) ಒಟ್ಟಿಗೆ ರೂ. ೨೦,೦೦೦/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ೧೦೦ ಕ್ಕೆ ೩೩⅓ ದಂತೆ ಕಮೀಶನ್ ಕೊಡಲಾಗುವದು.

* * * * *

ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ — ರೂ. ೪ (ಅಂಚೆವೆಚ್ಚ ಸಹಿತ)
ಬಿಡಿ ಪ್ರತಿ — ರೂ. ೨-೫೦ (ಅಂಚೆ ವೆಚ್ಚ ರೂ. ೧-೨೫ ಪ್ರತ್ಯೇಕ)
(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೨-೦೦ ಮಾತ್ರ)

ಕರ್ನಾಟಕ ಭಾರತಿ

(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ೧೦೦ ರೂ. ಕಳಿಸಿ ವಿಶ್ವವಿದ್ಯಾಲಯಂ ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ" ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲಾ ಅವರಿಗೆ ಪ್ರತಿ-ಗಳನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗುಂವದು.

(ಹಣವನ್ನು ಮನಿಆರ್ಡರ ಅಥವಾ ಪೋಸ್ಟಲ್ ಆರ್ಡರ ಮೂಲಕ ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ವ್ಯಾಸಂಗವಿಸ್ತರಣ ಹಾಗು ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ-೩